ಸಂಪುಟ : ೨೦
ಸಂಚಿಕೆ : ೩

ಕರ್ನಾಟಕ ಭಾರತಿ

ಸಂಕ್ರಮಣ ಸಂಚಿಕೆ

ಜನವರಿ, ೧೯೮೮

ಧಾರವಾಡ

ಕರ್ನಾಟಕ ವಿಶ್ವವಿದ್ಯಾಲಯ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ"ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನಗಳಿದ್ದರೆ, ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು. ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **"ಸಂಪಾದಕರು; ಕರ್ನಾಟಕ ಭಾರತಿ" ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦-೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ　　೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ　　೪. ಅಕ್ಷಯತೃತೀಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮=೦೦ (ಅಂಚೆವೆಚ್ಚ ಸಹಿತ)
ಬಿಡಿ ಸಂಚಿಕೆಯ ಬೆಲೆ ರೂ. ೨=೫೦
(ಅಂಚೆ ವೆಚ್ಚ ರೂ. ೧=೨೫ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ: ರೂ. ೪=೦೦ ಮಾತ್ರ. ಹಣವನ್ನು **ಫಾಯನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರ ಹೆಸರಿನಲ್ಲಿ ಡಿಮಾಂಡ್ ಡ್ರಾಫ್ಟ್ ಇಲ್ಲವೆ ಪೋಸ್ಟಲ್ ಆರ್ಡರ್ ತೆಗೆಯಿಸಿ, **ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಸಂಪುಟ : ೨೦ ಸಂಚಿಕೆ : ೩

ಸಂಕ್ರಮಣ ಸಂಚಿಕೆ

ಪ್ರಧಾನ ಸಂಪಾದಕರು :

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ

ಸಂಪಾದಕರು :

ಡಾ. ವಿಲ್ಯಂ ಮಾಡ್ತ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೦ ಸಂಚಿಕೆ : ೩

ಸಂಕ್ರಮಣ ಸಂಚಿಕೆ

ಜನವರಿ, ೧೯೮೮

ಎಲ್ಲ ಹಕ್ಕುಗಳನ್ನು ಕಾಯ್ದಿಡಲಾಗಿದೆ

ಸಂಪಾದಕ ಮಂಡಲ :

ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ (ಪ್ರಧಾನ ಸಂಪಾದಕರು)
ಡಾ. ವಿಲ್ಯಂ ಮಾಡ್ತ (ಸಂಪಾದಕರು)
ಡಾ. ಎಸ್. ಎಚ್. ರಿತ್ತಿ
ಡಾ. ಎ. ಎಂ. ರಾಜಶೇಖರಯ್ಯ
ಡಾ. ಎಂ. ಮಾದಯ್ಯ
ಡಾ. ಎ. ಎಸ್. ಬಾಲಸುಬ್ರಮಣ್ಯ
ಶ್ರೀ ಎಸ್. ಬಿ. ನಾಯಕ (ಸದಸ್ಯ–ಕಾರ್ಯದರ್ಶಿ)

ಪ್ರಕಾಶಕರು :

ಎಸ್. ಬಿ. ನಾಯಕ

ನಿರ್ದೇಶಕರು, ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಸುನೀಲಕುಮಾರ ಪ್ರಿಂಟಿಂಗ್ ಪ್ರೆಸ್

ರಜತಗಿರಿ, ಧಾರವಾಡ–೫೮೦ ೦೦೪

ಪರಿವಿಡಿ

ಡಾ. ಡಿ. ವಿ. ಜಿ. ಅವರ 'ಜೀವನದೃಷ್ಟಿ'

● ಆರ್. ರಾಜಪ್ಪ

ಆಧುನಿಕ ಕನ್ನಡ ಸಾಹಿತ್ಯಶಿಲ್ಪಿಗಳಲ್ಲಿ ಒಬ್ಬರೂ, ಗದ್ಯ–ಪದ್ಯ ರಚನೆಗಳಿಂದ ಪ್ರತಿಭಾನ್ವಿತ ಸಾಹಿತಿಗಳೂ ಎನಿಸಿದ ಡಾ. ಡಿ.ವಿ. ಗುಂಡಪ್ಪನವರು ತಮ್ಮ ಸಾಹಿತ್ಯಕೃಷಿಯಿಂದ ಹೊಸಗನ್ನಡ ಸಾಹಿತ್ಯ ಚರಿತ್ರೆಯಲ್ಲಿ ತಮ್ಮ ಸ್ಥಾನವನ್ನು ಗಟ್ಟಿಯಾಗಿರಿಸಿಕೊಂಡವರು. ಬಿ. ಎಂ. ಶ್ರೀ, ಕರ್ಪೂರ ಶ್ರೀನಿವಾಸ ರಾಯರು, ಬೆಳ್ಳಾವೆ ವೆಂಕಟನಾರಣಪ್ಪನವರು, ಆರ್. ನರಸಿಂಹಾಚಾರ್ಯರು, ಟಿ. ಎಸ್. ವೆಂಕಣ್ಣಯ್ಯನವರು ಮೊದಲಾದ ಸಾಹಿತ್ಯ ದಿಗ್ಗಜಗಳ ಸಂಪರ್ಕ ಪಡೆದು ತಾವೂ ಒಂದು ದಿಗ್ಗಜವೆನಿಸಿದವರು. ಕೇವಲ ಸಾಹಿತಿಯಾಗಿರದೆ, ವಿಚಾರವಾದಿಯಾಗಿ ಸಮಾಜ ಸುಧಾರಣೆಯಲ್ಲಿ ಆಸಕ್ತಿಹೊಂದಿ, ಸಮಾಜ ಶುದ್ಧೀಕರಣಕ್ಕೆ ಸ್ಪಂದಿಸಿ ಸಮಯಬಂದಾಗ ರಾಜಕೀಯದಲ್ಲಿ ಭಾಗವಹಿಸಿದವರು ಡಿ. ವಿ. ಜಿ. ಅಂದಿಗೆ ಗಣ್ಯರೆನಿಸಿದ್ದ ದಿವಾನ್ ರಂಗಾಚಾರ್ಲು, ಸರ್ ಎಂ. ವಿಶ್ವೇಶ್ವರಯ್ಯನವರು, ರೈಟ್ ಆನರೆಬಲ್ ಶ್ರೀನಿವಾಸ ಶಾಸ್ತ್ರಿಗಳು, ಮಿರ್ಜಾ ಇಸ್ಮಾಯಿಲ್ ಅವರು, ಆರ್ಕಾಟ ಶ್ರೀನಿವಾಸಾಚಾರ್ಯ ಅವರುಗಳ ಗಮನ ಸೆಳೆದು, ಸೂಕ್ತ ಸಲಹೆಗಳನ್ನು ಕೊಡುವ ಧೀಮಂತಿಕೆ ಹೊಂದಿದ್ದವರು ಡಿ.ವಿ.ಜಿ. ಸರ್ವಜನಕ್ಷೇಮಕ್ಕೆ ಸಾಧಕವಾದುದನ್ನು ಸಾಧಿಸುವಾಗ ಅದರಲ್ಲಿ ತೀವ್ರಗಮನ ವಿಟ್ಟು, ಅಂಜದೆ ಅಳುಕದೆ, ತಪ್ಪಿತಸ್ಥರನ್ನು ಟೀಕಿಸಿ ಅವರಿಂದ ಜನಾಂತಕಾರಿಯಾದ ಘಟನೆಗಳು ಜರುಗದಂತೆ ಎಚ್ಚರವಹಿಸುವ ಸಂಯಮ ಡಿ.ವಿ.ಜಿಯವರಲ್ಲಿತ್ತು. ತಮ್ಮ ಖಚಿತ ಅಭಿಪ್ರಾಯಗಳನ್ನು ಖಚಿತ ಮಾತುಗಳಲ್ಲಿ ನಿರೂಪಿಸುತ್ತಿದ್ದರು. ತಮ್ಮ ಈ ಟೀಕೆಯಿಂದ ಯಾರ ಮನಸ್ಸು ನೊಂದೀತೆಂದು ಯೋಚಿಸಿದವರಲ್ಲ. ಯಾವುದು ಸರಿ ಎನಿಸುತ್ತದೆಯೋ ಆ ವಿಷಯವನ್ನು ನಿರ್ದಾಕ್ಷಿಣ್ಯವಾಗಿ ಹೇಳುವ ಕೆಚ್ಚು, ಸ್ಥೈರ್ಯ, ಸಂಪಾದಿಸಿದ್ದರು. ಇವರ ಈ ಗುಣವನ್ನು ವಿಶ್ವೇಶ್ವರಯ್ಯನವರು ಮೆಚ್ಚಿ "Virulent Critic" ಎಂದು ಹೊಗಳುತ್ತಿದ್ದುದೂ ಉಂಟು ಎಂದು ತಿಳಿದುಬರುತ್ತದೆ.

ಎಲ್ಲರೊಳಗೆ ಒಂದಾಗಿ ಎಲ್ಲರಿಗೂ ಬೇಕಾಗಿ ಧೀಮಂತ ಜೀವನವನ್ನು ಸಾಗಿಸಿದ ಡಿ.ವಿ.ಜಿ. ಅವರ 'ಜೀವನ ದೃಷ್ಟಿ' ಮಹತ್ವಪೂರ್ಣವಾದುದು. ಮಹತ್ವಪೂರ್ಣ ಜೀವನದೃಷ್ಟಿ ಇದ್ದುದರಿಂದಲೇ ಡಿ.ವಿ.ಜಿ. ಅವರು ಬಹು

ಎತ್ತರಕ್ಕೆ ಏರಿದರು. ಯಾರಿಗೂ ತಲೆಬಾಗದೆ ಸ್ವಯಂ ವೃತ್ತಿಯನ್ನು ಆಧರಿಸಿ ಕಷ್ಟವನ್ನು ನಗುಮುಖದಿಂದ ಅನುಭವಿಸಿ ತಾನೇ ತಾನಾಗಿ ಬೆಳೆದುನಿಂತವರು ಡಿ.ವಿ.ಜಿ. ಅವರು.

'ಜೀವನ ದೃಷ್ಟಿ' ವ್ಯಷ್ಟಿಯೂ ಹೌದು. ಸಮಷ್ಟಿಯೂ ಹೌದು. ಒಬ್ಬ ವ್ಯಕ್ತಿ ತಾನು ಬದುಕುವ ಜೀವನದಲ್ಲಿ ಕಾಳಜಿವಹಿಸಿ ಉನ್ನತ ಆದರ್ಶಗಳನ್ನು ಹೊಂದಿ ತನ್ನದೇ ಆದ ಜೀವನದೃಷ್ಟಿಯನ್ನು ನಂಬಿಕೊಂಡು ಬದುಕುತ್ತಾನೆ. ಆಗ ಅದು ವ್ಯಷ್ಟಿಯಾಗುತ್ತದೆ. ಇದೇ ಜೀವನದೃಷ್ಟಿ ಅನೇಕರ ಮಾನ್ಯತೆ ಗಳಿಸಿ ಅನುಕರಣೀಯವಾದಾಗ ಸಮಷ್ಟಿಯೂ ಆಗುತ್ತದೆ. ಡಿ.ವಿ.ಜಿ. ಅವರ ಜೀವನದೃಷ್ಟಿ ಈ ಅರ್ಥದಲ್ಲಿ ವ್ಯಷ್ಟಿಯೂ ಹೌದು ಸಮಷ್ಟಿಯೂ ಹೌದು. ತಾವು ಬದುಕಲು ಆರಿಸಿಕೊಂಡ ಮಾರ್ಗ, ತಾವು ನಂಬಿದ್ದ ಆದರ್ಶಗಳಿಗೆ ಒತ್ತು ಕೊಟ್ಟು ಬದುಕನ್ನು ಸಾಗಿಸಿದ ಕ್ರಮ ಅನುಕರಣೀಯ; ಪ್ರಾತಃ ಸ್ಮರಣೀಯ; ಸರ್ವಮಾನ್ಯ.

ಪ್ರತಿಯೊಬ್ಬ ವ್ಯಕ್ತಿಯೂ ತಾನು ಯೋಗ್ಯಜೀವನ ಸಾಗಿಸಬೇಕು ಇತರರು ಮೆಚ್ಚುವಂತಹ ಬದುಕು ತನ್ನದಾಗಬೇಕು. ತಾನು—ಸಾಧ್ಯವಾದರೆ—ಇತರರಿಗೆ ಆದರ್ಶವಾಗಬೇಕು ಎಂದು ವಿಚಾರಮಾಡುವುದು ಸ್ವಾಭಾವಿಕ. ಆದರೆ ಈ ದಿಶೆಯಲ್ಲಿ ಯಶ ಸಾಧಿಸುವವರು ಬೆರಳೆಣಿಕೆಯಷ್ಟು ಮಂದಿ. ಒಬ್ಬ ಗಾಂಧಿ, ಒಬ್ಬ ವಿಶ್ವೇಶ್ವರಯ್ಯ, ಒಬ್ಬ ಸರ್ ಸಿ. ವಿ. ರಾಮನ್, ಒಬ್ಬ ರವೀಂದ್ರನಾಥ ಟಾಗೋರ್ ಇರಬಹುದು. ಈ ಆದರ್ಶ ವ್ಯಕ್ತಿಗಳ ಗುಂಪಿನಲ್ಲಿ ತಮ್ಮ ಹೆಸರನ್ನು ಚಿರಸ್ಥಾಯಿಗೊಳಿಸಿದವರು ಡಿ.ವಿ.ಜಿ. ಅವರು.

ಜೀವನ ವ್ಯಕ್ತಿಗಿಂತ ಮುಖ್ಯವಾದುದು. ಜೀವನ ಭವ್ಯವಾದುದಾದರೆ ವ್ಯಕ್ತಿ ಭವ್ಯನಾಗುತ್ತಾನೆ. ಅಂತಹ ಜೀವನವನ್ನು ಬದುಕುವಾಗ ವ್ಯಕ್ತಿ ತನ್ನದೇ ಒಂದು ಮಾರ್ಗವನ್ನು ಹಿಡಿಯುವುದು ಅನಿವಾರ್ಯ. ಈ ಅನಿವಾರ್ಯ ಮಾರ್ಗ, ಯೋಗ್ಯವಾದುದಾದರೆ ಆ ವ್ಯಕ್ತಿಯ ಜೀವನ ಆದರ್ಶವೆನಿಸುತ್ತದೆ. ಗಾಂಧಿ, ತಿಲಕ್, ಗೋಖಲೆ, ಲಾಲಾ ಲಜಪತರಾಯ್, ಬಿಪಿನಚಂದ್ರಪಾಲ, ವಿಶ್ವೇಶ್ವರಯ್ಯ, ಬಿ. ಎಂ. ಶ್ರೀ ಮೊದಲಾದವರು ಬದುಕಿದ ಮಾರ್ಗಗಳು ಆದರ್ಶವೆನಿಸಿವೆ. ಈ ಎಲ್ಲಾ ಮಹನೀಯರ ಜೀವನವನ್ನು ಗಮನಿಸಿದ್ದ ಡಿ.ವಿ.ಜಿ ತಮ್ಮದೇ ಆದ ಜೀವನದೃಷ್ಟಿ ಹೊಂದಿದ್ದರೆಂಬುದು ಸ್ಪಷ್ಟವಾಗುತ್ತದೆ.

ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿ ನಡೆಸಿ ತಮ್ಮದೇ ಆದ ಶೈಲಿಯಲ್ಲಿ ವಿಶಿಷ್ಟ ಕೃತಿಗಳನ್ನು ಡಿ. ವಿ. ಜಿ. ರಚಿಸಿದ್ದಾರೆ. ಅವರ ಬರವಣಿಗೆಯನ್ನು ಓದುತ್ತಾ ಹೋದಂತೆ ಅವರ ಜೀವನದೃಷ್ಟಿ ಏನೆಂಬುದು ಸ್ಪಷ್ಟವಾಗುತ್ತದೆ. ಕಾವ್ಯವೇ ಇರಲಿ, ನಾಟಕವೇ ಇರಲಿ, ವೈಚಾರಿಕ ಲೇಖನವೇ ಇರಲಿ ಅವುಗಳಲ್ಲಿ ತಮ್ಮ ಬಾಳು ಮತ್ತು ಅದನ್ನು ಬದುಕುವ ವಿಧಾನದ ಬಗ್ಗೆ ಡಿ.ವಿ.ಜಿ. ಚಿಂತಿಸಿರುವುದು ಸ್ಪಷ್ಟವಾಗುತ್ತದೆ.

ದೈವಭಕ್ತರು, ಧರ್ಮನಿಷ್ಠರೂ ಆಗಿದ್ದ ಡಿ.ವಿ.ಜಿ. ದೈವ ಕೃಪೆ ಇಲ್ಲದೆ ಮನುಷ್ಯನ ಯಾವ ಆಟವೂ ಸಾಗುವುದಿಲ್ಲ ಎಂದು ನಂಬಿದ್ದವರು. "ತೃಣಮಪಿ ನಚಲತಿ ತೇನ ವಿನಾ" ಎಂಬ ಸೂತ್ರವನ್ನು ಮನನ ಮಾಡಿದ್ದ ಡಿ. ವಿ. ಜಿ. ಅವರು ತಮ್ಮ ಬಾಳು

ವನಸುಮದೊಳೆನ್ನ ಜೀ
ವನವು ವಿಕಸಿಸುವಂತೆ
ಮನವನನುಗೊಳಿಸು ಗುರುವೇ — ಹೇ ದೇವ ||ಪ||

ಜನಕೆ ಸಂತಸವೀವ
ಘನಸು ನಾನೆಂದೆಂಬ
ಎಣಿಕೆ ತೋರದೆ ಜಗದ ಪೊಗಳಿಕೆಗೆ ಬಾಯ್ ಬಿಡದೆ ||ಅ|| ||ಪ||

ಕಾನನದಿ ಮಲ್ಲಿಗೆಯು
ಮೌನದಿಂಬಿರಿದು ನಿಜ
ಸೌರಭವ ಸೂಸಿ ನಲವಿಂ
ತಾನೆಲೆಯ ಪಿಂತಿರ್ದು
ದೀನತೆಯ ತೋರಿ ಅಭಿ
ಮಾನವನು ತೊರೆದು ಕೃತಕೃತ್ಯತೆಯ ಪಡೆವಂತೆ

ಉಪಕಾರಿ ನಾನು ಎ
ನ್ನುಪಕೃತಿಯು ಜಗಕೆಂಬ
ವಿಪರೀತ ಮತಿಯನುಳಿದು
ವಿಪುಲಾಶ್ರಯನೀವ
ಸುಫಲ ಸುಮಭರಿತ ಪಾ
ದಪದಂತೆ ನೈಜಮಾದೊಳ್ಪಿನಿಂ ಬಾಳ್ವವೊಲು

ಹೀಗಿರುವಂತೆ ಕರುಣಿಸಲು ದೈವವನ್ನು ಬೇಡಿಕೊಂಡಿದ್ದಾರೆ. ೧೯೨೪ ರ ಸುಮಾರಿಗೆ ಈ ಭಾವನೆಗಳು ಡಿ. ವಿ. ಜಿ. ಅವರ ಹೃದಯದಲ್ಲಿ ಸ್ಪಂದಿಸಿವೆ.

ಆಗ ಅವರಿಗೆ ಸುಮಾರು ೩೫–೪೦ರ ಹರೆಯ ಎಂದು ಕಾಣಿಸುತ್ತದೆ. ಆ ಹೊತ್ತಿಗಾಗಲೇ ಜೀವನದ ಸಿಹಿ–ಕಹಿಗಳನ್ನು ಊಟಮಾಡಿ ಪರಿಪಕ್ವತೆಯ ಹಾದಿಯಲ್ಲಿ ಸಾಗಿದ್ದ ಅವರ ಜೀವನ ಈ ರೀತಿ ಬದುಕಲು ಆಶಿಸುವುದು ಸಹಜವೇ ಆಗಿದೆ. ದೈವದ ಬಗ್ಗೆ ಅವರ ನಂಬಿಕೆ ಗಾಢವಾದಂತೆ ಹೋದ ಹಾಗೆಲ್ಲ ಅವರ ಜೀವನವು ಗಾಢವಾಗುತ್ತಾ ಬಂದಿದೆ.

ಈ ಲೋಕವೆಲ್ಲ ಮಹಾ ಚೈತನ್ಯದ ಲೀಲೆ. ಆ ಲೀಲೆಯಲ್ಲಿ ನಾವು ಪಾತ್ರಧಾರಿಗಳು. ಆ ಚೈತನ್ಯದ ಇಚ್ಛೆಗನುಗುಣವಾಗಿ ನಾವು ಪಾತ್ರ ನಿರ್ವಹಿಸಬೇಕು ಎಂದು ನಂಬಿದ್ದ ಡಿ. ವಿ. ಜಿ. "ಲೀಲೆಯ ಜಗವೆಲ್ಲಾ, ಲೋಕ ನಾಟಕ ಲೀಲೆ" "ಶಿವಲೀಲೆ ಬಾಳು," "ಭುವನವೆಲ್ಲಾ ಶಿವನ ಲೀಲಾ ರಂಗ"ಎಂಬ ಮರುಳಮುನಿಯನ ಮಾತುಗಳಲ್ಲಿ ನಿರೂಪಿಸಿದ್ದಾರೆ. ದೈವವನ್ನು ನಂಬಿ ನಮ್ಮ ಬಾಳನ್ನು ಸಾಗಿಸಬೇಕು ಎಂದು ಹೇಳುವಲ್ಲಿ

ನಂಬು ನೀಂ ದೈವವನು ನಂಬು ಸ್ವಯಂಭುವನು
ನಂಬು ಸಾಂಬನ ಮನದಿ ತುಂಬು ಭಕ್ತಿಯನು
ಬಿಂಬವೊ ಕಂಬವೋ ನಂಬಿಕೆಯು ಮಾತ್ರದಿಂ
ದಿಂಬುಗೊಳುವುದು ಜೀವ– ಮರುಳ ಮುನಿಯ

ಎಂದು ವಿಶದಪಡಿಸಿದ್ದಾರೆ. ಈ ಜೀವನವನ್ನು ಅತ್ಯಂತ ಗೌರವದಿಂದ ಕಾಣಬೇಕೆಂದು ಸೂಚಿಸುತ್ತಾ "**ಜೀವನತಾಂ ಬ್ರಹ್ಮದೈಶ್ವರ್ಯವದ ಗೌರವಿಸು**" ಎಂಬ ನಿಲವು ತಿಳಿದಿದ್ದಾರೆ.

"ಲೋಕಂ ರಸಾಲ ವೃಕ್ಷಂ" ಎಂಬ ನಿಲವು ತಳೆದಿದ್ದ ಡಿ. ವಿ. ಜಿ. ಕಷ್ಟಕರವಾದ ಈ ಬದುಕಿನಿಂದ ಓಡಲು ಬಯಸಲಿಲ್ಲ. ಸನ್ಯಾಸಕ್ಕೆ ಆಶಿಸಲಿಲ್ಲ. ಜೀವನವನ್ನು ಛಾಲೆಂಜ್ ಆಗಿ ಸ್ವೀಕರಿಸಿ ಅದನ್ನು ಸಮರ್ಥ ರೀತಿಯಲ್ಲಿ ಸರಿದೂಗಿಸಿದರು.

ಒಬ್ಬ ವ್ಯಕ್ತಿಯ ಜೀವನವನ್ನು ರೂಪಿಸುವಲ್ಲಿ ಗುರುವಿನ ಪ್ರಭಾವ ಅತಿ ಮಹತ್ವದ್ದೆಂದು ಭಾವಿಸಿದ್ದ ಡಿ. ವಿ. ಜಿ. ಅವರು "ದೊಡ್ಡ ಗುರುವಿನಲ್ಲಿ ಓದಿದೆ ಎಂದು ಹೇಳಿಕೊಂಡು ಹೆಮ್ಮೆ ಪಡುವುದೂ, ಆ ಗುರುವನ್ನು ಪದೇ ಪದೇ ಸ್ಮರಿಸಿ ಕೈಮುಗಿಯುವುದು ದೊಡ್ಡ ಭಾಗ್ಯ" ಎಂದು ತಿಳಿಸಿದ್ದಾರೆ. ಹೀಗಾಗಿ ತಮಗೆ ವಿದ್ಯಾದಾನ ಮಾಡಿದ ಹೆಡ್ ಮಾಸ್ತರ್ ಚಂದ್ರಶೇಖರ ಶಾಸ್ತ್ರಿಗಳು ಮತ್ತು ಇಂಗ್ಲೀಷ್ ಬೋಧಕರಾದ ಕೆ. ವಿ. ರಾಮಸ್ವಾಮಿ ಅಯ್ಯರ್ ಅವರನ್ನು ಗೌರವದಿಂದ ಸ್ಮರಿಸಿದ್ದಾರೆ.

ವಿದ್ಯಾಭ್ಯಾಸ ಕ್ರಮದ ಬಗ್ಗೆ ಹಿಂದೆ ರೂಢಿಯಲ್ಲಿದ್ದ ಬಾಯಿಪಾಠ ಮಾಡಿಸುವ ವಿಧಾನವನ್ನು ಡಿ. ವಿ. ಜಿ. ಮೆಚ್ಚಿದ್ದಾರೆ. ಪಾಠವನ್ನು ಓದಿಸುವುದೂ ಉಚ್ಚಾರಣೆಯನ್ನು ತಿದ್ದುವುದು ಕಾಗುಣಿತಗಳನ್ನು, ಮಗ್ಗಿಯನ್ನು ಬಾಯಪಾಠ ಮಾಡಿಸುವುದು, ಅರ್ಥ ಕೇಳುವುದೂ ಇತ್ಯಾದಿ ಕ್ರಮ ಮಾನ್ಯ ಎಂಬ ಖಚಿತ ಅಭಿಪ್ರಾಯವನ್ನು ತಳೆದಿದ್ದ ಡಿ. ವಿ. ಜಿ. "ತಿಳಿದುಕೊಂಡದ್ದು ಕೊಂಚವಾದರೂ ಅದನ್ನು ಚೆನ್ನಾಗಿ ತಿಳಿದುಕೊಂಡಿರಬೇಕು" ಎಂಬ ಬೋಧನ ತತ್ವದಲ್ಲಿ ನಂಬಿಕೆಹೊಂದಿದ್ದ ಅವರು ೯ ನೇ ತರಗತಿಯಲ್ಲಿದ್ದಾಗಲೇ ಛಂದೋಬದ್ಧ ಪದ್ಯ ರಚಿಸುವ ಸಾಮರ್ಥ್ಯ ಪಡೆದಿದ್ದರು. 'ಕ್ರಮಬದ್ಧ ವ್ಯಾಸಂಗಕ್ಕೆ ಆದ್ಯತೆಕೊಟ್ಟು ನಂಬರುಗಳಿಗಾಗಿ ಹುಡುಕಾಡದೇ ಪಾಠದಲ್ಲಿ ಶ್ರದ್ಧೆ ಇಟ್ಟು ವಿದ್ಯೆಯನ್ನು ಸಂಪಾದಿಸಬೇಕು. ಆಗ ನಮ್ಮ ದೇಶದ ವಿದ್ಯಾ ಸಂಪತ್ತು ನಿಜವಾದ ಅಭಿವೃದ್ಧಿ ಪಡೆದೀತು' ಎಂಬ ಅಭಿಪ್ರಾಯ ಹೊಂದಿದ್ದರು.

"ಯಾವುದರಲ್ಲಿಯೂ ನೀತಿಯೊಂದುಂಟು, ದೊಡ್ಡ ದಾರಿಯುಂಟು. ಸತ್ಯದಿಂದಲೂ, ನೀತಿಯಿಂದಲೂ ಯಾವ ಸಂದರ್ಭದಲ್ಲಿಯೂ ಎಷ್ಟು ಮಾತ್ರವೂ ಸಡಿಲಗೊಳ್ಳಬಾರದು" ಎಂದು ಪದೇ ಪದೇ ಹೇಳುತ್ತಿದ್ದ ಡಿ. ವಿ. ಜಿ. ನೀತಿಯುಕ್ತ ಜೀವನಕ್ಕೆ ಪ್ರಾಧಾನ್ಯತೆ ಕೊಟ್ಟದ್ದರೆಂಬುದು ಸ್ಪಷ್ಟ. ಜನರ ಮನಸ್ಸನ್ನು ಕೆರಳಿಸುವವರು ಅವರ ಬುದ್ಧಿಯನ್ನು ಕೆಣಕುವವರು, ಅವರ ಅಭಿಲಾಷೆಗಳಿಗೆ ರೂಪಕೊಡುವವರು ಹೊಸ ಅಭಿಪ್ರಾಯಗಳನ್ನು ಉತ್ಪಾದನೆ ಮಾಡಿಸುವವರು ಚಾರಿತ್ರಿಕ ವ್ಯಕ್ತಿಗಳಾಗುತ್ತಾರೆ. ಈ ರೀತಿ ಚಾರಿತ್ರಿಕವಾಗುವಂತಹ ವ್ಯಕ್ತಿತ್ವವನ್ನು ಪ್ರತಿಯೊಬ್ಬ ವ್ಯಕ್ತಿಯು ಸಾಧಿಸಬೇಕೆಂಬುದು ಡಿ. ವಿ. ಜಿ. ಅವರ ಜೀವನ ದೃಷ್ಟಿ.

ಜೀವನದಲ್ಲಿ ಧರ್ಮ ಎಷ್ಟು ಆವಶ್ಯಕವೆಂಬುದನ್ನು ಮನಗಂಡಿದ್ದ ಡಿ.ವಿ.ಜಿ. ಅವರು ಧರ್ಮಸೂಕ್ಷ್ಮ ವ್ಯಾಖ್ಯಾನವನ್ನು ಮಾಡಿರುವುದುಂಟು. ಮತತತ್ವ, ಧರ್ಮ, ದೈವ, ಮೊದಲಾದ ಸೂಕ್ಷ್ಮ ಹಾಗೂ ಪವಿತ್ರ ವಿಚಾರಗಳಿಗೆ ತಲೆ ಹಾಕದಿದ್ದ ಡಿ. ವಿ. ಜಿ. ದೇಶ ಹಿತ ಸಾಧಿಸುವಲ್ಲಿ ಧರ್ಮದ ಆವಶ್ಯಕತೆ ಮನವರಿಕೆಯಾದಮೇಲೆ ಧರ್ಮವನ್ನು ಕುರಿತು ವಿಚಾರ ಮಾಡತೊಡಗಿದರು. ಇದಕ್ಕೆ ಸಂಬಂಧಿಸಿದಂತೆ 'ಶ್ರೀಮದ್ ಭಗವದ್ಗೀತಾ ತಾತ್ಪರ್ಯದಲ್ಲಿ' ತಾವು ಧರ್ಮ ಜಿಜ್ಞಾಸೆ ಪ್ರಾರಂಭಿಸಬೇಕಾಗಿ ಬಂದ ಸಂದರ್ಭವನ್ನು ವಿವರಿಸಿದ್ದಾರೆ.

ಜೀವನದ ಜಂಜಡದಲ್ಲಿ ಸಿಕ್ಕಿ ತೊಳಲುತ್ತಿರುವ ಮನುಷ್ಯನಿಗೆ ಗೀತೆಯ ಆವಶ್ಯಕತೆಯನ್ನು ಒಪ್ಪಿಕೊಳ್ಳುವ ಡಿ. ವಿ. ಜಿ. ಅವರು "ನಮ್ಮ ನಂಬಿಕೆಗಳು ಚದುರಿ ಅಲುಗಾಡುತ್ತಿವೆ, ಮನಸ್ಸಿಗೆ ಒಂದು ನೆಲೆಮನೆ ಬೇಕು, ಭವಿಷ್ಯವು

ಸಂದೇಹಗಳಲ್ಲಿ ಸಿಕ್ಕಿಕೊಂಡಿದೆ, ಒಂದು ಭರವಸೆ ಬೇಕು .... ಇಂತಹ ಉಪಕಾರವನ್ನು ಅದರ (ಭಗವದ್ಗೀತೆಯ) ವಾಕ್ಯಗಳಿಂದ ಪಡೆಯುವುದು, ಸಾಧ್ಯವಾಗುತ್ತದೆ ಎಂದು ತಿಳಿಸಿ, ಭಗವದ್ಗೀತೆ 'ಧರ್ಮಶಾಸ್ತ್ರ' ಎಂಬ ಅಭಿಪ್ರಾಯವನ್ನು ತಳೆದಿದ್ದಾರೆ. ಈ ನೆಲೆಗೆ ಬಂದು ನಿಂತ ಡಿ. ವಿ. ಜಿ. ಅವರು ಭಗವದ್ಗೀತೆಗೆ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನ ಮಾಡಿ ಸುಮಾರು ೭೦೦ ಪುಟಗಳಲ್ಲಿ ತಮ್ಮ ಜೀವನ ವಿಚಾರಧಾರೆಯನ್ನು ಹರಿಸಿದ್ದಾರೆ.

ಡಿ. ವಿ. ಜಿ. ಅವರ ಜೀವನ ದೃಷ್ಟಿ "ಮಂಕುತಿಮ್ಮನ ಕಗ್ಗ" ಮತ್ತು ಇತ್ತೀಚೆಗೆ ಪ್ರಕಟಗೊಂಡಿರುವ "ಮರುಳ ಮುನಿಯನ ಕಗ್ಗ" ಗಳಲ್ಲಿ ವಿವರವಾಗಿ ಬಂದಿದೆ. ಜೀವನದ ಹಲವಾರು ಸಮಸ್ಯೆಗಳ ವಿವೇಚನೆ ಈ ಕೃತಿಗಳಲ್ಲಿ ಸಾಗಿದೆ. ಜೀವನದ ಅರ್ಥವೇನು? ಹುಟ್ಟು ಸಾವುಗಳು ಏನು? ಜೀವ ಪ್ರಪಂಚಗಳ ಸಂಬಂಧವೇನು? ದೇವರೆಂಬುದೇನು? ಸೃಷ್ಟಿಯಲ್ಲಿ ಕ್ರಮ ಇದೆಯೋ ಇಲ್ಲವೋ? ಮಾನವನ ಗುರಿ ಏನು? ಆ ಗುರಿಗೆ ಏನಾದರು ಬೆಲೆ ಇದೆಯೆ? ಇತ್ಯಾದಿ ಪ್ರಶ್ನೆಗಳಿಗೆ ಸಮಂಜಸ ಉತ್ತರ ಈ ಎರಡು ಕೃತಿಗಳಲ್ಲಿ ದೊರೆತಿದೆ. ಈ ಪ್ರಶ್ನೆ ಉತ್ತರಗಳನ್ನು ವಿಚಾರ ಮಾಡುತ್ತಾ ಹೋದಂತೆಲ್ಲಾ ಡಿ. ವಿ. ಜಿ. ಅವರ ಜೀವನದೃಷ್ಟಿ ಸ್ಪಷ್ಟವಾಗುತ್ತದೆ.

"ಕಲೆಗಳಲ್ಲಿ ಪರಮ ಕಲೆ ಜೀವನದ ಲಲಿತ ಕಲೆ
ಕಲಿಸಲದನಳವಲ್ಲ ಬಾಹ್ಯಬೋಧನೆಯಿಂ
ಪೊಲಿದೊಲಿಸಿ ಕೊಳುವ ಲೌಕಿಕನಯದ ಸೊಗಸನಿಂ
ತಿಳಿವುದೊಳಹದದಿಂದ ಮಂಕುತಿಮ್ಮ"

ಎಂದು ಹೇಳುವಲ್ಲಿ ಉತ್ತಮ ಜೀವನ ನಡೆಸುವುದು ಒಂದು ಕಲೆ. ಅದು ತನ್ನ ಒಳ ಹದದಿಂದ ತಿಳಿಯತಕ್ಕದ್ದೆ ಹೊರತು ಅನ್ಯರಿಂದ ಕಲಿಯಲಾಗದ್ದು ಎಂಬ ದೃಢ ನಿಲುವು ಡಿ.ವಿ.ಜಿ. ಅವರದು.

"ಯಾತ್ರಿಕರು ನಾವು ದಿವ್ಯ ಕ್ಷೇತ್ರವೀ ಲೋಕ
ಸತ್ರದಲಿ ಸೇಮದಿಂದಿರಲಿಕೆಡೆಯುಂಟು
ರಾತ್ರಿ ಮೂರಾಯ್ತು ಹೊರಡೆನೆ ತೆರಳಿದೊಡೆ ಪಾರು
ಪತ್ಯದವ ಮೆಚ್ಚುವನು ಮಂಕುತಿಮ್ಮ"

ಈ ಜೀವನ ಒಂದು ಯಾತ್ರೆ ಇದ್ದಂತೆ. ಈ ಯಾತ್ರೆ ನಡೆಯುವುದು ಪವಿತ್ರ ಕ್ಷೇತ್ರವಾದ ಈ ಲೋಕದಲ್ಲಿ. ಯಾತ್ರೆಯಲ್ಲಿ ಭಾಗವಹಿಸಲು ಬಂದ

ಯಾತ್ರಿಕ ನಿಯಮಗಳಿಗೊಳಪಟ್ಟು ತಂಗಬೇಕು. ವೇಳೆಯಾದೊಡನೆ ಹೊರಡುತ್ತಿರಬೇಕು. ಆಗ ಅದು ಸಾರ್ಥಕವಾದ ಯಾತ್ರೆ ಆಗುವುದೆಂದು ತಮ್ಮ ಜೀವನಾನುಭವವನ್ನು ನಿರೂಪಿಸಿದ್ದಾರೆ.

ಈ ಜೀವನಯೋಗ ದೊಂಬನ ಉಪಾಯದಂತೆ. ಬಳುಕುತ್ತಿರುವ ಹಗ್ಗದ ಮೇಲೆ ತಲೆಯ ಮೇಲೆ ಕೊಡ ಹೊತ್ತು ಕೈಯಲ್ಲಿ ಖಡ್ಗ ಹಿಡಿದು ಅಕ್ಕ ಪಕ್ಕಕ್ಕೆ ಬೀಳದಂತೆ ಜತನದಿಂದ ನಡೆಯಬೇಕು. ಜೀವನವೂ ಹಾಗೆಯೇ. ಎಚ್ಚರ ತಪ್ಪದೆ ಸಮತೋಲನವನ್ನುಳಿಸಿಕೊಂಡು ಬದುಕಬೇಕು. ಈ ಬದುಕು ಒಂದು ಕನಸಿನಂತೆ. ಅದೂ ನಿಯಮಕ್ಕೊಳಪಟ್ಟ ಕನಸಿನಂತೆ. ನಮ್ಮ ನೆಲೆ ಸೀಮಿತವಾದುದು. ಇರುವ ಅಲ್ಪಾವಧಿಯಲ್ಲಿ ಉತ್ತಮ ಬದುಕನ್ನು ಬದುಕುವಾಗ ಫಲಾಫಲಗಳ ವಿಚಾರವಮಾಡದೆ ಅಂದಂದಿನ ದಂದುಗಕ್ಕೆ ಬದುಕಬೇಕು ಎಂಬುವನ್ನು

"ದಿವಸದಿಂದಿವಸಕ್ಕೆ ನಿಮಿಷದಿಂ ನಿಮಿಷಕ್ಕೆ
ಭವಿಹಿಯುವ ಚಿಂತಿಸದೆ ಬದುಕ ನೂಕುತಿರು
ವಿವರಗಳ ಜೋಡಿಸುವ ಯಜಮಾನ ಜೀಹಿಸನು
ನಡೆಸು ನೀಂ ಜನುಮವನು—ಮಂಕುತಿಮ್ಮ"

ಎಂಬುದಾಗಿ ತಿಳಿಸಿದ್ದಾರೆ.

ಶ್ರಮಜೀವನದಲ್ಲಿ ವಿಶಿಷ್ಟವಾದ ನಂಬಿಕೆ ಹೊಂದಿದ್ದವರು ಡಿ. ವಿ. ಜಿ. ಮಗ ಸರ್ಕಾರಿ ನೌಕರಿಗೆ ಸೇರಬೇಕೆಂಬ ತಂದೆಯ ಆಕಾಂಕ್ಷೆಯನ್ನು ಮೀರಿನಿಂತ ಡಿ. ವಿ. ಜಿ. ಶ್ರಮ ಸಹಿತವಾದ ಸ್ವತಂತ್ರ ಜೀವನಕ್ಕೆ ಪ್ರಾಧಾನ್ಯತೆ ಕೊಟ್ಟಿದ್ದರು. ಇನ್ನೊಬ್ಬರ ಅಡಿಯಾಳಾಗಿ ದುಡಿಯಬಾರದು. ಎದೆ ಸೆಟೆಸಿ ತಲೆ ಎತ್ತಿ ನಿಷ್ಠೆಯಿಂದ ಬದುಕನ್ನು ಸಾಗಿಸುವ ಕ್ರಮ ತಮ್ಮದಾಗಬೇಕೆಂದು ಎಣಿಸಿದ ಡಿ.ವಿ.ಜಿ. ಅದೇ ಹಿನ್ನೆಲೆಯಲ್ಲಿ ಸಾಹಸದ ಬದುಕನ್ನು ಬದುಕಿದವರು ಆಗಿದ್ದಾರೆ.

"ಶ್ರಮತೆ ಸಂಯಮಾಸಮಗಳಿಂ ಭವನನೋಲಗಿಸೆ
ಸಮನಿಪುದು ಮತಿಯ ಹದವಾತ್ಮಾನುಭವಕೆ
ಮಮತೆಯಳಿವಿಂ ಜ್ಞಾನ; ಪಾಂಡಿತ್ಯದಿಂದಲ್ಲ
ಶ್ರಮಿಸಿಳಿಯ ಗಾಣದಲ್ಲಿ— ಮಂಕುತಿಮ್ಮ"

ಎಂಬಲ್ಲಿ ಶ್ರಮಜೀವನದ ಅವಶ್ಯಕತೆಯನ್ನು ಒತ್ತಿ ಹೇಳುತ್ತಾರೆ.

ಈ ಜೀವನ ನಮ್ಮದಲ್ಲ. ಇದರೊಡೆಯ ಬೇರೊಬ್ಬ. ಆದರೆ ಇದನ್ನು ಬದುಕಲು ಆ ಒಡೆಯ ನಮಗೆ ಸೂಚಿಸಿದ್ದಾನೆ. ಅವನು ಯಾವಾಗ ಬಂದ

ಈಜೀವನವನ್ನು ಕೇಳುವನೋ ಅದನ್ನು ಹಿಂದಕ್ಕೆ ಒಪ್ಪಿಸುವುದು ನಮ್ಮ ಕರ್ತವ್ಯ. ಆದುದರಿಂದ ಈ ಜೀವನವನ್ನು ಭರತನ ಮಾದರಿಯಲ್ಲಿ ಬದುಕಬೇಕೆಂದು

"ಅರಸಡಪಿಗೈದಿದೊಡವು ಅವನಿತ್ತ ಪಾದುಕೆಗೆ—
ಓರೆಯುದೊಡವೇನನಂ, ತಾಂ ವರದಿಯೊರೆದು
ದೊರೆತನದ ಭಾರವನು ಹೊತ್ತು ದೊರೆಯಾಗದಾ
ಭರತನವೊಲಿರು ನೀನು— ಮಂಕುತಿಮ್ಮ"

"ಒಡೆಯನೆಂದೋ ಬಂದು ಕೇಳ್ವನದಕುತ್ತರವ
ಕೊಡಬೇಕು ತಾನೆನುವವೊಲು ಋಜುತೆಯಿಂದ
ಒಡಲ, ಜಾಣನ, ಜೀವಶಕ್ತಿಗಳನೆಲ್ಲವನು
ಮುಡುಪು ಕೊಟ್ಟನು ಭರತ— ಮಂಕುತಿಮ್ಮ"

"ಒಡರಿಸುವನೆಲ್ಲವನ್ ಅದಾವುದುಂ ತನದಲ್ಲ
ಬಿಡನೊಂದನುಂ ರಾಜ್ಯ ತನದಲ್ಲವೆಂದು
ನಡೆವಂ ಸ್ವತಂತ್ರದಲಿ ಸಲಿಸುತೆ ವಿಧೇಯತೆಯು
ಕಡುಯೋಗಿ ಭರತನಲ? — ಮಂಕುತಿಮ್ಮ"

ಎಂಬ ಈ ಮೂರು ಪದ್ಯಗಳಲ್ಲಿ ವಿವರಿಸಿದ್ದಾರೆ.

ಆಸೆಯನ್ನು ಒಂದು ಮಿತಿಯೊಳಗಿಟ್ಟು ಸುಖಲೋಲುಪತೆ ಬಿಟ್ಟು ಸತ್ಯವನ್ನು ಅನುಸರಿಸುವ ಬುದ್ಧಿ ಹೊಂದಿ ಬದುಕಬೇಕು. ತಪ್ಪು ಮಾಡುವವರನ್ನು ಕ್ಷಮಿಸುವ ಹೃದಯ ಶ್ರೀಮಂತಿಕೆ ಇರಬೇಕು. ವಿಧಿ ತೀವ್ರವಾದಾಗ ಎದುರಿಸುವ ಕೆಚ್ಚೆದೆ ಇರಬೇಕು. ಸೋಲು ಗೆಲುವುಗಳಲ್ಲಿ ಸಮತಾಭಾವ. ಮನೋನಿಗ್ರಹವನ್ನು ಹೊಂದಿ ಬದುಕನ್ನು ಸಾಗಿಸುವುದಾದರೆ "ಹಸನೊಂದು ನುಡಿಯಲ್ಲಿ ನಡೆಯಲ್ಲಿ ನೋಟದಲ್ಲಿ ಪಸರುತಿರೆ ಬಾಳ ಚೆಲುವು" ಎಂದು ಹೇಳಿ ಇಂತಹ ಚೆಲುವು ಬಾಳನ್ನು ಬದುಕಬೇಕೆಂದು ಸೂಚಿಸುತ್ತಾರೆ.

"ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು
ಕಲ್ಲಾಗು ಕಷ್ಟಗಳ ಮಳೆ ವಿಧಿ ಸುರಿಯೆ
ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ
ಎಲ್ಲರೊಳಗೊಂದಾಗು — ಮಂಕುತಿಮ್ಮ"

ಎಂಬಲ್ಲಿ ಮನುಷ್ಯನಾದವನು ಈ ಜೀವನವನ್ನು ಬದುಕುವುದು ಹೇಗೆ ಎಂಬುದನ್ನು ಸೂಚಿಸುತ್ತಾರೆ. ಬೆಟ್ಟ ಬಂಡೆಯಡಿಯಲ್ಲಿ ತಾನೆ ತಾನಾಗಿ ಆ ತನ್ನ ಅಸ್ತಿತ್ವ

ವನ್ನುಳಿಸಿಕೊಂಡಿರುವಂತೆ ಬಾಳ ಬೆಟ್ಟ ಬಂಡೆಯಡಿಯಲ್ಲಿ ಮನುಷ್ಯ ತಾನೇ ತಾನಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬದುಕಬೇಕು. ಆ ಬದುಕು; ಮಲ್ಲಿಗೆಯು ತನ್ನ ಇರುವಿಕೆಯಿಂದ ಇರುವನಿತು ಕಾಲದಲ್ಲಿ ಎಲ್ಲರಿಗೂ ಬೇಕಾಗುವಂತೆ ಹೇಗೆ ನರುಗಂಪನ್ನು ಸೂಸುತ್ತದೆಯೋ ಹಾಗೇ ನಮ್ಮ ಬದುಕು ಎಲ್ಲರಿಗೂ ಬೇಕಾದುದಾಗಿ ಇರಬೇಕು. ಇದು ಅಷ್ಟು ಸುಲಭವಲ್ಲ. ಈ ಹಾದಿಯಲ್ಲಿ ನಡೆಯುವಾಗ ವಿಧಿ ಕಷ್ಟಗಳ ಮಳೆಯನ್ನೇ ಸುರಿಸುತ್ತದೆ. ಆ ಮಳೆಗೆ ಬೆಚ್ಚದೆ ಎಲ್ಲ ಕಷ್ಟಗಳನ್ನು ಸಹಿಸುವ ಬಂಡೆಯಂತೆ ಅಚಲನಾಗಿ ಕಷ್ಟಗಳನ್ನು ಸಹಿಸುವ ಬಂಡೆಯಂತೆ ಅಚಲನಾಗಿ ವಿಚಲಿತಗೊಳ್ಳದೆ ಇರಬೇಕು. ದೀನ ದುರ್ಬಲರು ಬಲ್ಲಿದ ಎಂದು ಎಣಿಸದೆ ಎಲ್ಲರೊಳಗೆ ಒಂದಾಗಿ ಬದುಕುವ ಜೀವನದೃಷ್ಟಿಯನ್ನು ಡಿ. ವಿ. ಜಿ. ಹೊಂದಿದ್ದರು ಎಂಬುದು ಸ್ಪಷ್ಟ ಅಲ್ಲವೆ?

ತನ್ನ ಅಲ್ಪ ಸುಖ ಏಳಿಗೆಗೆ ಕುದಿಯದೆ ಲೋಕ ಜೀವನದೊಂದಿಗೆ ಆತ್ಮ ಜೀವೋನ್ನತಿಯನ್ನು ಕಾಣಬೇಕು. ಅದು ಆತ್ಮ ವಿಸ್ತರಣಕ್ಕೆ ದಾರಿ. 'ವ್ಯಕ್ತಿ ಜೀವನದ ಸೊಂಪು ಸಮಷ್ಟಿ ಜೀವನದಿ' ಎಂಬ ಸೂತ್ರಕ್ಕೆ ಹೊಂದಿಕೊಂಡಿದ್ದ ಡಿ. ವಿ. ಜಿ.

"ಜಗದ ಕಲ್ಯಾಣದೊಳಗಾತ್ಮ ಕಲ್ಯಾಣವನು
ಜಗದ ಬೀದಿಗಳೊಳು ನಿಜಾತ್ಮಯಾತ್ರೆಯನು
ಜಗದ ಜೀವಿತದಿ ನಿಜಜೀವಿತದ ಪೂರ್ತಿಯನು
ಬಗೆಯಲರಿತವನೆ ಸುಖಿ—ಮಂಕುತಿಮ್ಮ"

ಎಂದು ತಿಳಿಸಿದ್ದಾರೆ.

ಇಹದಲ್ಲಿ ಉತ್ತಮನಾಗಿ ಬದುಕಿದ ಮಾನವನಿಗೆ ಪರವು ಹೇಗಿದ್ದರೇನು 'ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು' ಎಂಬ ಅಣ್ಣನವರ ವಾಣಿಯಂತೆ ಯೋಗ್ಯ ಬದುಕನ್ನು ಇಲ್ಲಿ ಸಾಗಿಸಬೇಕಾದುದು ನಮ್ಮ ಕರ್ತವ್ಯ. ಈ ಇಳೆಯು ಬಾಗಿಲು ಪರಕೆ. ಆದುದರಿಂದ ಇಲ್ಲಿ ಸಲ್ಲುವಂತೆ ಬದುಕಬೇಕಾದುದು ನಮ್ಮ ಹೊಣೆ. ಪರವೊಂದಿದೆ ಎಂಬ ಕಲ್ಪನೆಯಲ್ಲಿ ಮುಳುಗಿರುವ ನಾವು ಪರವನ್ನು ಕುರಿತು ಚಿಂತಿಸುತ್ತಾ ಇಹವನ್ನು ಮರೆಯಬಾರದು. ಬ್ರಹ್ಮ ನಮ್ಮ ಮನಸ್ಸಿನಲ್ಲಿ ಮನೆಮಾಡಬೇಕು ಎಂಬುದಾಗಿ ಹೇಳುತ್ತಾ.

"ಜನ್ಮ ಸಾವಿರ ಬರಲಿ, ನಷ್ಟವದರಿಂದೇನು?
ಕರ್ಮ ಸಾಪಿರಪಿರಲಿ ಕಷ್ಟನಿನಗೇನು?

ಬ್ರಹ್ಮ ಹೃದಯದಿನಿಲ್ಲಿ–ಮಾಯೆಯೇಂ ಗೈದೊಡೇಂ ?
ಇಮ್ಮಿದಳ ಸರಸವದು–ಮಂಕುತಿಮ್ಮ"

ಎಂಬುದನ್ನು ನಿರೂಪಿಸುತ್ತಾ, ದೇಹಕ್ಕಿಂತ ಆತ್ಮ ದೊಡ್ಡದು. ಆದುದರಿಂದ ಆತ್ಮೋದ್ಧಾರದ ಕಡೆಗೆ ನಮ್ಮ ಗಮನವಿರಬೇಕು. 'ಉದ್ಧರೇತ್ ಆತ್ಮಾನಾಂ ತ್ಯಜೇತ್ ಭೂಮೀಮ್' ಎಂಬ ವ್ಯಾಸ ವಾಣಿಯಲ್ಲಿ ನಂಬಿಕೆ ಹೊಂದಿದ್ದ ಡಿ. ವಿ. ಜಿ. ಆತ್ಮೋದ್ಧಾರಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದಾರೆ. ಇದು ಜೀವನದ ಗುರಿ ಎಂದು ತಿಳಿದು ನಿರೂಪಿಸಿದ್ದಾರೆ.

ಈ ಜೀವನದ ತಿರುಳು ಮನಸ್ಸಿನ ಸಂತೋಷ. ಆದುದರಿಂದ ನಾವು ನಕ್ಕು ಇತರರನ್ನೂ ನಗಿಸಬೇಕು. ಆದ್ದರಿಂದ

"ನಗುವು ಸಹಜಧರ್ಮ, ನಗಿಸುವುದು ಪರಧರ್ಮ
ನಗುವ ಕೇಳುತ ನಗುವುದತಿಶಯಧರ್ಮ
ನಗುವ ನಗಿಸುವ ನಗಿಸಿನಗುತಬಾಳುವ ವರವ
ಮಿಗೆ ನೀನು ಬೇಡಿಕೊಳೊ—"

ಎಂಬು ಜೀವನದ ರಹಸ್ಯವನ್ನು ತಿಳಿಸಿದ್ದಾರೆ.

ಜೀವನದಲ್ಲಿ ಸುಖವನ್ನು ಕಾಣಲು ವಿಕಸಿತವಾದ ಅಂತಃಕರಣಬೇಕು. ಶಿವ ತನಗೆ ಕೊಡಲಿಲ್ಲ ಎಂದು ಗೊಣಗದೆ ಪಾಲಿಗೆ ಬಂದದ್ದು ಪಂಚಾಮೃತ ವೆಂದೆಣಿಸಿ ಬದುಕುವುದನ್ನು ಕಲಿಯಬೇಕು. ಮನುಷ್ಯ ತಾನು ತಾನೆಂದು ಬೀಗಬಾರದು, ನಾನು ಎಲ್ಲರನ್ನೂ ಉದ್ಧರಿಸುವೆನೆಂದು ಅಹಂಕಾರ ತಳೆಯ ಬಾರದು ಎಂದು ಹೇಳುತ್ತಾ

ಅನ್ಯರನು ನೀನುದ್ಧರಿಪ ಮಾತಹಂಕಾರ
ಮಣ್ಣುಹುಳವೇಂ ಗಜವಕುಳಿಯನೆತ್ತುವುದು ?

ಎಂದು ಎಚ್ಚರಿಸಿದ್ದಾರೆ.

ನಾವು ಹಾಗೆ ಮಾಡುತ್ತೇವೆ, ಹೀಗೆ ಮಾಡುತ್ತೇವೆ, ಚಂದ್ರಲೋಕದಲ್ಲಿ ಬೀಡು ಬಿಡುತ್ತೇವೆ, ಪ್ರಪಂಚವನ್ನು ತಲೆಕೆಳಗಾಗಿಸುತ್ತೇವೆ ಎಂದು ಜಾಹೀರು ಮಾಡಿಕೊಳ್ಳುವ ಕ್ರಮವನ್ನು ಖಂಡಿಸಿ ಸದ್ದುಗದ್ದಲವಿಲ್ಲದೆ ಗದ್ದಿಗೆ ಏರುವ ಕಾರ್ಯೋನ್ಮುಖತೆ ನಮ್ಮಲ್ಲಿ ಇರಬೇಕು ಎಂಬುವನ್ನು

"ಇಳೆಯಿಂದ ಮೊಳಕೆಯೊಗೆವಂದು ತಮಟೆಗಳಿಲ್ಲ
ಫಲ ಮಾಗುವಂದು ತುತ್ತೂರಿ ದನಿಯಿಲ್ಲ
ಬೆಳಕೀವ ಸೂರ್ಯಚಂದ್ರರದೊಂದು ಸದ್ದಿಲ್ಲ
ಹೊಲಿ ನಿನ್ನ ತುಟಿಗಳನು-ಮಂಕುತಿಮ್ಮ"

ಎಂಬ ಮಾತುಗಳಲ್ಲಿ ನಿರೂಪಿಸಿದ್ದಾರೆ.

ಒಂಟಿಯಾಗಿ ಬಂದ ಮಾನವ ಹೋಗುವುದಂತೂ ಒಂಟಿಯಾಗಿಯೇ. ನಡುವಣ ಈ ಆಟಗಳಿಗೆ ಹಾಕುವ ವೇಷ, ಅಭಿನಯಿಸುವ ಪಾತ್ರ ನಾಲ್ಕುದಿನ ಮಾತ್ರ; ಆದುದರಿಂದ ಈ ಲೋಕದಲ್ಲಿ ಇದ್ದೂ ಇಲ್ಲದಂತೆ ಬದುಕಬೇಕು. ಸಮಯ ಬಂದಾಗ ಎಲ್ಲವನ್ನು ಕಿತ್ತೊಗೆದು ಹೊರಟುಹೋಗುತ್ತಿರಬೇಕು. ಎಂಬ ಅಭಿಪ್ರಾಯವನ್ನು

"ಬತ್ತಲೆಯೇ ನೀಂ ಬಂದೆ ಬತ್ತಲೆಯೇ ನೀಂ ಪೋಪೆ
ವಸ್ತ್ರವೇಷಗಳೆಲ್ಲ ನಡುವೆ ನಾಲ್ಕು ದಿನ
ಚಿತ್ತಕ್ಕೆ ನಿನ್ನನೇರಿಪ ಮುನ್ನ ನೀನಾಗಿ
ಕಿತ್ತೆಸೆಯೋ ಕಂತೆಗಳ-ಮರುಳ ಮುನಿಯ"

ಎಂಬ ಮಾತುಗಳಲ್ಲಿ ನಿರೂಪಿಸಿದ್ದಾರೆ.

ಡಿ. ವಿ. ಜಿ. ಅವರ ವಿಚಾರದ ಆಳ, ಎತ್ತರ, ಅಗಲ ಸೀಮಾತೀತವಾದುದು. ಕಾಲೇಜು ಮೆಟ್ಟಿಲನ್ನೇ ಹತ್ತದೆ ಅಷ್ಟೇ ಏಕೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗದೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಮೂಗಿನ ಮೇಲೆ ಬೆರಳಿಡುವಂತಹ ಕೃತಿ ರಚನೆಮಾಡಿ ಅಲ್ಲಿ ತಮ್ಮ ನಿಜ ಜೀವನದ ಸಹಜ ಚಿತ್ರವನ್ನು ಪಡಿಮೂಡಿಸಿದ್ದಾರೆ. 'He is Rationalist' ಎಂಬ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಪಂಪಮಹಾಕವಿಯನ್ನು ಕವಿ ಚಕ್ರವರ್ತಿ ಎಂದು ಗುರುತಿಸಿಲ್ಲ. ಕಾರಣ, ಆತನಿಗೆ ಆಶ್ರಯವಿತ್ತ ದೊರೆ ಚಕ್ರವರ್ತಿಯಲ್ಲ ಒಬ್ಬ ಸಾಮಂತ ರಾಜ. ಹಾಗೆಂದು ಪಂಪನು ಪೊನ್ನ, ರನ್ನ, ಜನ್ನರಂತೆ ಕವಿಚಕ್ರವರ್ತಿಯಾಗಲಿಲ್ಲ. ಆದರೆ ಕಾವ್ಯ ಕಲಾಪ್ರೌಢಿಮೆಯಲ್ಲಿ ಈ ಕವಿಚಕ್ರವರ್ತಿಗಳಿಗೆ ಚಕ್ರವರ್ತಿಯಾಗಿದ್ದಾನೆ. ವಿಶ್ವವಿದ್ಯಾನಿಲಯದ ಮೆಟ್ಟಿಲು ತುಳಿಯದ ಡಿ. ವಿ. ಜಿ.

ತಾವು ಗಳಿಸಿದ ಕನ್ನಡ, ಸಂಸ್ಕೃತ, ಇಂಗ್ಲೀಷ್, ಭಾಷಾ ಜ್ಞಾನದಿಂದ ಉತ್ತುಂಗ ಕೃತಿಗಳನ್ನು ರಚಿಸಿ ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್ ಪಡೆದ ಮಹಾನ್ ಸಾಹಿತಿ ಆಗಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಮಹಾನ್ ವ್ಯಕ್ತಿ ಆಗಿದ್ದಾರೆ. ಇವರ ಜೀವನ ದೃಷ್ಟಿ ನಮಗೆ ದಾರಿದೀಪ. ಆ ಬೆಳಕಿನಲ್ಲಿ ನಾವು ನಡೆದು ನಮ್ಮನ್ನು ಬೆಳಗಿಸಿಕೊಳ್ಳೋಣ.

ಕುವೆಂಪು ಕವಿತೆಗಳಲ್ಲಿ ಪೂರ್ಣದೃಷ್ಟಿ

● ದೇವೇಂದ್ರಕುಮಾರ ಹಕಾರಿ

'ಮಲೆನಾಡಮ್ಮನ ಮಡಿಲಿನಲಿ
ಕಾರ್ಮುಗಿಲೊಡಲಿನಲಿ,
ಮನೆ ಮಾಡಿರುವೆನು ಸಿಡಿಲಿನಲಿ
ಮಿಂಚಿನ ಕಡಲಿನಲಿ'

ಇದು ಕುವೆಂಪು ನಿಲವನ್ನು ನಿರ್ದೇಶಿಸುವ ನುಡಿಗಳು. ನಿಸರ್ಗ ಸೌಂದರ್ಯದಲ್ಲಿ ಬೀಡು, ದಟ್ಟದಟ್ಟ ಕಪ್ಪುಮೋಡ, ಸಂಘರ್ಷಗಳ ತವರಾದ ವಾಸ್ತವ ಪ್ರಪಂಚ; ಇವೆಲ್ಲವುಗಳ ಮಧ್ಯದಲ್ಲೂ ಮಿಂಚಿನ ತೇಜದ ಕಡಲು; ಇಲ್ಲಿ ಕವಿಯ ನೆಲೆ. ಒಬ್ಬ ವ್ಯಕ್ತಿ ಕವಿಯೂ ಗಿಬದುಕುವ ಎರಡು ಪ್ರಪಂಚಗಳ– ಒಂದು ವಾಸ್ತವ ಪ್ರಪಂಚ ಇನ್ನೊಂದು ಇದನ್ನು ಸುತ್ತುವರೆದ ಸೃಷ್ಟಿ. ಅದ್ಭುತ ನಿಸರ್ಗ, ಪ್ರಪಂಚ ಧ್ರುವೀಕರಣಗೊಂಡ ವಿಸ್ಮಿತ ಜಿಡಗಿನ ಸ್ತರದಲ್ಲಿಯೇ ಅನುಭವಕ್ಕೆ ಬರುವ ಅನನ್ಯಾಯಕ ದಿವ್ಯಪ್ರಕಾಶ. ಕುವೆಂಪು ಕವಿತೆಗಳ ಅಧ್ಯಯನಕ್ಕೆ ವಿಶ್ಲೇಷಣೆ ಮತ್ತು ಕವಿ ದರ್ಶನಕ್ಕೆ ಒಂದು ಪ್ರವೇಶದ್ವಾರ ಮೇಲಿನ ಪಾದಗಳು.

ಕಾವ್ಯಕ್ಕೆ ಸಂಬಂಧಿಸಿದಂತೆ ಮೂರು ಸಂಗತಿಗಳನ್ನು ವಿವರಿಸಲಾಗುತ್ತದೆ. ಒಬ್ಬ ಕವಿತೆ ಓದುವವ, ಮತ್ತೊಬ್ಬ ಕವಿತೆ ರಚಿಸುವವ. ಮೂರನೆಯ ವಿರಳ ಮತ್ತು ಉದಾತ್ತ ಸಂಗತಿ ಕಾವ್ಯವನ್ನೇ ಬದುಕುವವ. ಒಮ್ಮೆ ಕಾರ್ಲ್ ಶಾಪಿರೋ 'ಕವಿಯೆಂದರೆ ಯಾರು?' ಎನ್ನುವ ಪ್ರಶ್ನೆಗೆ ತಮಾಷೆಯ ಉತ್ತರ 'that who writes poetry' ನೀಡಿದ್ದ. ನಿಜ, ಕವಿತೆ ಬರೆಯುವವ ಕವಿ ಆದರೆ ನಿಜವಾದ ಕವಿ ಮಹೋನ್ನತ ವ್ಯಕ್ತಿಯೂ ಆಗಿರುತ್ತಾನೆ; ಅಷ್ಟೇ ಉದಾತ್ತವಾಗಿ ಬದುಕುತ್ತಾನೆ.

ಮಲೆನಾಡಿನ ದಟ್ಟಕಾಡು ಕಣಿವೆ ಪಕ್ಷಿಕೂಜನಗಳ ಪ್ರಪಂಚದಿಂದ ಮೈಸೂರಿನ 'ಲಲಿತಾದ್ರಿಯ ಲಲಿತಸಂಗದೊಡನೆ ಸಖ್ಯಬೆಳೆಸಿಕೊಂಡು

1. 1953 ರ ಸುಮಾರು ಉಸ್ಮಾನಿಯಾ ವಿಶ್ವವಿದ್ಯಾಲಯದ ವಿಶೇಷ ಉಪನ್ಯಾಸಕನಾಗಿ ಬಂದಿದ್ದ ಒಬ್ಬ ಅಮೇರಿಕೆಯ ಕವಿ-ವಿಮರ್ಶಕ.

ಚಾಮುಂಡಿಯ ರುದ್ರರಂಗದಲ್ಲಿ ವಿಹರಿಸಿ, ಕಾರಂಜಿಯ ಜಲತರಂಗದೊಡನೆ ನಿನದಿಸಿದ ಕವಿಗೆ, ತಾನುಕಂಡ, ಕಾಣುವ, ಅನುಭವಿಸುವ ಪ್ರತಿಯೊಂದು ವಸ್ತು ಸಂಗತಿಯಲ್ಲೂ ಅತೀಂದ್ರಿಯ ದೃಷ್ಟಿ, ಪೂರ್ಣದೃಷ್ಟಿ–ಮೂಡಿಬಂದಿರುವದು ಅತ್ಯಂತ ಸಹಜ.

ಹಾಗಾದರೆ 'ಪೂರ್ಣದೃಷ್ಟಿ' ಎಂದರೇನು? ಒಬ್ಬ ವ್ಯಕ್ತಿ ಆಕಾಶವನ್ನು ನೋಡುತ್ತಾನೆ. ಆಕಾಶ ಅನಂತ. ಆದರೆ ಅದನ್ನು ನೋಡುವ ಕಣ್ಣು? ಅದೂ ಆಕಾಶದಷ್ಟೇ ವಿಸ್ತಾರವಾಗಿದೆಯೇ? ಕಿರಿದಾದ ಕಣ್ಣುಗಳಿಂದಲೇ ಅನಂತವಾದ ಆಕಾಶ ನೋಡುವುದು ಯಾವ ದೃಷ್ಟಿ? ಕುವೆಂಪು 'ಕವಿಶೈಲ'ದಲ್ಲಿ ಆಕಾಶವನ್ನು ನೋಡಿ ಪಡೆದ ಅನುಭವ ಯಾವುದು? ಮೈ ನೀಲಿಗಟ್ಟುವವರೆಗೆ ಗಗನವನ್ನು ನೋಡಿದುದು. [1]

ಸೃಷ್ಟಿ—ನಿಸರ್ಗ—ಅದ್ಭುತ ರುದ್ರಸೌಂದರ್ಯಗಳ ಮಾಂತ್ರಿಕ ಪೆಟ್ಟಿಗೆಯಾದರೆ, ಪ್ರಪಂಚ ಅಗಣಿತ ವೈರುಧ್ಯ ವಿಸ್ಮಯ ಸಂಘರ್ಷಗಳ ಅನಂತಕ್ರಿಯಾ ರಂಗವಾಗಿದೆ. ಕವಿ ಒಬ್ಬ ಬಿಡಿಯಾದ ವ್ಯಕ್ತಿ. ಅಪರಿಮಿತ ಪ್ರಪಂಚ ಆಕಾಶ ಕಾಯಗಳನ್ನು ಸೃಷ್ಟಿಸಿ ಅದರಲ್ಲಿ ಅಖಂಡ ಮಾನವಕೋಟಿಯನ್ನು ನೆಲೆಗೊಳಿಸಿ ಎಲ್ಲ ವೈರುಧ್ಯ ಸಂಘರ್ಷಗಳನ್ನು ಒಂದು ನಿಯತಗತಿಯಲ್ಲಿ ನಿಯಂತ್ರಿಸಿ, ಸೂತ್ರಿಸುವ ಜೈವಿಕ ಮೂಲವಾದ ಜೀವಶಕ್ತಿ, ಬದುಕಿನ ಎಲ್ಲ ಸ್ತರಗಳಲ್ಲೂ ನಿರಂತರ ಪ್ರವಾಹಿ. ಈ ಮಹಾಶಕ್ತಿ ಅಥವಾ ದಿವ್ಯಚೈತನ್ಯದ ಪ್ರಜ್ಞೆ, ಕವಿಯಲ್ಲಿ ಹೊಮ್ಮಿದಾಗ, ಕವಿ ಸೃಷ್ಟಿಯಲ್ಲಿ ಆ ದಿವ್ಯ ದೃಷ್ಟಿಯ ಆವಿಷ್ಕಾರ. ಜೀವನದ ಆಳಕ್ಕೆ ವಿಸ್ತಾರಕ್ಕೆ ಕವಿ ಇಳಿಯುತ್ತಾನೆ; ಹಿಗ್ಗುತ್ತಾನೆ, ಸಮಸ್ತ ಸೃಷ್ಟಿ ಕವಿಯ ಒಳಕ್ಕೆ ಇಳಿಯುತ್ತದೆ; ಅಂತರಂಗದಲ್ಲಿ ಬೆಳೆಯುತ್ತದೆ. ಆತ್ಮದಲ್ಲಿ ಅರಳುತ್ತದೆ. 'ಬಿಡಿ'ಯಲ್ಲಿ 'ಇಡಿ', ವ್ಯಷ್ಟಿಯಲ್ಲಿ ಸಮಷ್ಟಿ ಅನಾವರಣಗೊಳ್ಳುತ್ತದೆ. ಕವಿಯ ಅಂತರಂಗ ಅನುಭಾವದ ನಿಸ್ತರಂಗವಾದರೆ, ಕವಿಯ ದೃಷ್ಟಿ ಚಿದಾಕಾಶದ ಭೂಮಾನುಭೂತಿಯ ದರ್ಶನರಂಗವಾಗುತ್ತದೆ. ನೆಲಿದೊಡಲಕಡಲು ನೆಲೆ ಮೀರಿದ ಮುಗಿಲು, ಪರಸ್ಪರ ಸಂಗಮಿತ ದೃಷ್ಟಿ, ಪೂರ್ಣದೃಷ್ಟಿ.

ಅ) ಪೂರ್ಣದೃಷ್ಟಿ ವಿಶ್ವಮಾನವದೃಷ್ಟಿ :

ಒಬ್ಬ ವ್ಯಕ್ತಿಯಲ್ಲಿ ಪೂರ್ಣದೃಷ್ಟಿ ಸಮಷ್ಟಿದರ್ಶನ ಮೂಡಿದಾಗ ಆತ ವಿಶ್ವಮಾನವನಾಗುತ್ತಾನೆ. ವಿಶ್ವಮಾನವದೃಷ್ಟಿ ಆತನಲ್ಲಿ ಹೊಮ್ಮುತ್ತದೆ. ಈ ಪೂರ್ಣದೃಷ್ಟಿ ಎನ್ನುವುದನ್ನು ತತ್ವಜ್ಞಾನದ ಪರಿಭಾಷೆಯಲ್ಲಿ ಅತೀಂದ್ರಿಯ

1. ದೇವಂಗಿ ಟಿ ಚಂದ್ರಶೇಖರ: ಗಂಗೋತ್ರಿ ಪು 494

ದೃಷ್ಟಿ ಎಂದು ಹೇಳಲಾಗುತ್ತದೆ. ಏನು ಹಾಗೆಂದರೆ? ನಾವು ಪಡೆಯುವ ಜ್ಞಾನಕ್ಕೆ ಸಾಧನಗಳು ಪಂಚೇಂದ್ರಿಯ. ಈ ಪಂಚೇಂದ್ರಿಯಗಳ ಶಕ್ತಿ ಸೀಮಿತ. ಆದರೆ ನಾವು ಬದುಕುವ ವಿಶ್ವದ ಪ್ರತಿಯೊಂದು ಶಕ್ತಿ ನಿಸ್ಸೀಮ. ನಾವು ನೂರು ಕ್ಯಾಂಡಲ್ ಬಲ್ಬ ನೋಡುತ್ತೇವೆ. ಆದರೆ ಸಾವಿರ ಕ್ಯಾಂಡಲ್ ಬಲ್ಬ ಅಥವಾ ಸೂರ್ಯ? ನೋಡಲಿಕ್ಕೆ ಸಾಧ್ಯವಾಗದೆ ಕಣ್ಣು ಮುಚ್ಚಿಕೊಳ್ಳುತ್ತೇವೆ. ಹತ್ತು ಡೊಳ್ಳುಗಳ ವಾದನವನ್ನು ಕೇಳುತ್ತೇವೆ. ಆದರೆ ಒಂದೇಬಾರಿಗೆ ನೂರು ಡೊಳ್ಳು ಬಾರಿಸಿದಾಗ ಕಿವಿ ಮುಚ್ಚಿಕೊಳ್ಳುತ್ತೇವೆ. ಇಂದ್ರಿಯಗಳ — ಕಣ್ಣು ಕಿವಿ ಮೂಗು ಇತ್ಯಾದಿ–ಶಕ್ತಿ ಸೀಮಿತ. ವಿಶ್ವಶಕ್ತಿ ಸೀಮಾತೀತ. ನಮ್ಮ ಗ್ರಹಣ ಸಾಮರ್ಥ್ಯದ ಈಚೆ ಮತ್ತು ಆಚೆ ವಿಶ್ವಶಕ್ತಿ ಚಾಚಿಕೊಂಡಿದೆ. ಇಂಥ ಶಕ್ತಿಯನ್ನು ಆತ್ಮಗತ ಮಾಡಿಕೊಳ್ಳಲು ನಿಗ್ರಹ, ಚಿಂತನೆಗಳ ಮೂಲಕ ನಿರಂತರ ಸಾಧನೆ ಕೈಕೊಳ್ಳಬೇಕಾಗುತ್ತದೆ. ಇಂದ್ರಿಯಗಳಿಗೆ ಅತೀತವಾದ ಪರಮ ಶಕ್ತಿಗಳ ಅನುಸಂಧಾನ ಅಗತ್ಯವಾಗುತ್ತದೆ. ಇಂಥ ಒಂದು ಸಾಧನೆಯಲ್ಲಿ ತೊಡಗಿದ ವ್ಯಕ್ತಿಗೆ ಇದು ಪೂರ್ಣ, ಅದು ಪೂರ್ಣ. ಪೂರ್ಣದಲ್ಲಿ ಪೂರ್ಣವನ್ನು ಕಳೆದರೆ ಉಳಿಯುವುದೂ ಪೂರ್ಣವೇ. ಪ್ರಪಂಚದ ಯಾವ ವಸ್ತುವೂ ಅಪೂರ್ಣವಲ್ಲ. ದಿವ್ಯಚೈತನ್ಯದ ಅಖಂಡರೂಪವೇ. ಅಣುರೇಣು ತೃಣಕಾಷ್ಠ, ಪ್ರಾಣಿ ಪಕ್ಷಿ ಪ್ರಪಂಚ ಮತ್ತು ಮಾನವ ಪ್ರಪಂಚ. ಇದನ್ನೇ ಅತೀಂದ್ರಿಯ ದೃಷ್ಟಿ ಎಂದು ಹೇಳಬಹುದು. ಕುವೆಂಪು ಅವರ ಪೂರ್ಣದೃಷ್ಟಿ ಈ ಪ್ರಪಂಚ, ಮಾನವ ಪ್ರಪಂಚದಿಂದ ವಿಮುಖವಾದುದಲ್ಲ. ಮಾನವೀಯವಾದ ಸಮಸ್ತವನ್ನು ಪ್ರೀತಿಸಿದ, ಗೌರವಿಸಿದ ಸೃಷ್ಟಿಸೌಂದರ್ಯದ ರಸ ಸಾಗರದಲ್ಲಿ ಮಿಂದು ನಿಸರ್ಗವನ್ನು ಆರಾಧಿಸಿದ ಕುವೆಂಪು ಕವಿತೆಗಳು, ಅವರ ಪೂರ್ಣದೃಷ್ಟಿಯು ಅಥವಾ ದಿವ್ಯದೃಷ್ಟಿಯು—ವಿಶ್ವಮಾನವ ದೃಷ್ಟಿಯು ಸಾಪೇಕ್ಷವಾಗಿವೆ. ಡಾ. ಎಸ್. ರಾಧಾಕೃಷ್ಣರ "None can understand things human who dose not understand things devine" ಎನ್ನುವ ಅಭಿಪ್ರಾಯ ಈ ದಿಶೆಯಲ್ಲಿ ಗಮನಾರ್ಹ. ಇಂಥ ಅತೀಂದ್ರಿಯ ದೃಷ್ಟಿ ಮನುಷ್ಯನಿಗೆ ಸಾಧ್ಯವಾಗಬಹುದಾದದ್ದು ಆತನ ಜೈವಿಕ ಶಾರೀರಿಕ ರಾಚನಿಕ ಸಂಗತಿಗಳಿಂದಲೇ. ಪ್ರಾಣಿಗಳಿಗಿಲ್ಲದಿರುವ ಐದನೆಯ 'ಆನಂದಮಯಕೋಶ' [1]

---

1 ಅನ್ನಮಯ, ಪ್ರಾಣಮಯ ಮನೋ (ಜ್ಞಾನ) ಮಯ, ವಿಜ್ಞಾನಮಯಕೋಶಗಳು ಪ್ರಾಣಿ ಮತ್ತು ಮಾನವರಲ್ಲಿ ಸಮಾನವಾಗಿದ್ದು ಆನಂದಮಯಕೋಶ ಮಾನವನ ಜೈವಿಕ ಶಾರೀರಿಕ ರಚನೆಯ ವಿಶಿಷ್ಟ ಮತ್ತು ಅಧಿಕಕೋಶವಾಗಿದೆ. ಇದರ ಬಲದಿಂದಾಗಿ ಭಾಷೆ, ಸಾಹಿತ್ಯ, ಸಂಸ್ಕೃತಿ ಅಧ್ಯಾತ್ಮ ಸಾಧನೆಗಳು ಮಾನವನಿಗೆ ಮಾತ್ರ ಸಾಧ್ಯವಾಗಿರುವ ಸಂಗತಿಗಳೆಂದು ಹೇಳಲಾಗುತ್ತದೆ.

ಮಾನವನಿಗೆ ಮಾತ್ರ ಇರುವುದರಿಂದ ಆತ ಈ ಬಗೆಯ ವಿಶಿಷ್ಟ ಸ್ಥಾನ ದರ್ಶನ ಪಡೆಯುವುದು ಸಾಧ್ಯವಾಗಿದೆ. ಕುವೆಂಪು 'ರಾಮಾಯಣ ದರ್ಶನಂ' ಕೃತಿಯಲ್ಲಿ ಈ ವಿಶಿಷ್ಟಾಂಶಗಳು ನಿರೂಪಿತವಾಗಿವೆ.[1] ಪೂರ್ಣದೃಷ್ಟಿಯ ಅವಿರ ಷ್ಕಾರವನ್ನು 'ಸ್ವಸ್ವರೂಪ ಜ್ಞಾನ', ಆತ್ಮಜ್ಞಾನ ಅಥವಾ ಆತ್ಮಸಾಕ್ಷಾತ್ಕಾರ ಇತ್ಯಾದಿ ತತ್ವಜ್ಞಾನದ ಪಾರಿಭಾಷಿಕ ಪದಗಳಲ್ಲಿ ಸೂಚಿಸಲಾಗುತ್ತದೆ. ಇದನ್ನು ಮಾನವನ ಆಧ್ಯಾತ್ಮಿಕ ವಿಕಾಸವೆಂದು ಹೇಳಬಹುದು. ಆತ್ಮದ ಅರಿವು ಅಥವಾ ಆತ್ಮಪ್ರಜ್ಞೆಯ ಕೇಂದ್ರ ಬಿಂದುವಿನಿಂದಲೇ ಸಮಸ್ತ ಪ್ರಪಂಚವನ್ನು ಪರವೀಕ್ಷಿಸುವ, ಪರಿಭಾವಿಸುವ ಈ ವಿಶಿಷ್ಟ ಗುಣ ಲಕ್ಷಣಗಳಿಂದ ಸಮನ್ವಿತ ದೃಷ್ಟಿಯೇ ಋಷಿದೃಷ್ಟಿ ಕವಿಸೃಷ್ಟಿ. ಅದು ಕುವೆಂಪು ಪೂರ್ಣದೃಷ್ಟಿಯೂ ನಿಜ. ಇಂಥ ದೃಷ್ಟಿ ಅಥವಾ ದರ್ಶನ ಪಡೆದ ಕವಿಗೆ ಅಧೋಲೋಕ ಊರ್ಧ್ವಲೋಕಗಳ ಗೀಳು, ಸ್ವರ್ಗ ನರಕಗಳ ಕ್ಲೀಪೆ ಕಾಡುವುದಿಲ್ಲ. ಪ್ರತಿಕ್ಷಣ ಪ್ರತಿಯೊಂದರಲ್ಲಿ ಆತನಿಗೆ ದಿವ್ಯತೆಯ ಅಸ್ತಿತ್ವ ಗೋಚರಿಸುತ್ತದೆ; ಆನಂದಾನು ಭೂತಿ ಸ್ಫುರಿಸುತ್ತದೆ.

ಕುವೆಂಪು ಕವಿತೆಗಳಲ್ಲಿ ವ್ಯಕ್ತವಾಗಿರುವ 'ಪೂರ್ಣದೃಷ್ಟಿ'ಯ ವಿವೇಚನೆಗೆ ಈ ಪ್ರಬಂಧವನ್ನು ಸೀಮಿತಗೊಳಿಸಲಾಗಿದೆ.

ಬ) ಕವಿಗೆ ಪ್ರತಿಭೆ ಕಲ್ಪನೆ ಸ್ಫೂರ್ತಿ ಅಗತ್ಯವಾದ ಅಂಶಗಳೇ,?

ಸ್ಫೂರ್ತಿ 'ಕವಿಯ ಕಣ್ಣ್ಗೆ ಬೆಳಕು, 'ಕಲ್ಪನೆ' ಚಿತ್ತಸಾಗರ ಮಥನ ಜಾತ ರಸಯೋಗಿನಿ. 'ಕಲ್ಪನಾ ಸುಂದರಿ' ಯನ್ನು ಚಿತ್ತದ ಕಡಲ ಮಂಥನದಲ್ಲಿ ಹುಟ್ಟಿದ ರಸಯೋಗಿನಿ ಎಂದು ಕರೆಯುವಲ್ಲಿ ಸ್ಫೂರ್ತಿಯನ್ನು ಕಣ್ಣಿಗೆ ಬೆಳಕೇ ಎಂದು ಪರಿಭಾವಿಸುವ ಪ್ರಥಮ ಹಂತದಲ್ಲಿಯೇ ಕವಿ ತಮ್ಮ ಕಾವ್ಯಸೃಷ್ಟಿಯ ವೈಶಿಷ್ಟ್ಯ ವನ್ನು ತೋರ್ಪಡಿಸುತ್ತಾರೆ.

ನಿಸರ್ಗ ಸೌಂದರ್ಯದ ಪರಮಾರಾಧಕರಾದ ಕುವೆಂಪು ಸೃಷ್ಟಿಯಲ್ಲಿ ಸೂರೆಯಾಗಿರುವ ಸ್ವರ್ಗವನ್ನು ಕಾಣುತ್ತಾರೆ. ಸೃಷ್ಟಿಯ ಹಚ್ಚಹಸಿರು ದಿಟ್ಟಿಸಿ ದಿಟ್ಟಿಸಿ ಹಸಿರಾದುದೊ ಕವಿಯಾತ್ಮಂ ರಸಪಾನ ಸ್ನಾನದಲಿ ಎನ್ನುವ ಗಾಢ ಆನಂದ.

'ನೀಲಿ ಬಾನಲಿ, ಹಸಿರು ನೆಲದಲಿ ಕಂಗಳೆರಡನೆ ಬಲ್ಲವು
ಅಲ್ಲಿ ಸಗ್ಗವೆ ಸೂರೆ ಹೋಗಿದೆ; ನಂದನವೆ ನಾಡೆಲ್ಲವು'[2]

---

1. "ರಾಮಾಯಣ ದರ್ಶನಂ" ಶ್ರೀ ಸಂಪುಟ ಪು ೬೫೧

2 ಪಕ್ಷಿಕಾಶಿ 'ಹೋಗುವೆನು ನಾ'

ಇದು ಒಂದು ದಿನದ ಮಾತಲ್ಲ. ಅನುದಿನದ ಅನುಭವ. ಪಕ್ಕಿಗಳ ಉಲಿವು ಮತ್ತು ಹೂಗಳ ಅರಳುವಿಕೆ 'ತೆರೆವುದು ದಿನದಿನ ಸಗ್ಗದ ಬಾಗಿಲು' ಸ್ವರ್ಗ. ಈಗ ಮನೆ; ತಾನು ನೆಲೆಸಿರುವ ಮನೆ. ಸುತ್ತಣ ಸೃಷ್ಟಿಕ್ರಿಯೆಗಳಿಂದ ಸ್ವರ್ಗದ ಬಾಗಿಲು ತೆರೆದುಕೊಳ್ಳುತ್ತದೆ. ಈ ಸಂದರ್ಭದಲ್ಲಿ ಕುವೆಂಪು ಸರಸಿಜವಾದ ಕಲಾಸುಂದರಿಯನ್ನು ಮಹಾ ತಪಸ್ವಿನಿ ಎಂದು ಭಾವಿಸುತ್ತಾರೆ ನಿಸರ್ಗದ ಇಡಿಕಿರಿದ ಸೌಂದರ್ಯ

ಹಸುರು ಚಾಮರಗಳನೆಸಭಕೆತ್ತಿ ಹಿಡಿದಂತೆ
ಉಷೆಯು ನಸುಕಿನೊಳೆಸೆವ ಗರಿಗರಿಯ
ಬಿದಿರು ಮೆಳೆಗಳು ಗಣಿಯು ಚೆಲುವುನೆತ್ತಿಯಲಿ
ಕೆನ್ನೆಮ್ಮನೆಯು ಹಸುರು ಹಳದಿಯು ಮೆಯ್ಯುಗಿಳವಿಂಡು;
ಹೂಸತಳಿರ ಮರೆಯು ಕೋಗಿಲೆ.[1]

ಒಂದೊದು 'ಸಂಗೀತ ಸೌಧಕ್ಕೆ ಹೊಂಗಳಸವಿಟ್ಟಂತೆ'. ಕಾಜಾಣ, ಕೋಗಿಲೆ ತೇನೆ, ಗಿಳಿ, ಕಾಮಳ್ಳಿ, ಚೋರೆ ಲಾವುಗೆ, ನವಿಲು, ಪೊಂಗುಳಿ, ಪೊದಸುಹಕ್ಕಿ, ಮೀಂಚುಳ್ಳಿ, ಕೊಳರ್ವಕ್ಕಿ ಮಡಿವಾಳ ಹೀಗೆ ಅಗಣಿತ ಪಕ್ಷಿಗಳು.'ಇಂಚರಸಾಸಿರ, ಅನಂತವರ್ಣಗಳು. ಸುಮಧುರ ಅಮರಗಾನ; ಬಣ್ಣ ಬಣ್ಣಗಳ ಆವರಣಗಳನ್ನು ಭೇದಿಸುತ್ತ ಹರುಷ ಉಕ್ಕಿಸುವ ನಾದದ ತೆರೆಗಳ ಒಳಹೊಕ್ಕಂತೆಲ್ಲ ಕವಿಯು ಚೇತನ ಸ್ಪಂದಿಸುತ್ತದೆ. ಸಾಮಾನ್ಯದ ದೃಷ್ಟಿಗೆ ಜಡವಾಗಿ ತೋರಬಹುದಾದ ಸೃಷ್ಟಿ, ಕವಿಯ ಪ್ರಾಣ ಸ್ಪಂದನೆಗಳಲ್ಲಿ ತುಳುಕಿ 'ವಿಶ್ವಮಮ್ಮೊಂದು ಸ್ಪಂದಿಸುತ್ತಿದೆ, ಕೈಲಕಾಸನ ವಿರಾಟ್ ಪ್ರಾಣ'. ಇದು ಬರಿಯ ಸೌಂದರ್ಯ ಲಹರಿಯಲ್ಲ; ಆತ್ಮದ ಚೆಲುವಿನ ಅಲೆ ಅಲೆ; ಇದು ಬರಿ ನಾದಲಹರಿಯಲ್ಲ ಅಂತರಾತ್ಮದ ಚಿರಂತನ ಭೋರ್ಗರೆವ ದಿವ್ಯಗಾನ. ನಾದವೊಂದು ರಾಸಲೀಲೆ ಅಮೂರ್ತವಾಗಿರುವ ದಿವ್ಯ ಚೈತನ್ಯ ವಿಲಾಸ; ಇದು ಬಿಲ್ಲು ಬಾಣಗಳ ಅಹಂಕಾರ ಮೆರೆವ ಬೇಟೆಗಾರನ ತಾಣವಲ್ಲ; ಪಕ್ಷಿರಾಶಿಗಳ ಕಾಶಿ, 'ಪಕ್ಷಿಕಾಶಿ'; ದಿವ್ಯಕ್ಷೇತ್ರ ಅಂತರಾಳದ 'ಅಗ್ನಿ ಜಲರಾಶಿ; ಯ ಶ್ರೀರಕ್ಷೆ: 'ರವಿಗೆ ಗಾನದರ್ಘ್ಯ'; ಕವಿಗೆ ರಸದ ತೀರ್ಥ.[2] ನೀಲಬಾನು–ಆದರೆದೆಯಲ್ಲಿ ಚಲಿಸುವ ಬೆಳ್ಳಕ್ಕಿಗಳ ಸಾಲು;

ಸೃಷ್ಟಿಯ ರಚನೆಯ ಕುಶಲಕೆ ಚಂದಕೆ
ಜಗದಚ್ಚರಿಯಂದದ ಒಪ್ಪಂದಕೆ
ಚಿರಚೇತನ ತಾನಿಹನೆಂಬಂದದಿ

---

1. ಪಕ್ಷಿಕಾಶಿ 'ನವಿಲುಕಲ್ಲಿನಲ್ಲಿ ಸೂರ್ಯೋದಯ'
2. ಪಕ್ಷಿಕಾಶಿ 'ಒಂದು ಸಣ್ಣ ಹಕ್ಕಿಗೆ'

ಬೆಳ್ಳಕ್ಕಿಯ ಹಂತಿಯು ಆನೆವದಿ
ದೇವರು ರುಜು ಮಾಡಿದನು.[1]

ಹೀಗೆ ಕುವೆಂಪು ಮೂರ್ತಗಳಿಂದ ಅಮೂರ್ತದ ರಸಾನುಭೂತಿ ಪಡೆಯುತ್ತ ‘ಬಿಡಿ’ಯಲ್ಲಿ ಇಡಿ ಹುದುಗಿರುವ ಬೆಡಗನ್ನು ಅನಾವರಣಗೊಳಿಸುತ್ತಾರೆ.

‘ಇಷ್ಟು ಪುಟ್ಟ ಪ್ರಾಣಿಯಲ್ಲಿ
ಅಷ್ಟುದೊಡ್ಡ ಮಲೆಯಹಳ್ಳಿ
ಕಷ್ಟವಿಲ್ಲ ದಡಗಿದೆ’[2]

ಇಷ್ಟು ಪುಟ್ಟ ಪ್ರಾಣಿ ‘ಬಿಡಿ’ಗೆ ಪ್ರತೀಕವಾದರೆ ‘ಅಷ್ಟುದೊಡ್ಡ ಮಲೆಯಹಳ್ಳಿ’ ‘ಇಡಿ’ಗೆ ಸಂಕೇತವಾಗುತ್ತದೆ. ‘ಏನುವೆಂಸ.’ ‘ಏನುವನಾಯಿ’ ಎನ್ನುವ ಒಂದು ಅನಿರ್ವಚನೀಯ ಬೆರಗು.’ ನೆಲಮುಗಿಲುಗಳ ನಡುವಣ ತೋರ್ಕೆಯ ಸೀಮಾರೇಖೆಗಳನ್ನು ದಾಟಿದ ಅಮೂರ್ತದ ಅನಂತ ಅನುಭಾವ ಕವಿಯ ‘ಪೂರ್ಣದೃಷ್ಟಿ’ಯ ರುಜುವಾತು. ದರ್ಶನ ಶಾಸ್ತ್ರದ ಪರಿಭಾಷೆಯಲ್ಲಿ ಹೇಳುವುದಾದರೆ: ‘ಪ್ರಕೃತಿ’ಯ ಸಿರಿಸೊಬಗು ರುದ್ರಲೀಲೆಗಳೆಲ್ಲ ಪರಾಶಕ್ತಿಯ ಚೈತನ್ಯ ವಿನ್ಯಾಸ; ಸೃಷ್ಟಿಯ ಕಣಕಣ ‘ಪುರುಷ’ನ ನಾಟ್ಯಲೀಲೆ. ಎಲ್ಲೆಡೆ ಕಾಣುವುದು ‘ಶಿವಶಕ್ತಿ’ಯರ ದಿವ್ಯಸಂಗಮ. ಈ ದಿವ್ಯ ಪಥದ ಸಾಧಕನಾದ ಕವಿಗೆ ಆತನ ಊರ್ಧ್ವಗಾಮಿದೃಷ್ಟಿಗೆ ‘ತರುಚೇತನ’ ವೆ ಶಿವಚೇತನ. ‘ವನದೊಳಗಣ ತರುವೆಲ್ಲ ನೀನೇ ದೇವಾ’ ಎನ್ನುವ ಭಕ್ತಿಪಥದ ಬಾಗಿಲು ತಟ್ಟುವ, ತೆರೆದು ಪ್ರವೇಶಿಸುವ ಭೂಮಾನುಭೂತಿ, ಕುವೆಂಪು ಚೇತನದ ಭೌತಿಕ ಮತ್ತು ಅಧ್ಯಾತ್ಮಿಕ ಆಯಾಮಗಳನ್ನು ಧ್ರುವೀಕರಿಸುವ ಎರಕಗೊಳಿಸುವ ಶಕ್ತಿಯಾಗಿ ಗೋಚರಿಸುತ್ತದೆ. ಅವರೇ ಹೇಳುವಂತೆ ‘ನೆಲದಕೆಳಗೆ ಹಿಂದಿನವರು ಹೂತಿಟ್ಟಿರುವ ಹೊನ್ನಿನ ನಿಧಿಯಿದ್ದರೂ, ನೆಲದದಾಳದ ಗಮನವಿಲ್ಲದೆ ಮೇಲೆ ಮೇಲೆ ನಡೆದಾಡುವವರು ಮರುಳರೇ ಸರಿ.’ ಆದುದರಿಂದ ಅವರ ‘ಕಾವ್ಯದರ್ಶನ’ ಆತ್ಮದರ್ಶನವಾಗುತ್ತದೆ, ಜೀವನದರ್ಶನವಾಗುತ್ತದೆ. ಕವಿಯ ಅನುಭವ ಸಂಚಯಗೊಂಡಂತೆ, ಅನುಭಾವ ದೃಷ್ಟಿ ವಿಕಾಸಗೊಂಡಂತೆ, ಅನುಭೂತಿ ಹಳಕುಗಟ್ಟಿದಂತೆ ಅದನು ಭಾಷೆಯಲ್ಲಿ ವ್ಯಕ್ತಗೊಳಿಸುವುದು ಸಾಧ್ಯವಾಗುವುದಿಲ್ಲ. ಸಮಷ್ಟಿ ದೃಷ್ಟಿಯನ್ನು ಸೀಮಿತ ಶಕ್ತಿಯ ನುಡಿ ಹೇಗೆ ವಿನ್ಯಾಸಗೊಳಿಸಬಲ್ಲುದು? ವ್ಯಕ್ತಿಗತ ಅನ್ನುಭಾವವನ್ನು ಕಾವ್ಯಾನುಭವವಾಗಿ ಮಾರ್ಪಡಿಸುವುದು ಸುಲಭದ ಮಾತಲ್ಲ. ಇದು

1 ಪಕ್ಷಿಕಾಶಿ ‘ದೇವರು ರುಜು ಮಾಡಿದನು’

2. ಪಕ್ಷಿಕಾಶಿ ‘ಪಟ್ಟಣದಲ್ಲಿ ಹೊರಸುಹಕ್ಕಿ’

ಎಲ್ಲ ದಾರ್ಶನಿಕ ಕವಿಗಳೂ ಎದುರಿಸಬೇಕಾದ ಸಮಸ್ಯೆಯೇ. 'ಕುವೆಂಪು ಅವರಿಗೂ ಈ ಸಮಸ್ಯೆ' ಎದುರಾಗಿದೆ:

'ಬೇಕಹುದನಾಡಬೇಕೆಂದಾಸೆಬಹುದೆನೆಗೆ
ಬಯಕೆ ನುಡಿಗಳನರಸಿ ದುಡಿದುದನಿತೂ ವ್ಯರ್ಥ:
ನೆಯ್ದ ನುಡಿಗೂ ಅನುಭವಕೆ ಹೊಂದದನ್ವಾರ್ಥ
ನುಡಿಸಿರಿಯು ಕಬ್ಬಿಗನ ಹಾಡು ಮಾನವ ಕೊನೆಗೆ [1]

ಮೌನ ಕವಿಯ ಹಂಬಲದ, ಆತ್ಮ ಚಿಂತನೆಯ ಆರೋಗ್ಯಕರ ವಿಶಿಷ್ಟ ಗುಣ ಲಕ್ಷಣ. ಏಕೆಂದರೆ ಇದು ಚಿರಂತನ ಹಾರೈಕೆಗೆ ಪ್ರೇರಕ.

'ಹಾರೈಸಿ ಹಾರೈಸಿ ಹಾರೈಸಿ
ಅನ್ನ ತಾನಾದುದೈ ಪ್ರಾಣ;
ಹಾರೈಸಿ ಹಾರೈಸಿ ಹಾರೈಸಿ
ಹಾರಿದುದೊ ನೀರಧಿಯ ಮೀನ
....
ಹಾರೈಸಿ ಹಾರೈಸಿ ಹಾರೈಸಿ
ಸಿದ್ಧಿಯಾಯ್ತಾತ್ಮ ವಿಜ್ಞಾನ' [2]

ಜೀವದ ಹಾರೈಕೆ, ಪ್ರಾಣದ ಸಾಂದ್ರ ಬಯಕೆ. ಆದುದರಿಂದ ಜೀವ ಹಾರೈಸುತ್ತಲೇ ಇದೆ:

'ಹಾರೈಸು ಹಾರೈಸು ಹಾರೈಸು ಜೀವ
ಹಾರೈಸು ನೀನಾಗುವನ್ನೆಗಂ ದೇವ'

ಕುವೆಂಪು ಅವರ ಅನುಭಾವದ ಅನ್ವೇಷಣೆಗೆ, ಕಾವ್ಯ ಒಂದು ಮಾಧ್ಯಮವಾಗಿ ರೂಪುಗೊಂಡುದು ಅವರ ಕಾವ್ಯದ ವೈಶಿಷ್ಟ್ಯವಾಗಿದೆ. ಮತ್ತು ಈ ಅನ್ವೇಷಣೆಯ ಕಾರ್ಯ ಅವರ ವಾಸ್ತವ ಬದುಕಿಗೆ ಅನ್ವಯಗೊಂಡು ಮುಂದುವರಿದಿರುವುದು, ಅವರ ಕಾವ್ಯದ ಮೌಲಿಕತೆಯನ್ನು ಅಧಿಕಗೊಳಿಸುತ್ತ, ಒಟ್ಟು ಕಾವ್ಯಸೃಷ್ಟಿಯನ್ನು ಸಮಷ್ಟಿ ಜೀವನಕ್ಕೆ ಜೀವನದ ಉನ್ನತ ಮೌಲ್ಯಗಳಿಗೆ ಬದ್ಧಗೊಳಿಸುವಲ್ಲಿ ಸಾರ್ಥಕವಾಗುತ್ತದೆ. ಪ್ರಣಯ, ಪ್ರೇಮ, ದಾಂಪತ್ಯ, ಸಂಸಾರ ಮುಂತಾದುವನ್ನು ಕುರಿತ ಅವರ ಕವಿತೆಗಳು ಇದಕ್ಕೆ ನಿದರ್ಶನ. ಏಕೆಂದರೆ ಅವರು ಕೇವಲ 'ಅರಿವಾಸೆಯ ಮಾಯಾ ಬಂಧ' ದಲ್ಲಿ ವಿರಮಿಸುವುದಿಲ್ಲ; ಇರುವಾಸೆಯ ಪಣ ತೊಡುತ್ತಾರೆ : ' ಇರುವುದೆ ಮುಕ್ತಿಯ ಆನಂದ.' ಅರಿವಾಸೆಯ ಬಿಡು: 'ಇರುವಾಸೆಯ ತೊಡು' [3]

---

1. ಕೃತ್ತಿಕೆ : 'ಎಚ್ಚರಿಕೆ
2. ಅಗ್ನಿಹಂಸ 'ಹಾರೈಸು'   3 ಪಕ್ಷಿಕಾಶಿ ; ಪುಟ-21-22

ಪ್ರಕೃತಿ, ಈ ಕವಿಗೆ ಶಿವಸಂಕೇತವಾದರೆ, ಸಂಸಾರ ಶಿವಸಾಮರಸ್ಯವಾಗಿ ಕಾಣುತ್ತದೆ. ಸಂಸಾರದಲ್ಲಿ ಬರುವ ಕಾಮ, ಪ್ರೇಮ, ಮುನಿಸು, ಪ್ರಣಯ ಕೋಪ ತಾಪ, ವಿರಹ, ನೋವು, ಚಿಂತೆ, ಕಟಕಿ ವ್ಯಂಗ ಈ ಎಲ್ಲವೂ ಕವಿಗೆ ಆಳವಾದ ಅನುಭವವನ್ನು ಒದಗಿಸಿ, ಸಂವೇದನೆಯ ತೀಕ್ಷ್ಣತೆಯ ಅಲೆಗಳನ್ನು ಎಬ್ಬಿಸಿ ಮನಃ ಪರಿ ಪಾಕನೀಡುತ್ತವೆ; ಜಿಂದ ಬದುಕಿಗೆ ಚೈತನ್ಯವೆರೆಯುತ್ತವೆ; ನೊಂದ ಮನಸ್ಸಿಗೆ ಅಮೃತವನ್ನುಣಿಸುತ್ತವೆ. ಕಾಮ ಅಂತರಂಗದ ಮೂಸೆಯಲ್ಲಿ ಸುಟ್ಟು ಪರಿಶುದ್ಧ ಸಾತ್ವಿಕ ಪ್ರೇಮದ ಬೆಳಕು ಚಿಮ್ಮುತ್ತದೆ. ಆಗ ವಾಸ್ತವ ಜೀವನದ ಹೆಂಡತಿ, ಮಕ್ಕಳು ಬಂಧುಬಳಗ, ಸಮಸ್ತರೂ ಭಗವಂತನ ಪ್ರತಿನಿಧಿಗಳಾಗಿ ಸಂಸಾರವೂ ಭಗವಂತನ ಲೀಲೆಗಳಲ್ಲಿ ಒಂದಾಗಿ ತೋರುತ್ತದೆ. ಸಾಮಾನ್ಯ ಚೇತನ, ದಿವ್ಯಚೇತನವಾಗುತ್ತದೆ.

ಬಹುತರ, ಕೇವಲ ಲೈಂಗಿಕ ಕ್ಲೇಷೆಗಳಲ್ಲಿ ಬಳಲುವ, ಕಾಮದ ಬೀಭತ್ಸ್ಯ ಕ್ರೌರ್ಯಗಳಲ್ಲಿ ತೊಳಲುವ ಇಂದಿನ ಕೌಟುಂಬಿಕ ಜೀವನಕ್ಕೆ ಕುವೆಂಪು ಕಾವ್ಯದ ಈ ಮುಖ, ಈ ಸಮಷ್ಟಿದೃಷ್ಟಿ ಕೈದೀಪವಾಗಿದೆ.

ಪ್ರಣಯಿ ಮತ್ತು ಪ್ರಣಯಿನಿಯ ಸಂಬಂಧ, ಮುಗಿಲು ಮಿಂಚುಗಳ ಬಂಧ:

'ಕುಳಿತು ಕಾಯುತಿದ್ದ ಗಗನದಂತೆ
ಪ್ರಣಯಿ ನಾನು;
ಕತ್ತಲೆಗೆ ಕೆಮ್ಮಿಂಚು ಬಳುಕಿ ಬರುವಂತೆ
ಬಂದೆ ನೀನು'

ಕಾಮದ ಕತ್ತಲೆ ಕಳೆದು ಪ್ರೀತಿಯ ಬೆಳಕು ತಂದ ಪ್ರಣಯಿನಿ ಪತ್ನಿಯಾಗಿ ಇಡೀ ಜೀವನ ಬೆಳಗಿಸುತ್ತಾಳೆ. ಆಗ ಅಂತರಂಗದ ಅಮಾಯಕ ಒಲವು ಗರಿಗೆದರುತ್ತದೆ. ಬಹಿರಂಗದ ಚೆಲುವು ಶಾಶ್ವತವಲ್ಲ: 'ಚೆಲುವನೆಲ್ಲ ಕವಿಯೆ ಮುಪ್ಪು ಒಲುಮೆಯಿಂದೆ ಬದುಕಿಗಮೃತ : ಬರಿಯಮೈಯ್ಯ ಹೆಮ್ಮೆ-ತಪ್ಪು.' ಆದರೂ ಮತ್ತೆ ಮತ್ತೆ ದೈಹಿಕ ಬಯಕೆಗಳ ರಿಂಗಣ ಗುಣಿತ-ವಂದಣ ದತ್ತಣ. ಮೋಹ ಕ್ಲೇಶಗಳ ಮೇಲುಗೈ; ಆತ್ಮವಿಸ್ಮೃತಿ. ತೀವ್ರಯಾಗಿ ಅನಂತ ಪ್ರೇಮದ ಬೆಳಗು ಮೂಡಿಸಲು ದಿವ್ಯಚೈತನ್ಯಕ್ಕೆ ಪ್ರಾರ್ಥನೆ.

'ನನ್ನ ಜೀವಿಸಕಯ್ಯ
ರಕ್ಷಿಸುಂ ನೀಡಯ್ಯ
ನಿನ್ನ ಸಮೀಕ್ಷೆಯಿಂದ
ಎತ್ತಿ ಪೊರೆಯಯ್ಯ'

ಸಂಸಾರದಲ್ಲಿಯೂ ಶಿವಚೈತನ್ಯ ಕಾಣುವ ಕವಿಯದೃಷ್ಟಿ ವಿಕಾಸಗೊಳ್ಳುತ್ತ ಹೋದಂತೆ ತನಗೆ–ತನ್ನ ಬದುಕಿಗೆ 'ನಂಜುಂಡ ಶಿವನ ರಕ್ಷೆಬೇಕು. ಆದುದರಿಂದ' ಶರಣು ಶರಣ ಶಿವನಡಿ' ಹೀಗೆ ಸಂಸಾರ–ಸಂಸ್ಕಾರಕ್ಕೆ ಸಂಬಂಧಿಸಿದ ಅಪ್ಪಟ ಮಾನವೀಯ ಸಂಬಂಧಗಳ ಅನುಸಂಧಾನದಿಂದ ಹೊಮ್ಮಿದ ಹೊಸ ಧೋರಣೆಯಲ್ಲಿ ಕೈಹಿಡಿದಾಕೆ:

'ಲೋಕಸಂಗದಲ್ಲಿ ಸತಿ
ನಿತ್ಯದಲ್ಲಿ ಭಗವತಿ' (ಅನುತ್ತರಾ)

ಆದುದರಿಂದ: 'ಸಂಸಾರ ಸಾಗರದಲ್ಲಿ
ಹೆಣ್ಣು ಗಂಡು
ಕುತ್ತಿಗೆಗೆ ಗುಂಡಲ್ಲ
ಬೆನ್ಗೆ ಬೆಂಡು'[1]

ಸಂಸಾರ ಕವಿಯ ದೃಷ್ಟಿಯಲ್ಲಿ ಆತ್ಮ ಸಂಸ್ಕಾರದ ಮಹಾಪ್ರಸಾದವಾಗಿ ಸಾಪೇಕ್ಷ ಗೊಳ್ಳುತ್ತವೆ. ಕಾಮದ ಕಿಚ್ಚು ಈಗ ಸುಡುವುದಿಲ್ಲ: ಏಕೆಂದರೆ ಅದೀಗ ಪ್ರೇಮ ಜ್ಯೋತಿ

'ತಾಯ ಚರಣಕಿರಣವೊಂದು,
ಕೃಪೆಯೊಳೆನ್ನ ಪೊರೆಯಲೆಂದು
ನಿನ್ನರೂಪದಿ ಬಂದು ಸಲಹುತಿರುವುದೆನ್ನ ನಿಂದು'[2]

ಪರಿಶುದ್ಧ ಪ್ರೇಮ ಅಂತರಂಗದ ಶುಭ ಸಂಗಮಕ್ಕೆ ಮೂಲ. ಅದು ಕೇವಲ ದಾಂಪತ್ಯವಲ್ಲ ಶಿವ–ಶಿವೆಯರ ಒಸಗೆ: ಶಿವೇಚ್ಛೆ. ಶಿವೆ ಸರೋವರ, ಶಿವ ಶಿವೆಯರ ಅನಂತಪ್ರೇಮಲೀಲೆ. ಚರಾಚರಕ್ಕೂ ರೋಮಾಂಚನ. ಹಗಲು ಇರುಳು. ಪಕ್ಷ-ಮಾಸ ವರುಷಯುಗ ನಿರಂತರ ಸರಿಯುತ್ತಲೇ ಹೋಗುತ್ತವೆ.[3]

'ಹರನೆಂದನು............ ನೀ ಬಸಂತ ಬನಸಿರಿ
ಉಮೆಯೆಂದಳು ಮಂದಹಸಿತೆ........
ಸರ್ವಜೀವ ಜಡಗಳಲ್ಲಿ ನೀವೆ ಗಂಡು ನಾನೆ ಹೆಣ್ಣು'

ಈ ಪ್ರಪಂಚದ ಸಮಸ್ತ ಅಂಗಗಳೂ ಶಿವಶಕ್ತಿಮಿಲನರಂಗ. ಈ ಸಂಗಮ ದಿವ್ಯತೆಯ ಅನುಭವ ಸಾಂದ್ರತೆಯಿಂದಾಗಿ, ಕವಿಗೆ, ದಾಂಪತ್ಯ ಪ್ರಣಯ ಶಿವ

1. ಚಂದ್ರಮಂಚಕೆ ಬಾಚಕೋರಿ : ಹೆಣ್ಣುಗಂಡು ಪು. ೬೦
2. ,, ,, 'ಸತಿಗೆ' ಪು ೭
3. ಕುಮಾರ ಸಂಭವ ಕಾವ್ಯದ ಶಿವ ಪಾರ್ವತಿಯ ಮಿಲನ ಚಿತ್ರಕ್ಕೆ ಹೋಲಿಕೆ

ತಿವೆಯುರ ಸಮರಣದ ಪ್ರಣವ. ಬದುಕಿನ 'ಅಗಣಿತ'ಲೆಗಳಿಂದ ನುಗ್ಗಿಬರುವ ನೋವೂ ಆನಂದದ ಅಂಶ. ಪ್ರಣಯಶುದ್ಧಿಗೆ ಪ್ರಣವಸಿದ್ಧಿಗೆ ಕೇಂದ್ರಬಿಂದು ಸಂಸಾರ ಪೂಜೆ. 'ಪೂಜೆಯು ಸಂಸಾರದ ಒಜೆ. ಸಂಸಾರದ ಸೇವೆ.' ಶ್ರೀಪಾದದ ಪೂಜೆ, ಶ್ರೀ ಪೂಜೆ ಸಂಸಾರದ ಸೇವೆ. ಆಗ

'ರೂಪ ರೂಪಗಳನುದಾಟಿ
ನಾಮ ಕೋಟಿಗಳನು ಮೀಟಿ
....
ನೂರು ಮತದ ಹೊಟ್ಟತೂರಿ
ಎಲ್ಲ ತತ್ವದಲ್ಲೆ ಮೀರಿ
....
ಓ ನನ್ನ ಚೇತನ
ಆಗು ನೀ ಅನಿಕೇತನ' [1]

ಬದುಕಿಗೆ ಬದ್ಧನಾಗಿದ್ದು ವ್ಯಕ್ತಿ ಚೇತನ ಅನಿಕೇತನವಾಗುವುದೇ ಕುವೆಂಪು ವಿಶ್ವಮಾನವ ವ್ಯಕ್ತಿತ್ವದ ಪೂರ್ಣದೃಷ್ಟಿ : ಜೀವನ ದರ್ಶನ.

ಅಪಾತ್ರೇ ರಮತೇ ನಾರಿ ....?

(ಜನ್ನನ ಅಮೃತಮತಿಯನ್ನು ಕುರಿತು)

ಶಾಲಿನಿ ರಘುನಾಥ

ಗಂಡು–ಹೆಣ್ಣುಗಳ ಪರಸ್ಪರ ಆಕರ್ಷಣೆ ಪ್ರಕೃತಿಯ ಗೂಢಗಳಲ್ಲಿ ಒಂದು. ಸೃಷ್ಟಿಯ ಅಸ್ತಿತ್ವಕ್ಕೇ ಆಧಾರವಾದ ಈ ಚುಂಬಕ ಶಕ್ತಿಯನ್ನು ಬಣ್ಣಿಸದ ಕವಿಯೇ ಇಲ್ಲ. ಸಾಮಾನ್ಯವಾಗಿ ರಸಗಳಲ್ಲಿ ಶೃಂಗಾರಕ್ಕೆ ಪ್ರಮುಖಸ್ಥಾನ ಇದೆ. ಅದರ ಪ್ರಾಮುಖ್ಯ ಕನ್ನಡಕಾವ್ಯಗಳಲ್ಲಿ ಎಲ್ಲಿಯವರೆಗೆ ದೊರೆಕೊಂಡಿತೆಂದರೆ, 'ಸ್ತ್ರೀರೂಪವೆ ರೂಪಂ ಶೃಂಗಾರವೆ ರಸಂ' ಎಂದು ಮೆಚ್ಚಿಕೊಂಡಾಡುವವರೆಗೂ.[1] ಮನುಷ್ಯನ ಮನಸ್ಸಿನ ವಿಕಾರಗಳಿಗೆ ತಕ್ಕಂತೆ ಶೃಂಗಾರರಸದಲ್ಲಿಯೂ ವಿಕೃತರೂಪದ ಅಲೆಗಳು ಎದ್ದೇಳುವುದುಂಟು. ಆದರೆ ಶೃಂಗಾರದ ವಿಕೃತರೂಪದವರ್ಣನೆ ಕನ್ನಡ ಕಾವ್ಯಗಳಲ್ಲಿ ವಿರಳವಾಗಿ ಕಾಣಸಿಕೊಳ್ಳುತ್ತದೆ. ಅಂಥ ವರ್ಣನೆ ಮಾಡಿದ ಕವಿಗಳಲ್ಲಿ ನಮಗೆ ಜನ್ನ ಮುಖ್ಯನಾಗುತ್ತಾನೆ. ಶೃಂಗಾರರಸದಲ್ಲಿ ರತಿವಿಲಾಸಕ್ಕೇ ಪ್ರಾಶಸ್ತ್ಯ. ಆದರೆ ಜನ್ನ ತನ್ನ ಕಾವ್ಯದಲ್ಲಿ ರತಿರಹಸ್ಯವನ್ನು ಬಣ್ಣಿಸುವುದಕ್ಕಿಂತಲೂ ಪ್ರಣಯಸಮಸ್ಯೆಯನ್ನು ಬಿಡಿಸುವುದರತ್ತ ಹೆಚ್ಚಿನ ಒಲವನ್ನು ತೋರಿಸಿದ್ದಾನೆ. 'ಯಶೋಧರ ಚರಿತೆ' ಒಂದು ಧಾರ್ಮಿಕ ಕಾವ್ಯ. ಇಂಥ ಚೌಕಟ್ಟಿನಲ್ಲಿಯೂ ಅದು ಮಾನಸೀಯ ಲೌಕಿಕ ಸಮಸ್ಯೆಯೊಂದನ್ನು ಕೆದಕುವ ಪ್ರಯತ್ನ ಮಾಡಿರುವುದು ಕುತೂಹಲಕಾರಿಯಾಗಿದೆ.

ಉಜ್ಜಯಿನಿಯ ದೊರೆಯಾದ ಯಶೋಧರನ ಮನಃಪ್ರಿಯೆಯಾಗಿ, ಸಕಲ ಭೋಗ-ಭಾಗ್ಯಗಳನ್ನು ಅನುಭವಿಸುತ್ತಿದ್ದ ಅಮೃತಮತಿ, ಒಮ್ಮೆ ಅರಮನೆಯ ಪಟ್ಟದಾನೆಯ ಮಾವುತನ ಹಾಡಿನ ಮೋಡಿಗೆ ಒಳಗಾಗಿ ತಟ್ಟನೆ, ತನ್ನನ್ನೆ ಪಸಾಯದಾನವಾಗಿ ಕೊಟ್ಟುಬಿಡುತ್ತಾಳೆ. ಅವನೊಂದಿಗೆ ಕಳ್ಳತನದಿಂದ ಕೂಡುತ್ತ, ಪತಿಗೆ ಅದು ತಿಳಿದಿದೆ ಎಂದು ಗೊತ್ತಾಗುತ್ತಲೇ, ಅವನನ್ನೇ

---

೧. (ಸಂ) ಕೆ. ವೆಂಕಟರಾಮಪ್ಪ, ದೇ. ಜವರೇಗೌಡ, **ನೇಮಿಚಂದ್ರ ಲೀಲಾವತಿ ಪ್ರಬಂಧಂ** (ಆಶ್ವಾಸ ೧೨-೮ ನೇ ಪದ್ಯ)

ಕೊಂದು ಪಾತಕಿಯೆನಿಸಿ, ಮಾವುತನ ಸಹವಾಸದಿಂದ ತೊನ್ನುರೋಗ ಪೀಡಿತಳಾಗಿ, ಜೀವಂತ ಯಾತನೆಯನ್ನು ಅನುಭವಿಸಿಯೂ ಕೊರಗದೇ, ಕೊನೆಗೆ ಧೂಮಪ್ರಭೆಯೆಂಬ ನರಕವನ್ನು ಸೇರಿದಳೆಂಬುದು ಜನ್ನನು ಚಿತ್ರಿಸಿದ ಅಮೃತಮತಿಯ ಕಥೆ.[2] ಯಶೋಧರ ಚರಿತೆಯ ಪೂರ್ವಭಾಗವಾಗಿ ಈ ಕಥೆ ಬರುತ್ತದೆ.

ಜನ್ನನಿಗಿಂತಲೂ ಸುಮಾರು ಐದಾರು ಶತಮಾನಗಳ ಹಿಂದಿನಿಂದಲೇ ಪ್ರಾಕೃತ, ಸಂಸ್ಕೃತ ಕಾವ್ಯಗಳಲ್ಲಿ ಯಶೋಧರಚರಿತೆಯ ಕಥೆ ಕಾಣಿಸಿಕೊಂಡಿದೆ. ಪ್ರಭಂಜನ ಪ್ರಪ್ರಥಮ ಯಶೋಧರ ಚರಿತಕಾರನಿರಬೇಕೆಂದು ವಿದ್ವಾಂಸರು ಊಹಿಸುತ್ತಾರೆ.[3]

ಹರಿಭದ್ರನ (೮ ನೇ ಶತಮಾನ) 'ಸಮರಾಯಿಚ್ಚಕಹಾ'ದಲ್ಲಿ ಬರುವ ಧನ ಮತ್ತು ಧನಶ್ರೀಯ ಕಥೆ, ಯಶೋಧರ–ಅಮೃತಮತಿಯರ ಕಥೆಯನ್ನೇ ಬಹು ಮಟ್ಟಿಗೆ ಹೋಲುತ್ತದೆ. ದಂಡಿಯ 'ದಶಕುಮಾರ ಚರಿತ'ದಲ್ಲಿ ಮತ್ತು 'ಕಥಾಸರಿತ್ಸಾಗರ'ದಲ್ಲಿ ಅಂಗವಿಕಲನಾದ ಪ್ರಣಯಿಗಾಗಿ ಗಂಡನನ್ನೇ ಕೊಲ್ಲಲು ಯತ್ನಿಸಿದ ಹೆಣ್ಣಿನ ಕಥೆಯಿದೆ. ಹೇಮಚಂದ್ರನ 'ಪರಿಶಿಷ್ಟಪರ್ವ'ದಲ್ಲಿ, ರಾಣಿಯೊಬ್ಬಳು ಹೆಳವನಾದ ಮಾವುತನೊಂದಿಗೆ ಕೂಡುವ ಮತ್ತು ಅವನ ಚಾಟಿ ಏಟುಗಳನ್ನು ಸಹಿಸಿಕೊಳ್ಳುವ ಚಿತ್ರಣವಿದೆ. ಸೋಮದೇವನ 'ಯಶಸ್ತಿಲಕ ಚಂಪೂ' ಹಾಗೂ ವಾದಿರಾಜನ 'ಯಶೋಧರಚರಿತೆ' ಇವುಗಳಲ್ಲಿ ಯಶೋಧರ–ಅಮೃತಮತಿಯರ ಕಥೆ ನಮಗೆ ದೊರೆಯುತ್ತದೆ. ಈ ಮೇಲಿನವುಗಳಲ್ಲದೇ ಜನಪದ ಸಾಹಿತ್ಯದಲ್ಲಿಯೂ ಅಮೃತಮತಿಯ ಘಟನೆಯನ್ನು ಹೋಲುವ ಕತೆಗಳು ದೊರೆಯುತ್ತವೆ. ಈ ಕತೆಯ ಮೂಲವನ್ನರಸುತ್ತ ಡಾ|| ಕೆ. ಕೃಷ್ಣಮೂರ್ತಿಯವರು, 'ಈ ಬಗೆಯ ಜಾನಪದ ಕಥೆಗಳು ಗುಣಾಢ್ಯ, ದಂಡಿ ಮುಂತಾದ ದಾಕ್ಷಿಣಾತ್ಯ ಕವಿಗಳ ಕೃತಿಗಳಲ್ಲಿ ಅಧಿಕವಾಗಿ ಕಾಣಿಸಿಕೊಳ್ಳುವುದರಿಂದ ಅವು ಆರ್ಯಮೂಲವನ್ನುಳ್ಳವಾಗಿರದೆ, ದ್ರಾವಿಡ ಮೂಲದವಾಗಿರುವುದು ಸಾಧ್ಯ, ಎಂದು ಅಭಿಪ್ರಾಯಪಟ್ಟಿದ್ದಾರೆ.[4] ಆದುದರಿಂದ, ಜಾನಪದ

---

೨. ನೋಡಿ, (ಸಂ.) ಆ. ವೆಂ. ರಾಘವಾಚಾರ್ **ಯಶೋಧರ ಚರಿತೆ** ಮೈಸೂರು. ೧೯೭೩

೩. ನೋಡಿ, ಸಿ. ಪಿ. ಕೆ., **ಅಧ್ಯಯನ** , ಮೈಸೂರು. ಪು.೧೪೫.

೪. ನೋಡಿ, Dr. K. Krishnamoorthy, *Introduction to Yashodhara Carita*, p 65

ಮೂಲದ ಕತೆಯೊಂದು ಕಾಲಕ್ರಮೇಣ ಶಿಷ್ಟಸಾಹಿತ್ಯವನ್ನು ಸೇರಿ ಮತ್ತೂ ಹೆಚ್ಚಿನ ಜನಪ್ರಿಯತೆಯನ್ನು ಪಡೆದುಕೊಂಡಂತೆ ತೋರುತ್ತದೆ.[೬]

ಜನ್ನನ ಕೃತಿಗೆ ಸಂಸ್ಕೃತದ ವಾದಿರಾಜನ 'ಯಶೋಧರ ಚರಿತೆ' ಮೂಲವಾಗಿರಬೇಕು. ಏಕೆಂದರೆ ಕಥಾದೃಷ್ಟಿಯಿಂದ ಅವನು ಅದನ್ನು ಯಥಾವತ್ತಾಗಿ ಅನುಸರಿಸಿದ್ದಾನೆ. ಆದರೆ ಅವನ ಪ್ರತಿಭೆ ಮೂಲವನ್ನು ಅನೇಕ ಕಡೆ ಮೀರಿಸುವಲ್ಲಿ ಯಶಸ್ವಿಯಾಗಿದೆ. ಹರಿಭದ್ರ, ಸೋಮದೇವ ಮುಂತಾದವರ ಕೃತಿಗಳಲ್ಲಿ ಅಮೃತಮತಿಯ ಜಾರತ್ವದ ಘಟನೆಯಿಂದಲೇ ಕತೆ ಪ್ರಾರಂಭವಾಗುತ್ತದೆ. ಅದಕಾರಣ, ಅದಕ್ಕಿಂತ ಹಿಂದಿನ ಯಾವ ವಿಷಯವೂ ಅಲ್ಲಿ ನಮೂದಿತವಾಗದೆ, ಅವಳ ವ್ಯಭಿಚಾರಕ್ಕೆ ಕಾರಣವಾದ ಹಿನ್ನೆಲೆ ತಿಳಿಯದಂತಾಗಿದೆ. ಸೋಮದೇವ ಸಂಗೀತದ ಪ್ರಸ್ತಾಪ ಮಾಡುವುದರಿಂದ ಸಂಗೀತದ ಮೋಹ, ಅಪಾತ್ರರಲ್ಲಿ ಆಕರ್ಷಣೆಗೆ ಕಾರಣವಾಗಿರಬಹುದೆಂದು ಊಹಿಸಲಾದರೂ ಬರುವಂತಿದೆ. ವಾದಿರಾಜನಾದರೂ ಇದೇ ಎಳೆಯನ್ನೇ ಹಿಡಿದುಕೊಂಡು ಮುನ್ನಡೆದಿದ್ದಾನೆ. ಆದರೆ ಜನ್ನ ಈ ವಿಷಯದಲ್ಲಿ ವಾದಿರಾಜನನ್ನು ಮೀರಿಸುವಂತೆ ತೋರುತ್ತದೆ. ಅವನು ಯಾವುದೇ ಒಂದು ಕಾರಣವನ್ನು ಮುಖ್ಯವಾಗಿ ಮುಂದಿಡದೇ ಅಪರೋಕ್ಷವಾಗಿ, ಅನೇಕ ವಿಷಯಗಳನ್ನು ಸೂಕ್ಷ್ಮವಾಗಿ ನೀಡಿ ಅಮೃತಮತಿಯ ಪಾತ್ರದ ಮನೋವ್ಯಾಪಾರಗಳನ್ನು ಅರ್ಥಮಾಡಿಸಲು ಪ್ರಯತ್ನಿಸುತ್ತಾನೆ. ಹೀಗೆ, ಜನ್ನ ತನ್ನ ಅದ್ಭುತವಾದ ಪ್ರತಿಭೆ ಹಾಗೂ ಕಲಾಜಾಣ್ಮೆಯಿಂದ ಅಮೃತಮತಿಯ ಪಾತ್ರವನ್ನು ವೈಶಿಷ್ಟ್ಯಪೂರ್ಣವಾಗಿ ರಚಿಸಿದ್ದಾನೆ; ಅದೊಂದು ಸಂಕೀರ್ಣವಾದ ಪಾತ್ರವಾಗುವಂತೆ ಮಾಡಿದ್ದಾನೆ.

ನಿತ್ಯದ ಭೋಗ-ಭಾಗ್ಯಗಳಲ್ಲಿ ಯಾವ ಕೊರತೆಯೂ ಇಲ್ಲವೆಂಬಂತೆ ಚಿತ್ರಿತವಾಗಿರುವ ಯಶೋಧರನ ಹೆಂಡತಿ, ವಿಕೃತಾಂಗನಾದ ಮಾವುತನಿಗೆ ಮರುಳಾಗಿ ಅವನಲ್ಲಿ ಅನುರತಳಾದಳೆಂದರೆ ಅದನ್ನು ನಂಬುವುದು ಹೇಗೆ?.

---

೬. ಇಂಥ ಪ್ರಕ್ರಿಯೆಗಳು ಕೂಡ ಸಹಜವಾದುವೇ. ಜಾನಪದ ಮೂಲದಿಂದ ಪುರಾಣ ಶಿಷ್ಟಸಾಹಿತ್ಯಗಳನ್ನು ಪ್ರವೇಶಿಸುವ ಮತ್ತೆ ಜಾನಪದಕ್ಕೆ ಬಂದಿರುವ, ಭಿನ್ನ ರೀತಿಗಳಲ್ಲಿ ಬೆಳವಣಿಗೆ ಪಡೆಯುವ ಅನೇಕ ಜನಪ್ರಿಯ ಕತೆ ಹಾಡುಗಳು ನಮ್ಮಲ್ಲಿವೆ. ರಾಮಾಯಣದ ಕತೆಯ ಬಗ್ಗೂ ಇದೇ ಅಭಿಪ್ರಾಯವಿದೆ. ಜನಪದ ರಾಮಾಯಣವನ್ನು ನೋಡಿದಾಗ ಇದು ಮನದಟ್ಟಾಗುತ್ತದೆ. ಇದರಂತೆ ಗೋವಿನಕತೆ ಜಾನಪದದಿಂದ ಪುರಾಣ ಪ್ರವೇಶಿಸಿ, ಮತ್ತೆ ಜನಪ್ರಿಯ ಕಥನಗೀತೆಯಾಗಿ ಶಿಷ್ಟ ಮತ್ತು ಜಾನಪದಗಳೆರಡರಲ್ಲೂ ಪ್ರಸಿದ್ಧಿಯನ್ನು ಪಡೆದಿದೆ.

ಎಂಬ ಸಮಸ್ಯೆ ಅನೇಕ ಓದುಗರನ್ನು ಕಾಡಿದೆ. ಯಶೋಧರನ ಬಗ್ಗೆ ಅವಳಿಗೆ ಅಷ್ಟೇನೂ ಒಲವಿರಲಿಲ್ಲವೆಂಬ ಸೂಚನೆ ಸೋಮದೇವಸೂರಿಯ ಯಶಸ್ತಿಲಕ ಚಂಪೂವಿನಲ್ಲಿದೆ. ಯಶೋಧರ ಮನ್ಯವು ಜಘನ್ಯಗುಣವಿಲ್ಲದವನಾದ್ದರಿಂದ ಅತಿಕಾಮಿಗಳಾದ ಹೆಣ್ಣುಗಳಿಗೆ ಅವನಿಂದ ತೃಪ್ತಿ ಸಿಗುತ್ತಿರಲಿಲ್ಲವೆಂದು ವಾದಿರಾಜ ತಿಳಿಸುತ್ತಾನೆ. ಆದರೆ ಜನ್ನ ಅಂತಹ ಯಾವ ಸೂಚನೆಯನ್ನೂ ಕೊಡುವುದಿಲ್ಲ. ಬದಲಾಗಿ ಯಶೋಧರ ಅಮೃತಮತಿಯನ್ನು ಅದೆಷ್ಟು ಗಾಢವಾಗಿ ಪ್ರೀತಿಸುತ್ತಿದ್ದ, ಅವಳನ್ನು ಆರಾಧಿಸುತ್ತಿದ್ದ ಎಂಬುದನ್ನು ವರ್ಣಿಸುತ್ತಾನೆ. ಅವರ ವೈಭವೋಪೇತ ಭೋಗಜೀವನವನ್ನು ಚಿತ್ರಿಸುತ್ತಾನೆ. ಹೀಗೆ ಯಶೋಧರನ ಪ್ರೇಮಪೂಜಾರತ್ವದ ವರ್ಣನೆಯನ್ನು ಬಗೆ–ಬಗೆಯಾಗಿ ಮಾಡಿದರೂ ಅದರ ಹಿಂದೊಂದು ಉದ್ದೇಶವನ್ನು ಅವನು ಇಟ್ಟುಕೊಂಡಂತಿದೆ. ಅಂತೆಯೇ ಅಮೃತಮತಿಯು ಯಶೋಧರನನ್ನು ಅಷ್ಟೇ ತೀವ್ರವಾಗಿ ಪ್ರೀತಿಸುತ್ತಿದ್ದ ಬಗ್ಗೆ ಕಾವ್ಯದಲ್ಲೆಲ್ಲಿಯೂ ದಾಖಲೆ ದೊರೆಯುವುದಿಲ್ಲ. ಯಶೋಧರನೊಂದಿಗಿನ ಅವಳ ಜೀವನ ಅನಿವಾರ್ಯದ್ದಾಗಿತ್ತೆಂದೂ ಕಷ್ಟಪಟ್ಟು ಅವಳು ಹೊಂದಿಸಿಕೊಂಡಿದ್ದಾಗಿತ್ತೇ ಹೊರತು, ಅವಳ ಮನೋಭಿಲಾಷೆಗಳನ್ನು ಈಡೇರಿಸುವಂತಹದ್ದಾಗಿರಲಿಲ್ಲವೆಂಬ ಭಾವನೆ ಅಮೃತಮತಿಯ ಪಾತ್ರದ ಮನೋವ್ಯಾಪಾರಗಳನ್ನು ವಿಶ್ಲೇಷಿಸಿದಾಗ ನಮ್ಮ ಗಮನಕ್ಕೆ ಬರುತ್ತದೆ. ಯಶೋಧರ ರಾಜನಾದಮೇಲೆ ಕೂಡ ತನ್ನ ಭೂತಿಲಕವನ್ನು ಮತ್ತು ಯೌವನ ಭೂಷಾವಳಿಯನ್ನು ಅಮೃತಮತಿಯ ಮುಖದರ್ಪಣದಲ್ಲಿ ತಿದ್ದಿಕೊಳ್ಳುತ್ತಿದ್ದನೆಂದು ಜನ್ನ ನಮಗೆ ತಿಳಿಸುತ್ತಾನೆ.[೬] ಅಂದರೆ ಅವನ ಸಕಲಕಾರ್ಯಗಳಿಗೂ ಅಮೃತಮತಿಯೇ ಸ್ಫೂರ್ತಿಯೂ ಅಧಿಕಾರಿಣಿಯೂ ಆಗಿದ್ದಳೆಂಬುದು ಈ ಮೇಲಿನ ಮಾತುಗಳಿಂದ ವಿದಿತವಾಗುತ್ತದೆ. ರೂಪಬಲ, ಯೌವನಬಲ, ಅಧಿಕಾರಬಲವಿದ್ದ ಯಶೋಧರ ತಾಯಿಯ ಇಚ್ಛೆಯನ್ನನುಸರಿಸಿ ನಡೆಯುವವನು. ಒಟ್ಟಿನಲ್ಲಿ ಅವನೊಬ್ಬ ಸುಸಂಸ್ಕೃತ ವ್ಯಕ್ತಿಯೆನ್ನಬಹುದು. ಆದರೆ, ಇದಕ್ಕೆ ತದ್ವಿರುದ್ಧವಾಗಿ ಅಮೃತಮತಿ ಪ್ರಾಕೃತಳು, ಹೆಚ್ಚು ಕಾಮುಕ ಪ್ರವೃತ್ತಿಯವಳು. ಅವಳ ಮೂಲ ಅಥವಾ ನೈಜ ಸ್ವಭಾವ ಯಾವರೀತಿಯದೆಂದರೆ, ತನ್ನನ್ನು ಆರಾಧಿಸುವುದಕ್ಕಿಂತ ತನ್ನ ಮೇಲೆ ಅಧಿಕಾರ ಚಲಾಯಿಸುವುದನ್ನು ಅವಳು ಇಷ್ಟಪಡುವಂಥವಳು. ಕೋಮಲವಾದ ಪ್ರೀತಿಗಿಂತ ಒರಟುಪ್ರೇಮ ಅವಳಿಗೆ ಹೆಚ್ಚು ಹಿತ. ಈ ಕಾರಣದಿಂದಲೇ ಅವಳಿಗರಿವಿಲ್ಲದಂತೆಯೇ ಯಶೋಧರನನ್ನು ಕುರಿತು ತಿರಸ್ಕಾರಭಾವನೆ ಅವಳ ಅಂತರಂಗದಲ್ಲಿ ಜನಿಯಿಸ ತೊಡ

೬. ನೋಡಿ, (ಸಂ.) ಕೆ. ವೆಂ. ರಾಘವಾಚಾರ್: **ಯಶೋಧರ ಚರಿತೆ** ಮೈಸೂರು, ೧೯೬೩, ೨ ನೇ ಅವತಾರ ೧೦ ನೇ ಪದ್ಯ.

ಗಿದ್ದರೆ ಆಶ್ಚರ್ಯವಿಲ್ಲ. ಅಂತಹ ಸುಂದರ ಸುಸಂಸ್ಕೃತ ಯಶೋಧರನನ್ನು ಬಿಟ್ಟು, ವಿಕಾರರೂಪದ ಬದಗನನ್ನು ಅವಳು ಮೆಚ್ಚಿಕೊಂಡಾಗ ಕವಿ, 'ಬೇವಂ ಮೆಚ್ಚಿದ ಕಾಗೆಗೆ ಮಾವಿಳದಪ್ಪಂತೆ ಪತಿಯೊಳಿಳಿದಾಯ್ತುಮನಂ' ಎಂದು ಮಾರ್ಮಿಕವಾಗಿ ನುಡಿಯುತ್ತಾನೆ.[7] ಒಟ್ಟಿನಲ್ಲಿ ಸಾಂಸ್ಕೃತಿಕವಾಗಿ ಆ ಎರಡೂ ಜೀವಗಳ ಮಟ್ಟವೇ ಭಿನ್ನವಾದುದು. ಇಷ್ಟಿದ್ದೂ ಮದುವೆಯಾದಮೇಲೆ ಅಮೃತಮತಿ ಯಶೋಧರನೊಂದಿಗೆ ಹೊಂದಿಕೊಳ್ಳಲು ಖಂಡಿತಾ ಪ್ರಯತ್ನಿಸಿದ್ದಾಳೆ. ಆದರೆ ಮಾವುತನ ಹಾಡನ್ನು ಕೇಳುವ ಪ್ರಸಂಗ ಅವಳ ಜೀವನದಲ್ಲಿ ಬಂದಿರದಿದ್ದರೆ, ಅವಳು ಯಶೋಧರನೊಂದಿಗೆ ಹೇಗಾದರೂ ಹೊಂದಿಕೊಂಡು ಬಾಳುತ್ತಿದ್ದಳೇನೋ, ಅಥವಾ ಮಾವುತನ ವಿಕೃತರೂಪವನ್ನು ತಿಳಿದ ಮೇಲಾದರೂ ಅವಳು ತನ್ನ ಮನಸ್ಸನ್ನು ಬದಲಾಯಿಸಬಹುದಿತ್ತೇನೋ. ಒಟ್ಟಿನಲ್ಲಿ ಮನಸ್ಸನ್ನು ನಿಗ್ರಹ ಮಾಡುವ ಶಕ್ತಿಯೇ ಅವಳಿಗಿದ್ದಂತೆ ತೋರುವುದಿಲ್ಲ. ಅತಿ ಕಾಮುಕತೆಯೇ ಮುಂದಿನ ಅವಳ ಎಲ್ಲ ಜಾರುವಿಕೆಗೂ ಮುಖ್ಯ ಕಾರಣವಾಗುತ್ತದೆ.

ತಾನು ಮೆಚ್ಚಿಕೊಂಡ ಹಾಡು ಅಷ್ಟು ರಸವತ್ತಾಗಿರಬೇಕಾದರೆ ಆ ಹಾಡಿದ ಪುರುಷನೂ ಅಷ್ಟೇ ಸುಂದರನಾಗಿರಬೇಕೆಂಬುದು ಅಮೃತಮತಿಯ ಕಲ್ಪನೆ. ಆದರೆ ಅವನನ್ನು ನೋಡಿ ಬಂದ ದೂತಿ 'ಚಿತ್ರಮಪಾತ್ರೇರಮತೇನಾರೀ' 'ಜೇಂದ ಬಿದಿಗೆ ಕಣ್ಣಿಲ್ಲಕ್ಕುಂ' ಮುಂತಾಗಿ ನುಡಿಯುತ್ತ ಒಡತಿಯ ಇಚ್ಛೆಗಾಗಿ ಸಿಡುಕುಯ್ಯುತ್ತಾಳೆ. ಅಂತಹ ಕಾಮದೇವನಿಗೆ ಹೇಗೆ ಒಲಿದೆ ಎಂದು ವ್ಯಂಗ್ಯವಾಗಿ ಕೇಳುತ್ತಲೇ,

> **ಪಱಿದಲೆ ಕುಱುನೊಸಲುಂಗ**
> **ಣ್ಣೊಳ್‌ಜಿವಾಯ್ ಹಪ್ಪಳಿಕೆ ಮೂಗು ಮುರುಟಿದ ಕಿವಿಬಿ**
> **ಬ್ಬಿಱುವಲ್ ಕುಸಿಗೊರಲಿಳಿದೆರ್ದೆ**
> **ಪೊಱುಂಟಬೆನ್ ಬಾತಬಸಿಱುಡಂಗಿದ ಜಘನಂ**

ಎಂದು ಮುಂತಾಗಿ ಅವನ ಅಸಹ್ಯ ರೂಪವನ್ನು ವರ್ಣಿಸುತ್ತಾಳೆ.[8] ತಾನು ಮೆಚ್ಚಿದ ಪುರುಷ ಕುರೂಪಿ ಎಂಬುದು ತಿಳಿದಾಗ.

---

೭. ನೋಡಿ (ಸಂ.) ಕೆ. ಜಿ. ರಾಘವಾಚಾರ, ಅದೇ, ೨ ನೇ ಅವತಾರ ೭' ನೇ ಪದ್ಯ

೮. ಅದೇ, ೨–೨೦

ಗರಗರಿಕೆ ಕೊರಲೊಳೀಕ್ಷಣದೊಳ್ವಾ
ರ್ಬಿಂದು ಮಿಡುಕೆರ್ದೆಯೊಳೊದವೆ ಪು
ಳಿಂದನ ನಡೆನಟ್ಟು ನಿಂದ ವನಹರಿಣಿಯವೊಲ್

ಅವಳ ಸ್ಥಿತಿಯಾಗುತ್ತದೆ.[೯] ಕಾಮವಿಕಾರಕ್ಕೆ ಒಳಗಾದ ಅವಳು ಅಸಹಾಯಕಳಾಗಿರುವುದನ್ನು, ಭಯ, ನಿರಾಶೆಗಳಿಂದ ಕ್ಷಣಕಾಲ ತತ್ತರಿಸುವುದನ್ನು ಜನ್ನನ ಈ ಮೇಲಿನ ಮಾತುಗಳು ಅತ್ಯಂತ ಪರಿಣಾಮಕಾರಿಯಾದ ರೀತಿಯಲ್ಲಿ ತಿಳಿಸುತ್ತವೆ. ಆದರೆ ಕೆಲನಿಮಿಷಗಳಲ್ಲಿಯೇ ಇಂಥ ಸಂದಿಗ್ಧ ಸ್ಥಿತಿಯನ್ನು ಅವಳು ಮೀರಿಬಿಡುತ್ತಾಳೆ; ತನ್ನ ನಿಲುವನ್ನು ಸಮರ್ಥಿಸಿಕೊಳ್ಳುತ್ತಾಳೆ. 'ಒಲಿದವನೇ ಚಲುವನು' ಎಂಬ ಭಾವವನ್ನು ಮೀರಿ, **'ಪೊಲ್ಲನೆಯುಮೆ ಲೇಸು ನಲ್ಲರ ನೆಯ್ಯೊಳ್'** ಎಂಬ ಮಾತನ್ನು ಆಡುವಷ್ಟು ಗಾಢಮೋಹ ಅವಳನ್ನು ಆವರಿಸುತ್ತದೆ.[10] ಅಷ್ಟೇ ಅಲ್ಲ,

ಒಲವಾದೊಡೆ ರೂಪಿನಕೋ
ಟಲೆಯೇವುದೊ ಕಾರ್ಯಮಾಗೆ ಕಾರಣದಿಂದಂ।
ಫಲಮೇನಿಂದೆನಗಾತನೆ
ಕುಲದೈವಂ ಕಾಮದೇವನಿಂದ್ರಂ ಚಂದ್ರಂ [11]

ಹೀಗೆಲ್ಲ ಹೇಳುವಾಗ ರೂಪಿದ್ದೂ ಒಲವು ಮೂಡದ ಯಶೋಧರನನ್ನು ದೃಷ್ಟಿಯಲ್ಲಿಟ್ಟುಕೊಂಡು ಅವಳು ಮಾತನಾಡುತ್ತಿದ್ದಾಳೆ ಎಂದೇ ಭಾಸವಾಗುತ್ತದೆ. ಜನ್ನ ಅತ್ಯಂತ ಸೂಕ್ಷ್ಮಮತಿ, ಅಮೃತಮತಿಯ ಪಾತ್ರವನ್ನು ಅವನು ಎಳೆಎಳೆಯಾಗಿ ಹಿಂಜಿ ತೋರಿಸದಿದ್ದರೂ ಅವಳ ಮನೋವ್ಯಾಪಾರಗಳ ವಿಶ್ಲೇಷಣೆಗೆ ಅವಶ್ಯಕವಿರುವ ಸಾಮಗ್ರಿಗಳನ್ನು ಅವನು ಕುಶಾಗ್ರಬುದ್ಧಿಯಿಂದಲೇ ನೀಡಿದ್ದಾನೆ.

ಇನ್ನು, ಇನ್ನೊಬ್ಬರಿಂದ ಆಳಿಸಿಕೊಳ್ಳುವುದರಲ್ಲಿ ಅವಳಿಗೆ ಸಂತೋಷ ಇದೆ ಎಂಬ ಅಂಶ, ಅಷ್ಟಾವಂಕ ಅವಳನ್ನು ನಡೆಸಿಕೊಳ್ಳುವ ಕ್ರೂರರೀತಿ ಅವಳಿಗೆ ಆಪ್ಯಾಯಮಾನವಾಗುವುದರಲ್ಲಿ ನಮಗೆ ಗೊತ್ತಾಗುತ್ತದೆ. ಇಡೀ ಜನ್ಮದಲ್ಲಿಯೇ ಯಶೋಧರನಿಂದ ಅಂಥ ಕ್ರೂರ ನಡೆವಳಿಕೆ ಸಾಧ್ಯವಿರಲಿಲ್ಲ. ಆ ಬದಗ, ಅವಳ

---

೯. ನೋಡಿ, (ಸಂ.)ಕ. ವೆಂ. ರಾಘವಾಚಾರ್ ಅದೇ, ೨ನೇ ಅವತಾರ ೨೩ನೇ ಪದ್ಯ ಅದೇ

೧೦. ಅದೇ ೨೪

೧೧. ಅದೇ ೨೫

ಮುಂಗುರುಗಳನ್ನು ಎಳೆದು ಮಿಳಿಯಿಂದ ಅವಳನ್ನು ಬಡಿದು, ತೋರ ಮುಡಿ ಹಿಡಿದು ಕುಡಿಯುಂ ನಾರಂ ತದೆವಂತೆ ತದೆದು, ಜೀಟಿಯ ಕಾಲಿಂದ ಬಾರೇಳುವಂತೆ ಒದೆಯುತ್ತಾನೆ. ಒಬ್ಬ ಸಾಮಾನ್ಯ ಸೇವಕ ರಾಣಿಯನ್ನು ಈ ರೀತಿ ನಡೆಸಿಕೊಳ್ಳಲು ಸಾಧ್ಯವೇ ? ಅಮೃತಮತಿಗೆ ಆ ಪರಿಜ್ಞಾನವೇ ಇಲ್ಲ. ಈಗ ಅವಳು ಅತ್ಯಂತ ಕಾಮುಕಿ. ವಿಕೃತಾವಸ್ಥೆಯಲ್ಲಿರುವ ಅವಳ ಮನಸ್ಸು ಈ ಕ್ರೂರತೆಯನ್ನೆಲ್ಲ ಅತ್ಯಂತ ಪ್ರೀತಿಯಿಂದ ಸಹಿಸಿಕೊಳ್ಳಬಲ್ಲುದು. ಅಷ್ಟೇ ಅಲ್ಲ, ಸಂತೋಷಪಡಬಲ್ಲುದು. ಬದಗ ಆ ರೀತಿ ಬಡಿವಾಗ, ಅವಳು ಆಡುವ ಮಾತುಗಳೇನು ?

ತಡವಾದುದುಂಟು ನಲ್ಲನೆ
ಬಡಿ ಮುಳಿಯದಿರರಸನೆಂಬ ಪಾತಕನೆನ್ನಂ
ತೊಡೆಯೇಱಿಸಿ ಕೇಳಿಕೆ ಯಾ
ದೊಡೆನೋಡುತ್ತಿರ್ದನ್

ಎನ್ನುತ್ತಾಳೆ. 12 ಇಷ್ಟೇ ಅಲ್ಲ, ಆ ಕುರೂಪಿಯನ್ನು ಕುರಿತು,

ಕಿವಿಸವಿದನಿ ಕಣ್ಸವಿರೂಪ
ಅವಧರಿಸೆಲೆ ಗಜವೆಡಂಗ ನೀನುಱಿದೊಡೆ ಸಾ
ವವಳೆನಗೆ ಮಿಕ್ಕ ಗಂಡರ್
ಸವಸೋದರರ್.......

ಎಂಬ ನಂಬಿಕೆಯನ್ನು ಹುಟ್ಟಿಸುತ್ತಾಳೆ. 13

ಅಮೃತಮತಿಯ ಈ ಮಾತುಗಳನ್ನು ಕೇಳಿ ಮಾರಿದತ್ತನಿಗೆ ಕೋಪವುಕ್ಕಿ ಹರಿದರೂ ಅಭಯರುಚಿಯ ಶಾಂತಮನಸ್ಸಿಗೆ ಹೊಳೆದದ್ದೇನು ? **ಮನಸಿಜನ ಮಾಯೆ ವಿಧಿವಿಳಸನದ ನೆರಂಬಡೆಯ ಕೊಂದು ಕೂಗದೆ ನರಸಂ** ಎಂಬುದು. 14 ಅಮೃತಮತಿಯ ಮನಸ್ಸಿನಲ್ಲಿ ಹುದುಗಿದ್ದ ಕಾಮದ ವಿಕಾರ ಭಾವನೆಗಳಿಗೆ ಬದಗನ ಹಾಡಿನ ನೆರವು ದೊರಕಿದ್ದೇ ತಡ ಅವು ಒಮ್ಮೆಲೇ ಹೊರ ಹೊಮ್ಮತೊಡಗಿ ಕೊನೆಯಲ್ಲಿ ಅವಳ ಸರ್ವನಾಶಕ್ಕೇ ಕಾರಣವಾದವು ಎಂಬ

---

೧೨. ನೋಡಿ (ಸಂ.) ಟಿ. ವೆಂ. ರಾಘವಾಚಾರ, ಅದೇ, ೨ನೇ ಅವತಾರ ೩೩ನೇ ಪದ್ಯ

೧೩. ಅದೇ ೩೪

೧೪. ಅದೇ ೪೨

ಪಶ್ಚಾತ್ತಾಪ, ಅವಳನ್ನು ಕುರಿತ ಅನುಕಂಪೆ; ಆದರೆ ಅದು ಪಾಪವನ್ನು ಕುರಿತ ಅನುಕಂಪೆಯಲ್ಲ.

ಅಮೃತಮತಿ ಜದಗನ ಸನ್ನಿವೇಶದಲ್ಲಿ ಅಸಹಾಯಕಳಾಗಿದ್ದಳು. ಕಾಮಾತುರಳಾಗಿದ್ದಳು ಎಂದು ಒಮ್ಮೆ ಭಾವಿಸಿದರೂ ಮುಂದೆ ಅವಳು ಆ ಕೂಪ ಅಥವಾ ಪಾಪದಿಂದ ಹೊರಬರಲು ಯತ್ನಿಸದಿರುವುದು ಅವಳ ವಿಚಿತ್ರ ವ್ಯಕ್ತಿತ್ವದ ದ್ಯೋತಕವಾಗಿ ಬಿಡುತ್ತದೆ. ಒಂದನ್ನು ದಕ್ಕಿಸಿಕೊಳ್ಳಲು ಹೋಗಿ ಮತ್ತೊಂದು ಅಪರಾಧಗೈಯ್ಯುತ್ತಾಳೆ. ತನ್ನ ಗುಟ್ಟೆಲ್ಲ ಯಶೋಧರನಿಗೆ ಗೊತ್ತಾಗಿದೆ ಎಂಬ ಅನುಮಾನ ಬಂದಾಗ, ತಪಸ್ಸಿಗೆ ಹೊರಟ ಅವನನ್ನೂ, ಅತ್ತೆಯನ್ನೂ ಊಟಕ್ಕೆ ಕರೆದು, ಮೋಸದಿಂದ ಕೊಲ್ಲುತ್ತಾಳೆ. ಅವನು ತಪಸ್ಸಿಗೆ ಹೊರಟುಹೋದರೆ ತನಗೆಲ್ಲಿ ಕೆಟ್ಟ ಹೆಸರು ಬರುವುದೋ ಎಂದವಳು ಅಂಜಿರಬೇಕು. ಜೊತೆಗೆ ಮೊದಲು ಅನಿವಾರ್ಯವೆಂದು ಭಾವಿಸಿದ್ದ ಯಶೋಧರ ನೊಂದಿಗೆ ಹೊಂದಾಣಿಕೆ ಬರ–ಬರುತ್ತ ತಿರಸ್ಕಾರಕ್ಕೆ ತಿರುಗಿ, ಅಪಮಾನದಿಂದ ಕುದಿದು, ಕೊನೆಯಲ್ಲಿ ಕೊಲೆಗೈವ ಸೇಡಿನಲ್ಲಿ ಪರ್ಯವಸಾನ ಹೊಂದಿದಂತೆ ತೋರುತ್ತದೆ.

ಅಷ್ಟಾವಂಕನ ಮೇಲಿನ ಅಮೃತಮತಿಯ ನಿಷ್ಠೆಯನ್ನು ಅನೇಕ ವಿಮರ್ಶಕರು ಮೆಚ್ಚಿಕೊಂಡಿದ್ದಾರೆ. ಆದರೆ ಇಲ್ಲಿ ನಿಷ್ಠೆಗಿಂತ ಕಾಮತೃಷೆಯು ಈಡೇರಿಕೆಯೇ ಮುಖ್ಯವಾದ ಅಂಶವಾಗಿದೆ. ಯಾವುದನ್ನು ಯಶೋಧರನಿಂದ ಪಡೆಯಲಾಗಲಿಲ್ಲವೋ, ಅದನ್ನು ಜದಗನಲ್ಲಿ ಅವಳು ದೊರಕಿಸಿಕೊಂಡಳು ಅಷ್ಟೆ. ಅವನ ಸಹವಾಸದಿಂದ ತೊನ್ನುರೋಗಪೀಡಿತಳಾದರೂ, ಮೈಯಿಂದ ಕೀವು ಬಸಿಯುತ್ತಿದ್ದರೂ ಅವನನ್ನು ಅವಳು ಬಿಡಲಾರಳು. ಬದಲಾಗಿ ಅವನಿಗೆ ಕಿಂಚಿತ್ ನೋವಾದರೂ 'ಆನ್ ಜಿಂದೆನ್' ಎಂದು ದುಃಖಿಸುವವಳು ಅವಳು. ಕೊನೆಯುತನಕವೂ ತಾನು ಮಾಡಿದ ಕೃತ್ಯಗಳಿಗಾಗಿ ಸ್ವಲ್ಪವೂ ಪಶ್ಚಾತ್ತಾಪ ಪಟ್ಟವಳಲ್ಲ. ಜದಗನನ್ನು ಕುರಿತು ಎಂದೂ ಅಸಹ್ಯಪಟ್ಟಿಲ್ಲ. ಇದೇ ಅವಳ ವ್ಯಕ್ತಿತ್ವದ ವೈಶಿಷ್ಟ್ಯ! ಇಂಥ ಮನಸ್ಥಿತಿಯನ್ನು ವಿಶ್ಲೇಷಿಸುವುದು ಅಸಾಧ್ಯವೆಂದೇ ಕವಿ, ಅಮೃತಮತಿಗೆ ಅಂತಹ ಬುದ್ಧಿ ಬರಬೇಕಾದರೆ ಅದನ್ನು 'ವಿಧಿವಿಲಸನ'ವೆಂದೇ ಭಾವಿಸಬೇಕೆನ್ನುತ್ತಾನೆ. ಮನಶ್ಶಾಸ್ತ್ರಜ್ಞರು ಇದನ್ನೇ 'ವಿಕೃತಮನಸ್ಸು' ಎನ್ನುತ್ತಾರೆ. ಆದುದರಿಂದ ವಿಕೃತಮನಸ್ಸಿನವರು ಹೀಗೆಯೇ ವರ್ತಿಸುತ್ತಾರೆಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಒಟ್ಟಿನಲ್ಲಿ ಜನ್ನನ ಅಮೃತಮತಿ ತನ್ನ ವಿಚಿತ್ರ ರೀತಿಯ ಕಾಮತೃಷೆಯನ್ನು ಹಿಂಗಿಸಿಕೊಳ್ಳಲು ಕಳ್ಳಮಾರ್ಗದಲ್ಲಿ ಹೋಗಿ ಕೊನೆಗೆ ಪತಿಯನ್ನೇ ಕೊಲ್ಲುವುದರ ಮೂಲಕ,

ಅದನ್ನೇ ರಾಜಮಾರ್ಗವನ್ನಾಗಿಸಿಕೊಂಡು, ನರಕ ಸದೃಶವಾದ ಬದಗನೊಂದಿಗಿನ ಜೀವನದಲ್ಲಿಯೇ ಸ್ವರ್ಗಸುಖವನ್ನೂ ಸವಿದು, ಕೊನೆಯಲ್ಲಿ ಎಂದೆಂದೂ ಹೊರ ಬರಲಾರದ ಧೂಮಪ್ರಭೆ ನರಕವನ್ನು ಸೇರುತ್ತಾಳೆ. ಹೀಗೆ ಜನ್ನನ ಅಮೃತ ಮತಿಯದು ಕನ್ನಡ ಸಾಹಿತ್ಯದಲ್ಲಿಯೇ ವಿಶಿಷ್ಟವಾದ ಪಾತ್ರವಾಗಿದೆ.

ಆಯ್ದ ಆಕರ ಗ್ರಂಥಗಳು

೧ ಕುವೆಂಪು, **ದ್ರೌಪದಿಯ ಶ್ರೀ ಮುಡಿ**, ಮೈಸೂರು, ೧೯೬೦

೨ ರಾಘವಾಚಾರ್, ಕ. ವೆಂ. **ಯಶೋಧರ ಚರಿತೆ**, ಮೈಸೂರು, ೧೯೭೨.

೩ ಲಕ್ಷ್ಮೀನಾರಾಯಣಭಟ್ಟ, ಎನ್.ಎಸ್., **ವಿವೇಚನೆ**, ಮೈಸೂರು, ೧೯೭೮.

೪ ಶ್ರೀಕಂಠಯ್ಯ. ತಿ. ನಂ., **ಕಾವ್ಯಸಮೀಕ್ಷೆ**, ಮೈಸೂರು. ೧೯೫೭.

೫ ಸಿ. ಪಿ. ಕೆ., **ಅಧ್ಯಯನ**, ಮೈಸೂರು, ೧೯೭೪.

೬ ಸಿ. ಪಿ.ಕೆ. **ಜನ್ನ**. ಮೈಸೂರು

೭ (ಸಂ.) ಸೀತಾರಾಮಯ್ಯ. ವಿ., **ಜನ್ನ**, ಬೆಂಗಳೂರು. ೧೯೭೫

೮ ಹೆಗಡೆ. ಎಲ್. ಆರ್., **ಕಾವ್ಯವಾಸಂಗ**, ಧಾರವಾಡ, ೧೯೬೭

೯ Krishnamoorthy, K., *Vadiraja's Yashodhara carita*.

‘ ಕಾಳಗವನೇ ಬಲಿದು ಬಹೆನು’

● ಮಧು ವೆಂಕಾರೆಡ್ಡಿ

“ಕಾಳಗವನೇ ಬಲಿದು ಬಹೆನು” ಎಂದು ದ್ರೌಪದಿಗೆ ವಚನವಿತ್ತ ಕೃಷ್ಣ ಹಸ್ತಿನಾವತಿಗೆ ನಡೆಯುತ್ತಾನೆ.

ಶ್ರೀ ಕೃಷ್ಣನ ಹೃದಯಕ್ಕೆ ಹೆಚ್ಚು ಹತ್ತಿರಳಾದ ತಂಗಿಯೆಂದರೆ ದ್ರೌಪದಿ; ಸುಭದ್ರೆಗಿಂತ ಸಮೀಪದವಳು. ಜಗತ್ತಿನ ಸ್ತ್ರೀ ಪಾತ್ರಗಳಲ್ಲಿ ಸೀತೆಯಷ್ಟೇ ಅಗ್ರ ಸ್ಥಾನವನ್ನು ಪಡೆದ ದ್ರೌಪದಿ ಮತ್ತು ದೇವ ಮಾನವ ಶ್ರೀಕೃಷ್ಣರ ಮಧುರ ಸಂಬಂಧ ವ್ಯಾಸ ಭಾರತದಲ್ಲಿಯೂ ಚಿತ್ರಿತವಾಗಿದೆ. ಅಲ್ಲಿ ಶ್ರೀ ಕೃಷ್ಣನನ್ನು ಪ್ರೀತಿಸುವ ಬಂಧುವರ್ಗದವರು ಅನೇಕರಿದ್ದರೂ ಪಂಚವಲ್ಲಭೆಗೆ ಮಾತ್ರ ಆತನಲ್ಲಿ ಉತ್ಕಟವಾದ ಭಕ್ತಿಯಿತ್ತು. ಅಸಾಮಾನ್ಯ ಸ್ತ್ರೀಯಾದ ಅವಳು ಅತ್ಯಂತ ಕಠಿಣ ಪ್ರಸಂಗಗಳನ್ನು ಧೈರ್ಯವಾಗಿ ಎದುರಿಸಿದ ವೀರರಮಣಿ. ಅವಳಿಟ್ಟುಕೊಂಡ ಕೃಷ್ಣಭಕ್ತಿ ಎಂಥ ಕಾಲದಲ್ಲೂ ಅವಳು ಧೃತಿಗೆಡದಂತೆ ರಕ್ಷಿಸಿತ್ತು. ಅವಳ ಕೃಷ್ಣ ಭಕ್ತಿಯ ಪರಾಕಾಷ್ಠೆಯನ್ನು ವ್ಯಾಸನಿಗಿಂತ ಹೆಚ್ಚು ಹೃದಯಸ್ಪರ್ಶಿಯಾಗಿ ತೋರಿದ ಕವಿ ಕುಮಾರವ್ಯಾಸ. ದ್ರೌಪದೀ ಪ್ರೇಮದಿಂದ ‘ಕಾಮಿನಿಗೆ ಕರಗುವನು ಕೃಷ್ಣನು’ ಎಂಬಂತೆ ಕೃಷ್ಣನ ಮೇಲಿನ ಅಪಾರ ಭಕ್ತಿಯಿಂದಾಗಿ ‘ಕೃಷ್ಣನಿಗೆ ಕರಗುವಳು ಕಾಮಿನಿ’. ಆದುದರಿಂದ ಅವರ ಗಾಢ ಸಂಬಂಧದಲ್ಲಿ ಹೆಚ್ಚು ಸಲಿಗೆಯಿದೆ; ಅದು ಅನ್ಯೋನ್ಯವಾಗಿದೆ.

ಮೊಟ್ಟ ಮೊದಲ ಬಾರಿ ಕೃಷ್ಣನ ಪರಿಚಯ ದ್ರೌಪದಿಗಾದುದು ತನ್ನ ಸ್ವಯಂವರ ಮಂಟಪದಲ್ಲಿ. ಅಣ್ಣ ದೃಷ್ಟದ್ಯುಮ್ನ ಆತನನ್ನು ತೋರಿಸಿದಾಗ ಅವಳಿಗುಂಟಾದ ಆ ಭಾವ ಮನದಲ್ಲಿ ರೋಮಾಂಚನವುಂಟು ಮಾಡುವಂಥದು.

> “ಎಸಲು ಭಕುತಿಯ ಭಾವ ರಸದಲಿ
> ನೆನೆದು ಹೊಂಪುಳಿಯೋಗಿ ರೋಮಾಂ
> ಚನದ ಮೈಯುಬ್ಬಿನಲಿ ತನು ಪುಳಕಾಂಬುಪೂರದಲಿ
> ಮನದೊಳಗೆ ವಂದಿಸಿದಳೆನಗೀ
> ತನಲಿ ಗುರು ಭಾವನೆಯ ಮತಿ ಸಂ
> ಜನಿಸಿತೇನಂದರಿಯೆನೆಂದಳು ಕಮಲಮುಖಿ ನಗುತ”

ಮುಂದೆ ಐವರು ಗಂಡಂದಿರನ್ನು ಪಡೆದರೂ ದುಷ್ಕರ ದಾಳಿ, ಅವಮಾನ ಅಪಹರಣಗಳಲ್ಲಿ ಬಳಲುತ್ತ ಬಡತನ, ಕಷ್ಟಗಳನ್ನು ಅನುಭವಿಸುವ ಅವಳ

ಬವಣೆಯನ್ನು ಕಂಡು ತನ್ನ ಹೃದಯ ಅವಳಿಗಾಗಿ ಹೇಗೆ ಕರಗಿ ಕೊರಗಿದೆ ಎಂಬುದನ್ನು ಕೃಷ್ಣನೇ ಹೇಳುತ್ತಾನೆ.

"ಕಮಲಮುಖಿ ಸುಲಿವಡೆದ ಲಕ್ಷ್ಮೀ
ರಮಣ ಲಕ್ಷ್ಮೀರಮಣ ಲಕ್ಷ್ಮೀ
ರಮಣಿಯಿಂದೊರಲಿದೊಡೆ ಸಂಜಯ ನೊಂದೆ ನಾನೆಂದ"

ಅತಿಯಾಗಿ ನವೆದ ಕಮಲಮುಖಿಯನ್ನು ಕೇಳಬಲ್ಲ ಗಂಡನೂ ಒಬ್ಬನಿದ್ದ: ಆತ ಭೀಮ. ಆದರೆ ಅವನೂ ಕೈಸೋತು ಕುಳಿತಾಗ ಅವಳನ್ನು ರಕ್ಷಿಸಲು, ಸಂತೈಸಲು ಕೃಷ್ಣನಿಗೆ ಮಾತ್ರ ಸಾಧ್ಯ. ಅಂಥ ಪ್ರಸಂಗದಲ್ಲಿ ಅವಳ ಆರ್ತಧ್ವನಿಯಲ್ಲಿ ಭಕ್ತಿರಸ ಧೋರ್ಗರೆಯುತ್ತದೆ.

"ಕಾವುದೈ ನೋವಿಂದ ಸಲಹೈ
ದೇವಕೀ ಸುತ ಗಂಡರೈವರ
ಭಾವ ಬಿಟ್ಟರು, ನೀನಲೈ ದೇಸಿಗರ ದೈವವಲೈ
ದೇವ ಕೆಟ್ಟೆನು, ಕೆಟ್ಟೆನೈ ಕರು
ಣಾವಲಂಬನದಿಂದ ಸಲಹೈ
ಜೀವನವನೆಂದೊರಲಿದಳು ತಂಗಿಗನು ತಾನೆಂದ"

ಪತಿವ್ರತೆಯಾದ ಪಾಂಚಾಲಿ ಈ ರೀತಿ ಪತಿಗಳನ್ನು ಅವಹೇಳನ ಮಾಡುತ್ತಿರುವುದರಲ್ಲಿ ಅನಿವಾರ್ಯತೆಯಿದೆ. ಅಷ್ಟೇ ಸಹಜತೆ ಇದೆ. ಅದು ಕೃಷ್ಣನಿಗೂ ಗೊತ್ತಿದೆ. 'ಒಲಿದವರನ್ನುಜ್ಜೀವಿಸುವ' ಬಗೆಯನ್ನು ಬಲ್ಲ ಆತನ ಮನ ತಂಗಿಯ ಭಕ್ತಿ ಭಾವದ ಹಂಗಿಗೊಳಗಾಗುತ್ತದೆ.

ಪಾಂಡವರ ವನವಾಸ, ಅಜ್ಞಾತವಾಸಗಳು ಕಳೆದು, ರಾಜ್ಯದ ಸಲುವಾಗಿ ಕೌರವರನ್ನು ಕೇಳಿದಾಗ 'ಸಂಗರದಲ್ಲಿ ಅಸಿಧಾರೆಯಲ್ಲಿ ರಾಜ್ಯವನ್ನು ಕೊಡಬೇಕೇ ಹೊರತು ಹಾಗೆಯೇ ಕೊಟ್ಟರೆ ಅಧರ್ಮವಾದೀತು' ಎಂದು ಸಂಜಯನೊಡನೆ ತನ್ನ ಸ್ಪಷ್ಟ ಅಭಿಪ್ರಾಯವನ್ನು ಹೇಳಿ ಕಳಿಸುತ್ತಾನೆ. ಪಾಂಡವರು ಈ ಬಗ್ಗೆ ಕೃಷ್ಣನ ಬಳಿಯಲ್ಲಿ ಮಂತ್ರಾಲೋಚನೆ ನಡೆಸುತ್ತಾರೆ. ಈಗ ಸಂಧಿಯೋ ಸಮರವೋ? ಎಂದು ಒಬ್ಬೊಬ್ಬ ಪಾಂಡವರನ್ನು ಕರೆದು ಕೃಷ್ಣ ಅವರ ಅಭಿಪ್ರಾಯವನ್ನು ಕೇಳುತ್ತಾನೆ. ಯುಧಿಷ್ಠಿರ 'ಸೋದರರೊಳಗೆ ಸೆಣಸಿ ಕಡಿದಾಡಿ ಬದುಕಿದರೆಂಬ' ಅಪಕೀರ್ತಿ ಬರುವದೆಂಬ ಅಳುಕಿನಿಂದ 'ಐದೂರುಗಳನ್ನು ಮಾತ್ರ ಕೊಟ್ಟರೆ ಸಾಕು' ಎಂದು ಸಂಧಿ ಮಾಡಿಕೊಳ್ಳುವ ತನ್ನ ಅಭೀಪ್ಸೆಯನ್ನು ಕೃಷ್ಣನೆದುರು ಬಿಚ್ಚಿಡುತ್ತಾನೆ. ಭೀಮ, ಅರ್ಜುನ, ನಕುಲರೆಲ್ಲ ಅಣ್ಣನನ್ನೇ ಅನುಸರಿಸುತ್ತಾರೆ. ಸಹದೇವ ಇದಕ್ಕೆ ಒಪ್ಪುವುದಿಲ್ಲ. ಅನಂತರ ದ್ರೌಪದಿಯ ಅಭಿಪ್ರಾಯವನ್ನು ತಿಳಿಯಲು ಅವಳಿಗೆ ಹೇಳಿಕಳಿಸಲಾಗುತ್ತದೆ.

ವಿಷಯ ಅರಿತ ಅವಳು ಕೋಪದಿಂದ ಕಿಡಿಕಿಡಿಯಾಗುತ್ತ 'ಪಾಪಿಗಳಾದ ಪತಿಗಳು ತನ್ನನ್ನು ಕೈಬಿಟ್ಟರು, ಹಿಂದೆ ಸಭೆಯಲ್ಲಿ ಹೆಂಡತಿಗಾದ ಅವಮಾನವನ್ನು ಮರೆತುಬಿಟ್ಟರು. ಪಾಂಡವರೆಲ್ಲರೂ ರೋಷಚ್ಯುತರು, ಎಲೆ ಸಮೀರಕುಮಾರ ಕಲಿತನವ ನೀರಲಿ ಕಲಕಿದೈ' ಎಂದು ಭೀಮನನ್ನು ಛೀಗುಟ್ಟುತ್ತ 'ಇನ್ನು ಕೃಷ್ಣನೂ ಇದಕ್ಕೆ ಒಪ್ಪಿಬಿಟ್ಟರೆ ನನ್ನ ದುಃಖಕ್ಕೆ ಪಾರವೇ ಇಲ್ಲ' ಎಂದುಕೊಂಡು 'ಎನ್ನಯುಮ್ಮಳವ ನೀನೆ ಬಲ್ಲೆ, ಹಿರಿದಾಗಳಲಿದೆನು, ಸಲಹೆನುತ' ಕಂಬನಿದುಂಬಿ ಆತನಲ್ಲಿ ಮೊರೆಯಿಡುತ್ತಾಳೆ.

ಕುಮಾರವ್ಯಾಸನ ಕೃಷ್ಣ ವ್ಯಾಸನ ಕೃಷ್ಣನಿಗಿಂತಲೂ ಪಾಂಡವರೊಂದಿಗೆ ನಿಕಟ ಸಂಬಂಧವಿಟ್ಟುಕೊಂಡಿದ್ದ. ಅವನು ಆಗಾಗ ಪಾಂಡವರ ಬಳಿ ಹೋಗಿ ಬರುತ್ತಿದ್ದ. ಹೀಗಾಗಿ ದ್ರೌಪದಿಗೂ ಕೂಡ ಕೃಷ್ಣನಲ್ಲಿ ತನ್ನ ದುಃಖದುಮ್ಮಾನಗಳನ್ನೂ ಹೇಳಿಕೊಳ್ಳುವಷ್ಟು ಹತ್ತಿರದ ಬಂಧುವಾಗಿದ್ದ. ಹಿಂದೆ ಸಭಾಪರ್ವದಲ್ಲಿ ಕೃಷ್ಣ ಅವಳ ಮಾನರಕ್ಷಣೆ ಮಾಡಿದ ಹಿನ್ನಲೆಯನ್ನು ನೆನೆದಾಗ ಅವಳಿಗೆ ಕೃಷ್ಣನಲ್ಲಿ ಬೆಳೆದ ವಿಶ್ವಾಸದ ಆಳದ ಅರಿವಾಗುತ್ತದೆ.

ಕೊನೆಗೆ ಕೃಷ್ಣನೇ ಸಂಧಿಗೋಸುಗ ದುರ್ಯೋಧನನ ಬಳಿಗೆ ಹೋಗಬೇಕೆಂದು ನಿಶ್ಚಯವಾಗುತ್ತದೆ. ಹೋಗುವ ಮುನ್ನ ಕೃಷ್ಣ ಕೃಷ್ಣೆಗಾಗಿ ಶಪಥ ಮಾಡುತ್ತಾನೆ; ಆಕೆಯ ಪತಿಗಳು ಹಿಂಜರಿದರೆ 'ರಿಪುಗಳ ಸೀಳಿ ಕರುಳ ಮುಡಿಸದಿಹೆನೆ ನಿನ್ನ ಕಬರಿಯಲಿ'? ಎಂದು. ಅದಕ್ಕೆ ತನ್ನ ತಾಯಿ-ತಂದೆಗಳ ಮೇಲೆ ಆಣೆಯಿಟ್ಟು ಭರವಸೆ ಕೊಡುತ್ತಾನೆ.

"ನಾವು ಸಂಧಿಯ ನೆವದಲವದಿರ
ಭಾವವನು ಕಲಿ ಮಾಡಿ ಕೋಪವ
ತೀವಿ ಸಂಧಿಯ ಮುರಿದು ಬಹೆವಿದ ನಂಬು ನೀನೆಂದ"

ಕೃಷ್ಣನ ಮಾತಿನ ಮೇಲೆ ಆತನ ಮನಸ್ಸನ್ನೂ ಪರೀಕ್ಷಿಸಿದರೆ ಅವನು ಯುದ್ಧವನ್ನೇ ನಡೆಯಿಸಬೇಕೆಂದು ತವಕಿಸುತ್ತಿದ್ದನೆಂಬುದು ಸ್ಪಷ್ಟವಾಗಿ ಕಾಣುತ್ತದೆ.

ಕೃಷ್ಣ ವ್ಯವಹಾರಕುಶಲನಾಗಿದ್ದ. ಕೌರವ-ಪಾಂಡವ ಎರಡೂ ಪಕ್ಷಗಳು ತನ್ನ ಸಹಾಯವನ್ನು ಬೇಡಲು ಬಂದಾಗ ಇಬ್ಬರನ್ನೂ ಒಳ್ಳೆಯ ವಿನಯ ಭಾವಗಳಿಂದ ಕಾಣುತ್ತಾನೆ. ಭಗವಂತನೇ ಗೀತೆಯಲ್ಲಿ ಹೀಗೆ ಹೇಳುತ್ತಾನೆ; 'ಎಲ್ಲ ಜೀವಿಗಳನ್ನು ನಾನು ಸಮಾನವಾಗಿ ಭಾವಿಸುತ್ತೇನೆ. ಯಾರೂ ನನಗೆ ದ್ವೇಷಪಾತ್ರರಲ್ಲ. ಯಾರೂ ಪ್ರೀತಿ ಪಾತ್ರರಲ್ಲ. ಆದರೆ ಯಾರು ಭಕ್ತಿಯಿಂದ ನನ್ನನ್ನು ಪೂಜಿಸುವರೋ ಅವರು ನನ್ನಲ್ಲಿರುತ್ತಾರೆ. ಮತ್ತು ನಾನು ಕೂಡ ಅವರಲ್ಲಿರುತ್ತೇನೆ' ಅಂತೆಯೆ 'ಘನತೆಯ ಮೇಲೆ ಘನತೆಯೆಂಬುದನತ್ತ ಬೇಜಾರಿಸಿ ಕಾಲಿಗೆಜಗುವೆನಾ ಯುಧಿಷ್ಠಿರನೆಳಲೊಡನೇಳುವನು' ಆ ಕೃಷ್ಣ. ಕೌರವನಾತ್ರ ಕೃಷ್ಣನ ಬುದ್ಧಿಮಾತಿಗೆ ಕಿವಿಗೊಡಲಿಲ್ಲ.

ಧರ್ಮ ಸಂಸ್ಥಾಪನೆಯ ಸಲುವಾಗಿ ಯುಗಯುಗಗಳಲ್ಲಿ ಅವತಾರ ತಾಳುವೆನೆಂದು ಭಗವದ್ಗೀತೆಯಲ್ಲಿ ಹೇಳಿದಂತೆ 'ಭಾರ ಹೆಚ್ಚಿದೊಡೋಲಿ ಭೂಪಿನಾಂಬಿನ್ನಹ' ಮಾಡಲು ಕೃಷ್ಣನು ಭೂಲೋಕದಲ್ಲಿ ಮನುಜಾಕಾರದಲಿ ಅವತಾರ ಮಾಡಿದನು. ದುಷ್ಟ ನಿಗ್ರಹ, ಶಿಷ್ಟಪರಿಪಾಲನೆಯನ್ನು ಕರ್ತವ್ಯವಾಗಿಟ್ಟುಕೊಂಡು, ಅಧರ್ಮ ಮಾರ್ಗದಲ್ಲಿ ನಡೆವವರನ್ನು ನಿಗ್ರಹಿಸುವುದರಲ್ಲಿಯೇ ಅತ ತನ್ನ ಜೀವಿತದ ಬಹುಭಾಗವನ್ನು ಕಳೆದ.

ಶ್ರೀ ಕೃಷ್ಣನ ಪಾತ್ರವು ವ್ಯಾಸಭಾರತದಲ್ಲಿ ಮತ್ತು ಅವತಾರ ಮಹಿಮೆಯಿಂದ ಮಾನವೀಯ ಗುಣಗಳನ್ನು ಎತ್ತಿ ತೋರಿಸುವ ಭಾಗವತದಲ್ಲಿ ಅತ್ಯಂತ ಉನ್ನತ ಮಟ್ಟದ ರಚನೆಯಾಗಿದೆ. ಭಾಗವತದ ಕೃಷ್ಣನ ವ್ಯಕ್ತಿತ್ವಕ್ಕೂ ಕುಮಾರವ್ಯಾಸನ ಕೃಷ್ಣನ ವ್ಯಕ್ತಿತ್ವಕ್ಕೂ ಹೆಚ್ಚು ಹೋಲಿಕೆ ಕಂಡುಬರುತ್ತದೆ. ಮಹಾಭಾರತದ ಕೃಷ್ಣ ಬದುಕಿದ್ದಾಗಲೇ ತನ್ನ ಅಗಾಧ ಶಕ್ತಿಯಿಂದ ಮಹಾಮಹಿಮೆಯನ್ನು ಸಾರಿ ದೇವತ್ವವನ್ನು ಪಡೆದವನು. ಕುಮಾರವ್ಯಾಸ ವಿವಿಧ ಪಾತ್ರಗಳ ಮೂಲಕವೂ ಶ್ರೀ ಕೃಷ್ಣ ಮಹಿಮೆ, ಅವತಾರ ಲೀಲೆಗಳನ್ನು ಬಗೆಬಗೆಯಾಗಿ ಬಣ್ಣಿಸಿದ್ದಾನೆ. ಈ ಕೃಷ್ಣ ಪಾತ್ರ ರಚನೆಯಲ್ಲಿ ಅದ್ಭುತ ಕೌಶಲವನ್ನು ತೋರಿದ್ದಾನೆ. ಇವನ ಕೃಷ್ಣ ಭಾರತ ಪ್ರೇರಕ. ಸರ್ವಗತ, ದೇವಮಾನವ. ಕುಮಾರವ್ಯಾಸ ವ್ಯಾಸಭಾರತ, ಪಂಪಭಾರತಗಳಿಂದ ಪ್ರಭಾವಿತನಾಗಿದ್ದರೂ ಇಲ್ಲಿಯ ಕೃಷ್ಣನ ರಚನೆಯ ರೀತಿಯೇ ವಿಶಿಷ್ಟವಾದುದು,

ಸಂಧಿಗಾಗಿ ಹಸ್ತಿನಾವತಿಗೆ ಬಂದ ಕೃಷ್ಣನನ್ನು ಸ್ವಾಗತಿಸಲು ಸ್ವತಃ ದುರ್ಯೋಧನ ಶಕುನಿಗಳು ವಿಧುರನ ಮನೆಗೆ ಬರುತ್ತಾರೆ ಸಂಸ್ಕೃತ ಭಾರತದಲ್ಲಿ ಪಂಪನ ದುರ್ಯೋಧನ ಪರಿಸರದ ಪ್ರಭಾವದಿಂದ ಕೃಷ್ಣನನ್ನ ಸಭೆಯಲ್ಲಿ ಸನ್ಮಾನಿಸುತ್ತಾನೆ. ಆದರೆ ಕುಮಾರವ್ಯಾಸ ತನ್ನ ಕಾಲ, ಪರಿಸರ, ಪ್ರತಿಭೆಗೆ ತಕ್ಕಂತೆ ಈ ಸನ್ನಿವೇಶವನ್ನು ಸಂಪೂರ್ಣ ಬದಲಿಸಿರುತ್ತಾನೆ. ಕೃಷ್ಣ ಸಭೆಗೆ ಕಾಲಿಡುತ್ತಲೆ ಹಿರಿಯರೆಲ್ಲ ಗೌರವ ಸಲ್ಲಿಸುತ್ತಾರೆ. ಆದರೆ ಗರ್ವದಿಂದ ದುರ್ಯೋಧನ ಸಿಂಹಾಸನವನ್ನು ಬಿಟ್ಟು ಮೇಲೇಳಲೇ ಇಲ್ಲ. ಇದನ್ನು ಕಂಡ ಕೃಷ್ಣ ತನ್ನ ಉಂಗುಷ್ಟದ ತುದಿಯಿಂದ ನೆಲಕ್ಕೆ ಒತ್ತಲು 'ಮಣಿಖಚಿತ ಕಾಂಚನದಪೀಠದ ಗೋಣಸು ಮುರಿದುದು ಕೆಡೆದು ಬಿದ್ದನು ಧರಣಿಯ ತರಣದಲಿ'. ಶ್ರೀ ಕೃಷ್ಣ ಮಹಿಮೆ ಎಂಥ ಅದ್ಭುತವಾದುದು ಎಂಬುದನ್ನು ತೋರ್ಪಡಿಸಲು ನಾರಣಪ್ಪ 'ಭಾಸನ ದೂತವಾಕ್ಯ' ಏಕಾಂಕ ನಾಟಕದ ಆಧಾರವನ್ನು ಪಡೆದುಕೊಂಡಿರಬಹುದು.

ಪಾಂಡವರ ದೂತನಾಗಿ ಬಂದ ಕೃಷ್ಣ ಕೌರವನಿಂದ [illegible], ಗೋಪೀಜಾರ, ಕೈತವದ ಶಿಕ್ಷಾಗುರು, ಜಾರೆಯ ಮಕ್ಕಳ [illegible] ಅನೇಕ ಬಿರು

ನುಡಿಗಳನ್ನು ಕೇಳಬೇಕಾಯಿತು. ಸಂಧಿಯೂ ಮುರಿದು ಬೀಳುತ್ತದೆ. ಆದರೆ ಈ ಅವಮಾನವನ್ನು ಆತ ಏಕೆ ಸಹಿಸಿದ? ತನ್ನ ಭಕ್ತರಿಗಾಗಿ. 'ಬಂಟರಾವ್ ಭಕ್ತರಿಗೆ ನೆನೆವರು ನೆಂಟರು' ಎಂದು ತಾನೇ ಸ್ವತಃ ಹೇಳುತ್ತಾನೆ ಕೃಷ್ಣ. ಹಾಗೆ, ಅಂದಂತೆ ಭಜಕರ ಬೆಂಬಳಿಯಲ್ಲಿ ನಿಂತ ಅವನು ಅಂದು ಪ್ರೀತಿಯ ತಂಗಿ ದ್ರೌಪದಿಗೆ

"ಕಾಳಗವನೇ ಬಲಿದು ಬಹೆನಿವ
ರೇಳಿಲವ ಮಾಡಿದರೆ ರಿಪುಗಳ
ಸೀಳಿ ಕರುಳನು ಮುಡಿಸದಿಹನೇ ನಿನ್ನ ಕಬರಿಯಲಿ"

ಎಂದು ಕೊಟ್ಟ ಭಾಷೆಯನ್ನು ಸಾರ್ಥಕಗೊಳಿಸಿದನು.

ಶ್ರೀ ಕೃಷ್ಣ ಎಳೆ ವಯಸ್ಸಿನಲ್ಲಿಯೇ ಮಹಾನ್ ಶಕ್ತಿ ಸಂಪನ್ನನಾಗಿದ್ದ. ಅವನ ಮಾನವ ದೇಹದಲ್ಲಿ ಪರಮ ಪುರುಷನಾದ ಭಗವಂತನ ಆವಿರ್ಭಾವವಾಗಿತ್ತು. ಅಂತೆಯೆ ಮಹಾಭಾರತ ಅವನ ಸಂಕಲ್ಪದಿಂದಲೇ ಘಟಿಸಿತು ಎನ್ನಲಾಗುತ್ತದೆ. ಬೇರೆ ಬೇರೆ ಪಾತ್ರಗಳ ಮೂಲಕ ತನ್ನ ಪರಿಕಲ್ಪನೆಗನುಸಾರ ಆತ ಕಾರ್ಯಮಾಡಿದನು. ಅವನು ಧರ್ಮರಾಜ್ಯವನ್ನು ಸ್ಥಾಪಿಸ ಬಯಸಿದ್ದ. ಅದಕ್ಕಾಗಿ ಧರ್ಮವನ್ನು ಆಧರಿಸಿ ಮಹಾಭಾರತವನ್ನು ನಿರ್ಮಿಸಿದ. ಶಕ್ತಿ ಸಂಚಯ ಮತ್ತು ಅದರ ಸದುಪಯೋಗ ಇವೆರಡರ ಕಡೆಗೆ ಆತ ಗಮನಕೊಟ್ಟ. ಈ ಪ್ರಪಂಚ ಪ್ರವಾಹವು ಅನೇಕ ಒಳ್ಳೆಯ-ಕೆಟ್ಟ, ಪರಸ್ಪರ ಸಂಘರ್ಷದಿಂದ ತುಂಬಿಕೊಂಡು ಹರಿಯುತ್ತಿರುತ್ತದೆ. ಆಗ ಎಷ್ಟೋ ಸಾಧು ಸ್ವಭಾವದ ಜನರು ಒಮ್ಮೊಮ್ಮೆ ಅಪಾರ ಕಷ್ಟ ನಷ್ಟ-ಸಂಕಟಗೊಳಗಾಗುತ್ತಾರೆ. ಅನಾಚಾರ-ಅತ್ಯಾಚಾರಗಳು ಹಾಗೆಯೇ ಮುಂದುವರಿದರೆ ಒಳ್ಳೆಯ ಜನರ ಸಂಖ್ಯೆ ಕ್ಷೀಣಿಸುತ್ತ ಹೋಗಿ ಪಾಪಿಗಳಿಂದಲೇ ಸಮಾಜ ತುಂಬಿಕೊಳ್ಳಬಹುದು. ಅನಂತರ ಧರ್ಮ-ಅಧರ್ಮಗಳಲ್ಲಿ ವ್ಯತ್ಯಾಸವೇ ಕಾಣದಾಗುವದು. ಇದು ಧರ್ಮಗ್ಲಾನಿಯ ಅವಸ್ಥೆ. ಅಂಥ ಕಾಲದಲ್ಲಿ ಮಹಾತ್ಮರು ಜನ್ಮ ತಾಳಿ ವಿಶೇಷ ಶಕ್ತಿಯಿಂದ ಒಟ್ಟಾರೆ ಅಸುರೀ ಶಕ್ತಿಯನ್ನು ಹಿಡಿತದಲ್ಲಿಡಲು ಹೆಣಗಬೇಕಾಗುತ್ತದೆ.

ಶ್ರೀ ಕೃಷ್ಣ ದುಷ್ಟರ ನಾಶಕ್ಕಾಗಿ ನಾನಾ ತಂತ್ರಗಳನ್ನು ಯೋಜಿಸಿದ. ಸತ್ಯವಂತರಿಗೆ ಜಯ ದೊರಕುವಂತೆ ಮಾಡಿದ. 'ಎಲ್ಲಿ ನಿರ್ಮಲ ಪ್ರೇಮವಿದೆಯೋ ಅಲ್ಲಿ ಭಗವಂತನ ಇರುವು' ಎಂಬುದು ಅವನ ನಿಲುವಾಗಿತ್ತು ಮಹಾಭಾರತದ ಯುದ್ಧದಲ್ಲಿ ಕೌರವರ ವಿನಾಶವೇ ಮುಖ್ಯ ಉದ್ದೇಶವಾಗಿದೆ. ಈ ರೀತಿಯ ಕೃಷ್ಣನ ಕಾಳಗದ ಉದ್ದೇಶ ಸಾಮಾನ್ಯ ನೀತಿ ಸಮ್ಮತವಲ್ಲ. ಆದರೆ ಕೃಷ್ಣನೆಂದೂ ನೀತಿ ಧರ್ಮದ ಮೂಲ ತತ್ವಗಳನ್ನು ಉಲ್ಲಂಘಿಸಿಲ್ಲ. ಅವನು ಅನ್ಯಾಯದ ಶಾಂತಿಗಿಂತ ಭವಿಷ್ಯ ಹಿತದ ದೃಷ್ಟಿಯಿಂದ ನ್ಯಾಯಸಮ್ಮತವಾದ ಯುದ್ಧವೇ ಒಳ್ಳೆಯದೆಂದು ಬಗೆದು ಸಂಧಿಗಿಂತ ಸಮರವನ್ನೇ ಆಯ್ದುಕೊಂಡ.

ಉಚ್ಚಶಿಕ್ಷಣದಲ್ಲಿ ಕನ್ನಡ

● ಎಸ್.ಎಂ. ವೃಷಭೇಂದ್ರಸ್ವಾಮಿ

ಕನ್ನಡ ಕರ್ನಾಟಕದಲ್ಲಿರುವವರ ರಾಜ್ಯಭಾಷೆ, ಅದು ಬಹುಜನರ ಮಾತೃಭಾಷೆ. ಮಾತೃಭಾಷೆಯಾಗಿ ಅದು ಸಂಸ್ಕೃತಿ ಸಂವಹನದ ಸಾಧನ, ಹಾಗೆಯೇ ಅದು ಕನ್ನಡಿಗರ ನಿತ್ಯವ್ಯವಹಾರದ ಸಂಪರ್ಕಭಾಷೆಯೂ ಅಹುದು. ಇದು, ಕರ್ನಾಟಕದಲ್ಲಿ ಹುಟ್ಟಿ, ಕನ್ನಡ ನುಡಿಯಲ್ಲಿ ವ್ಯವಹರಿಸಿ, ಕನ್ನಡಿಗನಾಗಿ ಬದುಕುವ ಬಹು ಸಂಖ್ಯಾತ ಜನರ ಆವಶ್ಯಕತೆ: ಪ್ರಾದೇಶಿಕ ಭಾಷಾ ರಾಜ್ಯಗಳನ್ನು ಒಪ್ಪಿಕೊಂಡ ಭಾರತದ ಬಹುಸಂಖ್ಯಾತ ಜನರ ಬೇಡಿಕೆ, ಉದ್ದೇಶ, ಗುರಿ. ತಮ್ಮದೇ ಆದ ಭಾಷೆಯ ಮೂಲಕ, ತಮ್ಮ ಜೀವನ ವ್ಯವಹಾರವನ್ನು ನೆರವೇರಿಸಿ, ತಮ್ಮ ಜನರೊಡನೆಯೇ ಬದುಕಿ-ಬಾಳಿ, ಜೀವನ ಮುಗಿಸುವ ಅನಿವಾರ್ಯ ಗುರಿ ಹೊಂದಿದ, 'ಬಹುಜನ ಸಮಾಜಕ್ಕೆ' ತಮ್ಮ ರಾಜ್ಯವೇ ಮನೆ, ತಮ್ಮ ತಾಯ್ನುಡಿಯೇ ಸಂಪರ್ಕಮಾಧ್ಯಮ, ತಮ್ಮ ಸಂಸ್ಕೃತಿಯೇ ಅವರಿಗೆ ಸರ್ವಸ್ವ. ಆದರೂ ಅವರಲ್ಲಿ ಕೆಲವರಿಗಾದರೂ, ಹೊರರಾಜ್ಯಗಳು ಹೊರದೇಶಗಳು, ಹೊರ ಜನಾಂಗದ ರೀತಿ-ನೀತಿ, ತಿಳುವಳಿಕೆ ಆವಶ್ಯಕ. ಆಧುನಿಕಯುಗದ ಜೀವನ ಪರಿಸರದಲ್ಲಿ ಈ ನಾಗರಿಕ ಸಂಪರ್ಕದ ಅನಿವಾರ್ಯತೆ ಇನ್ನೂ ವಿಶೇಷವಾಗಿದೆ. ಕಾರಣ, ಕನ್ನಡಿಗರ ಒಟ್ಟಿನ ಆವಶ್ಯಕತೆ ಮುಖ್ಯವಾಗಿ (೧) ಬಹುಜನ ಸಮಾಜಕ್ಕೆ ತಮ್ಮ ಭಾಷೆ, ಸಂಸ್ಕೃತಿ, ವ್ಯವಹಾರಗಳ ನಿರ್ವಹಣೆ (೨) ಹಾಗೂ ಕೆಲಜನ ಸಮಾಜಕ್ಕೆ ಪರಜನ, ಭಾಷೆ, ತಿಳುವಳಿಕೆಗಳ ಪ್ರಯೋಜನ ಪಡೆಯುವಿಕೆ. ಕನ್ನಡಿಗ, ಪ್ರಥಮತ: 'ಕನ್ನಡಿ'ಗ ನಾಗಿ, ನಂತರ 'ಭಾರತೀಯ' ನಾಗಿ ಬಾಳಲೇಬೇಕು. ಸಾಧ್ಯವಾದರೆ. ಪರದೇಶ, ಜನಾಂಗ, ಭಾಷೆ, ಸಂಸ್ಕೃತಿ, ಜ್ಞಾನಗಳ ಪರಿಚಯ ಪಡೆದು ತನ್ನ ಬಾಳನ್ನು ಇನ್ನಷ್ಟು ವಿಸ್ತರಿಸಿಕೊಳ್ಳುವುದು, ಜೀವನ ಸೌಕರ್ಯಗಳನ್ನು ಸುಧಾರಿಸಿಕೊಳ್ಳುವುದು ಸಾಧ್ಯವಾಗಬೇಕು. ಕಾರಣ, ಕನ್ನಡದ ಬಹುಜನ ಸಮಾಜವೆಲ್ಲ "ವಿಶ್ವಮಾನವ" ರಾಗಬೇಕೆಂಬುದು ಬಹುದೂರದ, ಅವ್ಯವಹಾರಿಕ ಆದರ್ಶ. ಅವರೆಲ್ಲ ಸುಸಂಸ್ಕೃತ ಕನ್ನಡಿಗರಾಗಿ ಬಾಳಿ, ಆಧುನಿಕ ಜೀವನ ವ್ಯವಹಾರ ನಡೆಯಿಸಿದರೆ ಸಾಕೆಂಬುದು ಇಂದಿನ ಸಾರ್ಥಕ ಗುರಿ. ಅಂದರೆ ಇದು ವಿಸ್ತರಿಸುತ್ತಿರುವ ವಿಶ್ವಪ್ರಜ್ಞೆಯ ಪ್ರಗತಿ ವಿರೋಧಿ ನಿಲುವೆಂಬ ಅಪ

ವ್ಯಾಖ್ಯಾನ ಬೇಡ. ಬಹುಜನ ಸಮಾಜದ, ದಿನ-ಸಾಮಾನ್ಯ ಬದುಕಿನ, ತೃಪ್ತಿಯಬದುಕಿನ ನಿರ್ದೇಶನ ಮಾತ್ರ ಇಲ್ಲಿದೆ. ಈ ಮೂಲಭೂತವಾದ ತಿಳುವಳಿಕೆ, ನಮ್ಮ ಇಂದಿನ ಶಿಕ್ಷಣ ಹಾಗೂ ಜೀವನ ದೃಷ್ಟಿಗೆ ಸಾರ್ಥಕ ನೆಲೆಗಟನ್ನು ಒದಗಿಸುವುದು ಎಂದು ನಂಬಿದ್ದೇನೆ.

ಈ ಹಿನ್ನೆಲೆಯಲ್ಲಿ, ಕನ್ನಡಭಾಷೆ, ಪ್ರಥಮತಃ ಕನ್ನಡಿಗರ ಸಂಸ್ಕೃತಿ ಸಂವಹನದ, ಸಂಪರ್ಕಮಾಧ್ಯಮದ ಭಾಷೆ. ಈ ಭಾಷೆಯ ಮೂಲಕವೇ ನಮ್ಮ ಜನರಿಗೆ ಶಿಕ್ಷಣ ಸಂಸ್ಕಾರ ದೊರೆಯಬೇಕು; ಜೀವನ ವ್ಯವಹಾರ ನಡೆಯಬೇಕು. ಈ ಗುರಿಗಳ ಸಾಧನೆಗೆ ನಮ್ಮ ಇಂದಿನ ಉನ್ನತ ಶಿಕ್ಷಣ (= ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಶಿಕ್ಷಣ) ಎಷ್ಟರಮಟ್ಟಿಗೆ ನೆರವಾಗಿದೆ? ಅದರ ಸಾಧಕ-ಬಾಧಕಗಳೇನು ? ಈ ದಿಕ್ಕಿನಲ್ಲಿ ನಾವು ಚಿಂತಿಸಬಹುದಾದ ಸಂಗತಿಗಳಾವುವು? ಕೈಕೊಳ್ಳಬಹುದಾದ ಉಪಕ್ರಮಗಳಾವುವು ? ಮುಂತಾದ ಅಂಶಗಳನ್ನು ಸ್ಥೂಲವಾಗಿ, ಸಮೀಕ್ಷಿಸಿ, ಪರೀಕ್ಷಿಸಿ, ಕೆಲವಾದರೂ ವ್ಯಾವಹಾರಿಕ ಮೌಲ್ಯಗಳನ್ನು ಗುರುತಿಸುವ ಪ್ರಯತ್ನ ಮಾಡಬೇಕಾದುದು ಇಂದಿನ ಆವಶ್ಯಕತೆ.

ಶಿಕ್ಷಣ ಕ್ಷೇತ್ರದಲ್ಲಿ ಭಾಷೆ ಬಳಕೆಯಾಗುವುದು ಇಬ್ಬಗೆಯಾಗಿ. (೧) ಜ್ಞಾನಪ್ರದಾಯಿನಿಯಾದ ಮಾಧ್ಯಮವಾಗಿ ಮತ್ತು (೨) ಜ್ಞಾನ ಸಂಗೋಪನ ನಿಧಿಯಾಗಿ. ಕನ್ನಡವೇ-ಅಂದರೆ ಪ್ರಾದೇಶಿಕ ಭಾಷೆಯೇ-ಶಿಕ್ಷಣದ ಎಲ್ಲ ಹಂತಗಳ ಪ್ರಾಥಮಿಕ ಮಾಧ್ಯಮಿಕ ಹಾಗೂ ಉಚ್ಚ ಶಿಕ್ಷಣದಲ್ಲಿ ಬಳಕೆಯಾಗಬೇಕು. ಅದರಿಂದಲೇ ಶಿಕ್ಷಣದ ಸಾರ್ಥಕತೆ ಎಂಬುದನ್ನು ಎಲ್ಲ ಶಿಕ್ಷಣ ತಜ್ಞರು, ಆಡಳಿತಾಧಿಕಾರಿಗಳು, ರಾಜಕಾರಣಿಗಳು ಒಪ್ಪಿಕೊಂಡಿರುವರು. ಅದರ ಅನುಷ್ಠಾನಕ್ಕೆ ಅನೇಕ ಪ್ರಯತ್ನಗಳು ನಡೆದಿವೆ. ನಮ್ಮ ಶಿಕ್ಷಣದ ಕೆಳಗಿನ ಎರಡು ಹಂತಗಳಲ್ಲಿ ಇದನ್ನು ಬಹುಮಟ್ಟಿಗೆ ಸಾಧ್ಯವಾಗಿಸಲಾಗಿದೆ, ಸಮರ್ಪಕವಾಗಿಲ್ಲದಿದ್ದರೂ, ಕನ್ನಡ ಬಹುಜನ ಸಮಾಜದ ಮಕ್ಕಳು, ಕನ್ನಡಮಾಧ್ಯಮದಲ್ಲಿಯೇ ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ, ಕಾಲೇಜು ಶಿಕ್ಷಣಕ್ಕೆ ಬಂದಕೂಡಲೇ ಈ ಮಾಧ್ಯಮ, ಪರಭಾಷೆಯದಾಗಿದೆ. ಈ ವಿರಸಕಂದರದಲ್ಲಿ ಬಿದ್ದ ಬಹುಸಂಖ್ಯೆಯ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಇತ್ತ ಜ್ಞಾನವನ್ನೂ, ಸಂಪಾದಿಸಲಾರದೆ, ಅತ್ತ ಜೀವನ ವ್ಯವಹಾರವನ್ನೂ ನಡೆಯಿಸಲಾರದೆ, ಅಡಬಿಡಂಗಿಗಳಾಗಿರುವರು. ಅವರ ಜ್ಞಾನ ಮಟ್ಟದ, ಗುಣಮಟ್ಟದ ಸಮಸ್ಯೆಗೆ ಕಾರಣಗಳು ಅನೇಕವಿದ್ದರೂ, ಮುಖ್ಯವಾಗಿ, ಪರಭಾಷಾಮಾಧ್ಯಮ ಅವರನ್ನು ಬಹುಶಃ

'ಅನಾಥ' ಗೊಳಿಸುತ್ತಿದೆ; ಅಪ್ರಬುದ್ಧರನ್ನಾಗಿ, ನಿರ್ವೀರ್ಯರನ್ನಾಗಿ ಮಾಡುತ್ತಿದೆ. ನಮ್ಮ ಉನ್ನತ ಶಿಕ್ಷಣದ ಬಹುಮಟ್ಟಿನ ಸೋಲುವಿಕೆಗೆ, ತನ್ನ ಸ್ವಭಾಷೆಯಲ್ಲದ, ಪರಸಂಸ್ಕೃತಿಯ ಭಾಷೆಯ ಮಾಧ್ಯಮವೇ ಪ್ರಮುಖಕಾರಣ. ಕೆಲವು ಮಟ್ಟಗೆ, ಗ್ರಾಮೀಣ ಶಾಲೆ, ಕಾಲೇಜುಗಳಲ್ಲಿ ಕನ್ನಡ ಮಧ್ಯಮ ಈಗ ಬಳಕೆಯಾಗುತ್ತಿದೆ; ಕೆಲಮಟ್ಟಿನ ಪ್ರಯೋಜನವೂ ಆಗಿವೆ. ಆದರೆ, ಕನ್ನಡ ಮಾಧ್ಯಮದ ಗುಣ-ಮಟ್ಟ ಇನ್ನೂ ಸುಧಾರಿಸಬೇಕಾಗಿದೆ. ಆ ಬಗೆಗೆ ಇರುವ ಕಾಲ್ತೊಡಕುಗಳನ್ನು ನಿವಾರಿಸಬೇಕು. ಇಂಗ್ಲೀಷಿನ ಮೂಲಕ ಕಲಿತು ಅದರಲ್ಲಿಯೇ ಬೋಧಿಸಿ, ಹಲವಾಟವನಾಡಿಕೊಂಡಿರುವ ಅಧ್ಯಾಪಕರ ಬೋಧನ ರೀತಿ ಹಾಗೂ ವಿಷಯ ಸಂಗ್ರಹದಲ್ಲಿ ಬದಲಾವಣೆಯಾಗುವುದಕ್ಕೆ ಸಾಧಕವಾದ ಕ್ರಮಗಳು ಈಗ ಅವಶ್ಯಕವಾಗಿವೆ.

ಸ್ನಾತಕೋತ್ತರ ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಇನ್ನೂ ದೂರದ ಕನಸು. ಹಂತ-ಹಂತವಾಗಿ ಪ್ರಾದೇಶಿಕ ಮಾಧ್ಯಮವನ್ನು ಬಳಕೆಗೆ ತರಬೇಕೆಂಬ ಪಾರ್ಲಿಮೆಂಟಿನ ನಿರ್ಣಯ (೧೯೬೮) ವಿದ್ದರೂ, ಆ ದಿಸೆಯ ಪ್ರಯತ್ನಗಳು ನಡೆದಿದ್ದರೂ, ಕಾಲೇಜು ಮಟ್ಟದಕಾರ್ಯ, ಕ್ರಿಯಾಶೀಲವಾಗಿಲ್ಲದ್ದರಿಂದ, ಈ ಕಂದಕ ನಿರ್ಮಾಣವಾಗಿದೆ. ಈ ಉನ್ನತ ಮಟ್ಟದಲ್ಲಿ ಕನ್ನಡ ಮಾಧ್ಯಮ ಸಾಧ್ಯವಾಗದಿರುವುದಕ್ಕೆ ಮುಖ್ಯ ಕಾರಣಗಳಲ್ಲಿ ಕೆಲವನ್ನು ಗುರುತಿಸ ಬಹುದು. (೧) ಈ ಮಟ್ಟದಲ್ಲಿ ಶಿಕ್ಷಣ ಮಾಧ್ಯಮವಾಗಬಲ್ಲ ಶಕ್ತಿ-ಮುಖ್ಯವಾಗಿ ವಿಜ್ಞಾನ ಬೋಧನೆ - ಸಂಶೋಧನೆ - ಪ್ರಾದೇಶಿಕ ಭಾಷೆಗೆ ಬರದಿರುವುದು. (೨) ಈ ಬಗೆಗೆ ನಿರಾಸಕ್ತಿತೋರುವ ಅಧ್ಯಾಪಕವರ್ಗ (೩) ಉದ್ಯೋಗಾವಕಾಶಗಳಿಗೆ, ಮುಂದಿನ ಸಂಶೋಧನೆ ಸಂಪರ್ಕಕ್ಕೆ, ಕನ್ನಡ ಮಾಧ್ಯಮ ಅಡ್ಡಗಾಲಾಗುವುದೆಂಬ ಭಯ, (೪) ತಾಂತ್ರಿಕ ಪದಕೋಶಗಳ ಅಸಮರ್ಪಕತೆ,-ಕೊರತೆ- (೫) ಡಿಗ್ರಿ ಹಾಗೂ ಅದಕ್ಕಿಂತ ಕೆಳ ತರಗತಿಗಳಲ್ಲಿ ಬಳಕೆಯಾಗುವ ಪದಕೋಶಕ್ಕೂ-ಸ್ನಾತಕೋತ್ತರ ಬಳಕೆಗೆ ಬೇಕಾದ ತಾಂತ್ರಿಕ ಪದಕೋಶಗಳಿಗಿಲ್ಲದಿರುವ ನಿಕಟ ಬಾಂಧವ್ಯದ ಕೊರತೆ. (೬) ಕನ್ನಡ ಮಾಧ್ಯಮದತ್ತ ವಿದ್ಯಾರ್ಥಿಗಳ ಒಲವು ಮೂಡದಿರುವಿಕೆ (೭) ಹಾಗೂ ಇಂಗ್ಲೀಷ ಮಾಧ್ಯಮದ ಬಗೆಗಿನ ಪರಂಪರಾಗತ ಪ್ರೇಮ (೮) ಉನ್ನತ ಸಂಶೋಧನೆ-ಹಾಗೂ ಉನ್ನತ ಮಟ್ಟದ ಉದ್ಯೋಗಾವಕಾಶ ನಷ್ಟವಾಗುವಿಕೆ- ಮುಂತಾದವುಗಳನ್ನು ಗುರುತಿಸಬಹುದು. ಈ ಪ್ರಶ್ನೆಗಳಿಗೆ ಸಮರ್ಥವಾದ ಉತ್ತರ ನೀಡಬಲ್ಲ ಪರಿಸ್ಥಿತಿ ನಿರ್ಮಾಣವಾಗುವವರೆಗೆ, ಈ ಮಾಧ್ಯಮದ ಸಮಸ್ಯೆ ಬಗೆ ಹರಿಯುವುದಿಲ್ಲ.

ಉನ್ನತ ಮಟ್ಟದ ಶಿಕ್ಷಣದಲ್ಲಿ ಕನ್ನಡಭಾಷೆ ಮಾಧ್ಯಮವಾಗಿ ಬಳಕೆಗೆ ಬರಲು, ಇರುವ ಕೊರತೆಗಳನ್ನು ಸೂಕ್ತರೀತಿಯಲ್ಲಿ ತುಂಬುವ ಪ್ರಯತ್ನ

ನಡೆಯಬೇಕು. ಭಾಷೆಯ ಸಂಪತ್ತನ್ನು ಬೆಳೆಯಿಸುವ, ಭಾಷೆಯನ್ನು ಕಷ್ಟಪಟ್ಟಾದರೂ– ಅಳವಡಿಸುತ್ತೇವೆಂಬ ವಿದ್ಯಾರ್ಥಿ–ಪ್ರಾಧ್ಯಾಪಕರ ಮಾನಸಿಕ ನಿರ್ಣಯ ಈಗ ಬೇಕು. ಸಂಶೋಧನೆ–ನೌಕರಿ ಮುಂತಾದ ಕ್ಷೇತ್ರದ ಅವಕಾಶಗಳು ದೇಶಿಯ ಮಾಧ್ಯಮದಲ್ಲಿ ಕಲಿತವರಿಗೆ ವಿಶೇಷವಾಗಿ ತೆರವಾಗಿಡುವ ವ್ಯವಸ್ಥೆಯೂ ಅವಶ್ಯಕವಾಗಿದೆ. ಶಿಕ್ಷಕರಿಗೆ ತರಬೇತಿ, ಸಂಬಂಧಿಸಿದ ಪುಸ್ತಕ ಶಬ್ದಕೋಶ– ಸಾಹಿತ್ಯದ ಸರಬರಾಜು, ಮಾಧ್ಯಮದ ಬಳಕೆಮಾಡುವ ಸಂಸ್ಥೆಗಳಿಗೆ ವಿಶೇಷ ಪ್ರೋತ್ಸಾಹ, ವಿದ್ಯಾರ್ಥಿ ಹಾಗೂ ಶಿಕ್ಷಕರಿಗೆ ಹೆಚ್ಚಿನ ಸವಲತ್ತು ಹಾಗೂ ಪ್ರೇರಣೆಯ ಅವಕಾಶ–ಮುಂತಾದವುಗಳತ್ತ ಸಂಬಂಧಿಸಿದವರು ನಿಷ್ಠಾಪೂರ್ವಕ ಪ್ರಯತ್ನ ಮಾಡಬೇಕು. ಈ ಬಗೆಗೆ ಸೂಕ್ತವಾದ ಯೋಜನೆ, ಅದರ ಅನುಷ್ಠಾನ ಆವಶ್ಯಕವಾಗಿ ಆಗಬೇಕು. ಕಾಲೇಜು ಮತ್ತು ಸ್ನಾತಕ ಅಧ್ಯಯನದಲ್ಲಿ ಕನ್ನಡ ಮಾಧ್ಯಮದ ಬಳಕೆಗೆ ಕಾಲದ ಗಡುವನ್ನು ಹಾಕಿಕೊಂಡು, ಮುಂದುವರಿಯಬೇಕು. ಪ್ರಾರಂಭದಲ್ಲಿ ಎಲ್ಲ ಕಾಲೇಜುಗಳಲ್ಲಿ ಕನ್ನಡ ಮತ್ತು ಇಂಗ್ಲೀಷ ಮಾಧ್ಯಮದ ತರಗತಿಗಳು ಇದ್ದು ಕ್ರಮವಾಗಿ ಇಂಗ್ಲೀಷ ಮಾಧ್ಯಮದ ಸೆಕ್ಷನ್‌ಗಳನ್ನು ಕಡಿಮೆಮಾಡುವ ಕ್ರಮ ಫಲದಾಯಕ. ಪ್ರಾದೇಶಿಕ ಭಾಷೆಗಳಲ್ಲಿ ಮುಖ್ಯವಾಗಿ ಕನ್ನಡದಲ್ಲಿ ಈಗ ಇರುವ ಸೌಕರ್ಯಗಳನ್ನು ಗಮನಿಸಿದರೆ, ಕೂಡಲೇ ಕಾಲೇಜು ಶಿಕ್ಷಣದ ಎಲ್ಲ ತರಗತಿಗಳಲ್ಲಿ ಕನ್ನಡ ಮಾಧ್ಯಮದ ಬಳಕೆ ಅಸಾಧ್ಯವಾದುದಲ್ಲ. ಡಿಗ್ರಿ ತರಗತಿಗಳಿಗೆ ಆವಶ್ಯವಾದ ಮೂಲಸಾಮಗ್ರಿ ಪಠ್ಯಪುಸ್ತಕಗಳು, ತಾಂತ್ರಿಕ ಪದಕೋಶಗಳು, ಪೂರಕ ಅಭ್ಯಾಸಸಾಹಿತ್ಯ ಸರಿಸುಮಾರಾಗಿ ಈಗ ಭಾರತದ ಎಲ್ಲ ಭಾಷೆಗಳಲ್ಲಿ ಸಿದ್ಧವಾಗಿವೆ. ಮುಂದಿನ ಹತ್ತು ವರ್ಷಗಳ ಗಡುವನ್ನಿರಿಸಿಕೊಂಡು ಮುಂದುವರಿದರೆ, ಕಾಲೇಜು ಶಿಕ್ಷಣದ ಎಲ್ಲ ಹಂತದಲ್ಲಿ ಕನ್ನಡ ಬಳಕೆ ಸಾಧ್ಯವಾಗುತ್ತದೆ.

ಹತ್ತು ವರ್ಷಗಳ ನಂತರ, ಬರಬಹುದಾದ ಸ್ನಾತಕೋತ್ತರ ಶಿಕ್ಷಣ ಮಾಧ್ಯಮಕ್ಕೆ ಆವಶ್ಯಕವಾದ ಸಿದ್ಧತೆಗಳು ಇನ್ನಷ್ಟು ಭರದಿಂದ, ಕ್ರಿಯಾಶೀಲತೆಯಿಂದ ಮುಂದುವರಿಯಬೇಕು. ಅದಕ್ಕೆ ಅವಶ್ಯಕವಾದ ಮಾನಸಿಕ ವಾತಾವರಣ, ಶೈಕ್ಷಣಿಕ ತರಬೇತಿ, ಅವಶ್ಯಕ ಸಾಹಿತ್ಯ ನಿರ್ಮಾಣ ಆಗಬೇಕಾಗಿದೆ. ವಿಜ್ಞಾನ ಬೋಧನೆಯಲ್ಲಿ, ಈ ಬಗೆಗೆ ವಿಶೇಷ ಸಿದ್ಧತೆ ಆವಶ್ಯಕ. ನಾಗಾಲೋಟದಿಂದ ನಡೆದಿರುವ ವಿಜ್ಞಾನದ ಓಟದಲ್ಲಿ ಕನ್ನಡ ವಿದ್ಯಾರ್ಥಿಗಳು, ಅಧ್ಯಾಪಕರು ಹಿಂದೆ ಬೀಳದಂತೆ ಎಚ್ಚರಿಕೆ ವಹಿಸಬೇಕು; ಕ್ರಿಯಾಶೀಲರಾಗಬೇಕು. ಪ್ರಾದೇಶಿಕ ಭಾಷೆಗಳ ಇಂದಿನ ಸಾಧನೆಯನ್ನು ಗಮನಿಸಿದರೆ ಇಂಥ ಪ್ರಯತ್ನಗಳು ಆಶಾದಾಯಕವಾಗುತ್ತವೆ. ಅದನ್ನು 'ರಾಜ್ಯಭಾಷೆ' ಯನ್ನಾಗಿ

ಸುವುದರತ್ತ ನಡೆದಿರುವ 'ಅಟಾಟೋಪ'ದ ಪರಿಣಾಮವಾಗಿ, ಉನ್ನತ ಶಿಕ್ಷಣದಲ್ಲಿ ಪ್ರಾದೇಶಿಕ ಭಾಷೆಯ ಬಳಕೆ ಅನಿವಾರ್ಯವಾಗುತ್ತಿದೆ.

ಆದರೆ, ತಂತ್ರವಿಜ್ಞಾನ, ವೈದ್ಯವಿಜ್ಞಾನ ಮುಂತಾದ ಶಾಖೆಗಳಲ್ಲಿ ಪ್ರಾದೇಶಿಕ ಮಾಧ್ಯಮದ ಬಳಕೆಗೆ ಈಗಾಗಲೇ ನಡೆದಿರುವ ಪ್ರಯತ್ನ ಅದರ ವಿಸ್ತಾರ, ವೈವಿಧ ಹಾಗೂ ಘಟೋತ್ಕಚ ಬೆಳವಣಿಗೆಯ ಹಿನ್ನೆಲೆಯಲ್ಲಿ ಹೇಳಿಕೊಳ್ಳುವಂಥದಾಗಿಲ್ಲ. ಕನ್ನಡದಂತೆ ಇತರ ಪ್ರಾದೇಶಿಕ ಭಾಷೆಗಳಿಗೂ ಈ ಮಾತು ಅನ್ವಯವಾಗುತ್ತದೆ. ಈ ಕ್ಷೇತ್ರಗಳಲ್ಲಿ ಕನ್ನಡ ಮಾಧ್ಯಮದ ಅಳವಡಿಕೆಯ ಬಗೆಗೆ ಇನ್ನಷ್ಟು ವಿಚಾರ ವಿನಿಮಯ ನಡೆಯಬೇಕಾಗಿದೆ. ತಾಂತ್ರಿಕ ಪದಕೋಶ ನಿರ್ಮಾಣ, ಮೌಲಿಕ ಗ್ರಂಥಗಳ ಒದಗಣೆ, ಹಾಗೂ ವವಹಾರಿಕ ಮನೋಭಾವ ಸೃಷ್ಟಿಯತ್ತ ಈ ಕೂಡಲೇ ಗಮನ ಕೊಡಬೇಕಾಗಿದೆ. ಕೇಂದ್ರ ಸರಕಾರ ಸರ್ವಭಾಷೆಗಳಿಗೆ ಸಮಾನವಾದ ತಾಂತ್ರಿಕ ಪದಕೋಶಗಳ ನಿರ್ಮಾಣ ಕಾರ್ಯ ಈಗಾಗಲೇ ಕೈಗೆತ್ತಿಕೊಂಡಿದೆ. ಹೀಗೆ, ಉಚ್ಚ ಶಿಕ್ಷಣದಲ್ಲಿ ಕನ್ನಡ ಮಾಧ್ಯಮದ ಬಳಕೆಯ ಗತಿ-ಸ್ಥಿತಿಯನ್ನು ನಿರೂಪಿಸಬಹುದಾಗಿದೆ.

ಕಾಲೇಜು ಮತ್ತು ಸ್ನಾತಕೋತ್ತರ ಶಿಕ್ಷಣದಲ್ಲಿ ಕನ್ನಡದ ಬಳಕೆಗೆ ಅತ್ಯಾವಶ್ಯಕವಾದ ಇನ್ನೊಂದು ಉಪಕ್ರಮ-ಪಠ್ಯ, ಪೂರಕ, ಸಂದರ್ಭ ಹಾಗೂ ಉಪರಿ ಅಭ್ಯಾಸಕ್ಕೆ ಅನಿವಾರ್ಯವಾದ ಪರಿಕರ ಸಾಹಿತ್ಯ ನಿರ್ಮಾಣ, ಅಥವಾ ಜ್ಞಾನ ಸಂಗೋಪನ ಸಾಹಿತ್ಯ ನಿರ್ಮಾಣ. ಕನ್ನಡ ಮಾಧ್ಯಮದ ಬಳಕೆಯ ವಿರುದ್ಧ ಏಳುವ ಮೊದಲ ಪ್ರತಿಭಟನೆಯ ಧ್ವನಿ-ಈ ಪಠ್ಯ ಸಾಹಿತ್ಯ ಕೊರತೆ. ಹತ್ತು ವರ್ಷಗಳ ಹಿಂದಿದ್ದ, ನಿರಾಶಾವಾತಾವರಣ ಈಗ ಖಂಡಿತವಾಗಿ ಇಲ್ಲ. ಎಲ್ಲ ಪ್ರಾದೇಶಿಕ ಭಾಷೆಗಳಲ್ಲಿ ಐದು ಮತ್ತು ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಕೇಂದ್ರ ಸರಕಾರ ಈ ಬಗೆಗೆ ಪ್ರತಿಯೊಂದು ಭಾಷಾರಾಜ್ಯಕ್ಕೆ ಒಂದೊಂದು ಕೋಟಿ ರೂಪಾಯಿಗಳನ್ನು ಒದಗಿಸಿದೆ. ಪ್ರತಿಭಾಷೆಯಲ್ಲಿ ಸಾವಿರಾರು- ವಿಜ್ಞಾನ, ಮಾನವಿಕ, ತಂತ್ರಜ್ಞಾನಗಳಿಗೆ ಸಂಬಂಧಿಸಿದ ಪಠ್ಯ ಪಠ್ಯೇತರ ಗ್ರಂಥಗಳ ನಿರ್ಮಾಣಕಾರ್ಯ ನಡೆದಿದೆ. ಅಂತರ್‌ರಾಷ್ಟ್ರೀಯ ಖ್ಯಾತಿಯ ಮೌಲಿಕ ಕೃತಿಗಳ ಅನುವಾದ ಕಾರ್ಯ ಹಾಗೂ ಅಂಥ ಗ್ರಂಥಗಳ ದೇಶಿಯ ಆವೃತ್ತಿ (Indian Editions) ಗಳ ಪ್ರಕಟನೆಗೆ ಕೇಂದ್ರ ಹಾಗೂ ರಾಜ್ಯ ಸರಕಾರಗಳು ವಿಶೇಷ ಯೋಜನೆಗಳನ್ನು ಕೈಕೊಂಡು ಕಾರ್ಯಪ್ರವೃತ್ತವಾಗಿವೆ ಪ್ರಾದೇಶಿಕ ಭಾಷೆಗಳಲ್ಲಿ ನಿರ್ಮಾಣವಾದ ಶ್ರೇಷ್ಠ ಕೃತಿಗಳನ್ನು ಉಳಿದ ಭಾರತೀಯ ಭಾಷೆಗಳಿಗೆ ಅನುವಾದಿಸಿ ಪ್ರಕಟಿಸುವ ಯೋಜನೆಯೂ ಸಿದ್ಧವಾಗಿದೆ. ಸರಕಾರ, ವಿಶ್ವವಿದ್ಯಾಲಯಗಳು ತಾಂತ್ರಿಕ ಸಂಸ್ಥೆಗಳೊಡನೆ,

ಖಾಸಗೀ ಪ್ರಕಾಶಕರೂ, ಖಾಸಗೀ ಲೇಖಕರೂ ಅನೇಕ ಮೌಲಿಕ ಕೃತಿಗಳನ್ನು ಪ್ರಾದೇಶಿಕ ಭಾಷೆಗಳಲ್ಲಿ ಪ್ರಕಟಿಸಿವೆ. ಇವೆಲ್ಲಕ್ಕಿಂತ ಹೆಚ್ಚಾಗಿ, ಪೆಚ್ಚಿನ ಪ್ರಾದೇಶಿಕ ಭಾಷೆಗಳಲ್ಲಿ ವಿಜ್ಞಾನ ಅಕಾಡೆಮಿಗಳು, ಶಿಕ್ಷಣ ಅಕಾಡೆಮಿಗಳು, ತಂತ್ರವಿಜ್ಞಾನ ಸಂಸ್ಥೆಗಳು ಈ ಕಾರ್ಯವನ್ನು ಕೈಗೆತ್ತಿಕೊಂಡಿವೆ. ಇನ್ನಷ್ಟು ಸಮರ್ಪಕವಾದ ಯೋಜನೆ, ಆರ್ಥಿಕ ನೆರವು ಹಾಗೂ ಪ್ರೋತ್ಸಾಹಕ ವಾತಾವರಣ ನಿರ್ಮಾಣವಾದರೆ, ಉನ್ನತ ಶಿಕ್ಷಣದಲ್ಲಿ ಕನ್ನಡದ ಬಳಕೆ ಖಂಡಿತವಾಗಿ ಕನಸಾಗಿ ಉಳಿಯದೇ, ನನಸಾಗುವುದು.

ಈ ಹಂತದಲ್ಲಿ, ನಮ್ಮ ಕನ್ನಡದ ಸಾಧನೆಯೇ ದಿಕ್ಸೂಚಿ ಹಾಗೂ ಪ್ರಾದೇಶಿಕ ಭಾಷೆಗಳಿಗೆ ಪ್ರೇರಕವಾಗಿದೆ. ಮರಾಠಿ, ತೆಲಗು, ತಮಿಳು, ಗುಜರಾಥಿ ಭಾಷೆಗಳ ಸಾಧನೆಯೂ ಪ್ರೋತ್ಸಾಹದಾಯಕವಾಗಿವೆ. ಈಗ ಸುಮಾರು ೨೦–೨೫ ವರ್ಷಗಳಿಂದ, ಮೈಸೂರು ಮತ್ತು ಕರ್ನಾಟಕ ಹಾಗೂ ಬೆಂಗಳೂರು ವಿಶ್ವವಿದ್ಯಾಲಯುಗಳು, ಡಿಗ್ರಿ ಶಿಕ್ಷಣದ ಹಂತದಲ್ಲಿ ಕನ್ನಡವನ್ನು ಮಾಧ್ಯಮ ಹಾಗೂ ಜ್ಞಾನದಾಯಕ ಸಾಹಿತ್ಯಮಟ್ಟದಲ್ಲಿ ಬೆಳೆಯಿಸುತ್ತಾ ಬಂದಿವೆ; ಉನ್ನತ ಶಿಕ್ಷಣ ಮಟ್ಟದ ಪಠ್ಯಪುಸ್ತಕ, ಪೂರಕಸಾಹಿತ್ಯ, ಹಾಗೂ ಅಭ್ಯಾಸ ಸಾಮಗ್ರಿ ನಿರ್ಮಾಣವಾಗಿದೆ. ಶ್ರೀ ಕುವೆಂಪು ಅವರ ನಿರ್ದೇಶಕ ಮಾತು–'ಆಧುನಿಕ ಜ್ಞಾನಕ್ಷೇತ್ರದ ಎಲ್ಲ ಶಾಖೆಗಳಿಗೂ ಸಂಬಂಧಿಸಿದ ಒಂದಾದರೂ ಕೃತಿ ಕನ್ನಡದಲ್ಲಿ ಬಂದಾಗಲೇ ಕನ್ನಡ ಬೆಳೆದಿದೆ ಎಂದು ಭಾವಿಸಬೇಕು" ಕನ್ನಡದ ಶೈಕ್ಷಣಿಕ ಸಾಹಿತ್ಯದ ಬೆಳವಣಿಗೆಗೆ ತೋರುಕಂಬವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ ಕೇಂದ್ರ ಸರಕಾರದ ನೆರವಿನಿಂದ ಸ್ಥಾಪಿಸಿದ ಪಠ್ಯಪುಸ್ತಕ ನಿರ್ದೇಶನಾಲಯದ ಮೂಲಕ ಸುಮಾರು ೨೫೦ ಪಠ್ಯ, ಪೂರಕ, ಗ್ರಂಥಗಳನ್ನು ಪ್ರಕಟಿಸಿದೆ. ಉಷ್ಣಬಲ ಕ್ರಿಯಾಶಾಸ್ತ್ರ (Thermodynamics) ಜೀವ ವಿಜ್ಞಾನ (Cell physiology), ಅಣು ವಿಜ್ಞಾನ (Atomic Science) ಸರ್ವದರ್ಶನ ಸಂಗ್ರಹ (Comparative Religion) ಪ್ರಾಣಿಶಾಸ್ತ್ರ, ರಸಾಯನಶಾಸ್ತ್ರ, ಭೂಗೋಳವಿಜ್ಞಾನ, ಮುಂತಾದ ಮೌಲಿಕ ಪಠ್ಯಪುಸ್ತಕಗಳನ್ನು ಪ್ರಕಟಿಸಿದೆ. ಮೂರು ಸಂಪುಟಗಳಲ್ಲಿ 'ಭಾರತದ ಸ್ವತಂತ್ರ್ಯ ಹೋರಾಟ' ಮನಸ್‌ಶಾಸ್ತ್ರ, ಭೌತ, ರಸಾಯನ ಭೂಗೋಳ, ಶಾಖೆಗಳಲ್ಲಿ ತ್ರಿಭಾಷೆಯಲ್ಲಿ ತಾಂತ್ರಿಕ ಪದಕೋಶಗಳನ್ನು ಪ್ರಕಟಿಸಿದೆ 'ಜೇದರು ನಿರ್ಮಾಣ' 'ಎಲವು–ಕೀಲುಗಳ ಶಸ್ತ್ರ ಚಿಕಿತ್ಸೆ', ಆಯುರ್ವೇದ

ವಿಜ್ಞಾನ, ಅಮೇರಿಕೆಯ ಇತಿಹಾಸ, ಭಾರತೀಯ ಸಾಹಿತ್ಯ ಸಂಕಲನ-ಮುಂತಾದ ಎಲ್ಲ ಶಾಖೆಗಳನ್ನು ಪ್ರತಿನಿಧಿಸುವ ೫೦,೦೦೦ ಪುಟಗಳ ಜ್ಞಾನ ಸಾಹಿತ್ಯ ಕನ್ನಡ ಭಾಷೆಯಲ್ಲಿ ನಿರ್ಮಾಣವಾಗಿದೆ.

ಅಂತೆಯೇ ಮೈಸೂರು ವಿಶ್ವವಿದ್ಯಾಲಯ, ಕನ್ನಡ ವಿಶ್ವಕೋಶ, ವಿವಿಧ ಜ್ಞಾನಕೋಶಗಳನ್ನು ಪ್ರಸಿದ್ಧಿಸಿವೆ. ನೂರಾರು ಪಠ್ಯ, ಪೂರಕ ಗ್ರಂಥಗಳನ್ನು ಪ್ರಕಟಿಸಿದೆ. ಈಗ ಸಮಗ್ರ ಇಂಗ್ಲೀಷ್- ಕನ್ನಡ ನಿಘಂಟು ಸಿದ್ಧವಾಗಿದೆ. ಕನ್ನಡಸಾಹಿತ್ಯ ಪರಿಷತ್ತು 'ಕನ್ನಡ-ಕನ್ನಡ, ನಿಘಂಟುಗಳ ಸಂಪುಟಗಳನ್ನು ಸಿದ್ಧಗೊಳಿಸಿದೆ. ಐ. ಬಿ. ಎಚ್. ಪ್ರಕಾಶನ, ಕಾರಂತರ ವಿಜ್ಞಾನ ಸಂಪುಟ ಗಳನ್ನು ಜನಪ್ರಿಯ ಆವೃತ್ತಿಯಾಗಿ ಪ್ರಕಟಿಸಿವೆ. ಹೀಗೆಯೇ ಇತರ, ವ್ಯಕ್ತಿ, ಸಂಸ್ಥೆಗಳು ಕನ್ನಡದ ಸಂಪತ್ತನ್ನು ಬೆಳೆಯಿಸಿವೆ. ಕರ್ನಾಟಕಭಾರತಿ, ವಿಜ್ಞಾನ ಭಾರತಿ ಕರ್ನಾಟಕ ವಿಶ್ವವಿದ್ಯಾಲಯದಿಂದ, ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ ಮೈಸೂರು ವಿಶ್ವವಿದ್ಯಾಲಯದಿಂದ, ಬೆಂಗಳೂರು ವಿಶ್ವವಿದ್ಯಾಲಯದ 'ಸಾಧನೆ' ಇಂಡಿಯನ್ ಇನ್ಸಟಿಟ್ಯೂಟ್ ಆಫ್ ಸೈನ್ಸದ ಇಂಗ್ಲೀಷ್, ಕನ್ನಡ ಹಿಂದಿ ಭಾಷೆಗಳ ಪತ್ರಿಕೆ ಮುಂತಾದ ನಿಯತಕಾಲಿಕಗಳು ಪ್ರಕಟವಾಗುತ್ತಿವೆ. ಕರ್ನಾಟಕ ವಿಜ್ಞಾನ ಅಕಾಡೆಮಿ, ಬೆಂಗಳೂರು ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ ಮುಂತಾದ ಸಂಘ-ಸಂಸ್ಥೆಗಳು, ಕನ್ನಡ ಕಣಜವನ್ನು ತುಂಬುವ ಕಾರ್ಯದಲ್ಲಿ ನಿರತವಾಗಿವೆ. ಹೀಗೆ, ಡಿಗ್ರಿ ತರಗತಿಗಳಲ್ಲಿ ಕನ್ನಡ ಮಾಧ್ಯಮವಾಗಿ ಬಳಕೆಗೆ ಬರಲು ಆತಂಕಗಳಿಲ್ಲ. ಈಗಾಗಲೇ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಡಿಗ್ರಿಯ ಹಂತದಲ್ಲಿ ಕನ್ನಡ ಮಾಧ್ಯಮವನ್ನು ಅಳವಡಿಸಿವೆ. ಕನ್ನಡದ ದಿನ, ವಾರ ಪತ್ರಿಕೆಗಳು, ಉನ್ನತ ಜ್ಞಾನಕ್ಕೆ ಬೇಕಾದ ವಾತಾವರಣ ನಿರ್ಮಾಣ ಮಾಡುತ್ತಿವೆ. ಪ್ರೊ. ರಾಜಶೇಖರ ಭೂಸನೂರಮಠ ಅವರಿಂದ 'ವೈಜ್ಞಾನಿಕ ಕಾದಂಬರಿಗಳು, ಶ್ರೀ ಚಿದಾನಂದ ಅವರಿಂದ 'ಎಂಜಿನಿಯರಿಂಗ್ ಗೀತೆ' ಗಳು, ಮುಂತಾದವುಗಳ ಪ್ರಕಟನೆಯನ್ನು ನಾವಿಂದು ಗಮನಿಸಬೇಕಾಗಿದೆ. ಹೀಗೆ ಉನ್ನತ ಶಿಕ್ಷಣದಲ್ಲಿ ಕನ್ನಡದ ಬಳಕೆ ಎಲ್ಲಂದದಲ್ಲಿ ಅಳವಡಿಸುವ ಕಾಲ ಸನ್ನಿಹಿತವಾಗಿದೆ.ಸರಕಾರದ ಕ್ರಿಯಾಶೀಲಯೋಜನೆ. ಸಾರ್ವಜನಿಕರ ಸಹಕಾರ, ಶಿಕ್ಷಣ ರಂಗದಲ್ಲಿ ಕನ್ನಡ ತನದ ವಾತಾವರಣ ಮೂಡಿ ಬಂದರೆ, ಈ ಸಾಧನೆ ಸಾಧ್ಯವಾಗುವುದು.

ಆಗ-ಅಂದರೆ ಇನ್ನು ೧೦-೧೫ ವರ್ಷಗಳಲ್ಲಿ ಕನ್ನಡದ ಮಕ್ಕಳು, ಸ್ವತಂತ್ರವಾಗಿ ಸಂಶೋಧನೆ-ವಿಚಾರಮಾಡಬಲ್ಲ ಪರಿಣತರು ಆಗಬಲ್ಲರು. ಕನ್ನಡದ ಬಳಕೆ ಹೀನಾಯವೆಂಬ ನೈಚ್ಯಭಾವನೆಹಿಂದಾಗಿ ಅದೇ ನಮ್ಮ ಅಭಿವ್ಯಕ್ತಿಯ

ಮಾಧ್ಯಮ, ಜ್ಞಾನಧಾರೆಯ ಉಗಮ ಎಂಬ ನಂಬಿಕೆ ಮೂಡಿಬರಲಿದೆ. ಶೈಕ್ಷಣಿಕ ಕ್ಷೇತ್ರದ ಹಿಂಬೀಳುವಿಕೆ, ನಷ್ಟ, ನಿರಾಸೆ, ಹಿಂದಾಗಿ, ಹೊಸಚೇತನ ಕನ್ನಡದ ಮಕ್ಕಳಲ್ಲಿ ಮೂಡಲಿದೆ. ಬಹುಜನಸಮಾಜ ಆಧುನಿಕಜ್ಞಾನ ವಿಜ್ಞಾನ ಮಾಹಿತಿಯ ಫಲವನ್ನುಂಡು, ಸಮೃದ್ಧ ಕರ್ನಾಟಕವನ್ನು ಕಾಣ ಬಲ್ಲರು. ಆಧುನಿಕ ವಿಚಾರಶಕ್ತಿಬೆಳೆದು ಪ್ರಬುದ್ಧಪ್ರಜೆಗಳಾಗಿ, ಸಮಕಾಲೀನ ತಂತ್ರ– ವಿಜ್ಞಾನವನ್ನು ಬದುಕಿನಲ್ಲಿ ಅಳವಡಿಸಿಕೊಂಡು, ಕರ್ನಾಟಕದ ಶಿಲ್ಪಿಗಳು, ವಾಗ್ಗೇಯಕಾರರು, ಗುಡಿಕೈಗಾರಿಕೆಗಳ ತಂತ್ರಜ್ಞರು, ರಾಷ್ಟ್ರಕ್ಕೆ ವಿಶ್ವಕ್ಕೆ ಕಾಣಿಕೆ ನೀಡಿದಂತೆ, ಕನ್ನಡಿಗರೂ, ಆಧುನಿಕ ಜ್ಞಾನ–ವಿಜ್ಞಾನವನ್ನು ತಮ್ಮ ತಾಯಿ ನುಡಿ ಮೂಲಕವೇ ಪಡೆದು, ಅದನ್ನು ಅರಗಿಸಿಕೊಂಡು ಮೌಲಿಕ ಕೊಡುಗೆಗಳನ್ನು ನೀಡಲು ಸಾಧ್ಯವಾಗುತ್ತದೆ.

ಕನ್ನಡ, ನಮ್ಮ ಬದುಕಿನ ಎಲ್ಲ ರಂಗಗಳಲ್ಲಿ ವಿಜೃಂಭಿಸಬೇಕಾದರೆ. ಉನ್ನತ ಶಿಕ್ಷಣದ ಹಂತದಲ್ಲಿ ಕನ್ನಡ ಭಾಷೆಯೇ ಬಳಕೆಯಾಗಬೇಕು. ಅಂಥ ಕ್ಷೇತ್ರದಿಂದ ಬಂದ, ಆಡಳಿತಗಾರರು ನೇರವಾಗಿ ಕನ್ನಡವನ್ನು ಬಳಸುವರು; ವಕೀಲರು–ನ್ಯಾಯಾಧೀಶರು ಕನ್ನಡದಲ್ಲಿ ವಾದಿಸುವರು; ನ್ಯಾಯ ನಿರ್ಣಯ ನೀಡುವರು; ವೈದ್ಯರು, ತಂತ್ರಜ್ಞರು–ಜಪಾನ್, ಜರ್ಮನ್ ರಷ್ಯನ್ ತಂತ್ರಜ್ಞರಂತೆ –ನಿಜವಾದ ಜ್ಞಾನಿಗಳಾಗುವರು. ಕನ್ನಡಿಗರ ಸೃಜನ ಶೀಲತೆ ಜಾಗೃತವಾಗಿ, ಭಾರತಕ್ಕೆ– ವಿಶ್ವಕ್ಕೆ ಕಾಣಿಕೆ ನೀಡುವರು. ಇಂಗ್ಲೀಷಿನ ಅಥವಾ ಇನ್ನಾವುದೋ ಭಾಷೆಯಲ್ಲಿ ಶಿಕ್ಷಣಪಡೆದರೆ, ಬಾಡಿಗೆಯ ಎತ್ತುಗಳಂತೆ ಮಾತ್ರ ಬದುಕಲು ಸಾಧ್ಯ, ಬಿಸಾಡಿದ ಅನ್ನವನ್ನು ತಿನ್ನುವ ಕುನ್ನಿಗಳು ಮಾತ್ರಆಗುವರು.

ಕನ್ನಡದಲ್ಲಿ ವೃತ್ತಿಪದಕೋಶಗಳು

ಆರ್. ವಾಯ್. ಕುಲಕರ್ಣಿ

ಕನ್ನಡ ಭಾಷಾವಿಜ್ಞಾನದ ಬಗೆಗೆ ಎಷ್ಟು ಸಂಶೋಧನೆ ನಡೆಯಬೇಕಿತ್ತು ಅಷ್ಟು ನಡೆದಿಲ್ಲವೆಂದು ಪ್ರತಿಯೊಬ್ಬ ಭಾಷಾವಿಜ್ಞಾನಿಗೂ ತಿಳಿದ ವಿಷಯ. ನಮ್ಮ ನೆರೆಹೊರೆ ರಾಜ್ಯಗಳಂತೆ ಈ ನಿಟ್ಟಿನಲ್ಲಿ ನಮ್ಮ ಸಾಹಿತ್ಯ ಅಕಾಡಮಿಗಳಾಗಲಿ, ವಿಶ್ವವಿದ್ಯಾನಿಲಯಗಳಾಗಲಿ ತಮ್ಮ ಗಮನವನ್ನು ಕೊಟ್ಟಿಲ್ಲ. ಇದು ನಮ್ಮ ಭಾಷೆಯ ಬೆಳವಣಿಗೆಯ ಬಗೆಗಿದ್ದ ಕಳಕಳಿ, ಉತ್ಸಾಹ ಮತ್ತು ಧೋರಣೆಗಳನ್ನು ತೋರಿಸುತ್ತದೆ. ಇಲ್ಲಿಯವರೆಗೆ ಕನ್ನಡ ಭಾಷಾಧ್ಯಯನವೆಂದು ಅಚ್ಚಾದ ಕೃತಿಗಳಿಲ್ಲ ಪದವಿಗಾಗಿ ಸಲ್ಲಿಸಿದ ಪ್ರಬಂಧಗಳೇ ಹೊರತು ಯಾವುದೇ ಸಂಘ- ಸಂಸ್ಥೆಗಳು ಹಮ್ಮಿಕೊಂಡ ಕಾರ್ಯಕ್ರಮಗಳಿಲ್ಲವೆನ್ನುವುದನ್ನು ನೆನಪಿಸಿಕೊಳ್ಳಬೇಕು. ಅಂದ ಮೇಲೆ ವೃತ್ತಿ ಪದಕೋಶಗಳು ಬರುವ ಅಥವಾ ತಯಾರಾಗುವ ಮಾತು ದೂರವೇ ಉಳಿಯಿತು.

ವೃತ್ತಿಪದಕೋಶಗಳು ಮತ್ತು ಅವುಗಳ ಉಪಯೋಗ :

ಆಧುನಿಕ ವಿಜ್ಞಾನ ಮತ್ತು ತಾಂತ್ರಿಕತೆ ಎರಡೂ ಸೇರಿ ತಮ್ಮ ಅಗಾಧವಾದ ಶಕ್ತಿ ಸಾಮರ್ಥ್ಯಗಳಿಂದ ಔದ್ಯೋಗಿಕ ಕ್ರಾಂತಿಯನ್ನು ತಂದು ನಮ್ಮ ಜೀವನವನ್ನು ಯಂತ್ರಗಳ ಬಲದಿಂದ ಸೆರೆ ಹಿಡಿದಿವೆ. ಇಂಥಹ ಪರಿಸ್ಥಿತಿಯಲ್ಲಿ ದೈಹಿಕ ಶ್ರಮ ತನ್ನ ಸ್ಥಾನ-ಮಾನಗಳನ್ನು ಉಳಿಸಿಕೊಳ್ಳುವುದು ಕಠಿಣ. ಹೀಗಿದ್ದಾಗ ವಂಶಪರಂಪರಾಗತವಾಗಿ ಬರುವ ವೃತ್ತಿಗಳಾದ ಒಕ್ಕಲುತನ, ನೇಕಾರಿಕೆ, ಕುಂಬಾರಿಕೆ, ಕಮ್ಮಾರಿಕೆ, ಮೀನುಗಾರಿಕೆ, ಮತ್ತು ಅಕ್ಕಸಾಲಿ ಮುಂತಾದವುಗಳಲ್ಲಿ ಹಿಂದೆ ಅನುಸರಿಸುವ ಕ್ರಮ ಹಾಗೂ ಆ ಕಾಲದ ಉಪಕರಣಗಳನ್ನು ಮುಂದುವರಿಸಿಕೊಂಡು ಬರುವದೆಂತು? ಅಲ್ಲದೇ ಆ ವೃತ್ತಿಗಳಿಗೆ ಸಂಬಂಧಿಸಿದ ಶಬ್ದ ಭಂಡಾರದ ಗತಿಯೇನು? ಸಧ್ಯ ಪ್ರತಿಯೊಂದು ಹಳ್ಳಿಕೂಡ ಆಧುನಿಕತೆಯ ಪದ್ಧತಿಗೆ ಒಳಗಾಗಿ ಸುಧಾರಿಸಿದ ಪದ್ಧತಿಗಳನ್ನು ಅವಲಂಬಿಸಿ ಹಿಂದಿನಿಂದ ಬಂದ ಪದ್ಧತಿ ಮತ್ತು ಉಪಕರಣಗಳನ್ನು ಹಿಂದೆ ಬಿಟ್ಟು ಮುಂದೆ ಭರದಿಂದ ಓಡುತ್ತಿದೆ. ಇದರ ಪರಿಣಾಮವಾಗಿ ನಮ್ಮಲ್ಲಿದ್ದ ಕರಕುಶಲ, ಕಲೆ, ಮತ್ತು ಸಂಸ್ಕೃತಿಗಳು ಬಹುಪಾಲು ದಿನದಿನಕ್ಕೆ ಮಾಯವಾಗುತ್ತಿವೆ.

ಭಾರತವು ಹಳ್ಳಿಗಳಿಂದ ಕೂಡಿದ ದೇಶ. ಹಳ್ಳಿಗಳೇ ನಮ್ಮ ಸಂಸ್ಕೃತಿಯ ಆಗರಗಳೆಂದು ಮರೆಯಕೂಡದು. ಈ ಮೇಲೆ ಹೇಳಿದಂತೆ ಸುಲಭ ಹಾಗೂ ಸುಧಾರಿಸಿದ ಸೌಕರ್ಯಕ್ಕಾಗಿ ನಮ್ಮ ಹಳ್ಳಿಯ ಜನಗಳು ಪರಂಪರಾಗತವಾಗಿ ಬಂದ ವೃತ್ತಿಗಳನ್ನು ತೊರೆದು ಪಟ್ಟಣಗಳಿಗೆ ವಲಸೆ ಬರುತ್ತಿದ್ದಾರೆ. ಈ ಸಂದಿಗ್ಧಸ್ಥಿತಿಯಲ್ಲಿ ನಾವು ವೃತ್ತಿಗಳಿಗೆ ಸಂಬಂಧಿಸಿದ ಪದಗಳನ್ನು ತ್ವರಿತವಾಗಿ ಸಂಗ್ರಹ ಮಾಡದೇ ಹೋದರೆ ನಮ್ಮ ಮುಂದಿನ ಜನಾಂಗದವರಿಗೆ ಪರ ಪರಂಪರಾಗತವಾಗಿ ಬರುವ ವೃತ್ತಿಗಳಿದ್ದುವು ಎಂಬುದು ಕೂಡಾ ತಿಳಿಯದೇ ಹೋಗುವ ಪ್ರಸಂಗವಿದೆ. ಆದ್ದರಿಂದ ಸಾಧ್ಯವಾದಷ್ಟು ಬೇಗ ಎಲ್ಲ ವೃತ್ತಿಗಳ ಅಧ್ಯಯನ ನಡೆಸಿ ವೃತ್ತಿ ಪದಕೋಶಗಳನ್ನು ರಚಿಸಬೇಕು.

ವೃತ್ತಿ ಪದಕೋಶಗಳ ಅಧ್ಯಯನವು ಭಾಷಾವಿಜ್ಞಾನಿಗಳಿಗೆ ಮಾತ್ರ ಸೀಮಿತವಾಗಿರದೇ ಸಮಾಜಶಾಸ್ತ್ರಜ್ಞರಿಗೂ, ಮಾನವಶಾಸ್ತ್ರಜ್ಞರಿಗೂ, ಮತ್ತು ಜನಪದ ವಿಜ್ಞಾನಿಗಳಿಗೂ ಪ್ರಯೋಜನಕಾರಿಯಾಗಿವೆ. ಈ ತೆರನಾದ ಅಭ್ಯಾಸವು ಸಂಸ್ಕೃತಿ, ತಾಂತ್ರಿಕತೆ, ಹಾಗೂ * ಗುಳೇಬಂದ ವಿಷಯಗಳಿಗಿರುವ ಸಂಬಂಧವನ್ನು ವಿಶ್ಲೇಷಿಸಲು ಬಹಳ ವಿಶಾಲವಾದ ದತ್ತವನ್ನು ಒದಗಿಸುತ್ತದೆ. ವೈಜ್ಞಾನಿಕ ಮತ್ತು ತಾಂತ್ರಿಕ ಪರಿಕಲ್ಪನೆಗಳನ್ನು ಟಂಕಿಸುವ ವಿಧಾನ ನಮ್ಮ ಪೂರ್ವಜರಲ್ಲಿ ಯಾವ ತೆರನಾಗಿತ್ತು ಮತ್ತು ಆಧುನಿಕ ವಿಧಾನ ಹೇಗಿದೆ ಎಂಬುದರ ತುಲನಾತ್ಮಕ ಅಭ್ಯಾಸ ಮಾಡಿದಾಗ ನಾವು ಟಂಕಿಸುವ ಪರಿಕಲ್ಪನೆಗಳಲ್ಲಿ ತಲೆದೋರುವ ಕೃತಕತೆಯನ್ನು ಖಂಡಿತ ದೂರ ಮಾಡಲು ಸಾಧ್ಯವಾಗುತ್ತದೆ. ಹಳ್ಳಿಗಾಡಿನಲ್ಲಿ ವಾಸಿಸುವ ಜನತೆ ತಮ್ಮ ದಿನನಿತ್ಯದ ಬಳಕೆಯ ಭಾಷೆಯಲ್ಲಿಯೇ ವೃತ್ತಿಯನ್ನು ಮುಂದುವರಿಸಿಕೊಂಡು ಬಂದುದರಿಂದ ಅವರ ಪರಿಕಲ್ಪನೆಗಳು ಜ್ಞಾನ ಅವರದೇ ಭಾಷೆಯಲ್ಲಿ ಹುಟ್ಟಿಕೊಂಡದ್ದು ವಿನಃ ಎರವಲು ಪಡೆದುಕೊಂಡದ್ದು ಆಗಿರಲಾರದು. ಇನ್ನೂ ಎಷ್ಟೋ ಬಗೆಯಿಂದ ಪ್ರಯೋಜನ ಪಡೆಯಬಹುದಾದ ಈ ಕೋಶಗಳ ತಯಾರಿಕೆಯಲ್ಲಿ ಕನ್ನಡಿಗರು ಮನಸ್ಸುಕೊಟ್ಟಿಲ್ಲ ಎಂಬುದು ನಿಜಕ್ಕೂ ದುಃಖದಾಯಕವಾದದ್ದು. ನಮ್ಮ ವಿಜ್ಞಾನಿಗಳಿಗೆ ಇದರ ಉಪಯುಕ್ತತೆಯ ಕಲ್ಪನೆಯೇ ಇಲ್ಲ. ಇನ್ನು ಕೆಲವರಿಗೆ ಉಪಯುಕ್ತತೆಯ ಜ್ಞಾನವಿದ್ದರೂ ಇದರ ಬಗೆಗೆ ಸರಿಯಾದ ತಿಳುವಳಿಕೆಯಾಗಿಲ್ಲ. ಇಂಥ ವಿಷಯಗಳ ತಿಳುವಳಿಕೆ ಮಾಡಿ ಕೊಡಲು ಭಾಷಾವಿಜ್ಞಾನಿಗಳೇ ಮುಂದು ಬರುವುದು ಅವಶ್ಯ. ಈಗ ನಾವು ಎಲ್ಲ ವೃತ್ತಿಗಳಲ್ಲಿದ್ದ ಪದಗಳನ್ನು ಸಂಗ್ರಹಿಸದೇ ಹೋದರೆ ನಿನಾಕಾರಣ ನಮ್ಮ ಭಾಷೆ ಹಾಗೂ ಸಂಸ್ಕೃತಿಯ ಬಹುಭಾಗವನ್ನು ಕಳೆದು ಕೊಳ್ಳುವ ಪ್ರಸಂಗ ಬರುತ್ತದೆ.

* ಗುಳೇಬರು to migrate

ಕನ್ನಡದಲ್ಲಿ ತಯಾರಾದ ವೃತ್ತಿ ಪದಕೋಶಗಳು :

ಕನ್ನಡದಲ್ಲಿ ಶ್ರೇಷ್ಠ ನಿಘಂಟುಗಳೆನಿಸಿಕೊಂಡವುಗಳೆಲ್ಲ ಮಹಾಕಾವ್ಯಗಳನ್ನಾಧರಿಸಿ ಬಂದಂಥಹವು. ಈ ನಿಘಂಟುಗಳು ಕೇವಲ ಸಾಹಿತ್ಯಿಕ ಅಭ್ಯಾಸಕ್ಕೆ ಮಾತ್ರ ಉಪಯುಕ್ತವಾದವುಗಳೆಂದು ಬೇರೆ ಹೇಳಬೇಕಿಲ್ಲ. ಇಂಥಹ ನಿಘಂಟುಗಳಲ್ಲಿ ವೃತ್ತಿಗೆ ಸಂಬಂಧಪಟ್ಟ ಪದಗಳನ್ನು ಬೆರಳ ಮೇಲೆ ಎಣಿಸುವಷ್ಟು ಮಾತ್ರ ದೊರಕುತ್ತವೆ. ಇದು ಈ ನಿಘಂಟುಕಾರರ ತಪ್ಪಲ್ಲ ಅವುಗಳ ಪರಿಮಿತಿಯೇ ಅಷ್ಟು. ಪಾರಂಪರಿಕ ವೃತ್ತಿಗಳ ಶಬ್ದ ಭಂಡಾರ ಬಹಳ ದೊಡ್ಡದು ಸಾವಿರಾರು ಪರಿಕಲ್ಪನೆಗಳಿಂದ ಕೂಡಿಕೊಂಡದ್ದು. ಇಂಥಹ ಪದಕೋಶಗಳನ್ನು ತಯಾರಿಸಲು ಬೇರೆಯಾಗಿಯೇ ಕ್ಷೇತ್ರ ಕಾರ್ಯವನ್ನು ನಿರ್ವಹಿಸಬೇಕಾಗುತ್ತದೆ.

ಇಂದಿನವರೆಗೆ ಕನ್ನಡದಲ್ಲಿ ತಯಾರಾದ ವೃತ್ತಿ ಪದಕೋಶಗಳು ಕೇವಲ ಮೂರು. ಈ ಪರಿಸ್ಥಿತಿ ತೆಲುಗು ಭಾಷೆಯನ್ನು ಬಿಟ್ಟರೆ ಭಾರತೀಯ ಉಳಿದೆಲ್ಲ ಭಾಷೆಗಳಿಗೂ ಅನ್ವಯಿಸುತ್ತದೆ. ತೆಲುಗಿನಲ್ಲಿ ವೃತ್ತಿಪದಕೋಶಗಳ ಶೀರ್ಷಿಕೆಯೇ ಬಂದಿದೆ. ಕನ್ನಡದಲ್ಲಿ ದೊರೆಯುವ ಮೂರು ವೃತ್ತಿಪದಕೋಶಗಳು ಈ ಕೆಳಗಿನಂತಿವೆ :

1. A Kisamwar glossary of Kanarese words
   -- ಉಲ್ಲಾಳ ನರಸಿಂಗರಾವ್ (೧೮೯೧).
2. ಕಲಬುರ್ಗಿ ಜಿಲ್ಲೆಯ ಒಕ್ಕಲುತನ ವೃತ್ತಿಪದಗಳ ಅಧ್ಯಯನ
   —ಎಸ್. ಜಿ. ವಿರಕ್ತಮಠ (೧೯೮೧).
3. A linguistic analysis of weavers' Occupational Vocabulary in Kannada
   —ಆರ್. ವಾಯ್. ಕುಲಕರ್ಣಿ (೧೯೮೪).

೧. ಉಲ್ಲಾಳ ನರಸಿಂಗರಾವ್ ಅವರ A Kisamwar glossary of Kanarese words ಎಂಬುದು ಮಾತ್ರ ಅಚ್ಚಾಗಿದೆ. ಇದು ಒಂದೇ ವೃತ್ತಿಗೆ ಸಂಬಂಧಿಸಿದ ಶುದ್ಧ ವೃತ್ತಿಪದಕೋಶವಾಗದಿದ್ದರೂ ಈ ಕಾರಣದಿಂದ ಉಳಿದವರು ಈ ಸಂಗ್ರಹವನ್ನು ವೃತ್ತಿಪದಕೋಶವೆಂದು ಪರಿಗಣಿಸದೇ ಹೋದರೂ ಇದು ಕನ್ನಡದ ವೃತ್ತಿಪದಕೋಶಗಳ ಇತಿಹಾಸದಲ್ಲಿ ಮೊಟ್ಟ ಮೊದಲನೆಯ ಹೆಜ್ಜೆಯಾಗಿದೆ.

ಈ ಸಂಗ್ರಹವನ್ನು ಮೂವತ್ತು ಭಾಗಗಳಲ್ಲಿ ವಿಂಗಡಿಸಲಾಗಿದ್ದು, ಮೂವತ್ತು ಪ್ರಕಾರದ ವಿಷಯಗಳಿಗೆ ಸಂಬಂಧಿಸಿದ ಪದಗಳ ಸಂಗ್ರಹಣೆಯನ್ನು ಮಾಡಲಾಗಿದೆ. ಪದಗಳನ್ನು ಕನ್ನಡದಲ್ಲಿ ಮತ್ತು ಲಿಪ್ಯಂತರದಲ್ಲಿಯೂ, ಅರ್ಥವನ್ನು ಇಂಗ್ಲೀಷಿನಲ್ಲಿ ಕೊಡಲಾಗಿದೆ. ಹಾಗೂ ಕೊನೆಯಲ್ಲಿ ಪದಗಳ ಅಕಾರಾದಿ ಪಟ್ಟಿಯನ್ನು ಕೊಡಲಾಗಿದೆ. ಈ ಸಂಗ್ರಹಣೆ ಮುಖ್ಯವಾಗಿ ಈ ಕ್ಷೇತ್ರಗಳ ಬಗೆಗಿದೆ: ಕಚೇರಿ ಕಾಗದ ಪತ್ರ, ಆಡಳಿತ, ಜೋತಿಷ್ಯ, ವೈದ್ಯಕೀಯ, ಸಂಗೀತ, ಶಿಲ್ಪ, ಬಡಿಗತನ, ತಾಂತ್ರಿಕತೆ, ಮನೆ ಮತ್ತು ವಾಸ್ತು ಇವೇ ಮೊದಲಾದವು. ಒಟ್ಟಿನಲ್ಲಿ ಇದೊಂದು ಕನ್ನಡ ವೃತ್ತಿಪದಕೋಶಗಳ ಬಗೆಗೆ ದೃಷ್ಟಿಹರಿಸಲು ಉಪಯುಕ್ತ ಸಂಗ್ರಹಣೆ ಎಂದು ಹೇಳಬಹುದು.

೨. ಎಸ್. ಜಿ. ವಿರಕ್ತಮಠರ ಕಲಬುರ್ಗಿ ಜಿಲ್ಲೆಯ ಒಕ್ಕಲುತನ ವೃತ್ತಿಪದಗಳ ಅಧ್ಯಯನವು ಮದ್ರಾಸ ವಿಶ್ವವಿದ್ಯಾನಿಲಯದ ಪಿಎಚ್. ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ. ಇದು ಭಾಷಾವಿಜ್ಞಾನದ ತತ್ವಗಳ ಮೇರೆಗೆ ರಚಿಸಿದ ಕನ್ನಡದ ಮೊಟ್ಟಮೊದಲನೆಯ ವೃತ್ತಿಪದಕೋಶ. ಈ ಪ್ರಬಂಧವನ್ನು ಎರಡು ಭಾಗಗಳಲ್ಲಿ ವಿಭಾಗಿಸಿದ್ದಾರೆ: ೧. ಒಕ್ಕಲುತನದ ವೃತ್ತಿಪದಗಳ ರಚನಾತ್ಮಕ ವ್ಯಾಕರಣ ೨. ಒಕ್ಕಲಿಗರ ಜನಜೀವನ ಹಾಗೂ ಸಂಸ್ಕೃತಿ. ಅಲ್ಲಲ್ಲಿ ವೃತ್ತಿಗೆ ಸಂಬಂಧಿಸಿದ ಉಪಕರಣಗಳ ಛಾಯಾ ಚಿತ್ರಗಳನ್ನು ಕೊಟ್ಟಿದ್ದಾರೆ.

೩. ಆರ್. ವಾಯ್. ಕುಲಕರ್ಣಿಯವರ A Linguistic Analysis of Weavers' Occupational Vocabulary in Kannada, ಇದು ಕನ್ನಡದ ಎರಡನೆಯ ವೈಜ್ಞಾನಿಕ ವೃತ್ತಿಪದಕೋಶವಾಗಿದ್ದು, ಬಿಜಾಪುರ ಜಿಲ್ಲೆಯ ನೇಕಾರರ ವೃತ್ತಿಪದಗಳ ಅಧ್ಯಯನವಾಗಿದೆ. ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಯಮ್. ಫಿಲ್. ಪದವಿಗಾಗಿ ಸಲ್ಲಿಸಿದ ಪ್ರಬಂಧ. ಈ ಅಭ್ಯಾಸವನ್ನು ಎರಡು ವಿಧವಾಗಿ ವಿಂಗಡಿಸಲಾಗಿದೆ: ೧. ನೇಕಾರರ ವೃತ್ತಿಪದಗಳ ರಚನಾತ್ಮಕ ವ್ಯಾಕರಣ ೨. ವೃತ್ತಿಪದಕೋಶ ಕೊನೆಯಲ್ಲಿ ಉಪಕರಣಗಳ ಹಾಗೂ ಅವಶ್ಯವಾದ ರೇಖಾಚಿತ್ರಗಳನ್ನು ಒಂದೆಡೆ ಕೊಡಲಾಗಿದೆ.

ತೆಲುಗು ಭಾಷೆಯಲ್ಲಿ ನಡೆದ ವೃತ್ತಿಪದಕೋಶಗಳ ಅಧ್ಯಯನ:

ತೆಲುಗು ಭಾಷೆಯಲ್ಲಿ ವೃತ್ತಿಪದಕೋಶಗಳ ಅಧ್ಯಯನವನ್ನು ಆಂಧ್ರ ಸಾಹಿತ್ಯ ಅಕಾಡಮಿ ೧೯೫೮ರಲ್ಲಿ ಹಮ್ಮಿಕೊಂಡಿತು. ಭಾರತದ ಯಾವುದೇ ಭಾಷೆಯಲ್ಲಿ ನಡೆಯದಿದ್ದ ಕೆಲಸವನ್ನು ಈ ಅಕಾಡಮಿ ಮಾಡಿ ತೋರಿಸಿದೆ. ವೃತ್ತಿಪದಕೋಶಗಳನ್ನು ಅಭ್ಯಸಿಸಲು ಯಾವುದೇ ಕ್ರಮವಿಲ್ಲದಾಗ ಭಾರತದ

ಸುಪ್ರಸಿದ್ಧ ಭಾಷಾವಿಜ್ಞಾನಿಗಳಾದ ಪ್ರೊ. ಭದ್ರಿರಾಜ ಕೃಷ್ಣಮೂರ್ತಿಯವರನ್ನು ಕರೆಯಿಸಿ ವೃತ್ತಿಪದಗಳ ಅಧ್ಯಯನಕ್ಕೆ ಒಂದು ಕ್ರಮವನ್ನು ನಿರೂಪಿಸುವಂತೆ ಮಾಡಿತು. ಈ ಕ್ರಮವನ್ನೇ ಅಳವಡಿಸಿಕೊಂಡು ಅಕಾಡಮಿಯು "ಮಾಂಡಲೀಕ ವೃತ್ತಿಪದಕೋಶವು" ಎಂಬ ಶೀರ್ಷಿಕೆಯಲ್ಲಿ ಹಲವಾರು ವೃತ್ತಿಪದಕೋಶಗಳನ್ನು ಪ್ರಕಟಿಸಿದೆ. ಈ ದಿಕ್ಕಿನಲ್ಲಿ ಮೊಟ್ಟಮೊದಲಿನ ಪದಕೋಶ ಒಕ್ಕಲುತನಕ್ಕೆ ಸಂಬಂಧಿಸಿದ್ದು ಇದು ಪ್ರೊ. ಕೃಷ್ಣಮೂರ್ತಿಯವರ ನೇತ್ರತ್ವದಲ್ಲಿ ಬಂದಿದೆ. ಈ ಕೋಶದ ಮೊದಲ ಭಾಗದಲ್ಲಿ ಅಧ್ಯಯನ ಕ್ರಮವನ್ನು ಕೊಟ್ಟಿದ್ದಾರೆ. ಕನ್ನಡದಲ್ಲಿ ಬಂದು ಎರಡೂ ವೃತ್ತಿಪದಕೋಶಗಳು ಕೂಡ ಇವರ ಅಧ್ಯಯನ ಕ್ರಮವನ್ನೇ ಅನುಸರಿಸಿ ಬಂದಂಥಹವು.

ಸದ್ಯ ಕನ್ನಡದಲ್ಲಿ ವೃತ್ತಿಪದಕೋಶಗಳ ಮಾದರಿಗಳಿಷ್ಟು, ಕನ್ನಡ ವೃತ್ತಿಪದಕೋಶಗಳ ಇತಿಹಾಸ ೧೮೯೧ ರಿಂದ ಪ್ರಾರಂಭವಾಗಿದ್ದು ಈ ಕಾರ್ಯವನ್ನು ಮುಂದುವರೆಸಲು ಸಮ್ಮ ಸಾಹಿತ್ಯ ಪರಿಷತ್ತಾಗಲಿ, ಅಕಾಡಮಿಯಾಗಲಿ ಮುಂದೆ ಬರುವದೆಂದು ಆಶಿಸುವೆ. ಇನ್ನಾದರೂ ಕನ್ನಡದಲ್ಲಿ ವೃತ್ತಿಪದಗಳ ಅಧ್ಯಯನ ನಡೆಸಿದರೆ, ಕನ್ನಡ ಭಾಷೆ ಮತ್ತು ನಿಘಂಟು ರಚನಾ ಶಾಸ್ತ್ರವನ್ನು ಪುನರುಜ್ಜೀವನ ಮಾಡಿದಂತಾಗುತ್ತದೆ.

ಆಧಾರ ಗ್ರಂಥಗಳು

Krishnamurti, Bh. 1962. A Telugu dialect dictionary of occupational vocabulary, vol. I. Agriculture, Hyderabad, Andhra Pradesh Sahitya Akademi.

1982. A survey of Telugu dialect vocabulary used in native occupations. Paper presented to the working group X at the 13th International Congress of Linguists, Tokyo, Japan.

Kulkarni, R. Y. 1984. A linguistic analysis of weavers' occupational Vocabulary in Kannada. (unpublished M. Phil. dissertation submitted to Osmania University, Hyderabad)

Ullal, Narasing Rao. 1891. A Kisamwar glossary of Kanarese words. Mangalore: Basel mission book and tract depository.

Viraktamath, S. G. 1981. ಕಲಬುರ್ಗಿ ಜಿಲ್ಲೆಯ ಒಕ್ಕಲುತನ ವೃತ್ತಿಪದಗಳ ಅಧ್ಯಯನ (unpublished Ph. D. dissertation submitted to Madras University, Madras).

ಉಕ್ರೈನಿಯನ್ ಕವಿ ತರಾಸ್ ಷೆವ್‌ಚೆಂಕೊ ಅವರ ಕತೆರಿನಾ ಕಾವ್ಯದ ನಾಟಕರೂಪ

● ಬುದ್ದಣ್ಣ ಹಿಂಗಮಿರೆ

‘ತರಾಸ್ ಷೆವ್‌ಚೆಂಕೊ (೧೮೧೪-೧೮೬೧) ಉಕ್ರೈನಿಯನ್ ಭಾಷೆ, ಸಾಹಿತ್ಯ, ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸಿದ ಹೊಸ ಮಾರ್ಗದ ಪ್ರವರ್ತಕ. ಷೆವ್‌ಚೆಂಕೊ ಅದಮ್ಯ ಮಾನವತಾವಾದಿ ಕವಿಯಾಗಿದ್ದು, ಎಲ್ಲ ಕಾಲಕ್ಕೂ, ಎಲ್ಲ ಜನಕ್ಕೂ ಅನ್ವಯಿಸುವ ಮಾನವೀಯ ಮೌಲ್ಯಗಳ ಧ್ವನಿಯೇ ಆತನ ಕಾವ್ಯದಲ್ಲಿ ಪ್ರಮುಖ ಸ್ಥಾನ ಪಡೆದಿದೆ. [1]

ಷೆವ್‌ಚೆಂಕೊ ತನ್ನ ತಾರುಣ್ಯದಲ್ಲಿ ಬರೆದ ಕಥನಕವನಗಳಲ್ಲಿ ಕತೆರಿನಾ, ಕೆಲಸದಾಕೆ, ಕನಸು, ಕಾಕಾಸಸ್, ಹೆರೆಟಿಕ್, ಸ್ವಯೋಘಿಟಸ, ಹೈಡಾಮಕಿ ಮುಂತಾದ ರಚನೆಗಳು ಅತ್ಯಂತ ಗಮನಾರ್ಹವಾಗಿದ್ದು, ಕವಿಯ ಸ್ವೋಪಜ್ಞತೆಯನ್ನೂ ಅಕ್ಷಿದೆ ಬೆಳವಣಿಗೆಯ ಹಂತವನ್ನೂ ಸೂಚಿಸುತ್ತವೆ. ಕತೆರಿನಾ ಮತ್ತು ಕೆಲಸದಾಕೆ ಇವೆರಡೂ ರಚನೆಗಳು ವಾಸ್ತವಿಕ ಬದುಕಿನಿಂದಾಯ್ದ ಹೆಣ್ಣು ಪಡುವ ಯಾತನೆ, ಕ್ರೌರ್ಯ, ಶೋಷಣೆ, ಧೈರ್ಯ, ದಿಟ್ಟತನವನ್ನು ಪ್ರದರ್ಶಿಸುವ ಕವನಗಳಾಗಿವೆ. ಇವೆರಡೂ ಕವನಗಳಲ್ಲಿ ಕಾಣಿಸಿಕೊಳ್ಳುವ ತಾಯಿ-ಮಗುವಿನ ಕರುಳಿನ ಸಂಬಂಧ ಹಾಗೂ ಜೀವಸ್ವರ ಒಂದೇ ಆದಂತಿದೆ.

ಸೈನಿಕನೊಬ್ಬನಿಂದ ಮೋಸಹೋಗಿ ಮಗುವಿಗೆ ಜನ್ಮವಿತ್ತು, ಅದನ್ನು ಬಿಟ್ಟುಹೋದ ನಿರಾಶೆಯನ್ನುಂಟು ಮಾಡುವ ದಾರುಣ ಕಥೆಯಾಗಿದೆ. ಶ್ರೀಮಂತರು ಬಡ ಹೆಣ್ಣುಗಳನ್ನು ಶೋಷಣೆ ಮಾಡಿ, ಅವರ ಬಾಳನ್ನು ಹಾಳು ಮಾಡುವ ಕಾವ್ಯವಸ್ತು ತರಾಸ್ ಷೆವ್‌ಚೆಂಕೊ ಕಾವ್ಯದಲ್ಲಿ ಮೇಲಿಂದ ಮೇಲೆ ಕಾಣಿಸಿಕೊಳ್ಳುತ್ತದೆ. ಮಾನವೀಯ ಮೌಲ್ಯಗಳನ್ನು ನಷ್ಟಗೊಳಿಸಿ, ಸಮಾಜದಲ್ಲಿ ಸಿರಿವಂತರೆಂದು ಮೆರೆಯುವವರನ್ನು ತರಾಟೆಗೆ ತೆಗೆದುಕೊಂಡು ಅಂಥವರ ಅಮಾನವೀಯತೆಯನ್ನು, ರಾಕ್ಷಸೀತನವನ್ನು ನಿರ್ದಯತೆಯನ್ನು ಖಂಡಿಸುವದಕ್ಕೆ ತರಾಸ್ ಷೆವ್‌ಚೆಂಕೊ ಹಿಂದುಮುಂದೆ ನೋಡುವುದಿಲ್ಲ ದೀನ-ದಲಿತರು, ಅನಾಥರು, ಬಡ ರೈತರು, ಕೂಲಿ, ಕಾರ್ಮಿಕರು-ಮುಂತಾದವರ ಬಗ್ಗೆ ತರಾಸ್ ಅದಮ್ಯ ಸಹಾನುಭೂತಿಯನ್ನು ತೋರಿಸಿದ್ದುಂಟು.

ತರಾಸ್ ಷೆವ್‌ಚೆಂಕೊ ಕಾವ್ಯದಲ್ಲಿ ಮಾನವೀಯ ಹಕ್ಕುಗಳನ್ನು ರಕ್ಷಿಸುವ, ಸ್ವಾತಂತ್ರ್ಯವನ್ನು ಘೋಷಿಸುವ ಧ್ವನಿ ಪ್ರಮುಖವಾಗಿರುವುದು ಗಮನಾರ್ಹವಾದದ್ದು.

ಕತೆರಿನಾಳ ಕತೆ ಭಾವನಾತ್ಮಕವಾಗಿ ಬೆಳೆಯುತ್ತ ಯೌವ್ವನ ಸಹಜವಾದ ದುಡುಕಿನಿಂದ ದುರಂತವನ್ನು ಆಹ್ವಾನಿಸುತ್ತವೆ. ಇವಾನನಿಗೆ ತನುಮನವನ್ನೊಪ್ಪಿಸಿದ ಕತೆರಿನಾ ತಾಯಿ–ತಂದೆ ಸಮಾಜದ ತಿರಸ್ಕಾರ, ಕ್ರೌರ್ಯಕ್ಕೆ ಭೀತಳಾಗುವದಿಲ್ಲ. ಅವಳು ಪ್ರಣಯದ ಹಾದಿಯಲ್ಲಿ ತಾನಿಟ್ಟ ಹೆಜ್ಜೆಯನ್ನು ಹಿಂತೆಗೆದುಕೊಳ್ಳುವದಿಲ್ಲ. ಇವಾನ್ ತನ್ನನ್ನು ಬಿಟ್ಟು ಹೋದರೂ, ಯುದ್ಧ ಮುಗಿದು ಅವನು ಹಿಂದಿರುಗಿ ಬರುವ ವರೆಗೂ ಕಾದಿರಲು ಸಿದ್ಧವಾಗಿರುತ್ತಾಳೆ. ಮದುವೆಯಿಲ್ಲದೆಯೆ ಮಗುವಿಗೆ ಜನ್ಮವಿತ್ತ ಕತೆರಿನಾ ಪಡಬಾರದ ಕಷ್ಟಗಳನ್ನೆಲ್ಲ ಪಡಬೇಕಾಯಿತು ಸುತ್ತಲಿನ ಸಮಾಜದ ಕ್ರೂರ ಹಾಗೂ ಬಿರುನುಡಿಗಳನ್ನು ಕೇಳಿ ಕೇಳಿ, ಅವಳು ರೋಸಿ ಹೋದಳು. ಒಂದಿಲ್ಲ ಒಂದು ದಿನ ಯುದ್ಧದಿಂದ ಮರಳಿಬಂದು ಇವಾನ್ ತನ್ನನ್ನು ಸ್ವೀಕರಿಸುವನೆಂಬ ಬಲವಾದ ನಂಬಿಕೆ–ಅವಳಲ್ಲಿತ್ತು. ಜನ ಏನಾದರೂ ಅಂದುಕೊಳ್ಳಲಿ. ಇವಾನ್ ಬರುವವರೆಗೆ ಅದನ್ನೆಲ್ಲ ಅವಳು ಸಹಿಸುತ್ತಲೆ ಇದ್ದಳು. ಸಮಾಜದ ಕ್ರೋಧ–ತಿರಸ್ಕಾರಗಳನ್ನು ಹೇಗೊ ನುಂಗಿಕೊಳ್ಳುತ್ತಲೆ ಇದ್ದಳು. ಯುದ್ಧ ಮುಗಿದ ವಾರ್ತೆ ತಿಳಿದೊಡನೆ ತಾಯಿ–ತಂದೆಯರು ಕತೆರಿನಾಳಿಗೆ ಮಾಸ್ಕೋಕ್ಕೆ ಹೋಗಿ ಇವಾನ್‌ನನ್ನು ಸಂಧಿಸುವಂತೆ ಆಗ್ರಹ ಪಡಿಸುತ್ತಾರೆ. ಗಂಡನಿಲ್ಲದೆ ಹೆತ್ತವರ ಮನೆಯಲ್ಲಿರುವುದು ಸಮಂಜಸವಲ್ಲವೆಂದು ತಿಳಿ ಹೇಳಿದರು. ತಮ್ಮ ಮನೆತನಕ್ಕೆ ಅಲ್ಲ–ಸಲ್ಲದ ಕಲಂಕ ಬರುವುದೆಂದು ಕಿವಿಮಾತು ಹೇಳಿ ಅವಳನ್ನು ಬೀಳ್ಕೊಡುತ್ತಾರೆ. ಕತೆರಿನಾ ತನ್ನ ಪುಟ್ಟ ಮಗುವನ್ನೆತ್ತಿಕೊಂಡು ತಾಯಿ–ತಂದೆಯರಿಗೆ ಕೊನೆಯ ವಿದಾಯ ಹೇಳಿ, ಹಳ್ಳಿಯಿಂದ ಕೀವ್ ನಗರದತ್ತ ಹೊರಡುತ್ತಾಳೆ. ತಾನು ಹೊರಡುವ ಮುನ್ನ ತಾವಿಬ್ಬರೂ ಸಂಧಿಸಿದ್ದ ಹಣ್ಣಿನ ತೋಟಕ್ಕೆ ಹೋಗಿ, ಪ್ರಣಯ ಸಂದರ್ಭದ ಕಳೆದ ಕ್ಷಣಗಳನ್ನು, ದಿನಗಳನ್ನು ನೆನೆದು ಗೋಳಿಡುತ್ತಾಳೆ. ಅಲ್ಲಿಯ ತರು–ಮರ–ಹೂ–ಬಳ್ಳಿಗಳನ್ನು ಮಾತಾಡಿಸಿ ಮರುಗುತ್ತಾಳೆ. ಉಕ್ರೈನಿನ ಮಣ್ಣಿನ ಋಣ ತೀರಿತೆಂದು ಭಾವಿಸಿ ಅವಳು ಕಣ್ಣೀರಿಡುತ್ತಾಳೆ. ಮುಗ್ಧ ಮಗುವನ್ನುದ್ದೇಶಿಸಿ ತಾವಿಬ್ಬರೂ ಸಂಧಿಸಿದ ಸ್ಥಳ ಇದೇ ಎಂದು ಉಚ್ಚರಿಸುತ್ತಾಳೆ. ಅಲ್ಲಿಂದ ಬಿಟ್ಟು ಹೊರಡುವ ಮುನ್ನ ತನ್ನ ಪದರಿನಲ್ಲಿ ಒಂದಿಷ್ಟು ಹಿಡಿ ಮಣ್ಣನ್ನು ಕಟ್ಟಿಕೊಂಡು ಆ ಹಣ್ಣಿನ ತೋಟಕ್ಕೆ ಕೊನೆಯ

ನಮಸ್ಕಾರ ಹೇಳಿ ಹೊರಟು ಬಿಡುತ್ತಾಳೆ. ಸಂಸ್ಕೃತ (ಭಾರತದ) ಮಹಾಕವಿ ಕಾಲಿದಾಸನ ದುಷ್ಯಂತ ಶಕುಂತಲೆಯರ ಕತೆಗೂ ತರಾಸ್ ಷೆವ್‌ಚೆಂಕೊ ಅವರ ಕತೆರಿನಾ ಕತೆಗೂ ಒಂದಿಷ್ಟು ಹೋಲಿಕೆ ಇರುವುದನ್ನು ಗುರ್ತಿಸಬಹುದು. ಆಶ್ರಮವನ್ನು ಬಿಟ್ಟು ದುಷ್ಯಂತನೆಡೆಗೆ ಹೊರಟ ಶಕುಂತಲೆಗೂ ಹಳ್ಳಿಯನ್ನು ಬಿಟ್ಟು ಪಟ್ಟಣದೆಡೆಗೆ ಇವಾನ್‌ನನ್ನು ಹುಡುಕಲು ಹೊರಟು ನಿಂತಾಗಿನ ಕತೆರಿನಾಳ ಮನಃಸ್ಥಿತಿಗೂ ಒಂದು ಬಗೆಯ ಸೂಕ್ಷ್ಮ ಸಂಬಂಧ ಇರುವುದನ್ನು ಗಮನಿಸಬಹುದು. ಶಕುಂತಲೆ ಮತ್ತು ಕತೆರಿನಾಳ ಕತೆಗಳಲ್ಲಿ ಒಂದೇ ಬಗೆಯ ಪ್ರಣಯದ ಎಳೆಗಳು ಸೇರಿಕೊಂಡದ್ದನ್ನು ಪ್ರಾಜ್ಞರು ಪತ್ತೆ ಹಚ್ಚಬಹುದು. ಶಕುಂತಲೆ ಮಗುವನ್ನು ಆಶ್ರಮದಲ್ಲಿ ಬಿಟ್ಟು ಹೊರಟರೆ, ಕತೆರಿನಾ ಮಗುವನ್ನೆತ್ತಿಕೊಂಡು ತನ್ನ ಸಮಸ್ಯೆಗೆ ತಾನೇ ಪರಿಹಾರ ಕಂಡುಕೊಳ್ಳಲು ಯೋಜಿಸಿ ಹೊರಟಿರುವುದು ಅವಳ ಧೈರ್ಯ ಹಾಗೂ ದಿಟ್ಟತನಗಳನ್ನು ಎತ್ತಿ ತೋರುತ್ತದೆ. ದುಷ್ಯಂತ ಮರೆವಿನಿಂದ ಶಕುಂತಲೆಯನ್ನು ತಿರಸ್ಕರಿಸಿದಂತೆ ಇವಾನ್ ಕೂಡ ಕತೆರಿನಾಳನ್ನು ತಿರಸ್ಕರಿಸಿದ್ದುಂಟು. ದುಷ್ಯಂತ ತನಗರಿವಿಲ್ಲದೆಯೆ ತಿರಸ್ಕರಿಸಿದರೆ ಇವಾನ್ ಕತೆರಿನಾ ಯಾರೆಂಬುದನ್ನು ಗುರುತಿಸಿದರೂ, ತಿರಸ್ಕರಿಸುವ ತಪ್ಪು ಮಾಡುತ್ತಾನೆ. ಇಲ್ಲಿಯವರೆಗೆ ಕತೆರಿನಾ ಪಟ್ಟ ಕಷ್ಟ ಪರಂಪರೆಗಳು, ಸಹನೆ, ತಾಳ್ಮೆಗಳು ಅದಮ್ಯವಾಗಿವೆ. ಕೀವ್ ನಗರದಿಂದ ಮಾಸ್ಕೋಕ್ಕೆ ಹೋಗುವ ಹಾದಿಯಲ್ಲಿ ಅವಳು ಇವಾನ್‌ನ ಬರುವಿಗಾಗಿ ಕಾಯುತ್ತ ನಿಲ್ಲುವ ದೃಶ್ಯ ಕುತೂಹಲ ಹಾಗೂ ಸಹಾನುಭೂತಿಯನ್ನು ಸೆಳೆಯುತ್ತದೆ. ಅದು ಅವಳ ಅದಮ್ಯ ವಿಶ್ವಾಸ ಹಾಗೂ ಧೈರ್ಯದ ಪ್ರತೀಕವಾಗಿದೆ. ಯುದ್ಧ ಮುಗಿದು ಸೈನಿಕರು ಮಾಸ್ಕೋ ಮಾರ್ಗವಾಗಿ ಹೊರಟಿರುತ್ತಾರೆ. ಅದೇ ದಾರಿಗೆ ಇವಾನ್ ಬಂದೇ ಬರುವನೆಂದು ಅವಳಿಗೆ ಅಷ್ಟೊಂದು ಆತ್ಮವಿಶ್ವಾಸವಿತ್ತು. ಜಾತಕದಂತೆ ಕಾಯುತ್ತಿದ್ದ ಕತೆರಿನಾ ಕುದುರೆ ಸವಾರನಾಗಿ ಮುಂಚೂಣಿಯಲ್ಲಿ ಬಂದ ಇವಾನನನ್ನು ಗುರುತಿಸಿ, ಕೊರಳಪಟ್ಟಿಯನ್ನು ಹಿಡಿದು, ಕುದುರೆಯನ್ನು ನಿಲ್ಲಿಸಿ, ಇವಾನನೊಡನೆ ತನ್ನ ಗೋಳನ್ನು ತೋಡಿಕೊಳ್ಳುತ್ತಾಳೆ. ಇವಾನನ ಮನಸ್ಸು ಬದಲಾದದ್ದು ಇನ್ನೂ ಅವಳ ಗಮನಕ್ಕೆ ಬಂದಿರಲಿಲ್ಲ. ಎಷ್ಟು ಹೇಳಿದರೂ ಅವನು ತನ್ನನ್ನು ಗುರ್ತಿಸದಿರುವಾಗ, ಸಮೀಪದ ಗುಡಿಸಲಿನಲ್ಲಿದ್ದ ಅವನಿಂದ ಹುಟ್ಟಿದ ತನ್ನ ಮಗುವನ್ನು ತರಲು ಅಲ್ಲಿಗೆ ಧಾವಿಸುತ್ತಾಳೆ. ಮಗುವಿನ ಮುಖವನ್ನು ನೋಡಿದ ಮೇಲಾದರೂ ಅವನು ತನ್ನನ್ನು ತಿರಸ್ಕರಿಸಲಾರನೆಂಬ ವಿಶ್ವಾಸ ಇನ್ನೂ ಅವಳಲ್ಲಿತ್ತು. ಗುಡಿಸಲಿಗೆ ಧಾವಿಸಿದವಳು ಕೆಲವೇ ಮಿನೀಟುಗಳಲ್ಲಿ ಮಗುವನ್ನೆತ್ತಿಕೊಂಡು ಬರುತ್ತಾಳೆ.

"ಇದೋ ನೋಡು, ಈ ಮಗುವಿನ ಮುಖ ನೋಡು. ಈಗಲಾದರೂ ಗುರ್ತಿಸು"

–ಹೀಗೆಂದು ಅವಳು ಭಾವನಾತ್ಮಕವಾಗಿ ನುಡಿಯುತ್ತಾಳೆ. ಆದರೆ, ಅವಳ ಆ ಮೊರೆಯನ್ನು ಕೇಳಲು ಇವಾನ್ ಅಲ್ಲಿರಲಿಲ್ಲ. ಅವನು ಕುದುರೆಯನ್ನೋಡಿಸಿ ಕೊಂಡು ಹೋಗಿ ದೂರ ಮರೆಯಾಗಿ ಬಿಟ್ಟಿದ್ದ. ಈ ವರೆಗೆ ಅವಳು ಇವಾನ್‌ನನ್ನು ನಂಬಿಕೊಂಡದ್ದು ವ್ಯರ್ಥವೆನ್ನಿಸಿತು. ಅವಳ ಮನಸ್ಸು ತೀವ್ರ ನಿರಾಶೆಯ ಸುಳಿಗೆ ಸಿಕ್ಕಿತು. ಇವಾನ್‌ನ ಜೊತೆಗೆ ಬಂದ ಸೈನಿಕರನ್ನು ಅಂಗಲಾಚಿಸಿ ಕೊಂಡು ಮಗುವನ್ನೊಯ್ದು ತಂದೆ ಇವಾನ್‌ಗೆ ಒಪ್ಪಿಸುವಂತೆ ಅವಳು ದೈನ್ಯದಿಂದ ಯಾಚಿಸುತ್ತಾಳೆ. ಅವಳ ಮಾತನ್ನು ಕೇಳಿದ ಸೈನಿಕರು ಅಟ್ಟಹಾಸದಿಂದ ನಕ್ಕು ಅಲ್ಲಿಂದ ಹೊರಟು ಹೋಗುತ್ತಾರೆ. ಈ ಘಟನೆಯಿಂದ, ಅವಹೇಳನದಿಂದ ಅವಳಿಗೆ ಬರಸಿಡಿಲೆರಗಿದಂತಾಯಿತು. ಈಗ ಅವಳಿಗೆ ಉಳಿದದ್ದು ಒಂದೇ ಒಂದು ದಾರಿಯಾಗಿತ್ತು. ತಂದೆಯಾದವನು ಮಗುವನ್ನು ತಿರಸ್ಕರಿಸಿ ಹೊರಟು ಹೋದದ್ದಕ್ಕೆ ರೋಷದಿಂದ ಅವಳು ಕೆಂಡವಾದಳು. ತಾನು ಇಷ್ಟು ವರ್ಷ ಮಗುವನ್ನು ಸಾಕಿದ್ದಾಯಿತು. ಮಗು ಆತನ ಪಾಪದ ಪಿಂಡವಾಗಿದ್ದರಿಂದ ಕ್ರೋಧತಪ್ತಳಾದ ಅವಳು ಜಗತ್ತಿಗೆ ಸವಾಲೊಡ್ಡುವಂತೆ ಮಾಸ್ಕೋಕ್ಕೆ ಹೋಗುವ ಆ ಹಾದಿಯ ಮೇಲೆ ಮಗುವನ್ನಿಟ್ಟು–

"ಮಗೂ, ನಿನ್ನ ತಾಯ್ತನದ ಋಣ ಇಂದಿಗೆ ತೀರಿತು. ಇನ್ನು ಮೇಲೆ ನೀನೆ ನಿನ್ನ ತಂದೆಯನ್ನು ಹುಡುಕಿಕೋ"

–ಎಂದು ತೀವ್ರ ನಿರಾಶೆಯಿಂದ ನುಡಿದು ಅಲ್ಲಿಂದ ಅವಳು ಹುಚ್ಚಿಯಂತೆ ಚೀರುತ್ತ ಕಾಡಿನ ಕಡೆಗೆ ಓಡಿದಳು. ಹಾಗೆ ಓಡೋಡುತ್ತ ಹೋದವಳು ಬರ್ಫದ ಬಂಡೆಗಲ್ಲಿನ ಮೇಲುರುಳಿ ಹಿಮನದಿಯಲ್ಲಿ ತೇಲುತ್ತ, ತನ್ನೆಡಲಿನಲ್ಲಿ ಹೊತ್ತಿ ಉರಿಯುತ್ತಿದ್ದ ಸೇಡಿನ ಕಿಚ್ಚನ್ನು ಆರಿಸಿಕೊಂಡಳು.

ಹೀಗೆ ಕತೆರಿನಾಳ ಬದುಕು ದುರಂತದಲ್ಲಿ ಮುಕ್ತಾಯಗೊಳ್ಳುತ್ತದೆ. ಜಗತ್ತಿಗೆ ಅವಳೊಂದು ಸವಾಲನ್ನೊಡ್ಡಿ ಮರೆಯಾಗುತ್ತಾಳೆ. ಅವಳ ದುರಂತ ತನ್ನ ಮೇಲಾದ ಶೋಷಣೆಯ ಭಯಂಕರ ಮುಖವೊಂದನ್ನು ತೆರೆದು ತೋರುತ್ತದೆ. ಸುತ್ತಲಿನ ಸಮಾಜದ ಕ್ರೌರ್ಯ, ಅಧಿಕಾರ, ಹಾಗೂ ಸಿರಿವಂತಿಕೆಯ ದರ್ಪಗಳು ಮಾನವೀಯ ಮೌಲ್ಯಗಳನ್ನು, ಮುಗ್ಧ ಬದುಕನ್ನು ನಷ್ಟಗೊಳಿಸುತ್ತವೆಯೆಂಬುದನ್ನು ಸಂಕೇತಿಸುತ್ತದೆ. ಕತೆರಿನಾ ಒಡ್ಡಿದ ಸಮಸ್ಯೆ ಇಂದಿಗೂ ಜೀವಂತ ಸಮಸ್ಯೆಯಾಗಿ ಹೆಡೆಯೆತ್ತಿ ನಿಂತು ಪ್ರಜ್ಞಾವಂತ ವಿಚಾರವನ್ನು ಕೆಣಕುವಂತಿದೆ. ಅವಳು ಹಾಗೆ ಬೀದಿಯಲ್ಲಿ ಬಿಟ್ಟು ಹೋದ ಆ ಅನಾಥ ಮಗು ಒಬ್ಬ ಭಿಕ್ಷುಕನ ಆಶ್ರಯದಲ್ಲಿ ಬೆಳೆಯುತ್ತ ಮತ್ತೆ ಕತೆ ಬೆಳೆಯುತ್ತದೆ.

ತರಾಸ್ ಷೆವ್‌ಚೆಂಕೊ ಕತೆರಿನಾ ನೀಳ್ಗವನವನ್ನು ಕಥಾನಾಯಿಕೆಯ ದುರಂತದೊಂದಿಗೆ ಮುಗಿಸಿಲ್ಲದಿರುವುದು ಅತ್ಯಂತ ಗಮನಾರ್ಹ. ಇಂಥ ಸಾಮಾಜಿಕ ದುರಂತಕ್ಕೆ ಪಾಪಕ್ಕೆ ಕಾರಣನಾದ ಇವಾನ್‌ನನ್ನು ಇನ್ನೊಮ್ಮೆ ಆ ಭಿಕ್ಷುಕ ಮಗುವಿದ್ದಲ್ಲಿಗೆ ತಂದು ಕೊನೆಯ ಸನ್ನಿವೇಶವನ್ನು ಸೃಷ್ಟಿಸಿದ್ದು– ಕವಿಯ ಸಾಮಾಜಿಕ ಪ್ರಜ್ಞೆಯ ದ್ಯೋತಕವಾಗಿದೆ ಮಾಸ್ಕೊ ಮಾರ್ಗವಾಗಿ ಬಂದ ಕುದುರೆಗಾಡಿಯೊಂದು ಕೀವ್ ನಗರಕ್ಕೆ ಹೊರಟದ್ದು ಅದು ಭಿಕ್ಷುಕ ಮತ್ತು ಮಗುವಿದ್ದಲ್ಲಿಗೆ ಬಂದು ನಿಲ್ಲುತ್ತದೆ. ಇವಾನ್ ಕೈಹಿಡಿದ ಇನ್ನೊಬ್ಬ ಹೆಂಡತಿ ಆ ಕುದುರೆಗಾಡಿಯಲ್ಲಿ ವಿರಾಜಿಸಿರುತ್ತಾಳೆ. ಅವಳು ಕುದುರೆಯ ಗಾಡಿಯತ್ತ ಭಿಕ್ಷೆ ಕೇಳಲು ಧಾವಿಸಿ ಬಂದ ಆ ಮಗುವನ್ನು ಮಾತಾಡಿಸಿ, ಅವನ ಹೆಸರನ್ನು ಕೇಳುತ್ತಾಳೆ. ತನ್ನ ಹೆಸರು "ಪುಟ್ಟ ಇವಾನ್" ಎಂದು ಆ ಮಗು ಉತ್ತರಿಸಿದಾಗ ಇವಾನ್ ದಂಗಾಗಿ ಆ ಮಗುವನ್ನು ಕಕ್ಕಾವಿಕ್ಕಿಯಾಗಿ ದೃಷ್ಟಿಸುತ್ತಾನೆ. ಅವನು ತನ್ನಿಂದ ಹುಟ್ಟಿದ ಮಗುವೆಂದು ಖಚಿತವಾಗಿ; ಯಾವುದೋ ಶಕ್ತಿ ತನ್ನನ್ನು ಹಿಡಿದು ಅಲ್ಲಾಡಿಸಿದಂತಾಗುತ್ತದೆ. ಆದರೂ ಅವನು ನಿರ್ದಯಿ ನಿಷ್ಕರುಣಿ. ತಾನು ಮಾಡಿದ ಪಾಪ ತನ್ನನ್ನು ಸುತ್ತೀತೆಂದು ಹೆದರಿ, ಹೌಹಾರಿ ಪಾಪವನ್ನು ಬಚ್ಚಿಟ್ಟುಕೊಳ್ಳುತ್ತಾನೆ. ಪಾಪ ಮಾಡಿದವನಲ್ಲಿ ಪಾಪ ಬೆಳೆಯುವುದನ್ನು ತೋರಿಸುವುದು ಕವಿಯ ಉದ್ದೇಶವಾಗಿದೆ. "ಎಷ್ಟೊಂದು ಮುದ್ದಾಗಿದೆ ಮಗು." ಎಂದು ಹೆಂಡತಿ ಉದ್ಗರಿಸಿದರೂ ಇವಾನ್‌ನ ಪಾಷಾಣ ಹೃದಯದಲ್ಲಿ ಸಹಾನುಭೂತಿಯ ಸೆಲೆಯೊಡೆಯುವದಿಲ್ಲ. ಆತನ ಹೃದಯ ಕಲ್ಲಾಗಿರುವುದನ್ನು ಹಾಗೂ ಆತನು ತನ್ನ ಪಾಪವನ್ನು ಬಚ್ಚಿಟ್ಟುಕೊಳ್ಳುವುದನ್ನು ಬಹಿರಂಗಪಡಿಸುವದರೊಂದಿಗೆ ಉಕ್ರೇನಿಯನ್ ಭಾಷೆಯ ಈ ತರಾಸ್ ಷೆವ್‌ಚೆಂಕೊ ಕಾವ್ಯ ಮುಗಿಯುತ್ತದೆ.

ಈ ಕಾವ್ಯದ ಮುಖ್ಯಾಂಶಗಳನ್ನು ಮುಖ್ಯ ಸಂದರ್ಭ, ಸನ್ನಿವೇಶ, ಘಟನೆಗಳನ್ನು ಗಮನದಲ್ಲಿಟ್ಟುಕೊಂಡು ಕನ್ನಡದ ಈ ಕತೆರಿನಾ ಒಂದು ನವೀನ ಸೃಷ್ಟಿಯಾಗಿದೆಯೆಂದು ನನ್ನ ಅನಿಸಿಕೆ. ನನ್ನ ಕಲ್ಪನಾಶಕ್ತಿಯಿಂದ ನಾಟಕಕ್ಕೆ ಒಗ್ಗಬಹುದಾದ ಕೆಲವು ಸನ್ನಿವೇಶ, ಸಂದರ್ಭಗಳನ್ನು ಅಲ್ಲಲ್ಲಿ ಹಿಗ್ಗಿಸಬೇಕಾದದ್ದು ಅನಿವಾರ್ಯ. ಮೂಲ ಕಾವ್ಯ 'ಕತೆರಿನಾ'ದಲ್ಲಿ ಸಾಕಷ್ಟು ನಾಟಕೀಯ ಅಂಶಗಳಿದ್ದುದು ನನ್ನ ಗಮನ ಸೆಳೆದದ್ದೇ ಇದನ್ನೊಂದು ನಾಟಕವನ್ನಾಗಿ ಮಾರ್ಪಡಿಸಲು ಕಾರಣವಾದದ್ದು. ಕತೆರಿನಾಳ ಪ್ರಣಯ, ಅವಳು ಎದುರಿಸುವ ಸಮಾಜ–ಇದು ಎಲ್ಲ ಕಡೆಗೂ ಇದ್ದದ್ದೇ. ತಾನು ಮಾಡಿದ ತಪ್ಪಿಗಾಗಿ ಅವಳು ಒಂಟಿಯಾಗಿಯೇ ಆ ಸಮಸ್ಯೆಯನ್ನು ಎದುರಿಸಿ, ಅದಕ್ಕೆ ಪರಿಹಾರವನ್ನು ಕಂಡುಕೊಳ್ಳಲು ಹೊರಟದ್ದು ಅವಳ ದಿಟ್ಟತನ ಹಾಗೂ

ಧೈರ್ಯಕ್ಕೊಂದು ಮಾದರಿಯಾಗಿದೆ. ಕೀವ್ ಹಾಗೂ ಮಾಸ್ಕೋದ ದಾರಿಯನ್ನು ಮುಟ್ಟುವವರೆಗೆ ಅವಳು ಅನುಭವಿಸುವ ಕಷ್ಟ-ನಷ್ಟ, ಅಡೆ-ತಡೆಗಳು ಅಷ್ಟಿಷ್ಟಲ್ಲ. ತನ್ನ ಪ್ರಿಯತಮನನ್ನು ಭೆಟ್ಟಿಯಾಗಬೇಕೆನ್ನುವ ಬಲವಾದ ಇಚ್ಛೆಯಿಂದ ಅವಳು ಎಲ್ಲ ಕಷ್ಟಗಳನ್ನು ಮೆಟ್ಟಿ ನಿಂತಿದ್ದಾಳೆ. ಅವಳೊಬ್ಬ ಅನಾಥೆಯಂತೆ, ಭಿಕ್ಷುಕಿಯಂತೆ ಹರಕುಬಟ್ಟೆ ತೊಟ್ಟು ಮಗುವಿಗಾಗಿ ಅನ್ಯರೆದುರು ಕೈಯೊಡ್ಡುವುದಕ್ಕೂ ಹಿಂದೆ-ಮುಂದೆ ನೋಡುವುದಿಲ್ಲ. ಅವಳ ಅದಮ್ಯ ಆಶಾವಾದ ಅವಳನ್ನು ಗಟ್ಟಿಗೊಳಿಸಿರುತ್ತದೆ. ಸುರಿಯುವ ಹಿಮದಲ್ಲಿ ಗಂಟು-ಗದಡಿಯನ್ನು, ಮಗುವನ್ನು ಕಟ್ಟಿಕೊಂಡು ಅಲೆದಾಡುವ ಚಿತ್ರ ಚಿತ್ತವೇಧಕವಾಗಿದೆ. ಈ ಕತೆಯಲ್ಲಿ ಇವಾನ್ ಕತೆರಿನಾಳನ್ನು ಬಿಟ್ಟು ಯುದ್ಧಕ್ಕೆ ಹೊರಡುವ ಪೂರ್ವದಲ್ಲಿ ಅವಳು ತನಗೆ ಬಿದ್ದ ಕನಸೊಂದನ್ನು ನಿವೇದಿಸುತ್ತಾಳೆ. ತಾವಿಬ್ಬರೂ ಕನಸಿನಲ್ಲಿ ಗಿಳಿಗಳಾಗಿದ್ದು ಬೆಚ್ಚಗೆ ಇದ್ದದ್ದು, ಅನಂತರ ರಾಕ್ಷಸ ಕೈಯೊಂದು ಬಂದು ತನ್ನನ್ನು ಎಳೆದುಕೊಂಡದ್ದು, ಇವಾನ್ ಅಲ್ಲಿ ಇರದೆ ಅನ್ಯ ಪೊದೆಯೊಂದರಲ್ಲಿ ಇದ್ದದ್ದು. ಅಲ್ಲದೆ ಭಿಕ್ಷುಕನೊಬ್ಬ ಕತೆರಿನಾಳಿಗೆ ಸಹಾನುಭೂತಿ ತೋರಿ, ತನ್ನ ಗುಡಿಸಲಲ್ಲಿರುವಂತೆ ಹೇಳಿ ಆಶ್ರಯವಿತ್ತದ್ದು, ಭಿಕ್ಷುಕ ಪುಟ್ಟ ಇವಾನನಿಗೆ ಸಂಕ್ಷಿಪ್ತವಾಗಿ ತನ್ನ ಕತೆ ಹೇಳಿದ್ದು –ಇಂಥ ಕೆಲವು ಸನ್ನಿವೇಶಗಳನ್ನು ಸಂದರ್ಭಕ್ಕೆ ತಕ್ಕಂತೆ ಈ ಕನ್ನಡ ನಾಟಕದಲ್ಲಿ ಮೂಡಿ ಬಂದಿದ್ದು ಇವುಗಳನ್ನು ಕನ್ನಡ ಹಾಗೂ ಉಕ್ರೇನಿಯನ್ ವಿಮರ್ಶಕರು ಗಮನಿಸಬಹುದೆಂದು ಭಾವಿಸಿದ್ದೇನೆ. ಈ ದೃಶ್ಯ ನಾಟಕವನ್ನು ಬಾನುಲಿ, ಟೀವ್ಹಿ, ಫಿಲ್ಮ್ ಮಾಧ್ಯಮಗಳಿಗೆ ಬಳಸಿಕೊಳ್ಳಬಹುದು. ಮೂಲಕಾವ್ಯದ ನಾಟಕೀಯ ಸನ್ನಿವೇಶಗಳು ಇನ್ನಷ್ಟು ಕಳೆಕಟ್ಟುವಂತೆ ಕತೆರಿನಾ ಮೂಡಿರುವುದೆಂದು ನನ್ನ ಭಾವನೆ. ಕಾವ್ಯಕ್ಕಿಂತ ದೃಶ್ಯ ನಾಟಕ ಮಾಧ್ಯಮ ಅಖಂಡ ಜನ ಸಮುದಾಯವನ್ನು ನೇರವಾಗಿ ಮುಟ್ಟಿ, ಅವರ ಹೃದಯ-ಮನಸ್ಸುಗಳಲ್ಲಿ ಕ್ರಿಯೆ-ಪ್ರತಿಕ್ರಿಯೆಗಳನ್ನು ಹುಟ್ಟಿಸಬಲ್ಲದು. ಮೂಲದ 'ಕತೆರಿನಾ' ಕಥನ ಕವನ ಇಲ್ಲಿ ಹೊಸ ಮೈ, ಹೊಸ ರೂಪದೊಂದಿಗೆ ನಾಟಕವಾಗಿ ಮಾರ್ಪಟ್ಟಿದೆ.

ತರಾಸ್ ಶೆವ್‌ಚೆಂಕೊ ಅವರ 'ಕತೆರಿನಾ' ಕಥನಕಾವ್ಯ ನಮ್ಮಲ್ಲಿಯ ಶಕುಂತಲೆ ಮತ್ತು ಚಿತ್ರಾಂಗದೆಯರ ಕತೆಗಳನ್ನು ನೆನಪಿಗೆ ತರುತ್ತದೆ. ನಮ್ಮ ಕತೆಗಳಲ್ಲಿ ಗಾಂಧರ್ವ ವಿವಾಹ ಜರುಗುವಂತೆ 'ಕತೆರಿನಾ' ಕತೆಯ ಪ್ರೇಮಿಗಳಿಬ್ಬರೂ ಚಂದ್ರ-ಸೂರ್ಯ ಸಾಕ್ಷಿಯಾಗಿ ಅಮಿತ ವಿಶ್ವಾಸ-ಪ್ರೀತಿಗಳಿಂದ ಒಬ್ಬರೊಬ್ಬರು ಸಂಧಿಸುತ್ತಾರೆ. ನಮ್ಮಲ್ಲಿಯ ಕತೆಗಳು ಪೌರಾಣಿಕ ಪರಿಸರವನ್ನು ಕಟ್ಟಿಕೊಂಡು ಬೆಳೆದಿವೆ. ಆದರೆ, ಪ್ರಸ್ತುತ ಕತೆರಿನಾ

ಸಾಮಾಜಿಕ ಅನಿಷ್ಟ, ಶೋಷಣೆ ಹಾಗೂ ದುರಂತದ ಪ್ರತೀಕವಾಗಿ ಗಮನ ಸೆಳೆಯುತ್ತದೆ. ಕತೆರಿನಾಳ ಶುದ್ಧಪ್ರೇಮ, ಅಚಲ ವಿಶ್ವಾಸ ಹಾಗೂ ದಿಟ್ಟತನ ಇವು ಬದುಕಿಗೆ ಧೈರ್ಯ–ಸ್ಥೈರ್ಯಗಳನ್ನು ತಂದು ಕೊಡುತ್ತವೆ. ತಾಯಿ–ತಂದೆಗಳು ತಮ್ಮ ಮಗಳು ಕತೆರಿನಾಳನ್ನುದ್ದೇಶಿಸಿ, ಗಂಡನಿಲ್ಲದೆ ತವರುಮನೆಯಲ್ಲಿರುವುದು ಸರಿಯಲ್ಲವೆಂದು, ಮಾಸ್ಕೊಕ್ಕೆ ಹೋಗಿ ಗಂಡನನ್ನು ಸಂಧಿಸಬೇಕೆಂದು ಕಿವಿಮಾತು ಹೇಳುತ್ತಾರೆ. ಕತೆರಿನಾ ಹಳ್ಳಿಯ ಪರಿಸರವನ್ನು ಬಿಟ್ಟುಕೊಟ್ಟು ನಗರದತ್ತ ಹೊರಡುವ ಮುನ್ನ ಅವಳು ತಮ್ಮಿಬ್ಬರ ಪ್ರಣಯ ಅಂಕುರಿಸಿದ, ಬೆಳೆದ ತೋಟದಲ್ಲಿ ನಿಂತು ತರು–ಮರ–ಹೂ ಬಳ್ಳಿಗಳನ್ನು ಕಂಡು ಮರುಗುವ ಸನ್ನಿವೇಶ ಮಹಾಕವಿ ಕಾಳಿದಾಸನ ಶಾಕುಂತಲ ನಾಟಕವನ್ನು ನೆನಪಿಗೆ ತರುವುದು–ಸಂಶೋಧಕರ ಗಮನ ಸೆಳೆಯುವಂತಿದೆ. ಕತೆರಿನಾ ತನ್ನ ಮಗುವನ್ನು ಬೀದಿಯಲ್ಲಿ ಬಿಟ್ಟು ಹೋಗುವುದು ಹಾಗೂ ಆತ್ಮಹತ್ಯೆ ಮಾಡಿಕೊಂಡು ಸಮಾಜಕ್ಕೆ ಸವಾಲೊಡ್ಡಿ ನಿಲ್ಲುವುದರಿಂದ ಕತೆರಿನಾ ನಾಟಕಕ್ಕೆ ಒಂದು ಹೊಸ ತಿರುವು ಬರಲು ಕಾರಣವಾಗಿದೆ. ಇವಾನ್‌ನ ಹೆಂಡತಿ ಕೊಟ್ಟ ನಾಣ್ಯಗಳು ಮಗುವಿನಲ್ಲಿ ಸಂತೋಷವನ್ನು ಹುಟ್ಟಿಸುತ್ತವೆ. ಮಗು ಅವುಗಳನ್ನು ಎಣಿಸುವುದರಲ್ಲಿ ಮಗ್ನವಾಗಿದ್ದಾಗ ಭಿಕ್ಷುಕ ಮುದುಕ ಕುದರೆಗಾಡಿಯಲ್ಲಿದ್ದ ಇವಾನ್‌ನನ್ನು ದೃಷ್ಟಿಸಿ ಅವನು ಯಾರೆಂಬುದನ್ನು ಗುರ್ತಿಸಿ, ಭಯಂಕರ ರೋಷದಿಂದ ಆ ನಾಣ್ಯಗಳನ್ನೆಲ್ಲ ರಸ್ತೆಗೆ ತೂರಿ ಬಿಡುತ್ತಾನೆ. "ಮೂರ್ಖನ ಹಣ ಬೇಡ ನಡೆ" ಎಂದು ಮಗುವನ್ನು ಕರೆದುಕೊಂಡು ಹೊರಡುತ್ತಾನೆ. ಕನ್ನಡ ನಾಟಕದ ಈ ಕೊನೆಯ ಬದಲಾವಣೆಯನ್ನು ಉಕ್ರೇನಿಯನ್ ವಿಮರ್ಶಕರು ಮೆಚ್ಚಬಹುದೆಂದು ಭಾವಿಸಿದ್ದೇನೆ.

'ಕತೆರಿನಾ' ರೋಮ್ಯಾಂಟಿಕ್ ಆದರ್ಶಗಳಿಂದ ಮುಕ್ತವಾಗಿರುವುದಲ್ಲದೆ ಇದೊಂದು ವಾಸ್ತವಿಕ ಬದುಕಿನ ರೈತನ ಮಗಳೊಬ್ಬಳ ಸತ್ಯಕಥೆಯಾಗಿರುವುದು ಗಮನಾರ್ಹ. ಮೂಲ ಪಾತ್ರಗಳು ಇಲ್ಲಿ ಬದಲಾಗಿವೆ.

ಕನ್ನಡ ನಾಟಕದಲ್ಲಿ (ಕತೆರಿನಾ) ಕಾತ್ಯಾಯಿನಿ (ತಾಯಿ) ಗೋಮಾತಾಯಿ (ತಂದೆ) ರಾಮರಾಯ, (ಇವಾನ್) ಜೀವಣ್ಣ, ಪುಟ್ಟ (ಇವಾನ್) ಪುಟ್ಟ ಜೀವಣ್ಣ ಆಗಿದ್ದಾರೆ.

ತಿರುನೀಲಕಂಠಯ್ಯನ ಚಾರಿತ್ರ

● ವೀರಣ್ಣ ರಾಜೂರ

ಕವಿ :

'ತಿರುನೀಲಕಂಠಯ್ಯನ ಚಾರಿತ್ರ'ದ ಕರ್ತೃ ಚೆನ್ನಮಲ್ಲೇಶ. ಇವನ ಸ್ಥಳ ಕಲಬುರಗಿ ಜಿಲ್ಲೆ ಆಳಂದ ತಾಲೂಕಿಗೆ ಸೇರಿದ ಅಂಬುಲಿಗೆ[1]. ಊರ ಹೆಸರನ್ನು ಸೇರಿಸಿ ಇವನಿಗೆ 'ಅಂಬುಲಿಗೆ ಚೆನ್ನಮಲ್ಲೇಶ' ಎಂದು ಕರೆಯುವುದು ರೂಢಿ. ಇಷ್ಟದೈವ ಶ್ರೀಗಿರಿಯ ಚೆನ್ನಮಲ್ಲೇಶ. ಇವನನ್ನು ಕವಿ ತನ್ನೆಲ್ಲ ಕೃತಿಗಳಲ್ಲಿ ಸ್ತುತಿಸಿದ್ದಾನೆ. ಪ್ರಸ್ತುತ ಕೃತಿಯಲ್ಲಿ 'ಶ್ರೀಗಿರಿವಾಸ' ಎಂದು ಸಂಬೋಧಿಸಿದ್ದಾನೆ. ಕಾಲ ಸು. ೧೬೭೦. ಮತ ವೀರಶೈವ, 'ಕಲಬುರಗಿ ದೇಶ ಅಂಬುಲಿಗಿವೋದಿಸುವ ಸಲೆಭಕ್ತ ಚೆನ್ನಮಲ್ಲಯ್ಯ'[2] ಎಂದು ತನ್ನನ್ನು ಕರೆದುಕೊಂಡಿರುವುದರಿಂದ ಇವನು ಉಪಾಧ್ಯಾಯನಾಗಿರಬೇಕು.

ಕೃತಿಗಳು :

ಸದ್ಯ ಅಂಬುಲಿಗೆ ಚೆನ್ನಮಲ್ಲೇಶ ರಚಿಸಿದ ೧೨ ಕೃತಿಗಳು ಲಭ್ಯವಾಗಿವೆ.

೧. ದೀಪದ ಕಲಿಯಾರ ಸಾಂಗತ್ಯ (ಸಂಧಿ ೯, ಪದ್ಯ ೧೦೪೬)[3]

೨. ಶಿಬಿಚಕ್ರವರ್ತಿಯ ಸಾಂಗತ್ಯ (೯–೯೫೫)[4]

೩. ವೀರಸಂಗಯ್ಯನ ಚೌಪದಿ (ಪದ್ಯ–೯೨)[5]

೪. ಗಂಗಿಗೌರೀ ಚೌಪದನ (ಪದ್ಯ ೯೮)[6]

---

1. ವೀರಸಂಗಯ್ಯನ ಚೌಪದಿ (ಪದ್ಯ 91)
2. ಅದೇ.
3. ಪ್ರಕಟಿತ. ಸಂಪಾದಕರು : ಡಾ. ಎಸ್. ವಿದ್ಯಾಶಂಕರ ಮತ್ತು ಎಸ್. ಶಿವಣ್ಣ, ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ ಬೆಂಗಳೂರು.
4. ಅಪ್ರಕಟಿತ. ಬಿ. 951 (ಬೆಂ).
5. ಜೀವನ ಜೋಕಾಲಿ (ಭಾಗ-1) ಪು. 75-93. ಸಂ. ಡಾ. ಎಂ. ಎಸ್. ಸುಂಕಾಪುರ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.
6. ಅದೇ ಪು. 19–35.

೫. ಹರಳಯ್ಯನ ವಾದಖಾಂಡ ಚೌಪದನ [7]
೬. ಶ್ವೇತನ ವಾರ್ಧಿಕ [8]
೭. ಸಿರಿಯಾಳ ಚೆಂಗಳೆ ವಾರ್ಧಿಕ (ಪದ್ಯ–೩೩)[9]
೮. ಮಠಸ್ಥಲವಾರ್ಧಿಕ [10]
೯. ನವಗಣಂಗಳ ಸ್ತೋತ್ರ (ವಾ. ಷ. ೩೪)[11]
೧೦. ತಿರುನೀಲಕಂಠಯ್ಯನ ಚಾರಿತ್ರ (೪೨)[12]
೧೧. ಸಿಂಧು ಬಲ್ಲಾಳನ ಜೋಗುಳ [13]
೧೨. ಶಿಬಿರಾಜನ ಸ್ತುತಿ. (ತ್ರಿ. ೫–೫೨೩–ಅಪೂರ್ಣ)[14]

ಇವುಗಳಲ್ಲಿ ದೀಪದ ಕಲಿಯಾರ ಸಾಂಗತ್ಯ ಮತ್ತು ಶಿಬಿಚಕ್ರವರ್ತಿಯ ಸಾಂಗತ್ಯ ಗಾತ್ರದಲ್ಲಿ ದೊಡ್ಡ ಕೃತಿಗಳೆನಿಸಿದರೆ, ಉಳಿದುವೆಲ್ಲ ಚಿಕ್ಕ ಚಿಕ್ಕ ಕೃತಿಗಳಾಗಿವೆ. ಸಾಂಗತ್ಯ, ಷಟ್ಪದಿ, ತ್ರಿಪದಿ, ಚೌಪದಿ–ವಿವಿಧ ಛಂದಸ್ಸುಗಳಲ್ಲಿ ಕವಿ ಪರಿಣತ ನಾಗಿದ್ದು, ಪ್ರಯೋಗಮಾಡಿದ್ದಾನೆ. ಸಾಮಾನ್ಯರಿಗೆ ತಿಳಿಯಲೆಂಬ ಉದ್ದೇಶ ವಿಟ್ಟುಕೊಂಡು ಸರಳ ಭಾಷೆಯಲ್ಲಿ ಕಥೆಯನ್ನು ನೇರವಾಗಿ ಹೇಳಿಕೊಂಡು ಹೋಗಿದ್ದಾನೆ. ೧೨ ರಲ್ಲಿ ಈಗ ಐದು ಕೃತಿಗಳು ಪ್ರಕಟವಾಗಿವೆ; ಇನ್ನು ಏಳು ಪ್ರಕಟವಾಗಬೇಕಾಗಿವೆ. ಅಪ್ರಕಟಿತವಾಗಿರುವ ಏಳರಲ್ಲಿ ಒಂದು ಪ್ರಸ್ತುತ 'ತಿರುನೀಲಕಂಠಯ್ಯನ ಚಾರಿತ್ರ'.

ತಿರುನೀಲಕಂಠಯ್ಯನ ಚಾರಿತ್ರ :

ಇದು ೪೨ ಭಾಮಿನಿ ಷಟ್ಪದಿಗಳಲ್ಲಿ ರಚಿತವಾದ ಚಿಕ್ಕ ಕಾವ್ಯ. ೬೩ ಪುರಾತನ ಶಿವಭಕ್ತರಲ್ಲಿ ಮೊದಲಿಗನೆನಿಸಿದ ತಿರುನೀಲಕಂಠನ ಚರಿತ್ರೆ ಇದರ ವಸ್ತು. ಈ ಕಥೆ ಹರಿಹರನಿಂದ ರಗಳೆ ರೂಪದಲ್ಲಿ ಕನ್ನಡವನ್ನು ಪ್ರವೇಶಿಸಿ ಮುಂದೆ ಸ್ವತಂತ್ರಕೃತಿಯಾಗಿ, ವೀರಶೈವ ಅನೇಕ ಪುರಾಣಗಳಲ್ಲಿ ಉಪಕಥೆ ಯಾಗಿ ಬಂದು ತುಂಬ ಪ್ರಸಿದ್ಧಿಯನ್ನು ಪಡೆದಿದೆ. ಶಿಷ್ಟ ಸಾಹಿತ್ಯದಂತೆ

7. ಅಪ್ರಕಟಿತ ಬಿ. 907/2 (ಬೆಂ).
8. ಅಪ್ರಕಟಿತ ಬಿ. 741/6 (ಬೆಂ.)
9. ಪ್ರಕಟಿತ (ಸುಕುಮಾರ ?).
10. ಪ್ರಕಟಿತ (ಶಿವಾನುಭವ ?).
11. ಅಪ್ರಕಟಿತ ಕ. ಅಪೀ. 238/1.
12. ಎರಬೂದಿಹಾಳ ಪ್ರತಿ: ಬಿ. 741/8 (ಬೆಂ.) ಇದರಲ್ಲಿ 43 ಪದ್ಯಗಳಿವೆ.
13. ಅಪ್ರಕಟಿತ. ಕೆ. ಆರ್. ಅಯ್. 334.
14 ಅಪ್ರಕಟಿತ. ಬಿ. 1002 (ಬೆಂ); ಕೆ. ಆರ್. ಅಯ್. IX-66-2.

ಜನಪದ ಸಾಹಿತ್ಯದಲ್ಲಿಯೂ ಎಡೆಪಡೆದು ಸಣ್ಣಾಟ, ಲಾವಣಿ, ಬಿಡಿಹಾಡುಗಳ ರೂಪದಲ್ಲಿ ಜನಪ್ರಿಯತೆಯನ್ನು ಗಳಿಸಿದೆ. ಈ ಕಥೆಯನ್ನು ಚೆನ್ನಮಲ್ಲೇಶ ಇಲ್ಲಿ ಜಾನಪದ ರೀತಿಯಲ್ಲಿ ಶಿಷ್ಟ ಭಾಮಿನಿ ಷಟ್ಪದಿ ರೂಪದಲ್ಲಿ ಸಂಕ್ಷಿಪ್ತವಾಗಿ ಹೇಳಲು ಪ್ರಯತ್ನಿಸಿದ್ದಾನೆ. ಶಿವನಾಮ ಮಹಿಮೆಯನ್ನು ಸಾರುವ ಈ ಕಥೆಯನ್ನು ಹರಿಹರನ ಜಾಡು ಹಿಡಿದೇ ಹೇಳುತ್ತ ಸಾಗಿದ್ದರೂ ಕೆಲವು ವ್ಯತ್ಯಾಸಗಳನ್ನು ಮಾಡಿಕೊಂಡಿರುವುದು ಕಂಡುಬರುತ್ತದೆ. ಪ್ರಮುಖ ವ್ಯತ್ಯಾಸಗಳನ್ನು ಕೆಳಗಿನಂತೆ ಗುರುತಿಸಬಹುದು :

೧. ಹರಿಹರನ ರಗಳೆಯಲ್ಲಿ ತಿರುನೀಲಕಂಠನ ಹೆಂಡತಿಯ ಹೆಸರು 'ಮುತ್ತೈದೆ'. ಇಲ್ಲಿ ಅದು 'ವೈಕುಂಟಿಮ್ಮ' ಎಂದಾಗಿದೆ.

೨. ತಿರುನೀಲಕಂಠನ ಊರು 'ಪೊನ್ನಾಂಬಲ' ಎಂದು ಹರಿಹರನ ರಗಳೆ ಹೇಳುತ್ತದೆ. ಇಲ್ಲಿ ಅವನ ಊರ ಹೆಸರು ಸ್ಪಷ್ಟವಾಗಿಲ್ಲ.

೩. ತಿರುನೀಲಕಂಠಯ್ಯ ನಿತ್ಯ ಪೂಜಿಸುವ ದೈವದ ಹೆಸರು ಹರಿಹರನ ರಗಳೆಯ ಪ್ರಕಾರ ಪೊನ್ನಾಂಬಲೇಶ್ವರ. ಈ ಕೃತಿಯ ಪ್ರಕಾರ ಕುಂಡಲೇಶ್ವರ.

೪. ಹರಿಹರನ ರಗಳೆಯಲ್ಲಿ ವೇಶ್ಯೆಯ ಹೆಸರು ಹೇಳಿಲ್ಲ. ಇಲ್ಲಿ ಅದು ಪದ್ಮಿನಿ ಎಂದು ಉಕ್ತವಾಗಿದೆ.

೫. ಹರಿಹರನ ರಗಳೆಯ ಪ್ರಕಾರ ವೃದ್ಧ ಸನ್ಯಾಸಿ ತಿರುನೀಲಕಂಠನಲ್ಲಿ ಬಚ್ಚಿಡುವ ಬಟ್ಟಲು ಬೆಲೆಬಾಳುವ ಲೋಹದ್ದು; ಇಲ್ಲಿ ಅದು ಮಣ್ಣಿನದು.

೬. ಬಟ್ಟಲು ಕದ್ದ ನ್ಯಾಯವನ್ನು ನಿರ್ಣಯಿಸಲು ರಗಳೆಯಲ್ಲಿ ಸನ್ಯಾಸಿ ತಿರುನೀಲಕಂಠನನ್ನು ಪೊನ್ನಾಂಬಲದ ಮಹಾಜನರ ಬಳಿಗೆ ಕರೆದೊಯ್ದರೆ, ಇಲ್ಲಿ ಕಲ್ಯಾಣದ ಶರಣರ ಬಳಿಗೆ ಕರೆದೊಯ್ಯುತ್ತಾನೆ.

೭. ಕೊನೆಯ ಪರೀಕ್ಷೆಯಾಗಿ ರಗಳೆಯಲ್ಲಿ ಸನ್ಯಾಸಿ ಪೊನ್ನಾಂಬಲೇಶ್ವರನ ದೇವಾಲಯದ ಮುಂದಿರುವ ಹೊಂಡದಲ್ಲಿ ಕೋಲು ಹಿಡಿದು ಸತಿಪತಿಗಳು ಮುಳುಗಬೇಕೆಂದು ಹೇಳುತ್ತಾನೆ. ಇಲ್ಲಿ ಅವರು ಮುಳುಗಿ ಏಳುವುದು ತ್ರಿಪುರಾಂತಕನ ಕೆರೆಯಲ್ಲಿ.

ಹರಿಹರನಲ್ಲಿಲ್ಲದ – ತಿರುನೀಲಕಂಠಯ್ಯ ಕುಂಬಾರ ಜಾತಿಗೆ ಸೇರಿದವ, ವೇಶ್ಯೆ ಕಲ್ಯಾಣಪಟ್ಟಣದವಳು ಎಂಬ ವಿಷಯಗಳು ಇಲ್ಲಿ ಹೆಚ್ಚಿಗೆ ಸೇರಿಕೊಂಡಿವೆ. ತಿರುನೀಲಕಂಠಯ್ಯನ ಕಾಲಕ್ಕೂ ಕಲ್ಯಾಣದ ಶರಣರ ಕಾಲಕ್ಕೂ ಅಂತರವಿರುವು

ದರಿಂದ ಇಂಥ ವಿಷಯಗಳು ಆಭಾಸವೆನಿಸುತ್ತವೆ. ಇದರಿಂದ ಈ ಕವಿಗೆ ಚಾರಿತ್ರಿಕ ಪ್ರಜ್ಞೆ ಕಡಿಮೆ ಎಂದು ಹೇಳಬೇಕಾಗುತ್ತದೆ.

ಕೃತಿ ಆರಂಭದಲ್ಲಿ ಪ್ರಭುಲಿಂಗಲೀಲೆಯ ಚಾಮರಸ, ಉದ್ಭಟದೇವ, ಮಲುಹಣ, ನಂಬಿ, ವರರುಚಿ, ಪಾಲಕುರಿಕೆಯ ಸೋಮ, ಕೆರೆಯಪದ್ಮರಸ, ಭೀಮ, ಕಾಳಿದಾಸ, ಮಯೂರ, ಗುಬ್ಬಿಯ ಮಲ್ಲಣಾರ್ಯ, ಹಲಾಯುಧ, ಮಳೆಯರಾಜ, ಹಂಪೆಯ ಹರೀಶರನ್ನು ಭಕ್ತಿಯಿಂದ ನೆನೆದಿದ್ದಾನೆ. ಮುಂದೆ ಯಾವುದೇ ರೀತಿಯ ಅನ್ಯ ವರ್ಣನೆಗೆ ಕೈಹಾಕದೆ ನೇರವಾಗಿ ಕಥೆಯನ್ನು ಹೇಳಿ ಮುಗಿಸಿದ್ದಾನೆ.

ಈ ಕೃತಿಯನ್ನು ಎರೇಬೂದಿಹಾಳ ಗ್ರಾಮದಲ್ಲಿ ನನಗೆ ದೊರಕಿದ ಒಂದೇ ಕಾಗದ ಪ್ರತಿಯಿಂದ ಪರಿಷ್ಕರಿಸಲಾಗಿದೆ. ಹಸ್ತಪ್ರತಿಯು ಕೊನೆಯಲ್ಲಿ "ಶಕೆ ೧೭೮೬ ನೆಯ ರಕ್ತಾಕ್ಷಿನಾಮ ಸಂವತ್ಸರ ಪುಷ್ಯ ಬ. ೧೩ ಬುಧವಾರ ಪ್ರಾತಃ ಕಾಲಕ್ಕೆ ಮುಗಿಯಿತು. ಬಿಂಕದಕಟ್ಟಿ ಸಿವಸಪ್ಪನ ಒರಹಾ, ಶಿವಪ್ಪನ ಪುರಾಣ ಮಂಗಳಮಹಾ ಶ್ರೀ ಶ್ರೀ ಶ್ರೀ" ಎಂದು ಪ್ರತಿಮಾಡಿದವನ ಹೆಸರು, ಪ್ರತಿಮಾಡಿದ ಕಾಲವನ್ನು ಸೂಚಿಸಲಾಗಿದೆ. ಹೆಚ್ಚು ಶುದ್ಧವಾಗಿರುವ ಇದನ್ನು ಇಲ್ಲಿ ಪರಿಷ್ಕರಿಸಿ ಕೊಡಲಾಗಿದೆ.

ಶ್ರೀಗುರುವೆ ಮಹಾದೇವ ಶಂಕರ
ನಾಗ ಕಂಕಣ ಕರ್ಣಕುಂಡಲ
ಯೋಗಿ ಹೃದಯದೊಳ್ವಾಸವಾಗಿಹ ರೋಗಿಗಳಿಗ್ವೈದ್ಯಾ
ವ್ಯಾಘ್ರವ್ಯೆದೊಗಲುಟ್ಟ ಬಾಣಾಸ
ಬಾಗಿಲವ ಕಾಯ್ದ್ಬೀಕೋದೇವನೆ
ಭಾಗೀರಥಿಯನು ಪೊತ್ತ ಶ್ರೀಗಿರಿವಾಸ ಜಗದೀಶಾ ||೧||

ಲೀಲೆ ಚಾಮರಸಯ್ಯನುದ್ಭಟ
ದೇವ ಮಲುಹಣ ನಂಬಿ ವರರುಚಿ
ಪಾಲಕುರಿಕೆಯ ಸೋಮ ಕೆರೆಯ ಪದ್ಮರಸ ಕವಿ ಭೀಮಾ
ಕಾಳಿದಾಸ ಮಯೂರ ಗುಬ್ಬಿಯ
ಮಲ್ಲಣಾ[1]ರ್ಯರ ಪಾದ ನಂಬಿಯಾ
ಹಲಾಯುಧ ಮಳೆಯರಾಜ ಹಂಪಿಯ ಹರೀಶಗೊಂದಿಸುವೆ ||೨||

ತಿರುನೀಲಕಂಠಯ್ಯನಾ ಸತಿ
ಶರಣೆ ವೈಕುಂಟಿಮ್ಮ ಇರ್ವರು

---

1 + ಚಾ (ಮೂಲ).

ಹರನ ಪೂಜೆಯ ಮಾಳ್ಪರನುದಿನ ಭಕ್ತಿ ಭಾವದೊಳು
ಪರಮ ಭಕ್ತನು ಕುಂಡಲೇಶ್ವರ
ಕೆರಿಯೊಳೊಲದಿಹ ಸಿದ್ಧಲಿಂಗನ
ಸ್ಮರಿಸುತಿರ್ದರು ದಂಡಿಗೆಯ ಪಿಡಿಕೊಂಡು ಪಾಡುತಲಿ |೩|

ಅಷ್ಟವಿಧಾರ್ಚನೆಯ ಕರದೊಳ
ಗಿಷ್ಟಲಿಂಗದ ಪೂಜೆ ಮಾಳ್ಪರು
ಕೊಟ್ಟ ಗುರುವಿನ ಮಂತ್ರ ಮರೆಯದೆ ಭಜಿಪ ತ್ರಿಕಾಲಾ
ಸೃಷ್ಟಿಗೀಶ್ವರ ಬೇಡಿದಡೆ ಮನ
ಮುಟ್ಟಿ ಕೊಡುವನು ತನುಮನಂಗಳ
ಇಷ್ಟಲಿಂಗದ ನಿಷ್ಠಪರ[2] [ತಿರು][2] ನೀಲಕಂಠಯ್ಯ |೪|

ನೀಲಕಂಠನ ಪುರದೊಳಿಹ ಜನ
ಪಾಲಿಸುವ ವೈಕುಂಟಿ ರಮಣ [ನು]
ಶೂಲಿ ಪೂಜೆಯ ಮಾಡಪೋಗುವ ಕುಂಡಲೇಶ್ವರನಾ
ಏಳುವನು ಬೆಳಗಿಂಲಿ ಜಾವದಿ
ಹಾಲು ತುಪ್ಪದಲೆರೆವ ಮಜ್ಜನ
ನೀಲ ಮಾವಿನ ತಳಿರು ಗಂಧಾಕ್ಷತೆಯ ಭಸಿತಿಡಲು |೫|

ಹಾಡಿ ಹರಸಲು ನೀಲಕಂಠನು
ಬೇಡಿ ಬಯಸಲು ಸಿದ್ಧಲಿಂಗಗೆ
ಕೂಡಿ ಮನ ಏಕಾರ್ಥವಾಗಿರೆ ಲಿಂಗನಿಷ್ಠೆಯೊಳು
ರೂಢಿಯೊಳಗಿವ ನಿಜಸ್ವರೂಪದೊ
ಳ್ಮೂಡಿದನು ಶಿವಶರಣನೊಲುಮೆಗೆ
ಬೇಡಿದಂಥ ಪದಾರ್ಥ [ಕೊಡು]ವನು ಹಾಗ ದಿನದಿನಕೆ |೬|

ಹಾಗಕಾಯಕ ತಂದು ಜಂಗಮಾ
ಶೋಗಣೆಯ ಮಾಡುವರು ಸತಿಪತಿ
ಸಾಗಿಸುವರನುದಿನದೊಳೀ ಪರಿ ಭಕ್ತಿಮಾರ್ಗವನು
ಭಾಗ್ಯದೋಷಕರಲ್ಲ ಶರಣರು

2-2 ತ್ರಿ (ಮೂ)

ಜಾಗ್ರಸ್ವಪ್ನದಿ ಶಿವನ ನೆನವರು
ನಾಗಭೂಷಣನಲ್ಲದನ್ಯರಿಲ್ಲ ತಮಗೆನುತಾ |೭|

ಈ ಪರಿಯು ಗುರುಲಿಂಗಜಂಗಮ
ಕರ್ಪಣವ ಮಾಡಿಸುತ ನಂದದಿ
ರೂಪು ಯೌವ್ವನ ಷೋಡಶ ಕಳೆ ತುಂಬಿ ತುಳುಕುತಲಿ
ಸ್ತ್ರೀಪತಿಗಳತಿಶಯದೊಳಿರುತಿರೆ
ಗೋಪವಾಹನ ಇವರ ಮನದೃಢ
ನೋಳ್ಪೆನೆನುತಲಿ ಕುಂಡಲೇಶ್ವರ ತಡದ ಕಾಯಕವ |೮|

ಏನು ಕಾರಣ ಪುರುಷ ತಡದನು
ಧ್ಯಾನಿಸುತ ವೈಕುಂಟಿಯುಮ್ಮಾಸು
ಮಾನವರು ಮೃಗಪಕ್ಷಿಸೇರಿದರೆಲ್ಲರಾಶ್ರಮವಾ
ಕಾಣಬಾರದ ಕಾವಳೊಳು ಶಿವ
ನೇನುಕಾರಣ ತಡದ ಕಾಯಕ
ಧ್ಯಾನಿಸುತ ಶಿವಶರಣೆ ಅಗ್ಗಣೆ ಪಿಡಿದುಕೊಂಡಿಪಳು |೯|

ಶರಣ ದಂಡಿಗಿ ಪಿಡಿದುಕೊಂಡೀ
ಶ್ವರನ ಸ್ತೋತ್ರವ ಪಾಡುತಿರೆ ಶಂ
ಕರನು ಕೊಟ್ಟನು ಮೆಚ್ಚಿ ಕಾಯಕ ಮಧ್ಯರಾತ್ರಿಯಲಿ
ಹರಗೆ ವಂದಿಸಿ ಗುಡಿಯ ಬಾಗಿಲ
ಹೊರಟುಬಂದನು ಭೋರಿಡುವ ಮಳೆ
ಗರದು ಮಬ್ಬಿನ ಮಿಂಚು ತಾ ಸಿಡಿಲು ಕಡೆಜಡಿಯೆ |೧೦|

ಊರ ಮುಂದಣ ದಾರಿ ತಪ್ಪಿತು
ಸೇರಿದನು ಕಲ್ಯಾಣ ಪಟ್ಟಣ
ಕೇರಿ ಕೇರಿಯು ಕುರುಹುಗಾಣದೆ ಬಂದು ಸೂಳಿಯರ
ಸೂರದಡಿಯಲಿ ನಿಂತುಕೊಂಡಿರೆ
ನಾರಿ ಚೆಲ್ಲಿದಳೆಂಜಲಗ್ಗಣಿ
ಮಾರಹರ ಶಿವಶಿವನೆಯೆನುತಲಿ ನುಡಿದ ಕಂಠಯ್ಯ |೧೧|

ಹರನ ಶಬ್ದವ ಕೇಳಿ ಪದ್ಮಿನಿ
ಮರುಗಿದಳು ಮನದೊಳಗೆ ಬಳಲುತ
ತಿರುಗಿ ಪರಿವಾಣಿಟ್ಟು ದೀವಿಗೆ ತಂದು ನೋಡಿದಳು

ಶರಣ ಪ್ರಮಥರ ಕಂಡು ಹೆದರಿ ಶ್ರೀ
ಚರಣಕೆರಗಿದಳ್ತನ್ನ ದೋಷವ
ಪರಿಹರಿಸು ಎನ್ನೊಡೆಯ ತ್ರಾಹಿ ತಿರುನೀಲಕಂಠಯ್ಯ ||೧೨||

ಸೂಳೆ ಪದ್ಮಿನಿದೇವಿ ಶರಣನ
ಪಾದಕೊಂದನೆ ಮಾಡಿ ಗದ್ದುಗೆ
ಮ್ಯಾಲೆ ಕುಳ್ಳಿರಿಸಿದಳು ಮಜ್ಜನಕಿಟ್ಟಳಗ್ಗಣಿಯ
ಕೇಳು ಮಗಳೆ ಕಾಯಕವ ನ
ಮ್ಮಾಳೆ ಹೊತ್ತಿಗೆ ತಡದ ಶಂಕರ
ಬಾಲೆದಾರಿಯ ನೋಡುತಿಹಳೆಮ್ಮರಸಿ ವೈಕುಂಠಿ ||೧೩||

ಮೀಸಲಗ್ಗಣಿ ಮಜ್ಜನೆರೆವೆಸು
ಪೂಸಿಹವು ವೈಗೆಂಜಲನ್ನವು
ಪೂಸಿ ಪನ್ನೀರೆರದು ಮಂಚದೊಳ್ಹಾಸಿ ಕುಳ್ಳಿರಿಸಿ
ಸೂಸಿದಳು ಶ್ರೀಗಂಧ ಕಸ್ತುರಿ ವಿ
ಲಾಸದಿಂದಲಿ ಧರಿಸೆ ಪದ್ಮಿನಿ
ಗಾಸಿರ್ವಾದವನಿತ್ತು ನಡದ ತಿರುನೀಲಕಂಠಯ್ಯ ||೧೪||

ಪರಿ[೩][ಮಳಂ][೩]ಗಳ ಧರಿಸಿ ಬಾಹುದ
ಶರಣೆ ವೈಕುಂಟೆವ್ವ ಕಂಡಳು
ಹರನ ಪೂಜೆಯ ಮರದು ಕಾಯಕ ಬಿಟ್ಟುಸೂಳೆಯರ
ನೆರದನೀತನ ಸಂಗಸುಖವನು
ತೊರಿಯಬೇಕೆಂದೆನುತ ಚರಣಕೆ
ಶರಣು ಮಾಡವೆ ಸಗ್ಗೀಯೊಳಗ್ಗಣಿಯ ತಂದಿಡಲು ||೧೫||

ಶರಣ ಮಜ್ಜನ ನೀಡಿದನು ಶಿವ
ಶರಣೆ ಪಾಕವ ಮಾಡಿದಳು ಮನ
ಪರನ ಪೂಜಿಸಿ ಪಾದತೀರ್ಥಪ್ರಸಾದ ಸಲಿಸಿದರು
ತರುಣಿ ತಾಮಸ ಬ್ಯಾಡ ಚಂದನ
ಕೊರದರದು ಕಾದೆಂಬ ಹೋಹುದೆ
ಪರನಾರಿಯ ಸಹೋದರನುಯೆಂಬುದು ಬಿರಿದು ನನಗುಂಟು ||೧೬||

೩-೩ ಯ ಪಂ (ಮೂ)

ಮನಸಿನೊಳು ಮದಮತ್ಸರಂಗಳ
ವನಿತೆ ಬಿಡುಬಿಡು ಅನುಮಾನ್ಯಾತಕ
ಮುನಿಯು ಮಡದಿಯ ಬಿಟ್ಟು ಮತ್ತನ್ಯರಿಗೆ ಸೋಂಕಿದರೆ
ಶುನಕಜನ್ಮದಿ ಸಹಸ್ರವರುಷವು
ಜನಿಸಿ ಬಾಹುದು ಸತ್ಯವಲ್ಲದೆ
ಅಣಕವಾಡಿದಡಲ್ಲ ಮಹಪ್ರಭು ಸಾಕ್ಷಿ ತನಗೆಂದಾ ||೧೭||

ಸೂಳೆಪೋದುದು ಸತ್ಯವೆಂದಡೆ
ತಾಯಿತನಗವಳೆಂದು ಪೇಳುವ
ಹಾಲು ಹಾವಿನಮರಿಗೆ ಊಡಿದಡ್ವಿಷವು ತಗ್ಗುವುದೆ
ನೀಲಮಾಣಿಕ ಮುತ್ತುವಡೆ ಬೆಲೆ
ಏಳುವದೆ ಕ್ರಯವಿಕ್ರಯಂಗಳ
ಜಾಲೆಯರ ಬಲಿಯೊಳಗೆ ಸಿಲ್ಕನೊಬ್ಬ ಸಜ್ಜನನು ||೧೮||

ಸತಿಯುಳಿಗೆ ಮನದುಚಿತವಾಗಿರೆ
ಪತಿಯು ಪರಸತಿ ಸುರತದೊಳಗಿಹ
ವ್ರತವು ತಪ್ಪಿತು ಇಂದಿನಾದಿನ ರಾತ್ರಿಯೊಳುಯೆಮಗೆ
ಅತಿಶಯದಿ ಮಂಚದೊಳು ಮಲಗಿರೆ
ಸತಿಯು ಸರಸಕ್ಕೆಳದು ಚುಂಬಿಸೆ
ಗತಿಯುಗೆಡಬ್ಯಾಡೆನ್ನ ಮೈಮುಟ್ಟಿದರೆ ಶಿವನಾಣೆ ||೧೯||

ನಿನ್ನ ಮನದೃಢ ನೋಡಲೀ ಜೇ
ಕೆನ್ನುತಲಿ ಮೈಮುಟ್ಟಿದೆನು ಮು
ಕ್ಕಣ್ಣ ಪ್ರಮಥರ ಪಾದದಾಣೆಯು ಮುನ್ನಮುಟ್ಟಿದರೆ
ಎನ್ನ ಕರದೊಳಗಿಷ್ಟಲಿಂಗನ
ಗನ್ಯಮಾಡಲಿ ತಪ್ಪಕೇಳಿ
ಇನ್ನು ಇರ್ವರು ಸರಸ ಬಯಸಿದಡೆಮಗೆ ಶಿವನಾಣೆ ||೨೦||

ಮಾತು ಮಾತಿಗೆ ತಪ್ಪುಯೆನುತಲಿ
ರೀತಿಯೊಳಗಿರುತಿರಲು ಸತಿಪತಿ
ಭೂತನಾಥನು ಬಂದು ಲಿಂಗಾರ್ಪಿತಕೆ ಭಿಕ್ಷೆನಲು
ಪ್ರೀತಿಯೊಳು ಗುರುಲಿಂಗ ಜಂಗಮ

ತೀರ್ಥಶೇಷಪ್ರಸಾದ ಸವಿದ
ನಾಥಬಾಂಧವ ಇವರ ಮನದೃಢನೋಡಬೇಕೆಂದಾ |೨೧|

ಸಲಿಸಿದನು ಶಿವ ಮಣ್ಣುಬಟ್ಟಲ
ಒಲಿದು ಬಚ್ಚಿಡು ಎನ್ನುತಲಿ
ಫಲಪದಾರ್ಥವ ಬೇಡಿದುದ ಕೊಡುವಂಥ ಪರುಷಿಹುದು
ಇಳೆಯೊಳಗೆ ಚರಿಸ್ಯಾಡಿ ಬಾಹತನಕಿ
ರಲಿ ನಿಮ್ಮ ಬಿಡಾರದೊಳಗಿದು
ಮಲಹರನು ಕೊಟ್ಟಂತ ಬಟ್ಟಲ ಬಚ್ಚಿಡೆಲೆ ತಟ್ಟ |೨೨|

ತೆರಳಿ ಪೋದನು ಹರನುಯೆರಡೊಂ
ದೊರುಷ ಬಾರದೆ ದೇಶ ಮದ್ದೀವ
ಚರಿಸಿಬಂದನು ನೀಲಕಂಠನ ಪುರದ ಮಂದಿರಕೆ
ಶರಣೆ ಶರಣನು ಬಂದು ಶಿವಶ್ರೀ
ಚರಣಕೊಂದನೆ ಮಾಡಿ ಮಜ್ಜನ
ವೆರದು ಬಾಹೆನು ಲಿಂಗಪೂಜೆಯ ಮಾಡುತಟ್ಟೆನುತಾ |೨೩|

ಪಂಚಾಮೃತ ಷರಮ ಪಾರ್ವತಿ
ಕೆಂಚೆರಮಣನು ಸಲಿಸಬೇಕೆಂ
ದಂಚೆಗಮನಡಿಗಿಟ್ಟಳಾಕ್ಷಣ ಭಕ್ಷಭೋಜನಕೆ
ಪಂಚಮುಖ ಪರಶಿವನ ಪೂಜಿಸಿ
ಕಂಡು ಕಳಸಗಳೆತ್ತಿ ಬೆಳಗುತ
ಮಿಂಚುಬಟ್ಟಲು ಪೆಟ್ಟಗೆಯೊಳಿದೆ ತಟ್ಟ ತಂದಿರಿಸು |೨೪|

ಪೆಟ್ಟಗೆಯ ಬೀಗವನು ತೆಗೆದೊಳ
ಗಿಟ್ಟ ಬಟ್ಟಲ ಮುಟ್ಟ ನೋಡಲು
ಬಟ್ಟಬಯಲಾಗಿಹುದ ಕಾಣುತ ಹೊಟ್ಟ ಭುಗಿಲೆನುತ
ರಟ್ಟು ಬಂದಿತು ಜಗದೊಳಗೆ ಜಗ
ಜಟ್ಟ ಜಂಗಮ ಈರ್ವರನು ಕೈ
ಕಟ್ಟ ಮಾರುವ ಕಾಲ ಬಂದಿತಟ್ಟ ನಮಗೆನುತಾ |೨೫|

ಬೀಗ ಮುದ್ರೆಯ ಮುರಿದು ವೈದವ
ರಾರ ಕಾಣೆನು ಈ ಶರೀರದ
ಭೋಗ ಬಂದುದು ಬಿಡುವವೇ ಪರಬ್ರಹ್ಮಲಿಖಿತವಿದು

ನಾಗಭೂಷಣಗೆರಗಿ ಬಟ್ಟಲು
ಹೋಗಿಹುದು ಮಡಗಿದುದು ಮನೆಯೊಳು
ಯೋಗಿಹೃದಯ ನಿವಾಸ ಬಡವರ ನೋಡು ದಯಮಾಡು ।೨೬।

ಸೂರ್ಯ ಚಂದ್ರಗಳಿಲ್ಲದಂದಿಗೆ
ಸೇರಿಹುದು ನಮ್ಮೆಡೆಗೆ ಬಟ್ಟಲು
ದಾರು ಉಂಡರೆ ಸಂದೆಯ ಬರದು ತುಂಬಿತುಳುಕುವುದು
ಹಾರಿ ಹೋಗಲು ಗರಿಯು ಬಂದವೆ
ಚೋರ ರಾತ್ರಿಯಲಿ ಕನ್ನಗೊರೆದನೊ
ಕಾರಿಸುವೆ ಕೊಡದಿರಲು ತಲೆಮ್ಯಾಲ್ಹೇರಿಸುವೆ ಬಂಡಿ ।೨೭।

ನೀವು ಕಾಯಕ ಕೊಡಲು ನಮಗಿ
ನ್ನ್ಯಾವ ಕಳವುಗಳ್ಯಾಕೆ ಶಿವಶಿವ
ದೇವರವರಿಗೆ ಇದ್ದು ಇಲ್ಲೆಂಬುವನು ಪಾತಕನು
ಸಾವಿರಾ ಹೊನ್ನೀನ ಬಟ್ಟಲ
ಜಾವನಾಲ್ಕಕೆ ಮಾಡಿಕೊಡಿಸುವೆ
ಜೀವ ಕೊಲಿಸಲಿಬ್ಯಾಡ ಅಭಿಮಾನಿಟ್ಟು ಸಲಹ[4]ಯ್ಯ ।೨೮।

ಹೊನ್ನ ಬಟ್ಟಲು ಕೊಡಲು ಬೇಡಿಂ
ತನ್ನವಾಹುದೆ ಮರುಳೆ ನೀ ಕೇ
ಳ್ಗನ್ನ ಗಾತಕ ಮಾಡಬ್ಯಾಡ ತಿರುನೀಲಕಂಠಯ್ಯ
ನಿನ್ನ ಮಡದಿವಳೆಂತವಳು ಬಲು
ಹಮ್ಮುಗಮ್ಮಲಿ ಮಾರಮುಳಿವಳು
ಮುನ್ನಣಿಲ್ಲದೆ ನಿನ್ನ ಕರವಳು ತಟ್ಟಮುಟ್ಟಿಸುತಾ ।೨೯।

ಬೇಡಿದರೆ ಕೊಡಬಾರದೆಂಬುದ
ಮಾಡಿಕೊಂಡದು ಮನದೊಳಗೆ ಹೆಡ
ಗೂಡಿ ಕಟ್ಟಿಳದೊಯ್ವ ನಡಿ ಕಲ್ಯಾಣ ಪಟ್ಟಣಕೆ
ಬ್ಯಾಡ ಕೈಯಲಿ ಕಡಿದು ಜೀರ್ಣವ
ಮಾಡಿದಡೆ ಬಟ್ಟಲವ ಕೊಡುವಿರಿ
ರೂಢಿಯೊಳು ನಿಮ್ಮಂಥ ಕಳ್ಳರನೆಲ್ಲಿ ನಾ ಕಾಣೆ ।೩೦।

---

4 + ವ (ಮೂ)

ರಟ್ಟ್ಟ ಮಾಡೆಳದೊಯಿದು ಶರಣರ
ಪಟ್ಟಣದ ನಡು ಬೀದಿಯೊಳು ಕೈ
ಕಟ್ಟ ಬಡಿಸಲು ಶಿವಧೋ ಶಿವಧೋ ಎನುತ ವೈಕುಂಟಿ
ತಟ್ಟ ವ್ಯೆಮುಟ್ಟದರೆ ಶಿವನಾ
ಣಿಟ್ಟ ಶಬ್ದವ ಮರಿಯದಿರು ನಿಜ
ನಿಷ್ಠೆಯಿಂದಲಿ ಬಲ್ಲಾಳಗೆ ಮಗನಾದ ಶಿವ ಬಂದ ।೨೦।

ದೋಸೆ ಹಿಟ್ಟಗೆ ಮಣ್ಣಹೊತ್ತ ಸ
ಹಸ್ತ ತೋಳವನಿತ್ತ ಬಾಣಗೆ
ಪೂಸಯ್ಯಗೆ(?)ಕುಕ್ಷಿಯೊಳು ಶಿವಪ್ರಾಣಲಿಂಗಾದಾ
ವೇಸಿಯೆಂಜಲನುಂಡ ಭಕ್ತಿಗೆ
ದಾಸಿಮಯ್ಯಗೆ ದಯವಾ ತವನಿಧಿ
ದೂಷಕರ ಮುಖನೋಡ ಶ್ರೀಗಿರಿಲಿಂಗ ಭವಭಂಗ ।೨೧।

ಸುಣ್ಣದಗ್ಗಣಿ ಮಾಡಿ ಚೆಲ್ಲಿದೆ
ಚೆನ್ನ ಬಡಿದನು ಚಿತ್ತಗೋಲಿಲಿ
ಉಣ್ಣಗೊಡದಂತೆ ಮಾಡಿದಡಂಜಿಕಿವಗಿಲ್ಲ
ಅನ್ನ ಹೆಚ್ಚಿತು ಜಗದೊಳಗೆ ಬಲು
ಗನ್ನಗಾತಕರುಂಟು ಕೂಡಲ
ಚೆನ್ನಸಂಗನಬಸವ ಐದಾನೆಂದು ನಾ ಬಂದೆ ।೨೩।

ದೇಶದೊಳು ಕಲ್ಯಾಣ ಹಿರಿಯರು
ಸೋಸಿ ನ್ಯಾಯವ ಮಾಡುತಿಹರೆಂ
ದಾಸೆ ಮಾಡಿಯೆ ಬಂದೆ ಬಟ್ಟಲ ಕೊಡಿಸುವರುಯೆಂದು
ದೂಷಕರು ಮುಖಗೊಡರುವೊಳ್ಳಿತ
ಭೂಷಣದ ಮಾತಿಲ್ಲ ನಡಿ ಕರ
ಪಾಶ ಕಟ್ಟಿದ್ದುವೆನು ತ್ರಿಪುರಾಂತಕದ ಕೆರೆಯೊಳಗೆ ।೨೪।

ಕೆರೆಯೊಳಗೆ ಎದ್ದೆದ್ದಿ ತೆಗೆಯಲು
ಶರಗ ಮುಟ್ಟದಿರೆನುತಲಿ ಬರು
ವರದು ನೋಡಿದನವರ ಮನದ್ವೃಢ ತಟ್ಟಮುಟ್ಟನುತ
ಪುರಕೆ ನಡೆತಂದಿರಿಸಿ ಮೂಜಗ
ದರಸು ಮಚ್ಚಿದ ಶರಣರಿಗೆ ಪೂಮಳೆ
ಗರದರು ದೇವದುಂದುಭಿ ಮೊಳಗಲಬ್ಬರದಿ ।೨೫।

ಶರಣರಿಗೆ ಮೆಚ್ಚಿದನು ಕಂಕಳ
ಧರನು ಬೇಡ್ಬೇಡೆನುತ ಪ್ರಮಥರ
ಧರೆಯೊಳಗೆ ಬ್ಯಾಡಯ್ಯ ಮಂದರಗಿರಿಯೊಳಿರಿಸೆಮ್ಮ
ಕರವ ಸಡುಲಿಸಿ ಭಕ್ತರಿಗೆ ಮನ
ವರದು ನೋಡಿದೆ ಅಂದಿಗಿಂದಿಗೆ
ತಿರುನೀಲಕಂಠಯ್ಯ ವೈಕುಂಟೆಮ್ಮಗ್ಘರನೊಲಿದ ।೩೬।

ಸಶಿಪತಿಯುರ ಮನಕೃತಕದೊಳಗಿರೆ
ಅತಿಶಯದಿ ಶಿವನಾಣೆ ಬಡಿಸಿದ
ರಥವ ತಂದಿರಿಸಿದರು ಗಣತಿಂಥಿಣಿಯು ತುಂಬುರರು
ನುತಿಸಲಾಕ್ಷಣ ನೀಲಲೋಚನೆ
ಪತಿಯು ಪ್ರಮಥಗಣಂಗಳೆಲ್ಲರು
ಪತಿವ್ರತಿಯು ಪಾದೋದಕ ತೀರ್ಥಪ್ರಸಾದ ಸಲಿಸಿದರು ।೩೭।

ಮಾಯ ಮೋಹವ ತೊರೆದರೆನುತಲಿ
ಕ್ರೀಯ ಮೂರುತಿ ನೆನೆದ ಮನದೊಳು
ಪ್ರಾಯದವರನು ಮಾಡಿ ತೋರಿದ ಶರಣಪ್ರಮಥರಿಗೆ
ಜೀಯಯೆನುತಲಿ ಹಾಡಿ ಹರಸಲು
ತೋಯಜಾಕ್ಷಿಯರೆಲ್ಲ ಶಿವನಿಗೆ
ಪ್ರೀಯದಿಂದಲಿ ಮಂಗಳಾರತಿಯೆತ್ತಿ ಜಯವೆನುತಾ ।೩೮।

ಕುಲದೊಳಗೆ ಕುಂಬಾರ ಶರಣನು
ಮಲಹರನಿಗೊಲಿಸಿದನು ಅನುದಿನ
ಲಲನೆ ವೈಕುಂಟೆಮ್ಮನರಸು ತಿರುನೀಲಕಂಠಯ್ಯ
ಕಳೆದು ಕಾಮನ ಸುಟ್ಟ ಸತಿಪತಿ
ತೊಲಗಿದರು ತೊಂಬತ್ತು ವರುಷವು
ಛಲಗೆಲಿದು ಹರನೊಲಿಸಿಕೊಂಡರು ಪ್ರಳಯಕ್ಕೆ ರಹಿತರು ।೩೯।

ತಳಿರು ತೋರಣ ಬೀದಿ ಬೀದಿಗೆ
ಭಳಿಯ ಹೊಯಿಸುತ ಚಾಂಗುಭಲರೆಂ
ದೊಲಿದು ಉಘೆಉಘೆಯೆನುತ ವೈಕುಂಟೆಮ್ಮನರಸನಿಗೆ
ಹೊಳೆವ ರಥದೊಳು ಮೋರ್ತಮಾಡಿಸಿ
ಮಳೆಯಗರೆದರು ಸುರರು ಪುಷ್ಪದ
ಮಲಹರನು ಮೆಚ್ಚೊಯ್ದು ಮಂದರಗಿರಿಯ ಪರ್ವತಕೆ ।೪೦।

ತಾಳ ಮದ್ದಳೆ ವೇಣಿ ಪಾತ್ರದ
ಮ್ಯಾಳ ಊರ್ವಸಿ ರಂಭೆ ಮೇನಕೆ
ಕಾಲ ಹರಿ ಸುರ ಬ್ರಹ್ಮ ದಿಕ್ಪಾಲಕರು ಮೊದಲಾಗಿ
ಕಾಳೆ ಭೋರಿಡುತಿರಲು ಕರಡಿ ಕಂ
ಸಾಳ ಭೇರಿ ಭಜಂತ್ರಿ ಮಂಟಪ
ಸಾಲಿಯೊಳು ತ್ರಿಶೂಲಿಗೊಂದನೆ ಮಾಡಿ ಜಯವೆನುತಾ ।೪೧।

ಗುರುಪದಂಗಳ ಪೂಜೆ ಮಾಳ್ಪಡೆ
ದುರಿತನಾಶನವಾಹುದಲ್ಲದೆ
ಶರಣಪ್ರಮಥ[ರ] ನೆನೆದು ಬದುಕಿದೆ ಬಸವ ಬಸವೆನುತಾ
ಹರಿವಿರಿಂಚಿಗಳಿಂದ್ರಸುರ ಮುನಿ
ಗಿರಿಜೆರಮಣನ ನುತಿಸುತಿರ್ಪರು
ಮರಣರಹಿತನೆ ಮಮತೆಯಿಂದಲಿ ಸಲಹು ಸದ್ಗುರುವೆ ।೪೨।

ಇಂತೀ ತಿರುನೀಲಕಂಠಯ್ಯನ ಚಾರಿತ್ರ
ಸಂಪೂರ್ಣ ಮಂಗಳಮಹಾ
ಶ್ರೀ ಶ್ರೀ ಶ್ರೀ

ಕನ್ನಡ ಜನಪದ ಸಾಹಿತ್ಯದಲ್ಲಿ ಸಾಮಾಜಿಕ ನ್ಯಾಯ

● ಬಿ. ಬಿ. ಬಿರಾದಾರ

ಜನಪದರು ತಮ್ಮ ಜೀವನವನ್ನು ಹೆಚ್ಚು ಸುಖಮಯವಾಗಿ ಮಾಡಿಕೊಳ್ಳಲು ಮತ್ತು ಸಮಾಜವನ್ನು ಶಾಂತಿಯುತವಾಗಿ ಮುನ್ನಡೆಸಲು ತಮ್ಮವೇ ಆದ ಕೆಲವು ನೀತಿ-ನಿಯಮಗಳನ್ನು ರಚಿಸಿಕೊಂಡಿದ್ದಾರೆ. ನೀತಿ ಎಂಬ ಪದವನ್ನು ಅವರು ನ್ಯಾಯ, ಧರ್ಮ ಮುಂತಾದ ಅರ್ಥದಲ್ಲಿ ಬಳಸಿಕೊಂಡಿರುವದು ಕಂಡುಬರುತ್ತದೆ. ಈ ನೀತಿನಿಯಮಗಳೇ ಜನಪದದಲ್ಲಿ ಕಾನೂನಿನಂತೆ ಕೆಲಸ ಮಾಡುತ್ತವೆ. ಅಷ್ಟೇ ಅಲ್ಲ. ಕಾನೂನಿಗಿಂತ ಹೆಚ್ಚು ಪ್ರಭಾವಶಾಲಿಯಾಗಿವೆ.

ಕನ್ನಡ ಜನಪದ ಸಾಹಿತ್ಯವನ್ನು ಅವಲೋಕಿಸಿದಾಗ ಅಲ್ಲಿ ನ್ಯಾಯ ಪ್ರಮುಖವಾಗಿ ಎರಡು ವಿಧವಾಗಿ ಕಂಡು ಬರುತ್ತದೆ.

(೧) ರಾಜ್ಯಾಂಗ ನ್ಯಾಯ
(೨) ಸಾಮಾಜಿಕ ನ್ಯಾಯ

ರಾಜ್ಯಾಂಗ ಕಟ್ಟಳೆಗೆ ಒಳಪಟ್ಟ ರಾಜ್ಯಾಂಗದ ನ್ಯಾಯದಿಂದ ಸಾಮಾಜಿಕ ನ್ಯಾಯ ಭಿನ್ನವಾಗಿರುತ್ತದೆ. ಜನಪದರು ಒಂದು ಪ್ರದೇಶದ ಪ್ರಮುಖ ಅಂಗವಾಗಿ ಆ ದೇಶದ ರಾಜ್ಯಾಂಗದ ಚೌಕಟ್ಟಿನಲ್ಲಿ ಬರುತ್ತಿದ್ದರೂ ಅವರಿಗೆ ತಮ್ಮದೇ ಆದ ಪ್ರತ್ಯೇಕ ಸಾಮಾಜಿಕ ನ್ಯಾಯಾಲಯವಿದ್ದು, ಅದು ನೀತಿಯ ನೆಲೆಗಟ್ಟಿನ ಮೇಲೆ ನಿಂತಿರುತ್ತದೆ.

ಜನಪದರಲ್ಲಿ ನ್ಯಾಯ ನಿರ್ಣಯವನ್ನು ಊರ 'ದೈವ' ಮಾಡುತ್ತದೆ. 'ದೈವ' ಎಂದರೆ ಊರ ಹಿರಿಯರು. ಅವರು ಜೀವನದ ಸುಖ-ದುಃಖ ಬಲ್ಲವರು. ಅವರಿಗೆ ದೈವ ಎಂದು ಕರೆಯಲು ಕಾರಣ, ದೇವರ ಸಾಕ್ಷಿಯಾಗಿ ನ್ಯಾಯದಾನ ಮಾಡುತ್ತಿದ್ದರು. ಅವರು ಕೊಟ್ಟ ತೀರ್ಪು ದೇವರ ತೀರ್ಪು. ಈ ದೈವದಲ್ಲಿ ಐದು ಜನ ಇರುವುದರಿಂದ ಪಂಚರೆಂದು ಕರೆಯುವದುಂಟು. ಈ ಪಂಚರಿಂದ ಕೂಡಿದ ಪಂಚಾಯತಿಯೇ ಮುಂದೆ ನ್ಯಾಯದ ಕಟ್ಟೆಯಾಯಿತು. ಅದುವೇ ಜನಪದ ನ್ಯಾಯಾಲಯ. ಈ ನ್ಯಾಯಾಲಯಕ್ಕೆ ಪ್ರತಿಯೊಬ್ಬರೂ ಬದ್ಧರಾಗಿರಬೇಕೆಂಬುದು ನಿಯಮ.

ಸಾಮಾಜಿಕ ನ್ಯಾಯ ಅಥವಾ ನೀತಿ ಜನಪದರಲ್ಲಿ ಹೇಗೆ ರೂಢಿಗತವಾಗಿದೆ ಯೆಂಬುದನ್ನು ಇಂದು ಉಳಿದು ಬಂದ ಜನಪದ ಸಾಹಿತ್ಯ ಪ್ರಕಾರಗಳಾದ ಗಾದೆ, ಕಥೆ, ಪದ್ಯ, ನಂಬಿಕೆ, ಸಂಪ್ರದಾಯ ಮುಂತಾದವುಗಳಲ್ಲಿ ಹುಡಕಿದರೆ ಅಲ್ಲಿ ನ್ಯಾಯಕ್ಕಿಂತ ಅನ್ಯಾಯವೇ, ಅಂದರೆ ಭೇದಭಾವ ಮತ್ತು ಶೋಷಣೆಯೇ ಹೆಚ್ಚು ಕಂಡುಬರುತ್ತದೆ. ಇಂಥ ಜನಪದ ಸಾಹಿತ್ಯ ಪ್ರಕಾರಗಳ ಆಧಾರದಿಂದ, ನಾವು ಅವರ ಸಾಮಾಜಿಕ ನ್ಯಾಯವನ್ನು ಗುರುತಿಸಲು ಹೋದರೆ ಅವರ ಸಮಾಜಕ್ಕೆ, ದೈವಕ್ಕೆ, ಆದರ್ಶಕ್ಕೆ ಎರಡು ಬಗೆದಂತೆ ಆಗುತ್ತದೆ. ಆದ್ದ ರಿಂದ ಜನಪದ ಸಾಹಿತ್ಯದಲ್ಲಿ ಶೋಷಣೆಯ, ಭೇದಭಾವದ ನ್ಯಾಯ ಅಥವಾ ನೀತಿ ಮೂಡಿ ಬರಲು ಕಾರಣವೇನು ? ಅದಕ್ಕೆ ಯಾರು ಹೊಣೆ ಎಂಬುದನ್ನು ಮೊದಲು ತಿಳಿದುಕೊಳ್ಳುವುದು ಅವಶ್ಯ.

ಸಮಾಜದಲ್ಲಿ ಶೋಷಣೆರೂಪದ ವರ್ಗ ಎಂದು ಹುಟ್ಟಿಕೊಂಡಿತೋ ಅಂದೇ ಜನಪದರಲ್ಲಿ ನ್ಯಾಯ–ಅನ್ಯಾಯದ ಪ್ರಶ್ನೆ ಹುಟ್ಟಿಕೊಂಡಿತು. ಶೋಷಕ ವರ್ಗ ದಲ್ಲಿ ಪುರುಷರು, ಪ್ರಭುಗಳು, ಪುರೋಹಿತರು ಇದ್ದು, ಇವರು ತಮ್ಮ ಸುಖ ಜೀವನಕ್ಕಾಗಿ, ರಕ್ಷಣೆಗಾಗಿ ಟೊಳ್ಳು ನೀತಿಗಳನ್ನು ರಚಿಸಿ, ಮೌಢ್ಯ ಸಂಪ್ರ ದಾಯಗಳನ್ನು ಸೃಷ್ಟಿಸಿ, ಮೂಢ ನಂಬಿಕೆಗಳಿಂದ ಜನತೆಯನ್ನು ನಂಬಿಸಿ, ಯಾತಕ್ಕೂ ಬಾರದ ನಿಯಮಗಳಿಂದ ಅವರ ಮನಸ್ಸನ್ನು ಕಟ್ಟಿಹಾಕಿ, ಇಲ್ಲದ ಅಂಜಿಕೆಯನ್ನು ಹುಟ್ಟಿಸಿ ತಾವು ನಿರ್ಮಿಸಿದ ದಾರಿಯಲ್ಲಿ ನಡೆಯಲು ಜನಪದ ರನ್ನು ಪ್ರಚೋದಿಸಿ, ಒತ್ತಾಯಿಸಿ ವಂಚಿಸಿದರು. ಅಜ್ಞಾನಿಗಳಾದ ದುರ್ಬಲ ರಾದ ಜನಪದರು ದಿಕ್ಕುದೋರದೆ ಅಸಹಾಯಕರಾಗಿ, ಆ ಪ್ರತಿಷ್ಠಿತ ವರ್ಗ ದವರು ತೋರಿದ ದಾರಿಯನ್ನು ತುಳಿದಂತೆ ಕ್ರಮೇಣ ರಾಜಮಾರ್ಗ ನಿರ್ಮಾಣ ವಾಯಿತು. ಮುಂದೆ ಬಂದ ಜನತೆ ಹೀಗೆ ಬೆಳೆದು ಬಂದ ನ್ಯಾಯ ಸೂತ್ರಗಳೇ ಸರಿಯೆಂದು, ಶ್ರೇಷ್ಠವೆಂದು ನಂಬಿ ಅವುಗಳ ಮೇಲೆ ಗಾದೆಗಳನ್ನು ಸೃಷ್ಟಿಸಿ ದರು. ಕಥೆಗಳನ್ನು ರಚಿಸಿದರು. ನಂಬಿಕೆ, ಸಂಪ್ರದಾಯಗಳನ್ನು ಹುಲುಸಾಗಿ ಬೆಳೆಸಿದರು. ಪದ್ಯಗಳನ್ನು ಕಟ್ಟಿ ಹಾಡಿದರು. ಹೀಗೆ ಪ್ರತಿಷ್ಠಿತ ಮಾರ್ಗದವರ ಸ್ವಾರ್ಥಕ್ಕಾಗಿ ಸೃಷ್ಟಿಯಾದ ನೀತಿ ಅಥವಾ ನ್ಯಾಯ ಜನಪದ ಸಾಹಿತ್ಯದಲ್ಲಿ ಸಾರ್ವತ್ರಿಕವಾಗಿ ಸಾಕಷ್ಟು ಬೆಳೆದು ನಿಂತಿವೆ. ಅವರೇ 'ದೈವ' ದಲ್ಲಿ ಹೊಕ್ಕು ನ್ಯಾಯ ಮತ್ತು ನ್ಯಾಯಾಲಯಗಳನ್ನು ಹಾಳುಗೆಡವಿದ್ದಾರೆ. ಅಂಥವರ ಪ್ರಭಾವದಿಂದ ಹೀಗೆ ರಚನೆಗೊಂಡ ನೀತಿ ಅಥವಾ ನ್ಯಾಯವನ್ನು, ನಮ್ಮ ಮೂಲ ಜನಪದರಿಂದ ಉಳಿದುಬಂದ ನೀತಿ ಅಥವಾ ನ್ಯಾಯಗಳ ಪಳಿಯುಳಿಕೆಗ ಳನ್ನು ಹಾಗೂ ನ್ಯಾಯ ಮಾಡಿದ ಘಟನೆಗಳನ್ನು ಹೋಲಿಸಿ ನೋಡಿದರೆ ಅವರ ಪರಿಶುದ್ಧವಾದ ಸಾಮಾಜಿಕ ನ್ಯಾಯ ನಮ್ಮ ಕಣ್ಣು ಮುಂದೆ ಬಂದು ನಿಲ್ಲುತ್ತವೆ.

ಈ ಸಾಮಾಜಿಕ ನ್ಯಾಯದಲ್ಲಿ ಕೌಟುಂಬಿಕ ಮತ್ತು ಸಾಮಾಜಿಕ ಸಮಸ್ಯೆಗಳು ಒಳಗೊಳ್ಳುತ್ತವೆ. ಜನಪದರು ಕೌಟುಂಬಿಕ ಸಮಸ್ಯೆಗಳನ್ನು ಹೆಚ್ಚಾಗಿ ಮನೆಯಲ್ಲಿಯೇ ಬಗೆಹರಿಸಿಕೊಳ್ಳುತ್ತಿದ್ದರು.

"ತಾಯಿ ಮಕ್ಕಳ ಜಗಳ ನ್ಯಾಯ ಮಾಡವರ‍್ಯಾರ
ಪಾಲೀಗಿ ಮುತ್ತ ವಜನೇನ | ಹಡದವ್ವ
ನಾ ಆಡಿದ ಮಾತ ನಿಜವೇನ"

ಎನ್ನುವಲ್ಲಿ ಇಂಥ ನ್ಯಾಯವನ್ನು ನ್ಯಾಯದ ಕಟ್ಟೆಗೆ ಒಯ್ದು ಮನೆಯ ಮಾನ ಮರ್ಯಾದೆಯನ್ನು ಕಳೆಯುವ ಮೂರ್ಖರು ಅವರಾಗಿರಲಿಲ್ಲವೆಂದು ಗೊತ್ತಾಗುತ್ತದೆ. ಇನ್ನು ಕುಟುಂಬದಲ್ಲಿ ಹಿರಿಯರು ಇರದಿದ್ದರೆ, ಇಲ್ಲವೆ ತಮ್ಮ ತಪ್ಪು ತಮಗೆ ಅರಿವಾಗದಿದ್ದರೆ ಅಂಥ ನ್ಯಾಯಗಳನ್ನು ಮತ್ತು ಸಾಮಾಜಿಕ ನ್ಯಾಯಗಳನ್ನು 'ದೈವ'ದ ಮುಂದೆ ತರಲಾಗುತ್ತಿತ್ತು. ಆಗ ದೈವದವರು ಅವುಗಳ ಕುರಿತು ವಿಚಾರಣೆ ಮಾಡುವ ಪೂರ್ವದಲ್ಲಿ ಜನರಿಂದ ಯಾವ ಅಪವಾದ ಬರಬಾರದೆಂದು, ಇಡಿ ಊರ ಜನರನ್ನು ಸೇರಿಸಿ ಅವರ ಸಮ್ಮುಖದಲ್ಲಿ ನಿರ್ಣಯ ತೆಗೆದುಕೊಳ್ಳುತ್ತಿದ್ದರು. ತಪ್ಪು ಮಾಡಿದ ವ್ಯಕ್ತಿ ಎಂಥವನೇ ಇರಲಿ, ಅವನಿಗೆ ಕೊಡಬೇಕಾದ ಶಿಕ್ಷೆಯನ್ನು ಕೊಡುತ್ತಿದ್ದರು. "ದೈವ" ದೇವರ ಸಮಾನವೆಂದು ನಂಬಿದ ಅಪರಾಧಿಯೂ ಮರುನುಡಿಯದೆ, ತಲೆಬಾಗಿ ಆ ಶಿಕ್ಷೆಯನ್ನು ಸ್ವೀಕರಿಸುತ್ತಿದ್ದ. ಇಂಥ ಉದಾಹರಣೆಗಳನ್ನು ಅನೇಕ ಜನಪದ ಕಥೆಗಳಲ್ಲಿ ನಾವು ಕಾಣಬಹುದು. ಇದರಿಂದ ಅವರ ನ್ಯಾಯಕ್ಕೆ ಎಂಥ ಗೌರವವಿದ್ದಿತು, ಪಾವಿತ್ರ್ಯವಿದ್ದಿತೆಂಬುದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲ, ತಮ್ಮ ಊರ ನ್ಯಾಯ ಮತ್ತೊಂದು ಊರಿಗೆ ಹೋಗದಂತೆ ಎಚ್ಚರವಹಿಸುತ್ತಿದ್ದುದನ್ನು ನೋಡಿದರೆ, ಅವರ ನ್ಯಾಯದ ಸೂಕ್ಷ್ಮತೆ ಗೊತ್ತಾಗುತ್ತದೆ. ಇಲ್ಲಿ ಅವರ ಶುದ್ಧ ನ್ಯಾಯವನ್ನು ಜನಪದ ಸಾಹಿತ್ಯದಲ್ಲಿ ನೋಡಬಹುದು.

"ಹೆಣ್ಣಿನ ಬುದ್ಧಿ ಮೊಳಕಾಲ ಕೆಳಗೆ" ಅಂದರೆ ಹೆಣ್ಣು ಅಜ್ಞಾನಿ, "ಹೆಣ್ಣು ತಿರುಗಿ ಕೆಟ್ಟಿತು, ಗಂಡು ಕುಂತು ಕೆಟ್ಟಿತು" ಅಂದರೆ ಹೆಣ್ಣು ಚಂಚಲೆ, "ಗಂಡ ಸತ್ತ ರಂಡೆಯು ತಲೆ ಬೋಳಿಸದೆ ಬಿಡರು" ಅಂದರೆ ಅವಳು ಬಲಹೀನಳು–ಎಂಬ ಮುಂತಾದ ಆಧಾರಗಳ ಮೇಲಿಂದ ನಮ್ಮ ಜನಪದರು ಹೆಣ್ಣನ್ನು ಶೋಷಣೆ ಮಾಡಿದ್ದಾರೆ ಎನ್ನಬಹುದು. "ಹೆಣ್ಣೀನ ಕಾಯುವ ಮಣ್ಣು ಮಾಡಲಿಬೇಕ" ಎಂಬ ಹೆಣ್ಣಿನ ಅಳಲನ್ನು ಕೇಳಿದವರೆಲ್ಲ ನಮ್ಮ ಜಾನಪದರು ಹೆಣ್ಣಿಗೆ ಎಂಥ ಕಿರುಕುಳ ಕೊಟ್ಟು ಅನ್ಯಾಯ ಎಸಗಿದ್ದಾರೆಂದು ತೆಗಳಿದ್ದುಂಟು. ಆದರೆ

"ಹೆಣ್ಣು ಮಕ್ಕಳಿಗೆ ಕಣ್ಣೀರು ಹಾಕಿಸಿದವರು ಉದ್ಧಾರವಾಗುವದಿಲ್ಲ" ಎಂಬ ನಂಬಿಕೆಯಲ್ಲಿ ಹೆಣ್ಣಿಗೆ ಅಂಜಿದ್ದು—

"ಕಾಸೀಗಿ ಹೋಗಲಕ ಏಸೊಂದು ದಿನ ಬೇಕ
ತಾಸ್ಹೊತ್ತಿನ್ಹಾದಿ ತವರೂರ! ಮನಿಯಾಗ
ಕಾಸಿ ಕುಂತಾಳ ಹಡದವ್ವ"

ಎನ್ನುವಲ್ಲಿ ಅವಳನ್ನು ದೇವರಿಗಿಂತ ಹೆಚ್ಚು ಪೂಜ್ಯಭಾವದಿಂದ ಕಂಡಿದ್ದು, "ತಂದೆ ಇಲ್ಲದ ಮಕ್ಕಳು ಪರದೇಶಿಯಾಗರು, ತಾಯಿ ಇಲ್ಲದ ಮಕ್ಕಳು ಪರದೇಶಿಯಾಗುತ್ತಾರೆ. "ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ" ಎನ್ನುವಲ್ಲಿ ಹೆಣ್ಣಿನ ಮಹತ್ವವನ್ನು ಅರಿತಿದ್ದು, "ಹತ್ತು ಗಂಡುಮಕ್ಕಳನ್ನು ಹಡೆದರೂ ಒಂದು ಹೆಣ್ಣು ಮಗುವನ್ನು ಹಡೆಯದಿದ್ದರೆ ಬಂಜೆ" ಎನ್ನುವಲ್ಲಿ ಹೆಣ್ಣಿನ ಶ್ರೇಷ್ಠತೆಯನ್ನು ಎತ್ತಿ ಹೇಳಿದ್ದು, "ಹೆಣ್ಣು ಆದಿ ಶಕ್ತಿ" ಎಂದು ಅವಳ ಬಲವನ್ನು ಗುರುತಿಸಿದ್ದು ನೋಡಬಹುದು.

"ಪರಸ್ತ್ರೀಯರನ್ನು ಕಣ್ಣೆತ್ತಿ ನೋಡಬಾರದು, ನೋಡಿದರೆ ಪಾಪ" ಎಂಬ ನಂಬಿಕೆಯನ್ನು ನೋಡಿದಾಗ, ಗಂಡುಳ್ಳ ಹೆಣ್ಣನ್ನು ಮೋಹಿಸಿದರೆ ಅದಕ್ಕೆ ಎಂಥ ಶಿಕ್ಷೆಯಾಗುತ್ತದೆ ಎಂಬುದನ್ನು "ಸಂಗ್ಯಾಬಾಳ್ಯಾ" ಸಣ್ಣಾಟ ಓದಿದಾಗ, ಹೆಣ್ಣನ್ನು ಅಪಹರಿಸುತ್ತಿರುವಾಗ ಹೋರಾಡಿ ಮಡಿದವರ ಐತಿಹ್ಯಗಳನ್ನು ಕೇಳಿದಾಗ ನಮ್ಮ ಜನಪದರು ಶೋಷಣೆ ಮಾಡಿಲ್ಲ, ಅವಳಿಗೆ ಅನ್ಯಾಯ ಎಸಗಿಲ್ಲವೆಂದು ಎದೆತಟ್ಟಿ ಹೇಳಬಹುದು. ಹೀಗೆ ಶೋಷಣೆಯ, ಅನ್ಯಾಯದ ಕುರುಹುಗಳನ್ನು ಸಾರುವ ಜಾನಪದ ಅಂಶಗಳು; ಸಮಾಜವನ್ನು ಶೋಷಣೆ ಮಾಡುವ ಮೇಲು ವರ್ಗದವರ ಪ್ರಭಾವದಿಂದ ಹುಟ್ಟಿದವು ಎಂದು ಕಣ್ಣು ಮುಚ್ಚಿ ಹೇಳಬಹುದು. ಸಮಾಜದಲ್ಲಿ ಮೇಲು-ಕೀಳು, – ಶ್ರೀಮಂತ-ಬಡವ ಎಂಬ ಭೇದ ಕಲ್ಪಿಸಿದ್ದೂ ಇದೇ ವರ್ಗ. ಅಂಥ ಅಸಮಾನತೆಯನ್ನು ಕಲ್ಪಿಸುವ ಹೇಸಿ ಮನಸ್ಸು ಜನಪದರಿಗೆ ಇರಲಿಲ್ಲ. ಇದಕ್ಕೆ ಉದಾಹರಣೆಗಳೆಂದರೆ "ಒಂದು ತಾಳದಿಂದ ಬೆಳೆದ ಬೆಳೆ ರಾಜನಿಗೆ, ಒಂದು ತಾಳದಿಂದ ಬೆಳೆದ ಬೆಳೆ ಪಶು-ಪಕ್ಷಿಗಳಿಗೆ, ಇನ್ನೊಂದು ತಾಳದಿಂದ ಬೆಳೆದ ಬೆಳೆ ತನಗೆ ಸಹಾಯ ಮಾಡಿದ ಸಮಾಜದ ಇತರರಿಗೆ, ಕೊನೆಯ ತಾಳ ತನಗೆ ಎಂದು ರೈತರು ಹೇಳುತ್ತಾರೆ. ಇಲ್ಲಿ ಅವರ ವಿಶಾಲ ಮನಸ್ಸನ್ನು, ಭೇದ-ಭಾವವಿಲ್ಲದ ಶುದ್ಧ ಹೃದಯವನ್ನು ಗುರುತಿಸಬಹುದು. "ತಪ್ಪು ಎಂಥವರೇ ಮಾಡಲಿ ಅವರೆಲ್ಲ ನ್ಯಾಯದ ಮುಂದೆ ಸಮಾನ" ಎಂಬುದು, ಆಳನ್ನು "ಆಳುಮಗ"ನೆಂದು ಕರೆಯುವದು ಇವನ್ನೆಲ್ಲ ನೋಡಿದರೆ ಜನಪದರಲ್ಲಿ ಭೇದ-ಭಾವ ಇರಲಿಲ್ಲ. ಅವರು ಸಮಾಜಕ್ಕೆ

ಅನ್ಯಾಯ ಮಾಡಿಲ್ಲ. ಅವರ ಸಾಮಾಜಿಕ ನ್ಯಾಯ ಎಲ್ಲರಿಗೂ ಒಂದೇ ತೆರನಾಗಿತ್ತು ಎಂಬುದು ಗೊತ್ತಾಗುತ್ತದೆ.

ಇನ್ನು ಇವರು ಅಪರಾಧಿಗಳಿಗೆ ಕೊಡುವ ಶಿಕ್ಷೆಗಳೆಂದರೆ ಇನ್ನೊಮ್ಮೆ ಅಂಥ ತಪ್ಪು ಮಾಡುವದಿಲ್ಲವೆಂದು ದೇವರನ್ನು ಮುಟ್ಟಿಸಿ ಪ್ರತಿಜ್ಞೆ ಮಾಡಿಸುವದು, ಬುದ್ಧಿಮಾತು ಹೇಳಿ ಎಚ್ಚರಿಕೆ ನೀಡುವುದು, ಇಲ್ಲವೆ ಕ್ಷಮೆ ಕೇಳಿಸುವುದು, ಹೆಚ್ಚೆಂದರೆ ದಂಡ ವಿಧಿಸುವುದು, ಅತಿ ಘೋರವೆಂದರೆ ಸಮಾಜದಿಂದ ಬಹಿಷ್ಕಾರ ಹಾಕಿ, ಮಾಡಿದ ತಪ್ಪಿಗೆ ಪಶ್ಚಾತ್ತಾಪ ಪಡುವಂತೆ ಮಾಡುವುದು. ಇಂಥ ಸೂಕ್ಷ್ಮ ಶಿಕ್ಷೆಗಳಲ್ಲದೆ ಅಪರಾಧಿಯ ಮೊಲೆ, ಮೂಗು ಕತ್ತರಿಸಿ ಹಿಂಸೆ ಕೊಡುವುದಾಗಲಿ, ತಲೆಬೋಳಿಸಿ ಕತ್ತೆಯ ಮೇಲೆ ಮೆರಸಿ ಮರ್ಯಾದೆ ಕಳೆಯುವುದಾಗಲಿ. ಕೊಲೆ ಮಾಡಿಸಿ ಮತ್ತೊಂದು ಅಪರಾಧ ಮಾಡುವುದಾಗಲಿ ಮಾಡುತ್ತಿರಲಿಲ್ಲ. ಆದರೆ ಇಂಥ ಭಯಾನಕ ಶಿಕ್ಷೆಗಳನ್ನು ಈಗ ಜನಪದರು ಕೊಡುತ್ತಿರುವುದನ್ನು ನೋಡಿದರೆ ಇವು ಮೂಲತಃ ಶೋಷಕ ವರ್ಗದಿಂದ ಬಂದು ಸೇರಿದವುಗಳೆನಿಸುತ್ತವೆ. ಈ ವರ್ಗ ಜನಪದರ ದೈವದಲ್ಲಿ ಹೊಕ್ಕು ಅವರ ಸಾಮಾಜಿಕ ನ್ಯಾಯವನ್ನು ಅಪವಿತ್ರಗೊಳಿಸುತ್ತಾರೆ. ಅಂತೆಯೇ "ಶ್ರೀಮಂತರು ಮಾಡಿದ್ದು ಆಚಾರ, ಬಡವ ಮಾಡಿದ್ದು ಅನಾಚಾರ," "ಆಚಾರ ಹೇಳುವನ ಮನ್ಯಾಗ ಆರ ಜನಾ ಮುಂಡೇರು," "ಹಣ ಇದ್ದರೆ ಹಾದರ ಮುಚ್ಚುತ್ತೆ" ಎಂಬಂಥ ಗಾದೆಗಳು ಅಂಥವರನ್ನು ಕುರಿತಾಗಿಯೇ ಹುಟ್ಟಿಕೊಂಡಿವೆ. ಇಂಥವುಗಳ ಆಧಾರದ ಮೇಲಿಂದ ಜಾನಪದರ ಸಾಮಾಜಿಕ ನ್ಯಾಯವನ್ನು ಗುರುತಿಸುವುದು ತಪ್ಪು. ಅವರ ಸರಿಯಾದ ನ್ಯಾಯವನ್ನು ಇನ್ನೂ ತಿಳಿದುಕೊಳ್ಳಬೇಕಾದರೆ ನಾವು ಸ್ವತಃ ಅವರ ಹತ್ತಿರ ಹೋಗಿ ವಿಚಾರಿಸಬೇಕು. ಆಗ ಮಾತ್ರ ಅದರ ನಿಜಸ್ವರೂಪ ಗೊತ್ತಾಗುತ್ತದೆ. ಉದಾಹರಣೆಗೆ ನಾನು ಕೇಳಿದ ಒಂದು ಜನಪದರ ನ್ಯಾಯವನ್ನು ತಿಳಿಸಬಯಸುತ್ತೇನೆ.

ಬಡವನೊಬ್ಬ ಚಿಂತಾಜನಕ ಸ್ಥಿತಿಯಲ್ಲಿ ಇದ್ದ. ಮಕ್ಕಳು ಹಸಿವಿನಿಂದ ಚಡಪಡಿಸುತ್ತಿದ್ದವು. ಅವುಗಳ ಸಂಕಟನೋಡದೆ, ಊರ ಮಗ್ಗಲ ಹೊಲದಲ್ಲಿಯ ಸಜ್ಜೆಯ ತೆನೆಗಳನ್ನು ಕಳವು ಮಾಡಿ ತರಲು ಹೋಗಿ ಸಿಕ್ಕು ಬಿದ್ದ, ಹೊಲದೊಡೆಯ ಕೈಗಳನ್ನು ಹಗ್ಗದಿಂದ ಕಟ್ಟಿ ನ್ಯಾಯದ ಕಟ್ಟೆಯ ಕಂಬಕ್ಕೆ ಕಟ್ಟಿದ. ಆ ಬಡವನ ಸ್ವಭಾವವನ್ನು ಅರಿತ ದೈವ, ಅವನಿಗೆ ಶಿಕ್ಷೆ ಕೊಡದೆ, ದನದಂತೆ ಹಗ್ಗಕಟ್ಟಿ ಎಳೆದು ತಂದು ಅವಮಾನ ಮಾಡಿದ ಒಡೆಯನಿಗೆ 'ನೀನು ಇಂಥ ಮನುಷ್ಯನ ಮರ್ಯಾದೆ ಕಳೆದದ್ದು ತಪ್ಪೆಂದು ಹೇಳಿಕಳುಹಿಸಿತು. ಗೇಣು ಹೊಟ್ಟೆ ಊರ ಜನರ ಮುಂದೆ ತನ್ನ ಮರ್ಯಾದೆಯನ್ನೇ ಕಳೆಯಿತೆಂದು ಆ ಬಡವ ಅಂದೇ ರಾತ್ರಿ ಉರುಲು ಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡ.

ಇಲ್ಲಿ ನಾವು ಜನಪದರ ಸಾಮಾಜಿಕ ನ್ಯಾಯದ ಹೃದಯ ವಿಶಾಲತೆಯನ್ನು ಗುರುತಿಸಬಹುದು. ಒಂದು ಸಣ್ಣ ತಪ್ಪು ವ್ಯಕ್ತಿಯನ್ನು ನ್ಯಾಯದ ಮುಂದೆ ತಲೆ ಬಾಗಿಸಿ, ಕೊನೆಗೆ ಆತ್ಮಹತ್ಯೆಗೆ ಕಾರಣವಾಗುವದನ್ನು ನೋಡಿದರೆ; ನ್ಯಾಯದ ಸೂಕ್ಷ್ಮತೆ, ಪವಿತ್ರತೆಯು ಅರಿವಾಗುತ್ತದೆ. ಇಂಥ ದೈವಕ್ಕೆ ಇಂಥ ನ್ಯಾಯಾಲಯಕ್ಕೆ ನಮ್ಮ ಮನಸ್ಸು ತಲೆಬಾಗಿ ನಮಿಸದೆ ಇರಲಾರದು. ಇಂಥ ಜನಪದರ ನ್ಯಾಯಾಲಯಗಳು ಅಲ್ಲಲ್ಲಿ ಕೆಲವು ಹಳ್ಳಿಗಳಲ್ಲಿ ಉಳಿದಿವೆ. ಅವನ್ನು ಉಳಿಸಬೇಕು, ಬೆಳೆಸಬೇಕು, ರಕ್ಷಣೆ ಮಾಡಬೇಕು. ಯಾಕೆಂದರೆ ನಮಗೆ ನಿಜವಾದ ನ್ಯಾಯಸಿಗುವದು ಅಲ್ಲಿಯೇ. ಅಲ್ಲದೆ ಆರ್ಥಿಕ ಉಳಿತಾಯವಾಗುವದಲ್ಲದೆ, ಬಹುಬೇಗ ಸರಿಯಾದ ನ್ಯಾಯ ದೊರೆಯುವದು, ಇಂಥ ಸಾಮಾಜಿಕ ನ್ಯಾಯದ ಪವಿತ್ರತೆಯನ್ನು ಕಾಪಾಡುವದು ನಮ್ಮೆಲ್ಲರ ಹೊಣೆಯಾಗಿದೆ.

ಗೋವೆಯ ಕದಂಬ ಮೂರನೆಯ ಗೂವಲದೇವನ ಆಳಿಕೆಯ ಪ್ರಾಚೀನ ಶಾಸನ

● ಬಿ. ಆರ್. ಹಿರೇಮಠ

● ಎಸ್. ಪಿ. ಪಾಟೀಲ

● ಕೆ.ಪಿ. ವೀರಣ್ಣ

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಮುತ್ತಗಿ ಗ್ರಾಮದ ಕಲ್ಮೇಶ್ವರ ದೇವಾಲಯದ ನೂತನ ಕಟ್ಟಡ ನಿರ್ಮಾಣಕ್ಕಾಗಿ ನೆಲ ಅಗಿಯುವಾಗ ಎರಡು ಹೊಸ ಶಿಲಾಶಾಸನಗಳು ಲಭಿಸಿದ್ದು, ಇವುಗಳಲ್ಲಿ ಒಂದು ಅತ್ಯಂತ ಸುಸ್ಥಿತಿಯಲ್ಲಿಯೂ ಇನ್ನೊಂದು ತ್ರುಟಿತ ಸ್ಥಿತಿಯಲ್ಲಿಯೂ ಇರುತ್ತವೆ. ಸುಸ್ಥಿತಿಯಲ್ಲಿರುವ ಶಾಸನವನ್ನು ಮಾತ್ರ ಇಲ್ಲಿ ಪರಿಚಯಿಸಲಾಗಿದೆ.

೧೩-೫-೧೯೮೨ ರಂದು ಮುಂಜಾನೆ ಮುತ್ತಗಿ ಗ್ರಾಮ ತಲುಪಿದ ನಾವು, ಈ ಎರಡೂ ಹೊಸ ಶಿಲಾಶಾಸನಗಳನ್ನು ಕಂಡುಹಿಡಿದು, ಅವುಗಳ ಪಡಿಯಚ್ಚು ತೆಗೆದುಕೊಂಡೆವು. ಸುಸ್ಥಿತಿಯಲ್ಲಿರುವ ಶಾಸನವನ್ನು ಅಲ್ಲಿಯೇ ಓದಿ ಶಾಸನ ಪತ್ರ ಸಿದ್ಧಪಡಿಸಿಕೊಂಡೆವು. ಆಮೇಲೆ ಪಡಿಯಚ್ಚಿನ ಸಹಾಯದಿಂದ ಶಾಸನ ಪಾಠವನ್ನು ಅಂತಿಮವಾಗಿ ತಯಾರಿಸಿದೆವು. ಈ ಶಾಸನದಲ್ಲಿ ಒಟ್ಟು ೩೨ ಸಾಲುಗಳಿರುತ್ತವೆ. ಶಾಸನದ ಅಕ್ಷರಗಳು ಅಂದವಾಗಿದ್ದು, ಸುಸ್ಪಷ್ಟವಾಗಿರುತ್ತವೆ. ಕೆಲವು ಸಾಲುಗಳ ಆರಂಭ, ಅಂತ್ಯಗಳಲ್ಲಿ ಆಲಂಕಾರಿಕ ವರ್ತುಳ ವಿನ್ಯಾಸಗಳಿರುತ್ತವೆ. ಒಂದೆರಡು ಕಡೆ ಮಾತ್ರ ಶಾಸನ ತ್ರುಟಿತವಾಗಿದೆ. ಶಾಸನದ ಲಿಪಿ ಮತ್ತು ಭಾಷೆ ಕನ್ನಡವಾಗಿರುತ್ತದೆ.

ಕಲ್ಯಾಣಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳಿಕೆಯ ಕಾಲದಲ್ಲಿ ಪ್ರಸ್ತುತ ಶಾಸನ ಹುಟ್ಟಿಕೊಂಡಿದೆ. ಆರನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರರಲ್ಲಿ ಅಗ್ರಗಣ್ಯರಾದವರು, ಗೋವೆಯ ಕದಂಬರು. ಈ ಗೋವೆಯ ಕದಂಬ ಮೂರನೆಯ ಗೂವಲಡೇಪ, ಆರನೆಯ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾಗಿದ್ದನು. ಹೀಗೆ ಆರನೆಯ ವಿಕ್ರಮಾದಿತ್ಯನ ಚಕ್ರವರ್ತಿಯಾಗಿಯೂ ಗೋವೆಯ ಕದಂಬ ಮೂರನೆಯ ಗೂವಲವೇವ ಮಹಾಮಂಡಳೇಶ್ವರನಾಗಿಯೂ ಆಳುತ್ತಿದ್ದ ಕಾಲದಲ್ಲಿ ಸಿಂಗಗಾವುಂಡ ಹಾಗೂ ಚಾವುಂಡ

(ಚವುಂಡ) ಗಾವುಂಡರು ಮುತ್ತಗಿ ಗ್ರಾಮದಲ್ಲಿ ಕಲಿದೇವ ದೇವಾಲಯ ಕಟ್ಟಿಸಿ ಈ ದೇವಾಲಯದ ಅಂಗಭೋಗ– ಚೈತ್ರ– ಪವಿತ್ರ ಪರ್ವ – ಜೀರ್ಣೋದ್ಧಾರಗಳಿಗಾಗಿ, ಮಲ್ಲಿದೇವರ ಪೂಜಾರಿಯ ಆಹಾರ (=ಗ್ರಾಸ) – ಬಟ್ಟೆ (ಕಪ್ಪಡ) ಗಳಿಗಾಗಿ ಹಾಗೂ ದೇವರ ನೈವೇದ್ಯ ತಯಾರಿಸುವ ಗೊರವಕಬ್ಬೆಯ ಆಹಾರ (= ಕೂಳು)– ಬಟ್ಟೆಗಳಿಗಾಗಿ, ತಟ್ಟೆಯಕೆರೆಯ ಕೆಳಗಿನ ಗದ್ದೆಯನ್ನೂ ಗೋವಿಂದ ಷಣಂಗಿ ಮಾಡುವ ಹಕ್ಕಲು ಭೂಮಿಯನ್ನೂ ಮುದ್ರಾಮಣ, ಬೀದಿವಣ ತೆರಿಗೆಗಳನ್ನೂ ದಾನವಾಗಿ ನೀಡಿದುದು ಈ ಶಾಸನದ ಪ್ರಮುಖ ವಿಷಯ. ಇದಲ್ಲದೆ ಉಗುರಮೂನೂರ್ವರು (ವೀಳ್ಯದೆಲೆ ಕೊಯ್ಯುವವರು) ಈ ದೇವಾಲಯದ ನಂದಾದೀವಿಗೆಗಾಗಿ ಎಣ್ಣೆಯನ್ನೂ ಹಣ (ದರ್ಶನ)ವನ್ನೂ ದಾನವಾಗಿ ಕೊಟ್ಟಿದ್ದಾರೆ. ಹೀಗೆ ಈ ಶಾಸನದಲ್ಲಿ ಎರಡು ದತ್ತಿಗಳಿರುತ್ತವೆ.

ಸಾಲು ೨೦–೨೧ರಲ್ಲಿ ಬರುವ "ಚಾಳುಕ್ಯ ವಿಕ್ರಮಾಂಕನ ಕಾಳಂ ಶಶಿಸಂವತ್ಸರಕ್ಕೆ ನಳಾಬ್ದಕ್ಕಾಳಂಬಮೆನಿಪ್ಪೊಳ್ಪಂ ಪಾಳಿಸುವಾಶ್ವಯುಜ ಮಾಸದೊಳ್ ಪುಣ್ಣಮೆಯೊಳ್ ಹಿಮಕರವಾರದೊಳತ್ಯುತ್ತಮ ವ್ಯತೀಪಾತ ಸಂಕ್ರಮಣಮೆಂಬಿವರೊಳ್ ಸಮುಚಿತ ಸೋಮಗ್ರಹಣಂ ಸಮನಿಸೆ" ಎಂಬ ಮಿತಿಯು ಕ್ರಿ.ಶ ೧೦೭೭ ಅಕ್ಟೋಬರ ೪ ಬುಧವಾರಕ್ಕೆ ಸಮಾನವಾಗಿರುತ್ತದೆ. ಇಲ್ಲಿ ವಾರದ ಉಲ್ಲೇಖ ತಪ್ಪಾಗಿ ನಮೂದಿತವಾಗಿದೆ. ಅಂದು ಇದ್ದುದು ಸೋಮವಾರವಲ್ಲ, ಬುಧವಾರ.

ಕಲಘಟಗಿ ತಾಲೂಕಿನ ಮುತ್ತಗಿ ಪ್ರದೇಶ ಕಲ್ಯಾಣ ಚಾಲುಕ್ಯ ಹಾಗೂ ಗೋವೆಯ ಕದಂಬರ ಆಡಳಿತಕ್ಕೆ ಒಳಪಟ್ಟಿದ್ದಿತು. ಈ ಅರಸರ ಕಾಲದ ರಾಜಕೀಯ ಆಡಳಿತ ವಿಭಾಗಗಳಲ್ಲಿ ಮಾರಜವಾಡಿಯೂ ಒಂದು. ಈ ಮಾರಜವಾಡಿಯಲ್ಲಿ ಹುಲ್ಲಂಬಿ – ೭೦ ಒಂದು ರಾಜಕೀಯ ಉಪವಿಭಾಗ. ಹುಲ್ಲಂಬಿ–೭೦ ರಲ್ಲಿ ಪ್ರಸ್ತುತ ಮುತ್ತಗಿ ಗ್ರಾಮ ಸಮಾವೇಶವಾಗಿದ್ದಿತು.

ಸಿಂಗಗಾವುಂಡ ಹಾಗೂ ಚಾವುಂಡ ಗಾವುಂಡರು ಮುತ್ತಗಿ ಗ್ರಾಮದ ಗಾವುಂಡಮನೆತನದವರು, ಬಹುಶಃ ಸ್ಥಳೀಯ ಆಡಳಿತಾಧಿಕಾರಿಗಳು. ಈ ಸಿಂಗಗಾವುಂಡನಿಗೆ ಬರ್ಮಗಾವುಂಡನೂ ಚಾವುಂಡಗಾವುಂಡನಿಗೆ ಚಟ್ಟಗಾವುಂಡನೂ ಎಂಬ ಮಕ್ಕಳಿದ್ದರು.

ಶಾಸನದ ಆರಂಭದಲ್ಲಿ "ನಮಸ್ತುಂಗ ಶಿರಶ್ಚುಂಬಿ ಚನ್ದ್ರಚಾಮರ ಚಾರವೇ। ತ್ರೈಳೋಕ್ಯ ನಗರಾರಂಭ ಮೂಳಸ್ತಂಭಾಯ ಸ(ಶ)ಂಭವೇ" ಎಂಬ ಶಿವಸ್ತುತಿಯೂ "ಜಯತ್ಯಾವಿಷ್ಕೃತಂ ವಿಷ್ಣೋರ್ವ್ವಾರಾಹಂ ಕ್ಷೋಭಿತಾರ್ಣ್ಣವಂ । ದಕ್ಷಿಣೋನ್ನತ ದಂಷ್ಟ್ರಾಗ್ರ ವಿಶ್ರಾನ್ತ ಭುವನಂ ವಪುಃ" ಎಂಬ ವಿಷ್ಣುಸ್ತುತಿಯೂ ಇದ್ದು, ಇವು ಅಂದಿನ ಕಾಲದ ಆ ಗ್ರಾಮದ ಶೈವ–ವೈಷ್ಣವ ಧರ್ಮಗಳ ಸಾಮರಸ್ಯ

ವನ್ನು ಸೂಚಿಸುವಂತಿವೆ* ಮುತ್ತಗಿ ಗ್ರಾಮದಲ್ಲಿ ಶೈವ, ವೈಷ್ಣವ ಧರ್ಮಗಳಲ್ಲದೆ ಜೈನಧರ್ಮವೂ ಇದ್ದುದಕ್ಕೆ ಈ ಹಿಂದೆ ಇಲ್ಲಿ ದೊರೆತಿರುವ ನೇಮಿನಾಥ, ಪಾರ್ಶ್ವನಾಥ ತೀರ್ಥಂಕರರ ವಿಗ್ರಹಗಳೂ ಈ ವಿಗ್ರಹಗಳ ಪಾದಪೀಠದ ಮೇಲಿರುವ ಶಾಸನಗಳೂ ಆಧಾರವನ್ನೊದಗಿಸುತ್ತವೆ. ಹೀಗೆ ಪ್ರಾಚೀನಕಾಲದಲ್ಲಿ ಮುತ್ತಗಿ ಗ್ರಾಮ ಶೈವ, ವೈಷ್ಣವ ಹಾಗೂ ಜೈನ ಧರ್ಮಗಳ ಸಂಗಮಸ್ಥಾನವೆನಿಸಿದ್ದಿತು. ಇಲ್ಲಿ ಧರ್ಮಸಾಮರಸ್ಯದೊಂದಿಗೆ ಧರ್ಮಸಂಘರ್ಷವೂ ನಡೆದಿರುವ ಸಾಧ್ಯತೆಯಿದೆ. ಶಾಸನಾರಂಭದ ಶಿವ, ವಿಷ್ಣು ಸ್ತುತಿಗಳು ಧರ್ಮಸಾಮರಸ್ಯವನ್ನು ಸಾರಿದರೆ ನೇಮಿನಾಥ–ಪಾರ್ಶ್ವನಾಥ ತೀರ್ಥಂಕರರ ವಿಗ್ರಹ, ಜಿನಾಲಯದ ಭಗ್ನಾವಶೇಷಗಳೂ ಶಿವಲಿಂಗ. ಶಿವದೇವಾಲಯಗಳ ಭಗ್ನಾವಶೇಷಗಳೂ ಜೈನ–ಶೈವ ಧರ್ಮಗಳ ಸಂಘರ್ಷವನ್ನು ಸೂಚಿಸುತ್ತಿವೆ.

ಹೀಗೆ ಪ್ರಾಚೀನ ಮುತ್ತಗಿಗ್ರಾಮದಲ್ಲಿ ಕಲಿದೇವಸ್ವಾಮಿ, ಮಲ್ಲಿದೇವ. ಸೋಮನಾಥ, ಸುಳ್ಳೇಶ್ವರ ಶಿವಾಲಯಗಳೂ ಪಾರ್ಶ್ವನಾಥ ಮತ್ತು ನೇಮಿನಾಥರ ಜಿನಾಲಯಗಳೂ ಇದ್ದುದು ಇಲ್ಲಿಯ ಶಾಸನಗಳಿಂದ ಗೊತ್ತಾಗುತ್ತದೆ. ಆದರೆ ಇಂದಿನ ಮುತ್ತಗಿಯಲ್ಲಿ ಇವುಗಳ ಅವಶೇಷಗಳು ಮಾತ್ರ ಕಂಡುಬರುತ್ತವೆ.

ಶೈವ ದೇವಾಲಯದ ಸ್ಥಾನಾಚಾರ್ಯನನ್ನು ಈ ಶಾಸನದಲ್ಲಿ 'ಮಠಪಂ' ಎಂದು ಕರೆಯಲಾಗಿದೆ. ಈ 'ಮಠಪರು' ಗುಣಶೀಲರಾಗಿರಬೇಕೆಂಬ ಕಡ್ಡಾಯ ನಿಯಮವಿದ್ದಿತು. ಒಂದು ವೇಳೆ 'ಮಠಪರು' ಗುಣಶೀಲರಾಗಿರದಿದ್ದರೆ, ಅರಸು ಇಲ್ಲವೆ ಗೌಡರು ಇಂಥವರನ್ನು ದೇವಾಲಯದಿಂದ ಹೊರಹಾಕುತ್ತಿದ್ದರೆಂಬ ಮಹತ್ವದ ಅಂಶವನ್ನು ಈ ಶಾಸನ ತಿಳಿಸುತ್ತದೆ. ಅಂದಿನ ಸಮಾಜದ ಧಾರ್ಮಿಕ ಕ್ಷೇತ್ರದಲ್ಲಿ ಚಾರಿತ್ರ್ಯ– ನೀತಿಗಳಿಗಿದ್ದ ಪ್ರಾಜ್ಯತೆ ಹಾಗೂ ಪುರಸ್ಕಾರಗಳನ್ನು ಇದು ಎತ್ತಿತೋರಿಸುತ್ತದೆ. ಇವುಗಳ ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ಆಡಳಿತಗಾರರು ವಹಿಸುತ್ತಿದ್ದ ತೀವ್ರ ಕಾಳಜಿಯನ್ನು ನಾವಿಲ್ಲಿ ಕಾಣುತ್ತೇವೆ.

ಪ್ರಾಚೀನ ಕರ್ನಾಟಕದ ಮೌಲ್ಯಗಳಲ್ಲಿ ದಾನವೂ ಒಂದು. ಸಿಂಗಗಾವುಂಡ, ಚಾವುಂಡ ಗಾವುಂಡರು ಹಾಗೂ ಇವರ ಮಕ್ಕಳು ದಾನಮೌಲ್ಯವನ್ನು ಬದುಕಿದ ಧೀಮಂತ ವ್ಯಕ್ತಿಗಳಾಗಿದ್ದಾರೆ. ಸಿಂಗಗಾವುಂಡನ ವಿವಿಧ ಗುಣಗಳನ್ನು

ದಯೆಯೊಳ್ ಧರ್ಮದೊಳೊಳ್ಪಿನೊಳ್ವಿನಯದೊಳ್ಚಾತುರ್ಯದೊಳ್
ಧೈರ್ಯದೊಳ್

* ಈ ಗ್ರಾಮದ ರಾಮಲಿಂಗೇಶ್ವರ ದೇವಾಲಯದಲ್ಲಿರುವ ಶಾಸನದ ಆರಂಭದಲ್ಲಿಯೂ ಶಿವ-ವಿಷ್ಣು ಸ್ತುತಿಗಳಿರುತ್ತವೆ.

ನಯದೊಳ್ವಿಕ್ರಮದೊಳ್ಪ್ರಭುತ್ವಗುಣದೊಳ್ಸತ್ಯೋಕ್ತಿಯೊಳ್ದಾನಶ
ಕ್ತಿಯೊಳೀತಂ ಮಿಗಿಲೆನ್ದು ಬಣ್ಣಿಪುದು ಲೋಕಂ ತಾರನಿಹಾರಹಾ
ರಯಶಸ್ಸಂಗನನೂರ್ಜ್ಜಿತೋಜ್ವಳ ಗುಣಪ್ರೋತ್ತುಂಗನಂ ಸಿಂಗನಂ ||

ಎಂದು ಈ ಶಾಸನ ಕೀರ್ತಿಸುತ್ತದೆ. ಈತನ ಮಗ ಬರ್ಮಗಾವುಂಡನು ವಿನಯ ನಿಧಿಯೂ ಸತ್ಯವಾಕ್ಯನೂ ಮನೋಮಾರ್ಗನೂ ಶೌರ್ಯಶಾಲಿಯೂ ಆಗಿದ್ದನು. ವಿನಯ, ಪರಹಿತ, ಧರ್ಮ ಹಾಗೂ ಶೌಚ ಗುಣಗಳು ಚಾವುಂಡಗಾವುಂಡನಲ್ಲಿ ನೆಲೆನಿಂತಿದ್ದವು. ಈತನ ಮಗ ಚಟ್ಟಗಾವುಂಡನು ಏಕವಾಕ್ಯನೂ ಶೌರ್ಯ ನಿಧಿಯೂ ಕಾರ್ಯಬೃಹಸ್ಪತಿಯೂ ಆಗಿದ್ದನು. ಹೀಗೆ ಮುತ್ತಗಿಯ ಈ ಗಾವುಂಡ ಮನೆತನ ದಾನಮೌಲ್ಯಕ್ಕೆ ಹೆಸರಾಗಿದ್ದಿತು. ಇದಲ್ಲದೆ ಗೋವಗಾವುಂಡ ಮತ್ತು ಜೊಂತಗಾವುಂಡರ ಉಲ್ಲೇಖಗಳು ಇಲ್ಲಿಯ ಕ್ರಿ. ಶ. ೧೨೦೨, ೧೨೨೩ ರ ಶಾಸನಗಳಲ್ಲಿರುತ್ತವೆ.

ದೇವಾಲಯಗಳಲ್ಲಿ ದೇವರನ್ನು ಪೂಜಿಸುವವರನ್ನು 'ಪೂಜಾರಿ' ಯೆಂದೂ ದೇವಾಲಯದ ಮುಖ್ಯಸ್ಥನಾದ ಸ್ಥಾನಾಚಾರ್ಯನನ್ನು 'ಮಠಪ' ನೆಂದೂ ಕರೆಯಲಾಗಿದೆ. ಇದರಿಂದ 'ಪೂಜಾರಿ' ಹಾಗೂ 'ಸ್ಥಾನಾಚಾರ್ಯ' ಇಬ್ಬರೂ ಬೇರೆಬೇರೆಯೆಂಬ ಸ್ಪಷ್ಟವಾದ ವಿವರಗಳನ್ನು ಈ ಶಾಸನ ನಮಗೆ ನೀಡುತ್ತದೆ.

ಈ ಶಾಸನದ ಕವಿಯ ಹೆಸರು ಜಯದೇವ. ತನ್ನ ಈ ಶಾಸನಕಾವ್ಯವನ್ನು "ಶ್ರವ್ಯಂ ಮನೋಹರಂ" ಎಂದು ಈತ ಕರೆದಿದ್ದಾನೆ. ಈ ಶಾಸನಕವಿ ಜಯ ದೇವ ಸಂಸ್ಕೃತ, ಕನ್ನಡ–ಈ ಉಭಯ ಭಾಷೆಗಳಲ್ಲಿಯೂ ಬಲ್ಲಿದನಾಗಿದ್ದಾನೆ. ಕಂದ—ವೃತ್ತ—ಗದ್ಯ ಶ್ಲೋಕಗಳಿಂದ ಕೂಡಿದ ಪ್ರಸ್ತುತ ಶಾಸನ ಪುಟ್ಟಚಂಪೂ ಕಾವ್ಯದಂತಿದೆ. ಶಾಸನಕ್ಕೆ ಸಾಹಿತ್ಯವನ್ನೊದಗಿಸಿದ ಈ ಜಯದೇವನೇ ಈ ಈ ಶಾಸನದ ಲಿಪಿಕಾರನಾಗಿರುವ ಸಾಧ್ಯತೆಯನ್ನು "ಏತಚ್ಛಾಸನ ಲಿಖಿತಂ" ಎಂಬ ವಾಕ್ಯ ತಿಳಿಸುವಂತಿದೆ. ಕಲ್ಲೋಜ ಈ ಶಾಸನದ ರೂವಾರಿ. ಈ ರೀತಿಯಾಗಿ ಕವಿ – ಲಿಪಿಕಾರ – ರೂವಾರಿಗಳ ಹೆಸರುಗಳನ್ನು ವಿವರವಾಗಿ ಹೇಳುವ ವಿರಳ ಶಾಸನಗಳಲ್ಲಿ ಇದೂ ಒಂದಾಗಿದೆ.

ಮುದ್ರಾವಣ (ಟಂಕಶಾಲೆಯ ಮೇಲಿನ ತೆರಿಗೆ), ಬೀಡಿವಣ (ಸಾರಿಗೆ ತೆರಿಗೆ) ಹಾಗೂ ದರ್ಶನವೆಂಬ ತೆರಿಗೆವಿಶೇಷಗಳ ಉಲ್ಲೇಖ ಇಲ್ಲಿದೆ. ಇದಲ್ಲದೆ ತಟ್ಟೆಯ ಕೆರೆ* (ಮುತ್ತಗಿಯ ಒಂದು ಕೆರೆ), ನೀರುಸಾಗರ (ಊರಿನ ಹೆಸರು), ಮೂಡಗೇರಿ (ಮುತ್ತಗಿಯ ಒಂದು ಕೇರಿ) ಹಾಗೂ ಉಗುರಮೂನೂರ್ವರು (ವೀಳ್ಯದೆಲೆ ಕೊಯ್ಯುವವರು) ಮೊದಲಾದವುಗಳ ಉಲ್ಲೇಖ ಈ ಶಾಸನದಲ್ಲಿದೆ. ಜೊತೆಗೆ ಇಲ್ಲಿ ಬರುವ

* ಈಗ 'ಪುಟ್ಟಯಕೆರೆ' ಯೆಂದು ಕರೆಯುತ್ತಾರೆ. ಈ ಕೆರೆ ಸಂಪೂರ್ಣ ಮುಚ್ಚಿ ಹೋಗಿದೆ.

“ದ್ವಿಜೋತ್ತಮ ನಾಗದಾಸಿಮಯ್ಯ” ಪದವನ್ನು ಅವಶ್ಯ ಗಮನಿಸಬೇಕು. ಬಸವಪೂರ್ವಯುಗದಲ್ಲಿಯೇ ಈ ಪದ ಪ್ರಯೋಗವಾಗಿರುವುದನ್ನು ಲಕ್ಷಿಸಬೇಕು. ಮುತ್ತಗೆ ಗ್ರಾಮದ ಪ್ರಾಚೀನರೂಪ ‘ಮುತ್ತರ್ಗೆ’ ಯೆಂಬುದು ಗೊತ್ತಾಗುತ್ತದೆ.

ಕಲಘಟಗಿ ತಾಲೂಕಿನಲ್ಲಿ ಗೋವೆಯ ಕದಂಬರಿಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಒಟ್ಟು ೩೭ ಶಾಸನಗಳು ದೊರೆತಿವೆ. ಈ ಶಾಸನಗಳು ಚಟ್ಟಯದೇವ II (೧೧೫೦, ಕಂದಲಿ), ಜಯಕೇಶಿI (೧೦೬೨ ಶೇಡಂಬಿ, ೧೦೬೨ ಶೇಡಂಬಿ ೧೦೬೫ ಸಂಗಮೇಶ್ವರ), ಗೂವಲದೇವII (೧೧೨೦ ತಂಬೂರ), ಗೂವಲದೇವ III (೧೦೭೯ ಮುಕ್ಕಲ್ಲ, ೧೦೭೯ ಸಂಗಮೇಶ್ವರ, ೧೦೮೨ ಸಂಗಮೇಶ್ವರ, ೧೧೦೩ ಮಲಕನಕೊಪ್ಪ), ಜಯಕೇಶಿII (೧೧೨೫ ಮಾವಳ್ಳಿ, ೧೧೨೫ ತಂಬೂರ. ೧೧೩೦–೩೧ ಹುಣಸೀಕಟ್ಟಿ, ೧೧೩೬ ಮಿಶ್ರಿಕೋಟಿ, ೧೧೩೮ ಜಿನ್ನೂರ), ಪೆರ್ಮಾಡಿದೇವ (೧೧೪೨ ಹುಣಸೀಕಟ್ಟಿ, ೧೧೪೭–೪೮ ಬೊಮ್ಮಿಗಟ್ಟಿ, ೧೧೫೮ ಮಡಕಿಹೊನ್ನಳ್ಳಿ, ೧೧೫೮ ಮಿಶ್ರಿಕೋಟಿ, ೧೧೫೯ ಸಿದ್ಧಸಹಳ್ಳಿ, ೧೧೬೨ ಹಾಳಸೀಗಿಕಟ್ಟಿ, ೧೧೬೪ ಶೇಡಂಬಿ, ೧೧೬೮ ಸೋಮನಕೊಪ್ಪ, ೧೧೭೦–೭೧ ಹರಸಂಬಿ, ೧೧೭೧ ಕಾಮಧೇನು, ೧೧೭೪ ಡಿಂಬವಳ್ಳಿ, ೧೧೭೪ ಮುತ್ತಗಿ), ಜಯಕೇಶಿIII (೧೧೭೧ ಉಗ್ನಿಕೇರಿ, ೧೧೭೧ ಉಗ್ನಿಕೇರಿ, ೧೧೭೧ ಉಗ್ನಿಕೇರಿ, ೧೧೭೧ ಉಗ್ನಿಕೇರಿ| ‹೧೧೯೨ ಮುತ್ತಗಿ, ೧೧೯೯–೧೨೦೦ ಮುತ್ತಗಿ, ೧೨೦೧ ತಂಬೂರ, ೧೨೦೨ ಮುತ್ತಗಿ, ೧೨೦೨ ಗಳಗಿ, ೧೨೨೩ ಮುತ್ತಗಿ), ಚಟ್ಟಯದೇವIII (೧೨೫೦ ಭಟ್ಟಕೊಪ್ಪ) ರಿಗೆ ಸಂಬಂಧಿಸಿದವುಗಳಾಗಿರುತ್ತವೆ.

ಗೋವೆಯ ಕದಂಬ ಮೂರನೆಯ ಗೂವಲದೇವನನ್ನು ಕುರಿತು ಇಲ್ಲಿಯವರೆಗೆ ಒಟ್ಟು ೨೦ ಶಾಸನಗಳು ಲಭಿಸಿರುತ್ತವೆ. ಇವುಗಳಲ್ಲಿ ನಾಲ್ಕು ಶಾಸನಗಳು ಮಾತ್ರ ಈ ತಾಲೂಕಿನಲ್ಲಿದ್ದು, ಇವು ಕ್ರಿ.ಶ. ೧೦೭೯ ರಿಂದ ೧೧೦೩ ರ ವರೆಗಿನ ಕಾಲದವುಗಳಾಗಿರುತ್ತವೆ.

ಮುತ್ತಗಿಯಲ್ಲಿ ಈಗಾಗಲೇ ನಾಲ್ಕು ಶಾಸನಗಳಿದ್ದು, ಇವೆಲ್ಲ ಗೋವೆಯ ಕದಂಬ ಮೂರನೆಯ ಜಯಕೇಶಿ ಮತ್ತು ಪೆರ್ಮಾಡಿದೇವರಿಗೆ ಸಂಬಂಧಿಸಿದವುಗಳಾಗಿರುತ್ತವೆ. ಈ ನಾಲ್ಕೂ ಶಾಸನಗಳು ಕ್ರಿ.ಶ. ೧೧೭೪ ರಿಂದ ೧೨೨೩ ರ ವರೆಗಿನ ಅವಧಿಯಲ್ಲಿ ಹುಟ್ಟಿಕೊಂಡಿರುತ್ತವೆ.

ಮುತ್ತಗಿಯಲ್ಲಿ ದೊರೆತ ಪ್ರಸ್ತುತ ಶಾಸನ, ಈ ಗ್ರಾಮದ ಅತ್ಯಂತ ಪ್ರಾಚೀನ ಶಾಸನವೂ ಮೂರನೆಯ ಗೂವಲದೇವನ ಪ್ರಪ್ರಥಮ ಶಾಸನವೂ ಆಗಿದೆ. ಇದಲ್ಲದೆ ಕಲಘಟಗಿ ತಾಲೂಕಿನಲ್ಲಿಯೇ ಇದು ಮೂರನೆಯ ಗೂವಲದೇವನ ಅತ್ಯಂತ

ಪ್ರಾಚೀನತಮ ಶಾಸನವಾಗಿರುತ್ತದೆ. ಹೊಸದಾಗಿ ಲಭಿಸಿದ ಈ ಎರಡು ಶಾಸನಗಳ ಮೂಲಕ ಕಲಘಟಗಿ ತಾಲೂಕಿನ ಗೋವೆಯ ಕದಂಬರ ಶಾಸನಸಂಖ್ಯೆ ೩೭ ರಿಂದ ೩೯ ಕ್ಕೆ ಏರುತ್ತದೆ. ಮುತ್ತಗಿ ಗ್ರಾಮದ ಶಾಸನಸಂಖ್ಯೆ ನಾಲ್ಕರಿಂದ ಆರಕ್ಕೆ ವರ್ಧಿಸುತ್ತದೆ.

ಡಾ. ಆರ್.ಎನ್. ಗುರವ ಅವರು "The Kadambas of Goa and their Inscriptions" ಎಂಬ ತಮ್ಮ ಮಹಾಪ್ರಬಂಧದಲ್ಲಿ (ಅಪ್ರಕಟಿತ, ಪುಟ ೧೦೮, ಕ.ವಿ.ವಿ. ಧಾರವಾಡ) ಕ್ರಿ.ಶ. ೧೦೭೯ ರ ಮುಕ್ಕಲ್ಲ (ಕಲಘಟಗಿ ತಾಲೂಕು) ಶಾಸನವೇ ಗೋವೆಯ ಕದಂಬ ಮೂರನೆಯ ಗೂವಲದೇವನ ಅತಿಪ್ರಾಚೀನಶಾಸನವೆಂದು ಹೇಳುತ್ತ, ಕ್ರಿ.ಶ. ೧೦೭೮ ರಲ್ಲಿ ಈತ ಸಿಂಹಾಸನವನ್ನೇರಿದನೆಂಬ ನಿರ್ಣಯ ತಾಳಿದ್ದಾರೆ. ಆದರೆ ಮೂರನೆಯ ಗೂವಲದೇವನ ಮುತ್ತಗಿಯ ಈ ಹೊಸ ಶಾಸನದ ಕಾಲ ಕ್ರಿ.ಶ. ೧೦೭೭ ಆಗಿರುವುದರಿಂದ ಮುತ್ತಗಿಯ ಈ ಶಾಸನವೇ ಮೂರನೆಯ ಗೂವಲದೇವನ ಅತ್ಯಂತ ಪ್ರಾಚೀನತಮ ಶಾಸನವೆನಿಸಿಕೊಳ್ಳುತ್ತದೆ. ಕ್ರಿ.ಶ. ೧೦೭೬ ಈತನ ಆಳಿಕೆಯ ಆರಂಭಕಾಲವಾಗುತ್ತದೆ. ಇದು ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನ ಆಳಿಕೆಯ ಆರಂಭದ ಕಾಲವೂ ಆಗಿದೆ. ಹೀಗೆ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯ, ಈತನ ಮಹಾಮಂಡಳೇಶ್ವರ ಗೋವೆಯ ಕದಂಬ ಮೂರನೆಯ ಗೂವಲದೇವರ ಆಳಿಕೆಯ ಆರಂಭಕಾಲ ಎರಡೂ ಒಂದೇ ಆಗಿರುವುದು ಒಂದು ಯೋಗಾಯೋಗ.

ಈ ಶಾಸನದ ಸಂಶೋಧನೆಯ ಮೂಲಕ ಡಾ. ಆರ್.ಎನ್ ಗುರವ ಅವರ ಮೇಲಿನ ನಿರ್ಣಯ ಈಗ ಬಿದ್ದುಹೋಗಿ, ಕ್ರಿ.ಶ. ೧೦೭೭ರ ಮುತ್ತಗಿಯ ಈ ಹೊಸ ಶಾಸನವೇ ಗೋವೆಯ ಕದಂಬ ಮೂರನೆಯ ಗೂವಲದೇವನ ಆಳಿಕೆಯ ಮೊಟ್ಟಮೊದಲನೆಯ ಶಾಸಾನವೆಂಬ, ಈತನ ಆಳಿಕೆಯ ಆರಂಭ ಕಾಲ ಕ್ರಿ.ಶ. ೧೦೭೬ ಎಂಬ ಹೊಸ ನಿರ್ಣಯಗಳು ಹೊರಬರುತ್ತವೆ. ಇದರಿಂದ ಮೂರನೆಯ ಗೂವಲದೇವನ ಶಾಸನಸಂಖ್ಯೆ ಈಗ ೨೧ ಆಗುತ್ತದೆ. ಹೀಗೆ ಮುತ್ತಗಿಯ ಈ ಹೊಸ ಶಾಸನ ಅತ್ಯಂತ ಬೆಲೆಯುಳ್ಳದ್ದಾಗಿರುತ್ತದೆ. ಈ ಶಾಸನದ ಸಂಶೋಧನೆಯಿಂದ ಮೂರನೆಯ ಗೂವಲದೇವನ ಆಳಿಕೆಯ ಆರಂಭ ಕಾಲ ಕ್ರಿ.ಶ. ೧೦೭೬ ರಷ್ಟು ಹಿಂದೆ ಹೋಗುತ್ತದೆ. ಕ್ರಿ.ಶ. ೧೧೨೫ ರ ಮುಗದ (ಧಾರವಾಡ ತಾಲೂಕು) ಶಾಸನವೇ ಮೂರನೆಯ ಗೂವಲದೇವನ ಆಳಿಕೆಯ ಕೊನೆಯ ಶಾಸನವಾಗಿದೆ. ಹೀಗೆ ಈತನು ಕ್ರಿ.ಶ. ೧೦೭೬ ರಿಂದ ೧೧೨೫ ರ ವರೆಗೆ, ಅಂದರೆ ೪೯ ವರ್ಷಗಳ ದೀರ್ಘಾವಧಿಯ ವರೆಗೆ ಕಲ್ಯಾಣ ಚಾಲುಕ್ಯರ ಮಹಾಮಂಡಳೇಶ್ವರನಾಗಿದ್ದನು. ಇದರಿಂದ ಆರನೆಯ ವಿಕ್ರಮಾದಿತ್ಯನ ಆಳಿಕೆಯ

ಅಂತ್ಯದವರೆಗೂ ಈತ ಮಹಾಮಂಡಳೇಶ್ವರನಾಗಿಯೇ ಕಾರ್ಯ ನಿರ್ವಹಿಸಿದುದು ವ್ಯಕ್ತವಾಗುತ್ತದೆ. ಇದು ಇತ್ತೀಚಿನ ವರ್ಷಗಳಲ್ಲಿಯೇ ಅತ್ಯಂತ ಮಹತ್ವದ ಸಂಶೋಧನೆಯಾಗಿದೆ.

ಹೀಗೆ ಪ್ರಸ್ತುತ ಶಾಸನ ರಾಜಕೀಯ–ಧಾರ್ಮಿಕ ಹಾಗೂ ಸಾಹಿತ್ಯಿಕ ಸಂಗತಿಗಳನ್ನು ಕುರಿತು ಅನೇಕ ಹೊಸ ವಿಷಯಗಳನ್ನು ಪ್ರಥಮಸಲ ತಿಳಿಸಿ ಕೊಡುತ್ತದೆ. ಇಂಥ ಮಹತ್ವವುಳ್ಳ ಅಪ್ರಕಟಿತವಾದ ಈ ಶಾಸನ ಈ ಮೂಲಕ ಪ್ರಪ್ರಥಮಬಾರಿಗೆ ಇಲ್ಲಿ ಪ್ರಕಟವಾಗುತ್ತಿದೆ. ಈ ಶಾಸನದ ಪೂರ್ಣಪಾಠ ಹೀಗಿದೆ:

೧. ನಮಸ್ತುಂಗ ಶಿರಶ್ಚುಂಬಿ ಚನ್ದ್ರ ಚಾಮರ ಚಾರವೇ[।*]ತ್ರೈಳೋಕ್ಯ ನಗರಾರಂಭ ಮೂಳಸ್ತಂಭಾಯ ಸ(ಶ)ಂಭವೇ ||

೨. ಜಯತ್ಯಾವಿಷ್ಕೃತಂ ವಿಷ್ಣೋರ್ವ್ವರಾಹಂ ಕ್ಷೋಭಿತಾರ್ಣ್ಣವಂ[*] ದಕ್ಷಿಣೋನ್ನತ ದಂಷ್ಟ್ರಾಗ್ರ ವಿಶ್ರಾನ್ತ ಭುವನಂ ವಪುಃ ||ಕನ್ದ||

೩. ಭುವನಮನಶೇಷಮಂ ಪೀೞ್ವೃತ್ತಿಯಿಂ ನಿಜಭುಜಪ್ರತಾಪದಿನಾಳುತ್ತಿ ಮಿಂಲ್ಕೆ ಹಿಮದಿನಾಸೇತುವರಂ ಚಾಳುಕ್ಯವಿಕ್ರಮಾದಿತ್ಯನೃಪಂ ||

೪. ಸ್ವಸ್ತಿ [||*] ಸಮಸ್ತ ಭುವನಾಶ್ರಯ ಶ್ರೀಪೃಥ್ವೀವಲ್ಲಭ ಮಹಾ ರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕಂ ಸತ್ಯಾಶ್ರಯ ಕುಳತಿಳಕಂ ಚಾಳುಕ್ಯಾ-

೫. ಭರಣಂ ಶ್ರೀಮತ್ತ್ರಿಭುವನಮಲ್ಲದೇವರ ವಿಜಯರಾಜ್ಯಮುತ್ತರೋತ್ತರಾಭಿವೃದ್ಧಿ ಪ್ರವರ್ದ್ಧಮಾನಮಾ ಚನ್ದ್ರಾರ್ಕ್ಕ ತಾರಂಬರಂ ಸಲುತ್ತಮಿರೆ || ಸಮಧಿಗತ

೬. ಪಂಚಮಹಾಶಬ್ದ ಮಹಾಮಣ್ಡಳೇಶ್ವರಂ । ಬನವಾಸೀ ಪುರವರಾಧೀಶ್ವರ । ನನೇಕ ಸಮರ ವಿಜಯೋಪಾರ್ಜ್ಜಿತ ವೀರಶ್ರೀನಿವಾಸ ದಕ್ಷಿಣದೋರ್ದ್ದಣ್ಡಂ । ಪಾರದಿ

೭. ಪರಶುರಾಮಂ । ನಿಶ್ಶಂಕರಾಮಂ ಮಲೆಗೆ ಭೈರವಂ । ವೈರಿಭ ಕಣ್ಠೀರವಂ ಸುಭಟ ಕನಕ ನಿಕಷೋಪಳ । ನುಭಯಬಳ ಗಣ್ಡ ಮುಖದರ್ಪ್ಪಣಂ। ಹಯವತ್ಸ —

೮. ರಾಜಂ । ತ್ಯಾಗವಿನೋದಂ । ಕನ್ದುಕ ಸಹಸ್ರಕೇಳೀ ವಿದಗ್ಧಜನ ಮಣ್ಡನಂ। ಪರಮಣ್ಡಳ ಖಾಣ್ಡವ ಪಾಣ್ಡುನನ್ದನಂ । ಭುಜಬಳಮಲ್ಲಂ ಮಣ್ಡಳಿಕ ಶಿಖಾಮಣಿ ।

೯. ಕಾದಂಬ ಚೂಡಾಮಣೀತ್ಯಖಿಳ ರಾಜಾವಳೀ ಸಮಾಳಂಕೃತ ಶ್ರೀಮ
ದ್ಗೂವಲದೇವನ್ನಿಜ ರಾಜಧಾನಿ ಗೋವಗೆಯೊಳ್ | ದುಷ್ಟನಿಗ್ರಹ ವಿಶಿ

೧೦. ಷ್ಟ ಪ್ರತಿಪಾಳನೆಯಿಂ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯು
ತ್ತಮಿರೆ ||ಕನ್ದ|| ಸಾರಂ ಪಿಚಾರಿಪಾಗಳ್ ಮಾರಜವಾಡಿಯ ಸಮಸ್ತ
ದೇಶಂಗಳೊ–

೧೧. ಳಾ ಮಾರಜವಾಡಿಯೊಳಸ್ತದೆ ಸಾರಂ ಪುಲ್ಲಂಬಿಯೆಂಬ್ಪುತಾನಾಡೂ
ರೊಳ್ ||ವೃತ್ತ|| ನೆಗಟ್ಬುದು ಪೆಂಪಸಾವರಿಸಿ ಮುತ್ತರ್ಗೆ ಕದ್ವಿಪ
ಯಾನ್ತರಾಳದೊಳ್

೧೨. ನೆಗಟ್ಬರಗಣ್ಯ ಪುಣ್ಯಧನರಿಷ್ಟ ವಿಶಿಷ್ಟ ಸುಹೃಜ್ಜನ ಪ್ರಮಾದಿಗಳೆನಿಸಿರ್ದ್ದ
ಸತ್ವನಿಧಿ ಸಿಂಗಗವುಣ್ಣನುಮೊಬ್ಪುತ ನ್ನೊಳಾವಗಮೆಸೆದಿರ್ಪ್ಪ
ಸತ್ಪ್ರಭು ಚ-

೧೩. ವುಣ್ಣ ಗವುಣ್ಡನುಮೆಂಬ ದಾನಿಗಳ್ || ದಯೆಯೊಳ್ ಧರ್ಮದೊಳೊಳ್ಪಿ
ನೊಳ್ಪಿನಯದೊಳ್ಚಾತುರ್ಯ್ಯದೊಳ್ ಧೈರ್ಯ್ಯದೊಳ್ ನಯದೊ
ದೊಳ್ಪ್ರಭುತ್ವಗುಣ—

೧೪. ದೊಳ್ಸತ್ಯೋಕ್ತಿಯೊಳ್ದಾನಶಕ್ತಿಯೊಳೀತಂ ಮಿಗಿಲೆಸ್ಸು ಬಣ್ಣಿಪುದು
ಲೋಕಂತಾರ ಸಿಹಾರಹಾರಯಶಸ್ಸಂಗನಸೂರ್ಜ್ಜಿತೋಜ್ವಳ ಗುಣ
ಪ್ರೋತ್ತುಂಗನಂ ಸಿಂಗನಂ ||

೧೫. ಕನ್ದ || ವಿನಯನಿಧಿ ಸತ್ಯವಾಕ್ಯಂ ಮನೋವಮಾಗ್ಗ್ರಂ ಶೌರ್ಯ್ಯಶಾಳಿನಿ
ತೀವಿದಂ ಪೆಂಪಿನ ಕ(ಖ)ಣಿ ಬರ್ಮ ಗವುಣ್ಡಂ ತನಯನೆನಲ್ ಸಿಂಗನಸ್ತ
ನೂನರುಮೊಳರೆ ||

೧೬. ಬರ್ಮ್ಮಗೆ ಮೊದಲಣ್ಣಿಂಗೆಡೆ ಧರ್ಮಕ್ಕೆಜೀವಿಟ್ಟು ತೊಡವು ನನ್ನಿಗೆ
ವಿನಯಕ್ಕಾವರ್ಮ್ಮಂ ಶಾಂತಗುಣಕ್ಕೆ ತವರ್ಮ್ಮನೆ ಪಟಿಪಿತದ ತುತ್ತತುದಿ
ಚಾವುಣ್ಡಂ || ಸ್ಥಿತಿ ಸಾರ—

೧೭. ಸೇಕವಾಕ್ಯಂ ವಿತತಯಶೋರಾಶಿ ಶೌರ್ಯ್ಯಸಿಧಿ ಕಾರ್ಯ್ಯಬೃಹಸ್ಪತಿ
ಚಟ್ಟಗವುಣ್ಡಂ ಪ್ರಿಯಸುತನೆನೆ ಚಾವುಣ್ಡನೇಂ ಕೃತಾರ್ತ್ಥನೊ ಜಗ
ದೊಳ್ ||

೧೮. ಆ ನೆಗಟ್ಬ ಪುರನ್ದರ ಗುರು ತಾನೆಣೆ ಗಾವುಣ್ಡಗಳ್ಗೆ ಪುರುಷವಿಶೇಷಜ್ಞಾನ
ದೊಳವರಿವರೆಣೆಯೆಂಬೀ ನುಡಿ ಬಾನೋಪಮಾ—

೧೯. ನಮಲ್ಲದೆ ಪೆಜಿತೆ || ಇನ್ತು ಸಮಸ್ತಗುಣ ಸಮ್ಪನ್ನರು ವ್ಯುತ್ಪನ್ನರುಮೆ
ನಿಸಿದ ಸಿಂಗ ಗಾವುಣ್ಡನುಂ ಚಾವುಣ್ಡ ಗಾವುಣ್ಡನುಮಿರ್ದ್ದರ್ ||ಕನ್ದ||

೨೦. ಚಾಳುಕ್ಯ ವಿಕ್ರಮಾಂಕ ಕಾಳಂ ಶಶಿಸಂಖ್ಯೆ ವರ್ತ್ತಿಸಲ್ಕೆ ನಳಾಬ್ದಕ್ಕಾಳಂ
ಬನಮೆನಿಪೊಳ್ಪಂ ಪಾಳಿಸುವಾಶ್ವಯುಜಮಾಸದೊಳ್ ಪುಣ್ಣಮೆಯೊಳ್

೨೧. ಹಿಮಕರವಾರದೊಳತ್ತ್ಯುತ್ತಮ ವ್ಯತೀಪಾತ ಸಂಕ್ರಮಣಮೆಂಬಿವ
ಜಿತೊಳ್ ಸಮುಚಿತ ಸೋಮಗ್ರಹಣಂ ಸಮನಿಸೆ ತದಗಣ್ಯಪುಣ್ಯ
ಪಾವನ—

೨೨. ದಿನದೊಳ್ ||ಗದ್ಯ|| ಶ್ರೀಮತ್ತ್ರಿಭುವನಸ್ವಾಮಿಯೆನಿಸಿದ ಮೂಲಸ್ಥಾನದ
ಕಲಿದೇವಸ್ವಾಮಿಯ ದೇಗುಲಮಂ ಮಾಡಿಸಿಯಾ ಕಲಿದೇವಸ್ವಾಮಿ

೨೩. ದೇವರ್ಗ್ಗೆ ದೇವರಂಗಭೋಗಕ್ಕಂ ಚೈತ್ರ ಪವಿತ್ರ ಪರ್ವ್ವಂಗಳ್ಗಮಾ ದೇಗು
ಲದ ಜೀರ್ಣೋದ್ಧಾರದ ಬೆಸಂಗಳ್ಗೆ ಮಲ್ಲಿದೇವರಂ ಪೂಜಿಸುತ್ತಿರ್ಪ್ಪ
ಪೂಜಾರಿಯ ಗ್ರಾಸ—

೨೪. ಕ್ಕಂ ಕಪ್ಪಡಕ್ಕಮಲ್ಲಿಯ ಪರ್ಯ್ಯಷ್ಟೆಗೆಯ್ಯುತ್ತಿರ್ಪ ನಿವೇದ್ಯಮನಡುವ
ಗೊರವಕಬ್ಬೆಯ ಕೂಳು ಕಪ್ಪಡಕ್ಕಂ ಬೇಟ್ಕುನೊಂದು ಸಮಕಟ್ಟಿ ತನ್ನ
ಮಿತ್ತ್ರಂ ತಟ್ಟೆಯ—

೨೫. ಕಜಿತಿಯೊಳಗಣ ಕೆಜಿತಿಯೊತ್ತಿನ ಪಡುವಿನ ಗದ್ದೆಯುಮಂ | ನೀರುಸಾಗರದ
ಬಟ್ಟೆಯಿಂ ಪಡುವಲ್ ಪಾರ್ವ್ವಂ ಗೋವಿನ್ದ ಪ(ಪ)ಣಂಗಿ ಮಾಡುವ
ಪಕ್ಕಲುಮಂ

೨೬. ಸರ್ವ್ವಬಾಧಾ ಪರಿಹಾರಂಸರ್ವ್ವನಮಸ್ಯಂ ಮಾಡಿ ಬಿಟ್ಟರ್ || ಮತ್ತಂ
ವಿಚಾರದಲ್ಪುಟ್ಟಿದ ಮುದ್ರಾಪಣಮುಮ | ನಂಕದ ಬೀದಿಪಣಮುಮಂ
ಬಿಟ್ಟರ್ ||ವೃತ್ತ|| ವರಗು—

೨೭. ಣ ಶೀಳದೊಳ್ನಡೆವ ನಿಸ್ಪೃಹಸಿಲ್ಲಿಗೆ ನಿಲ್ವುದುದ್ಧತಾಚರಣದ
ವೇಷಧಾರಿಮತಪಂ ನಿಲಲಾಗದು ನಿನ್ದ ನಪ್ಪಡಾಳ್ಗರಸುಗಳುಂ ಗವುಣ್ಡು
ಗಳುಮಿರ್ದ್ದವನಂ ಕಳೆದಿ—

೨೮. ಕ್ಕುಗಾಗ್ರಹಂ ಬೆರಸಿದನಾರುಪೇಕ್ಷಿಸಿದಡಂತವಗಲ್ಲಿಯ ದೋಷಮೆಯ್ದು
ಗುಂ || ಇನ್ತೀ ಧರ್ಮ್ಮಮನಾವ ತೆಜದಿಂ ಕಾವಂ ಯಥಾ ನ್ಯಾಯದಿಂ.

೨೯. ದನ್ತಾತಂಗಪಿತಂಗೆ ಗಂಗೆ ಗಯೆ ಕೇದಾರಂಗಳೊಳ್ ಸನ್ದ ಪವಿತ್ರಂ ತೀರ್ತ್ಥಂಗಳೊಳಿನ್ದಿನ ಗ್ರಹಣ ತಾತ್ಕಾಳಂಗಳೊಳ್ ಭಕ್ತಿಯಿನ್ದಂ ತಾಂ ಕೊಟ್ಟ ಫಳಂ ಮ—

೩೦. ಹಾದ್ವಿಜರ್ಗ್ಗೆ ಭೂಸ್ವದೆಗ್ಗೀಸಹಸ್ರಂಗಳಂ ||ಕನ್ದ|| ಗಂಗಾಯಮುನೆಗಳೆ ರಡಱ ಸಂಗಮದೊಳಗನ್ಯಪುಣ್ಯ ವರತೀರ್ತ್ಥಸ್ಥಾನಂಗಳೊಳ್ದ್ವಿಜ ತಪೋ ಧನ—

೩೧. ರಂ ಗೋಬ್ರಾಹ್ಮಣರನಳಿದನಿನ್ತಿದನಳಿದಂ || ಶ್ಲೋಕ || ಸ್ವದತ್ತಾಂ ಪರ ದತ್ತಾಂ ವಾಯೋ ಹರೇತಿ ವಸುನ್ಧರಾಂ [|*] ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾಯಾಂ ಜಾಯ—

೩೨. ತೇ ಕ್ರಿಮಿಃ || ಬಹುಭಿರ್ವ್ವಸುಧಾ ಭುಕ್ತಾ ರಾಜಭಿಸ್ಸಗರಾದಿಭಿಃ [|*] ಯಸ್ಯ ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಳಂ || ವೃತ್ತ ||

ಸಾಮಾ—


೩೩ ನ್ಯೋಯಂ ಧರ್ಮ್ಮಸೇತುರ್ನ್ನೃಪಾಣಾಂ ಕಾಳೇ ಕಾಳೇ ಪಾಳನೀಯೋ ಭವದ್ಭಿಃ | ಸರ್ವ್ವಾನೇತಾನ್ಭಾವಿನಃ ಪಾರ್ತ್ಥಿವೇನ್ದ್ರಾನ್ಭೂಯೋ ಭೂಯೋ ಯಾಚತೇ ರಾ—

೩೪. ಮಚನ್ದ್ರಃ||ಶ್ಲೋಕ|| ಸ್ವಂ ದಾತುಂ ಸುಮಹಚ್ಛಕ್ಯಂ ದುಃಖಮನ್ಯಸ್ಯ ಪಾಳನಂ [|*] ದಾನಂ ವಾ ಪಾಲನಂ ವೇತಿ ದಾನಾಚ್ಛ್ರೇಯೋನು ಪಾಲನಂ ||

೩೫. ಏತಚ್ಛಾಸನ ಲಿಖಿತಂ ಶ್ರನ್ಯಂ ನವ್ಯಂ ಮನೋಹರಂ ಜಯದೇವಕೃತಂ ಕಾವ್ಯಂ ತಿಷ್ಟತ್ವಾ ಚನ್ದ್ರತಾರಕಂ || ಸೋಮಗ್ರಹಣದೊಳು—

೩೬. ಗುರಮೂರ್ನೂರ್ವ್ವರುಂ ಮೂಱಗೇರಿಯ ದರ್ಶನಮುಂ ದೇವರ ಸೊಡರೆ ಣ್ಣೆಗೆ ಬಿಟ್ಟರ್ || ಕನ್ದ || ಇದನಿತ್ಯಂ ಸಂಸ್ಕೃತಿಯೆಂಬುದನನಿಂಬಾಗ—

೩೭. ಜಿಂದು ಮೋಹಮಿಲ್ಲದ ವೃಷ್ಟಾರ್ತ್ಥದೆ ದೇವಕಾರ್ಯ್ಯಮುಂ ನಾಗಪಾಸಿ ಮಯ್ಯುಂ ದ್ವಿಜೋತ್ತಮಂ ನಡೆಯಿಸುವ || ಕಲ್ಲೋಜಂ ಬೆಸಗೆಯ್ದ ||



ಗೋವೆಯ ಕದಂಬ ಮೊದಲನೆಯ ಗೂವಲದೇವನ ಆಳಿಕೆಯ ಪ್ರಾಚೀನ ಶಾಸನ

ಬಾದಾಮಿಯ ಅತ್ತಿಮಬ್ಬೆ ಜಕ್ಕಾವೆಯ ಶಾಸನ

● ಶ್ರೀನಿವಾಸ ಪಾಡಿಗಾರು

ಚಾಲುಕ್ಯ ಸಾಮ್ರಾಜ್ಯದ ರಾಜಧಾನಿಯಾಗಿ ಮೆರೆದ ಬಾದಾಮಿ ಇಂದು ಆ ಕಾಲದ ಸಂಸ್ಕೃತಿಯ ಗತವೈಭವದ ಪ್ರತೀಕವೆನಿಸಿರುವ ಜಗತ್ಪ್ರಸಿದ್ಧ ಕಲ್ಮನೆಗಳ (ಗುಹಾದೇಗುಲಗಳ) ಆಗರವಾಗಿ ಚಿರಪರಿಚಿತ ಐತಿಹಾಸಿಕ ಸ್ಥಳವಾಗಿದೆ. ಇಲ್ಲಿಯ ಹೆಚ್ಚಿನ ಶಾಸನಗಳು ಪ್ರಕಟವಾಗಿವೆಯಾದರೂ, ಜೈನಗುಹೆಯಲ್ಲಿರುವ ಒಂದು ಗಮನಾರ್ಹ ಶಾಸನದ ಪಾಠವು ಇನ್ನೂ ಬೆಳಕು ಕಾಣದೆ ಉಳಿದುಕೊಂಡಿದೆ. ಶ್ರೀ ಎ. ಎಂ. ಅಣ್ಣಿಗೇರಿಯವರು ಈ ಶಾಸನದ ಇರವಿಕೆಗೆ ಮೊದಲು ಗಮನಸೆಳೆದವರು. ಜಕ್ಕಾವೆಯೆಂಬಾಕೆ ಸಲ್ಲೇಖನ ವ್ರತದಿಂದ ಮರಣವನ್ನಪ್ಪಿದ ಸಂಗತಿ ಶಾಸನದಲ್ಲಿ ವ್ಯಕ್ತವಾಗಿರುವ ಬಗ್ಗೆ ಅವರು ತಿಳಿಸಿದ್ದಾರೆ.[1]

ಬಾದಾಮಿಯಲ್ಲಿ ಚಾಲುಕ್ಯ ಅರಸರಿಂದ ಕೊರೆಯಿಸಲ್ಪಟ್ಟ ಕಲ್ಮನೆಗಳಲ್ಲಿ ಕೊನೆಯದು ಹಾಗೂ ಅತಿ ಚಿಕ್ಕದಾದುದೆಂದರೆ ಜೈನಗುಹೆ. ಇದು ಸುಮಾರಾಗಿ, ಒಂದನೇ ಕೀರ್ತಿವರ್ಮನ ಸಹೋದರ ಮಂಗಳೀಶನಿಂದ ನಿರ್ಮಿತವಾದ ಬೃಹದಾಕಾರದ ವೈಷ್ಣವ ಗುಹೆಯ ಕಾಲದ್ದು (ಕ್ರಿ. ಶ. ೫೭೮). ಆದರೆ, ಗರ್ಭಗೃಹದಲ್ಲಿರುವ ಆದಿನಾಥ ಮತ್ತು ಮುಖ ಮಂಟಪದ ಗೋಡೆಗಳಲ್ಲಿರುವ ಬಾಹುಬಲಿ ಹಾಗೂ ಸುಪಾರ್ಶ್ವನಾಥ ಇವನ್ನು ಬಿಟ್ಟರೆ, ಉಳಿದ ಶಿಲ್ಪಗಳು ಸುಮಾರು ೧೧-೧೨ ನೇ ಶತಮಾನದ ಅವಧಿಯಲ್ಲಿ ಸೇರಿಸಲ್ಪಟ್ಟವುಗಳು. ಜೈನಗುಹೆಯ ಮೆಟ್ಟಿಲುಗಳನ್ನೇರುತ್ತಿದ್ದಂತೆಯೇ ನಮ್ಮ ಬಲಕ್ಕೆ ಗೋಡೆಯಲ್ಲಿ ಒಂದು ಜಿನ ಶಿಲ್ಪವೂ ಅದರ ಕೆಳಗಡೆ ಪ್ರಸ್ತುತ ಕನ್ನಡ ಶಾಸನವೂ ಕಂಡುಬರುತ್ತವೆ.

ಸುಮಾರು ೧೧-೧೨ ನೇ ಶತಮಾನದ ಕನ್ನಡ ಲಿಪಿಯಲ್ಲಿ ದುಂಡು ದುಂಡಾಗಿ, ಮುದ್ದಾದ ಅಕ್ಷರಗಳಲ್ಲಿ ಬರೆದಿರುವ ಈ ಶಾಸನವು ಆರು ಸಾಲುಗಳಲ್ಲಿದೆ. ಅದರಲ್ಲಿ ಜಕ್ಕಾವೆ ಅಥವಾ ಜಕ್ಕಿಯಕ್ಕ ಎಂಬ ಹೆಣ್ಣಿನ ಪ್ರಶಂಸೆಯನ್ನೊಳಗೊಂಡ ಎರಡು ಕಂದ ಪದ್ಯಗಳೂ, ಆಕೆ ಮುಕ್ತಿಪದವನ್ನು ಪಡೆದಳೆಂಬುದನ್ನು ಒಗಟಾಗಿ ಹೇಳುವ ಇನ್ನೊಂದು ಕಂದ ಪದ್ಯವೂ ಇವೆ. ಬರವಣಿಗೆಯಲ್ಲಿ ಕವಿಯೋ ಲಿಪಿಕಾರನೋ ಅಲ್ಲಲ್ಲಿ ಎಡವಿರುವದು ಸ್ಪಷ್ಟ. ಉದಾ :

1. ಎ. ಎಂ. ಅಣ್ಣಿಗೇರಿ, ಎ ಗೈಡ್ ಟು ಬಾದಾಮಿ (ಧಾರವಾಡ, 1960).

'ಸುಖ'ವನ್ನು 'ಸುಕ' (ಸಾಲು ೨), 'ಲಕ್ಷಣೆ'ಯನ್ನು 'ಲಕ್ಷ್ಮ್ರಣೆ' (ಸಾಲು ೨) 'ನಯನೆ'ಯನ್ನು 'ನೆಯೆಣೆ' (ಸಾಲು ೩) ಎಂದು ಬರೆದಿರುವದು.

ಶಾಸನದ ಮೊದಲನೆಯ ಪದ್ಯದಲ್ಲಿ ಜಿನನನ್ನೇ ಏಕಮೇವ ದೈವವೆಂದು ಪೂಜಿಸುತ್ತಿದ್ದ, ಜಿನಧರ್ಮನನ್ನು ಪತಿಯಾಗಿಯೂ ಕಲಿದೇವನನ್ನು ಪುತ್ರನನ್ನಾಗಿಯೂ ಪಡೆದಿದ್ದ ಜಕ್ಕಿಯಕ್ಕ ಎಂಬಾಕೆಯನ್ನು ಪರಿಚಯಿಸಲಾಗಿದೆ. ಎರಡನೆಯ ಪದ್ಯದಲ್ಲಿ ಆಕೆಯನ್ನು ಜಕ್ಕ್ಯಾವೆಯೆಂದು ಕರೆದು, ಮರುದೇವಿ, ವಿಜಯೆ, ಲಕ್ಷಣೆ, ಧರೆ, ಚಾರುಸೇನೆ ಮತ್ತು ಅತ್ತಿಮಬ್ಬೆ ಎಂಬ ಮಹಾನ್ ಸ್ತ್ರೀಯರಿಗೆ ಹೋಲಿಸಲಾಗಿದೆ. ಕೊನೆಯ ಪದ್ಯದಲ್ಲಿ ಜಕ್ಕ್ಯಾವೆಯು ಮೂವತ್ತೈದು ಅಕ್ಷರಗಳನ್ನೂ, ಹದಿನಾರು, ಆರು, ಐದು, ನಾಲ್ಕು, ಎರಡು ಮತ್ತು ಒಂದು ಇವನ್ನೂ ಭಾವಿಸಿ ಮುಕ್ತಿಪದವನ್ನು ಪಡೆದಳೆಂದು ಒಗಟಾಗಿ ಹೇಳಲಾಗಿದೆ.

ಈ ಶಾಸನದಲ್ಲಿ ಮೊದಲು ಗಮನ ಸೆಳೆಯುವ ವಿಷಯವೆಂದರೆ ಎರಡನೇ ಪದ್ಯದಲ್ಲಿ ಜಕ್ಕ್ಯಾವೆಗೆ ಹೋಲಿಸಲಾಗಿರುವ ವನಿತೆಯರ ಹೆಸರುಗಳು. ಇವರಲ್ಲಿ ಮೊದಲ ಐವರು ತೀರ್ಥಂಕರರ ತಾಯಂದಿರು: ಮರುದೇವಿ ಋಷಭನಾಥನ ತಾಯಿ; ವಿಜಯೆ ಅಜಿತನಾಥನ ತಾಯಿ; ಲಕ್ಷಣೆ (= ಸುಲಕ್ಷಣೆ) ಚಂದ್ರಪ್ರಭನ ತಾಯಿ; ಧರೆ (= ಪೃಥ್ವೀದೇವಿ) ಸುಪಾರ್ಶ್ವನಾಥನ ತಾಯಿ; ಚಾರುಸೇಣೆ (= ಸುಸೇನೆ) ಸಂಭವನಾಥನ ತಾಯಿ. ಕೊನೆಯವಳಾದ ಅತ್ತಿಮಬ್ಬೆ ಪ್ರಸಿದ್ಧ ಐತಿಹಾಸಿಕ ವ್ಯಕ್ತಿ. ೧೧ ನೇ ಶತಮಾನದ ಆದಿಯಲ್ಲಿದ್ದ ಆಕೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ, ಕರ್ನಾಟಕ ಜೈನಧರ್ಮದ ಇತಿಹಾಸದಲ್ಲಿ, ಕನ್ನಡನಾಡಿನ ಶ್ರೇಷ್ಠ ವನಿತೆಯರ ನಕ್ಷತ್ರಪುಂಜದಲ್ಲಿ ಅಮರಳಾಗಿದ್ದಾಳೆ. ಕವಿರತ್ನ ರನ್ನನಿಂದ 'ಅಜಿತನಾಥ ಪುರಾಣ'ವನ್ನು ಬರೆಯಿಸಿ, ಪೊನ್ನನ 'ಶಾಂತಿನಾಥ ಪುರಾಣ'ದ ಸಹಸ್ರ ಪ್ರತಿಗಳನ್ನು ಮಾಡಿಸಿ, ಸಹಸ್ರದೈನೂರು ಜಿನದೇಗುಲಗಳನ್ನೆತ್ತಿಸಿ, ಅತಿಶಯ ಜಿನಭಕ್ತಿಯಿಂದ ಅನೇಕ ಪವಾಡಗಳನ್ನೆಸಗಿ "ದಾನ ಚಿಂತಾಮಣಿ" ಎಂದು ಹೆಸರುವೆತ್ತಿದ್ದಾಳೆ.

ಕೆಲವು ಅಂಕೆಗಳನ್ನು ಸಾಂಕೇತಿಕವಾಗಿ ಬಳಸಿರುವದು ಶಾಸನದಲ್ಲಿ ಗಮನ ಸೆಳೆಯುವ ಎಲ್ಲಕ್ಕಿಂತ ಮುಖ್ಯವಾದ ಸಂಗತಿಯಾಗಿದೆ. ಸಂದರ್ಭವನ್ನು ವಿವೇಚಿಸಿದರೆ ಈ ಅಂಕೆಗಳು ಜೈನಧರ್ಮಾನುಯಾಯಿಗಳಾದ ಶ್ರಾವಕರು ಮೋಕ್ಷ ಪಡೆಯುವದಕ್ಕಾಗಿ ತಿಳಿದಿರಬೇಕಾದ, ಅನುಸರಿಸಬೇಕಾದ ವಿಷಯಗಳನ್ನು ಸೂಚಿಸುವವೆಂಬುದು ವಿದಿತವಾಗುತ್ತದೆ. ಆದರೆ ಈ ಎಲ್ಲ ಅಂಕೆಗಳಿಗೂ ಸಾಂಕೇತಿಕ ಅರ್ಥವನ್ನು ಖಡಾ ಖಂಡಿತವಾಗಿ ಹೇಳುವದು ಕಷ್ಟಸಾಧ್ಯ. ಇಲ್ಲಿ ಈ ಅಂಕೆಗಳಿಗಿದ್ದಿರಬಹುದಾದ ಮೂಲ ಸಾಂಕೇತಿಕ ಅರ್ಥ

ವನ್ನು ಸೂಚಿಸುವ ಪ್ರಯತ್ನ ಮಾಡಲಾಗಿದೆ. ಮೂವತ್ತೈದು ಅಕ್ಷರಗಳು ಜೈನರಿಗೆ ಪವಿತ್ರವೆನಿಸುವ ಪಂಚಪರಮೇಷ್ಠಿ ಮಹಾಮಂತ್ರವನ್ನು ಸಂಕೇತಿಸುತ್ತವೆಂಬುದನ್ನು ಸುಲಭವಾಗಿ ತರ್ಕಿಸಬಹುದು: ಣಮೋ ಅರಿಹಂತಾಣಂ, ಣಮೋ ಸಿದ್ಧಾಣಂ, ಣಮೋ ಆಯರಿಯಾಣಂ, ಣಮೋ ಉವಜ್ಝಾಯಾಣಂ, ಣಮೋ ಲೋಏ ಸವ್ವಸಾಹೂಣಂ. ಹದಿನಾರು ಬಹುಶಃ ಜೈನರ ಷೋಡಶ ಭಾವನೆಗಳನ್ನು ಸೂಚಿಸುತ್ತದೆ: ದರ್ಶನವಿಶುದ್ಧಿ, ವಿನಯ ಸಂಪನ್ನತೆ, ಶೀಲ ವ್ರತಾನಿತೀಚಾರ, ಸಂವೇಗ, ಅಭೀಕ್ಷಣ ಜ್ಞಾನೋಪಯೋಗ, ಯಥಾಶಕ್ತಿ ತ್ಯಾಗ, ಯಥಾ ಶಕ್ತಿ ತಪಸ್ಸು, ಸಾಧು ಸಮಾಧಿ, ವೈಯಾವೃತ್ತ್ಯಕರಣ, ಅರ್ಹದ್ಭಕ್ತಿ, ಆಚಾರ್ಯಭಕ್ತಿ, ಉಪಾಧ್ಯಾಯಭಕ್ತಿ, ಶಾಸ್ತ್ರಾನುರಾಗ, ಆವಶ್ಯಕ ಪರಿಹಾಣಿ, ಮಾರ್ಗಪ್ರಭಾವನೆ, ಮತ್ತು ಪ್ರವಚನ ವಾತ್ಸಲ್ಯ. ಆರು ಎಂಬ ಸಂಖ್ಯೆಯ ಸಂಕೇತಕ್ಕೆ ಖಚಿತ ಅರ್ಥವಿವರಣೆ ನೀಡುವುದು ಕಷ್ಟತರ. ಇವು ಕುದೇವ, ಕುಗುರು, ಕುಶಾಸ್ತ್ರ, ಕುದೇವಪೂಜಕ, ಕುಗುರುಸೇವೆ, ಕುಶಾಸ್ತ್ರಪ್ರಚಾರ ಎಂಬ ಆರು ಆಯತನಗಳು, ಅಥವಾ ಕೃಷ್ಣ, ನೀಲ, ಕಾಪೋತ, ಪೀತ, ಪದ್ಮ, ಶುಕ್ಲ ಎಂಬ ಆರು ಲೇಶ್ಯಗಳು, ಇಲ್ಲವೆ ಜೀವ, ಪುದ್ಗಲ, ಧರ್ಮ, ಅಧರ್ಮ, ಆಕಾಶ, ಕಾಲ ಎಂಬ ಷಡ್ದ್ರವ್ಯಗಳು ಆಗಿರುವ ಸಾಧ್ಯತೆಯಿದೆ. ಒಂದು ವೇಳೆ ಈ ಮೂರೂ ವಿಷಯಗಳನ್ನೊಳಗೊಂಡಿದ್ದರೂ ಇರಬಹುದು. ಐದು ಎಂಬ ಸಂಖ್ಯೆ ಪಂಚಪರಮೇಷ್ಠಿಯನ್ನು ನೆನಪಿಗೆ ತರುತ್ತದಾದರೂ, ಈ ಮೊದಲೇ ಪಂಚಪರಮೇಷ್ಠಿ ಮಂತ್ರದ ಮೂವತ್ತೈದು ಅಕ್ಷರಗಳನ್ನು ಉಲ್ಲೇಖಿಸಿರುವುದರಿಂದ ಇದಕ್ಕೆ ಬೇರೆ ಸಾಂಕೇತಿಕ ಅರ್ಥವಿರಬೇಕೆನಿಸುತ್ತದೆ. ಬಹುಶಃ ಇದು ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹಗಳೆಂಬ ಪಂಚಮಹಾವ್ರತಗಳನ್ನು ಸೂಚಿಸುತ್ತದೆ. ಅಥವಾ, ಶ್ರಾವಕರು ಪೂಜಿಸಲು ಯೋಗ್ಯರೆನಿಸುವ ಅರಹಂತ, ಸಿದ್ಧ, ಆಯರಿಯ, ಉವಜ್ಝಾಯ, ಸಾಹು ಇವುಗಳ ಮೊದಲ ಅಕ್ಷರಗಳನ್ನು ಆಯ್ದು ಪುಂಜ (ಅ. ಸಿ. ಆ. ಉ. ಸಾ ಎಂಬ ಐದಕ್ಷರಗಳು) ಇದ್ದರೂ ಇರಬಹುದು. ನಾಲ್ಕು ಎಂಬ ಸಂಖ್ಯೆ ಕ್ರೋಧ, ಮಾನ, ಮಾಯಾ, ಲೋಭಗಳೆಂಬ ನಾಲ್ಕು ಕಷಾಯಗಳ ಸೂಚಕವಿರಬಹುದು. ಜೀವ, ಅಜೀವದ ಕಲ್ಪನೆ ಎರಡು ಎಂಬ ಅಂಕೆಯಿಂದ ಸೂಚಿತವಾಗಿರಬಹುದು. ಕೊನೆಯದಾದ ಒಂದು ಎಂಬ ಸಂಖ್ಯೆ 'ಆತ್ಮ'ವನ್ನು ಸಂಕೇತಿಸುತ್ತಿರಬೇಕು. [2]

---

2. ಅಂಕೆಗಳ ಸಂಕೇತವನ್ನು ಅರ್ಥವಿಸುವಲ್ಲಿ ಕನ್ನಡ ಸಂಶೋಧನ ಸಂಸ್ಥೆಯ ಶ್ರೀ ಸಿ. ಬಿ. ಕಡಕೋಳ ಇವರ ಸಹಕಾರವನ್ನು ಪಡೆದಿದ್ದೇನೆ. ಇದಕ್ಕಾಗಿ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಜಕ್ಕಾವೆಯನ್ನು ಅತ್ತಿಮಬ್ಬೆಗೆ ಹೋಲಿಸಿರುವದು ಕುತೂಹಲ ಕೆರಳಿಸಿದರೂ ಪುರಾವೆಗಳಿಲ್ಲದಿರುವದರಿಂದ ಈ ಹೋಲಿಕೆ ತುಸು ಉತ್ಪ್ರೇಕ್ಷೆಯೋ ಎನಿಸದಿರಲಾರದು. ಅತ್ತಿಮಬ್ಬೆಯಂತೆ ಜಕ್ಕಾವೆ ಕೂಡ ಜೈನ ಸಾಹಿತ್ಯದ, ಧರ್ಮದ ಬೆಳವಣಿಗೆಗೆ ಸಾಕಷ್ಟು ಕೊಡಗೆಯಿತ್ತಿದ್ದಾಳೋ ಹೇಗೆ ಎಂಬುದು ಸದ್ಯ ಪ್ರಶ್ನೆಯಾಗಿಯೇ ಉಳಿಯುತ್ತದೆ. ಆದರೆ ಈ ಶಾಸನವಿರುವ ಜೈನಗುಹೆಯಲ್ಲಿ ಹಲವಾರು ಶಿಲ್ಪಗಳು ಸುಮಾರು ೧೧-೧೨ ನೇ ಶತಮಾನದಲ್ಲಿ ಸೇರಿಸಲ್ಪಟ್ಟವು ಎಂಬುದನ್ನು ಗಮನಿಸಬೇಕು. ಇವುಗಳಲ್ಲಿ ಕೆಲವಾದರೂ ಜಕ್ಕಾವೆಯ ಪ್ರೇರಣೆಯಿಂದ ಅಸ್ತಿತ್ವಕ್ಕೆ ಬಂದಿದ್ದರೆ ಆಶ್ಚರ್ಯವೇನಿಲ್ಲ.

ಶಾಸನದ ಮೇಲ್ಭಾಗದಲ್ಲಿ ಕಟೆದಿರುವ ಶಿಲ್ಪದ ಬಗ್ಗೆ ಒಂದೆರಡು ಮಾತು ಹೇಳಬೇಕು. ಇದರಲ್ಲಿ ಕಲಶಾಲಂಕೃತ ಮುಕ್ಕೊಡೆಯಡಿಗೆ ಸಿಂಹಾಸನದ ಮೇಲೆ ಯೋಗಾಸನದಲ್ಲಿ ಧ್ಯಾನ ಮಗ್ನನಾಗಿರುವ ಮಹಾವೀರ ತೀರ್ಥಂಕರನ ಬಿಂಬವಿದೆ. ಪಕ್ಕದಲ್ಲಿ, ಕೆಳಗಡೆ ಹೆಣ್ಣೋರ್ವಳು ಕೈಮುಗಿದು ಕುಳಿತಿದ್ದಾಳೆ. ಆಕೆ ಶಾಸನೋಕ್ತ ಜಕ್ಕಾವೆ ಎಂಬುದು ಸಂದರ್ಭದಿಂದ ಸ್ಪಷ್ಟವಾಗುತ್ತದೆ. ಶಾಸನದಂತೆ, ಈ ಶಿಲ್ಪವೂ ಸುಮಾರು ೧೧-೧೨ ನೇ ಶತಮಾನದ ಕಲ್ಯಾಣದ ಚಾಲುಕ್ಯ ಶಿಲ್ಪ ಶೈಲಿಯನ್ನು ನೆನಪಿಸುತ್ತದೆ.

ಅತ್ತಿಮಬ್ಬೆಗಿಂತ ಕೆಲಕಾಲದ ನಂತರ ಬರೆದ ಜಕ್ಕಾವೆಯ ಈ ಶಾಸನ ಜೈನಗುಹೆಯಲ್ಲಿ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಸೇರಿಸಲ್ಪಟ್ಟ ಶಿಲ್ಪಗಳನ್ನೊಳಗೊಂಡತೆ ಜೈನಧರ್ಮದ ಅಂದಿನ ಉಚ್ಛ್ರಾಯ ಸ್ಥಿತಿಗೆ ಸಾಕ್ಷಿಯಾಗಿದೆ. ಅತ್ತಿಮಬ್ಬೆಯಂತೆಯೇ ಜಕ್ಕಾವೆ ಕೂಡ ಹಲವಾರು ಬಗೆಯಿಂದ ಜೈನಧರ್ಮದ ಏಳ್ಗೆಗೆ ಶ್ರಮಿಸಿ, ಕಟ್ಟಾ ಜೈನಧರ್ಮದ ಹಾದಿಯಲ್ಲೇ ನಡೆದು ತನ್ನ ಜೀವನವನ್ನು ಸವೆಸಿದಂತೆ ತೋರುತ್ತದೆ. ಈ ದೃಷ್ಟಿಯಿಂದ, ಆಕೆಯನ್ನು "ಬಾದಾಮಿಯ ಅತ್ತಿಮಬ್ಬೆ" ಎಂದು ಕರೆದರೆ ಅತಿಶಯೋಕ್ತಿಯಾಗಲಾರದು.

ಶಾಸನದ ಪಾಠ[3]

೧. **ಜಿನಪತಿ ಸಭದ(ದಾ)ವೆಯ್ವಂ ಮನದೊಳಗೆರಡಿಲ್ಲದಿ [ಂ*]ತು ಪತಿ ಜಿನವರ್ಮ್ಮಂ ತನೆಯಂ ಕಲಿದೇ—**

೨. **ವನೆನಲು ವನಿತಾಸುಕ (ಖ)ಧಾಮ ಜಕ್ಕಿಯಕ್ಕಂ ನೆಗಳ್ದಳ್ ||
ಮರುದೇವಿ ವಿಜಯೆ ಲಕ್ಷ್ಮ(ಕ್ಷ್ಮ) ಣೆ**

3. ನೇರವಾಗಿ ಕಲ್ಲುಬಂಡೆಯ ಮೇಲೆ ಓದಿದ ಪಾಠ.

೩. ಧಾ(ಧ)ರೆಯಂ ಚಾರುಸೇಣೆ ತುಂಬುರಾಗನೆಯೆಣೆಯಾ–
ಸರಿಯುತ್ತಿಮುಬ್ಬೆಯೆಂದಡೆ ಧ—

೪. ರೆಯೊಳು ಜಕ್ಕಾವೆಗುಳಿದ ಸತಿಯುಜೆಗೆಯೆ ‖ 4
ಮೂವತ್ತ್ರಯ್ದಕ್ಕರಮುಂ ತಾವದೆ

೫. ಪದಿನಾಱನಾಱನಯ್ದುಂ ನಾಲ್ಕುಂ ಜೀವಾಂತ್ಯದೊಳೆರಡೊಂದೆ
ಭಾವಿಸಿ ಜಕ್ಕಾವೆ ಮು

೬. ಕ್ತಿಸದನಮುಂ ಪಡೆದಳ್ ‖

---

4. ಈ ಪದ್ಯದಲ್ಲಿ ಮಾತ್ರಾಗಣಗಳ ವ್ಯವಸ್ಥೆ ಸರಿಯಾಗಿಲ್ಲ.

ಶಾಸನಗಳಲ್ಲಿ–ಸಂಗೀತಗಾರರು

● ಡಿ. ಇಸ್ಮಾಯಿಲ್

ಸಂಗೀತವೊಂದು ಯೋಗ, ಮೋಕ್ಷ ಸಾಧನೆಗೆ ಮಾರ್ಗ. ಸಂಗೀತಕ್ಕೆ ಮನಸೋಲದವರಿಲ್ಲಾ. ಎಂಥಾ ಅರಸಿಕರೂ ಸಂಗೀತದ ಮೋಡಿಗೆ ಮರುಳಾಗುತ್ತಾರೆ. ಸಂಗೀತದ ಮಧುರ ನಿನಾದಕ್ಕೆ ಪ್ರಾಣಿ-ಪಕ್ಷಿಗಳು, ಗಿಡ–ಮರಗಳೂ ಪ್ರತಿಕ್ರಿಯೆ ತೋರಿಸುವುದನ್ನು ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. ಭಾರತದಲ್ಲಿ ಸಂಗೀತ ಕಲೆಯು ವೇದಗಳ ಕಾಲದಿಂದಲೂ ಉಳಿದು ಬಂದಿದೆ, ಬೆಳೆದು ಬಂದಿದೆ. ಈ ಜನರಂಜಕ, ಮನರಂಜಕ ಕಲೆಯು ಉಳಿಯಲು, ಬೆಳೆಯಲು ಲಕ್ಷಾಂತರ ಕಲಾವಿದರು ತಮ್ಮ ತನು, ಮನ, ಧನ, ಪ್ರಾಣಗಳನ್ನು ಅರ್ಪಿಸಿದ್ದಾರೆ. ಇವರಲ್ಲಿ ಕನ್ನಡಿಗರಿಗೇನು ಕೊರತೆ ಇಲ್ಲ. ಇಲ್ಲಿ ನಾವು "**ಕರ್ನಾಟಕದ ಶಾಸನೋಕ್ತ ಸಂಗೀತಗಾರರ**" ಪರಿಚಯ ಮಾಡಿಸುತ್ತಿದ್ದೇವೆ.

ಸಂಗೀತ ಜಗತ್ತಿಗೆ "ಕರ್ನಾಟಕ–ಸಂಗೀತ" ಎಂಬ ಪ್ರತ್ಯೇಕ ಪ್ರಕಾರವನ್ನು ನೀಡಿದ ಖ್ಯಾತಿ ಕರ್ನಾಟಕಕ್ಕಿದೆ. ಪ್ರಾಚೀನ ಕಾಲದಿಂದಲೂ ಕನ್ನಡಿಗರಿಗೆ ಸಂಗೀತ ಕಲೆಯ ಬಗ್ಗೆ ಆಸಕ್ತಿ–ಆದರಗಳಿದ್ದುದ್ದನ್ನು ಶಾಸನ, ಕಾವ್ಯಗಳಿಂದ ತಿಳಿದು ಬರುತ್ತದೆ.

ಕ್ರಿ. ಶ. ೪೫೦–ರ ತಾಳಗುಂದ ಸ್ತಂಭ ಶಾಸನ[1]ದಲ್ಲಿ "ಕದಂಬ ರಾಜ್ಯದ ಪ್ರತಿ ಮನೆಯೂ ಸಂಗೀತದ ಮಧುರ ನಿನಾದದಿಂದ ತುಂಬಿರುತ್ತಿದ್ದವು" ಎಂದಿದೆ.

ಕ್ರಿ. ಶ. ೧೧೭೪–ರ ಬಂದಣಿಕೆಯ ಶಾಸನ[2]ದಲ್ಲಿ "ಭರತ–ಕ್ಷೇತ್ರ" ವನ್ನು

ಭಾಜಿಸೆ ಷಟ್ಕ್ರಿಯುಂ ಪ್ರಿಯರ ಪೊಲ್ಲಿರ್ದ ತುಂಬಿಗಳೆಂಬು ವೆತ್ತಿರಲ್
ರಾಜಿಸೆ ಪಾಡೆ ಕೆಂದಳಿರೆ ಕೈದಳವಾಗಿರೆ ಮಂದ ಮಾರುತಂ

---

1) "ಕನ್ನಡನಾಡಿನ ಶಾಸನಗಳು"–ಮ ವುಂಡಿ (ಪ್ರತಿಭ ಗ್ರಂಥಮಾಲೆ-ಧಾರವಾಡ. || ಮು-1977) ಪುಟ-2

2) "ಶಾಸನ ಪದ್ಯಮಂಜರಿ"– ನರಸಿಂಹಾಚಾರ್ (ಬೆಂ. ವಿ.ವಿ. ಬೆಂಗಳೂರು–|| ಮು-1975) ಪು-177.

ಯೋಜಿಸೆ ತಾಳಂ ರತಿಯನಾಡಿಸೆ ಮನ್ಮಥನಂತರಂಗದೊಳ್
ಸಾಜಮೆನಿಪ್ಪುದಲ್ತೆ ಭರತಾಹ್ವಯಮಂ ಭರತೋರ್ವಿಗುರ್ವಿನಿಂ ||
ಎಂದು ಸಂಗೀತದ ಪರಿಭಾಷೆಯಲ್ಲಿಯೇ ವರ್ಣಿಸಲಾಗಿದೆ.

ಕ್ರಿ. ಶ. ೧೧೬೨-ರ ಬಳ್ಳಿಗಾವೆಯ ಶಾಸನ[3]ದಲ್ಲಿ "ಕೋಡಿಮಠವು ಕಥಕ, ಗಾಯಕ, ವಾದಕ, ವಾಂಶಿಕ, ನರ್ತಕ, ರೋಗಿ, ಅನಾಥರಿಗೆ ಆಶ್ರಯತಾಣವಾಗಿತ್ತು" ಎಂದಿದೆ. ಇಂಥಾ ಅನೇಕ ಉದಾಹರಣೆಗಳನ್ನು ನೀಡಬಹುದು. ಪ್ರಾಚೀನ ಕಾಲದಿಂದಲೂ ಸ್ತ್ರೀ-ಪುರುಷರು ಸಂಗೀತ-ನೃತ್ಯ ಕಲೆಗಳನ್ನು ವೃತ್ತಿಯಾಗಿ, ಹವ್ಯಾಸವಾಗಿ ಆಶ್ರಯಿಸಿದ್ದಾರೆ. ವಿಶೇಷವಾಗಿ ಸ್ತ್ರೀಯರಿಗೆ ಸಂಗೀತ-ನೃತ್ಯ ಕಲೆಗಳ ಶಿಕ್ಷಣ ಕೊಡಿಸುತ್ತಿದ್ದರು. "ಸಂಗೀತಗಾರರಿಗಾಗಿಯೇ ನಿರ್ದಿಷ್ಟ ಬೀದಿಗಳೂ, ಬಡಾವಣೆಗಳು ಕನ್ನಡ-ನಾಡಿನ ನಗರಗಳಲ್ಲಿರುತ್ತಿದ್ದವೆಂದು ಪೊನ್ನ, ನೇಮಿಚಂದ್ರ, ಅಗ್ಗಳ, ಗೋವಿಂದ ವೈದ್ಯ ಮೊದಲಾದವರು ಹೇಳುತ್ತಾರೆ. ಅಲ್ಲದೇ ಸಂಗೀತ ಕಛೇರಿಗಳಿಗಾಗಿಯೇ ಪ್ರತ್ಯೇಕ ಸಂಗೀತ ಶಾಲೆಗಳೇ ನಮ್ಮ ಪಟ್ಟಣಗಳಲ್ಲಿರುತ್ತಿದ್ದವೆಂದು ರನ್ನ, ಅಗ್ಗಳ, ಕಮಲಭವ ಸೋಮರಾಜದೇವ, ರತ್ನಾಕರ ವರ್ಣಿಗಳಿಂದ ತಿಳಿದು ಬರುತ್ತದೆ"[4] ಎನ್ನುತ್ತಾರೆ ಶ್ರೀ ಆರ್. ಸತ್ಯನಾರಾಯಣರು.

ಸಂಗೀತವನ್ನು ಮಾನವನ ಕಂಠದಿಂದ, ವಿವಿಧ ವಾದ್ಯ ಸಲಕರಣೆಗಳಿಂದ ನುಡಿಸಬಹುದು. ವಾದ್ಯ ಸಲಕರಣೆಗಳಲ್ಲಿ ನಾಲ್ಕು ವಿಧ. ಅವು

೧) ತತವಾದ್ಯಗಳು [ತಂತಿಯನ್ನು ಮೀಟಿ ನಾದ ಹೊಮ್ಮಿಸಬಹುದಾದ-ಕಿನ್ನರಿ, ವೀಣೆ, ಗಿಟಾರ್ ಇತ್ಯಾದಿಗಳು]

೨) ವಿತತ ಅಥವಾ ಅವನದ್ಧ ವಾದ್ಯಗಳು [ಚರ್ಮದ ತಾಳವನ್ನು ಬಡಿದು ನಾದ ಹೊಮ್ಮಿಸಬಹುದಾದ- ಡಕ್ಕೆ, ಮೃದಂಗ, ಪಟಹ ಇತ್ಯಾದಿಗಳು]

೩) ಸುಶಿರ ವಾದ್ಯಗಳು [ಗಾಳಿಯನ್ನು ಕೊಳವೆಯಲ್ಲಿ ಊದಿ ನಾದ ಹೊಮ್ಮಿಸಬಹುದಾದ-ಕೊಳಲು, ಕಹಳೆ, ತುತ್ತೂರಿ ಇತ್ಯಾದಿಗಳು]

೪) ಘನವಾದ್ಯಗಳು [ಟೊಳ್ಳಿಲ್ಲದ ಘಟ್ಟಿವಸ್ತುಗಳನ್ನು ಪರಸ್ಪರ ಬಡಿದು ನಾದ ಹೊಮ್ಮಿಸಬಹುದಾದ-ಜಾಗಟೆ, ಗಂಟೆ, ತಾಳ ಇತ್ಯಾದಿಗಳು]

3) "ಶಾಸನ ಸಂಗ್ರಹ"- ಶೇಷಶಾಸ್ತ್ರಿ (ಕ. ಸಾ. ಪ. ಬೆಂಗಳೂರು-II ಮು-1982, ಪುಟ-48

4) "ಪ್ರಬುದ್ಧ-ಕರ್ನಾಟಕ"- ಸಂಪು-49 ಸಂಚಿ-4 (ಮೈ. ವಿ. ವಿ. ಮೈಸೂರು-1967) ಪು-9

ಪ್ರಾಚೀನ ಕಾಲದಲ್ಲಿ ಅರಸನ ಆಸ್ಥಾನವು ವಿವಿಧ ಚಟುವಟಿಕೆಗಳ ಕೇಂದ್ರವಾಗಿತ್ತು. ಅಲ್ಲಿ ವಿವಿಧ ಕಲೆಗಳು ಉಳಿಯುತ್ತಿದ್ದವು, ಬೆಳೆಯುತ್ತಿದ್ದವು. ಪ್ರತಿ ನಿತ್ಯ ಆಸ್ಥಾನಗಳಲ್ಲಿ ನೃತ್ಯ, ಗೀತ, ವಾದ್ಯ, ಗಮಕ, ಕಾವ್ಯ ಇತ್ಯಾದಿ ಕಲೆಗಳ ಗೊಷ್ಠಿ ನಡೆಯುತ್ತಿದ್ದವು. ಕೆಲವು ಅರಸರಂತೂ ಇಂಥಾ ಕಲೆಗಳನ್ನು ಸ್ವತಹ ಬಲ್ಲವರಾಗಿದ್ದು ಅವುಗಳನ್ನು ಪರೀಕ್ಷಿಸುವಷ್ಟು ದಕ್ಷರಿರುತ್ತಿದ್ದರು. ಅವರು ಈ ಕಲೆಗಳ ಗೋಷ್ಠಿ ನಡೆಸಿ ವಿಜಯಿಯಾದವರಿಗೆ ದತ್ತಿ – ಪುರಸ್ಕಾರ ನೀಡುತ್ತಿದ್ದರು.

ಕ್ರಿ.ಶ. ೭೫೦–ರ ಪಟ್ಟದ ಕಲ್ಲಿನ ಶಾಸನ⁵ದಲ್ಲಿ "ಚಾಲುಕ್ಯ ವಿಕ್ರಮಾದಿತ್ಯರಸನು ಹಿಂದೆ ಸಂಗಿತಗಾರರಿಗೆ ನೀಡಿದ ದತ್ತಿ ನಿಂತುಹೋಗಲು ಆತನರಾಣಿ ಲೋಕಮಹಾದೇವಿ ಪುನಹ ನೀಡಿದ" ವಿವರವಿದೆ.

ಕ್ರಿ.ಶ. ೧೦೪೫–ರ ಹಳೇ ಗೋವಾಶಾಸನ⁶ದಲ್ಲಿ ಗೋವಾ ಕದಂಬ ೧ ನೇ ಜಯಕೇಶಿಯನ್ನು "ಗೀತ, ವಾದ್ಯ, ನೃತ್ಯ ಕರ್ಣಾವಲೋಕನಶೀಲಂ" ಎಂದಿದೆ.

ಕ್ರಿ.ಶ. ೧೧೧೨–ರ ಇಟ್ಟಗಿ ಶಾಸನ⁷ದಲ್ಲಿ ಚಾಲುಕ್ಯ ೬ ನೇ ವಿಕ್ರಮಾದಿತ್ಯರಸನನ್ನು "ಸಹಜ ಮಧುರ ಸಂಗೀತ ಗೋಷ್ಠಿ ಭುಜಂಗ" ಎಂದಿದೆ.

ಕ್ರಿ.ಶ. ೧೨೦೦–ರ ಹೊಸಕೋಟೆಶಾಸನ⁸ದಲ್ಲಿ ಹೊಯ್ಸಳ ವಿಷ್ಣುವರ್ಧನನನ್ನು "ಸಂಗೀತ, ನೃತ್ಯ, ತರ್ಕ, ಶಬ್ದವಿದ್ಯಾ, ವೇದವಿದ್ಯಾಪ್ರವೀಣ ಹಾಗೂ ಪರೀಕ್ಷ–ದಕ್ಷ" ಎಂದಿದೆ. ವಿಜಯನಗರದರಸರು ಸ್ವತಹ ಸಂಗೀತ, ಕಲೆಗಳನ್ನು ಬಲ್ಲವರಾಗಿದ್ದು ಕಲಾವಿದರನ್ನು ಕರೆಸಿ ಗೌರವಿಸುತ್ತಿದ್ದರು. ವಿಜಯನಗರದ ವಿಜಯವಿಠಲನ ಗುಡಿಯ ರಂಗಮಂಟಪದ ಕಂಬಗಳನ್ನು ಬಡಿದಾಗ ವಿವಿಧ ವಾದ್ಯಗಳ ಧ್ವನಿ ಬರುತ್ತದೆ.

ಕ್ರಿ.ಶ. ೧೫೮೫ – ರ ಹಿರೇಕಲಗೋಡಿನ ಶಾಸನ⁹ದಲ್ಲಿ "ವಿಜಯನಗರದ ವೆಂಕಟಾದ್ರಿರಾಯರಿಗೆ ಶುಭವಾಗಲೆಂದು ಸಮರದ ತಿಮ್ಮನಾಯಕರು ನಾರಸಿಂಹ ದೇವರಿಗೆ ತಾಳ, ಡಕ್ಕೆಗಳನ್ನು ದಾನ ಕೊಟ್ಟರು" ಎಂದಿದೆ. ಈ ಎಲ್ಲಾ ಅಂಶಗಳು ಆ ಕಾಲದ ಸಂಗೀತ ಪ್ರಿಯತೆಗೆ ಸಾಕ್ಷಿ.

---

5) "ಪಟ್ಟದಕಲ್ಲ ಗುಡಿಗಳು"- ಅಣ್ಣಿಗೇರಿ (ಕ.ಸಂ.ಸಂ. ಧಾರವಾಡ–1960) ಪು- 80)
6) "ಕರ್ನಾಟಕ ಶಾಸನ ಸಮೀಕ್ಷೆ"– (ಬೆಂ. ವಿ. ವಿ. ಬೆಂಗಳೂರು-1971) ಪು–46
7) "ಶಾಸನ ಪದ್ಯಮಂಜರಿ"- ನರಸಿಂಹಾಚಾರ್ (ಬೆಂ. ವಿ. ವಿ. ಬೆಂಗಳೂರು–II ಮು –1975) ಪು-55
8) "ಎಪಿಗ್ರಾಫಿಯಾ–ಕರ್ನಾಟಕ" ಸಂಪುಟ-6 (ಮೈ. ವಿ. ವಿ. ಮೈಸೂರು–1977) ಪಾಂ. ಪು. 229 ಹೊಸಕೋಟೆ
9) "ಕರ್ನಾಟಕ ಶಾಸನ-ಕಲೆ"- (ಭಾರತಿ ಪ್ರಕಾಶನ–ಮೈಸೂರು–1978) ಪು-65

ಅಬ್ದುಲ್ ರಜಾಕ್, ದೊ-ಆರ್ತೆ-ಬಾರ್ಬೊಸಾ, ನಿಕೋಲದಂತಿ, ಇತ್ಯಾದಿ ವಿದೇಶಿ ಯಾತ್ರಿಕರು ವಿಜಯನಗರದ ಮಹಾನವಮಿ ಉತ್ಸವದಲ್ಲಿ ನಡೆಯುತ್ತಿದ್ದ ನೃತ್ಯ, ಗೀತ, ಸಂಗೀತ ಇತ್ಯಾದಿ ಕಲೆಗಳ ಪ್ರದರ್ಶನವನ್ನು ಬಾಯ್ತುಂಬ ಹೊಗಳಿದ್ದಾರೆ. ವಿಜಯ ನಗರದರಸರಂತೆ ಮೈಸೂರು ಒಡೆಯರೂ ಸಂಗೀತ, ನೃತ್ಯ, ಗೀತ, ವಾದ್ಯ ಇತ್ಯಾದಿ ಕಲಾಪ್ರೇಮಿಗಳಾಗಿದ್ದರು. ಕಲಾವಿದರಿಗೆ ಅನೇಕ ದಾನ-ದತ್ತಿ ನೀಡಿದ್ದಾರೆ. ಒಟ್ಟಿನಲ್ಲಿ ರಾಜಾಶ್ರಯಗಳಲ್ಲಿ ಸಂಗೀತ, ಕಲಾವಿದರು ಬದುಕಿದರು, ಬೆಳಗಿದರು. ಪ್ರತಿಯೊಂದು ರಾಜವಂಶವೂ ಪ್ರತ್ಯೇಕ ಧ್ವಜ- ಲಾಂಛನ ಹೊಂದಿರುವಂತೆ ಪ್ರತ್ಯೇಕ ವಾದ್ಯಗಳನ್ನು ಹೊಂದಿರುತ್ತಿದ್ದವು.

೧) ಕದಂಬರು — **ಪೆರ್ಮಟ್ಟತೂರ್ಯ**
೨) ಬಾಣರು — **ಪೈಶಾಚಿಕ ಪಹಟ**
೩) ರಾಷ್ಟ್ರಕೂಟರು — **ತಿವಳಿಪಟೆ**
೪) ಕಲಚೂರ್ಯರು — **ಡಮರುಗ ತೂರ್ಯ**

ಅರಸರಲ್ಲದೇ ಕೆಲವು ಸಂಘ, ಸಂಸ್ಥೆಗಳು ಪ್ರತ್ಯೇಕ ವಾದ್ಯಗಳನ್ನು ಹೊಂದಿದ್ದವು.

೧) ಐಹೊಳೆ ಐನೂರ್ವರು (**ವರ್ತಕ ಸಂಘ**) – **ಡಮರುಗ ತೂರ್ಯ.**
೨) ತಿಂಕಸಾಸಿರ್ವರು (**ಯೋಧ ಸಂಸ್ಥೆ**) –**ಆನೆವರ.**

ಚಕ್ರವರ್ತಿಗಳು ಮಾಂಡಲೀಕರಿಗೆ, ಮಹಾಜನರಿಗೆ, ದೇವಾಲಯಗಳಿಗೆ ಪಂಚ ಮಹಾಶಬ್ದದ (ಐದು ವಾದ್ಯಗಳ) ಗೌರವ ನೀಡುತಿದ್ದರು.

ದೇವಾಲಯಗಳು ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿದ್ದವು. ಇಲ್ಲಿಯೂ ವಿವಿಧ ಕಲೆಗಳು ಉಳಿಯುತ್ತಿದ್ದವು, ಬೆಳೆಯುತ್ತಿದ್ದವು. ರಾಜಾಸ್ಥಾನಗಳಂತೆ ದೇವಾಲಯಗಳು ಸಮಾಜದ ಅವಶ್ಯ ಅಂಗವಾಗಿದ್ದವು. ಇಲ್ಲಿ ಪ್ರತಿನಿತ್ಯ ವಿವಿಧ ವಿದ್ಯೆಗಳ ದಾನ, ಪರೀಕ್ಷೆ, ನ್ಯಾಯ ತೀರ್ಮಾನ, ಹಬ್ಬ-ಉತ್ಸವಗಳ ಆಚರಣೆ ಇತ್ಯಾದಿ ಕೆಲಸ-ಕಾರ್ಯಗಳು ನಡೆಯುತ್ತಿದ್ದವು.

ಹೀಗಾಗಿ ದೇವಾಲಯಗಳ ಉಳಿವಿಗಾಗಿ ಸಮಕಾಲೀನ ಜನತೆ ದಾನ-ದತ್ತಿಗಳನ್ನು ನೀಡುತಿತ್ತು. ಈ ದಾನ-ದತ್ತಿಗಳಲ್ಲಿ ಮುಖ್ಯವಾದದ್ದು "ಅಂಗ-ಭೋಗ, ರಂಗ-ಭೋಗ" ದತ್ತಿಗಳು. ದೇವರ ವಿಗ್ರಹಕ್ಕೆ ಸಲ್ಲುವ ದೂಪ, ದೀಪ, ನೈವೇದ್ಯ ಶ್ರೀಗಂಧ ಇತ್ಯಾದಿ ಸೇವೆಗಳೇ ಅಂಗಭೋಗ. ದೇವರ ವಿಗ್ರಹದ ಮುಂದೆ ರಂಗ ಸ್ಥಳದಲ್ಲಿ ನಡೆವ ನೃತ್ಯ, ಗೀತ, ವಾದ್ಯ ಸಂಗೀತ ಇತ್ಯಾದಿ ಕಲಾ ಸೇವೆಗಳನ್ನು ರಂಗಭೋಗ ಎನ್ನುತ್ತಾರೆ. ದೇವರ ವಿಗ್ರಹ ಪೂಜೆಯ ನಂತರ

ಅರ್ಚಕರು ರಂಗ ಪೂಜೆ ನಡೆಸಲು ಸನ್ನೆಗಂಟೆ ಬಾರಿಸಿ ತಿಳಿಸುತ್ತಾರೆ. ಆಗ ರಂಗ ಸ್ಥಳದಲ್ಲಿ ವಾದ್ಯಗಳು ಮೊಳಗುತ್ತವೆ, ನರ್ತಕಿಯರು ತಮ್ಮ ಪಾಲಿನ ನೃತ್ಯ ಸೇವೆಯನ್ನು ವಾದ್ಯಗಳ ಲಯಕ್ಕೆ ನರ್ತಿಸಿ ಸಲ್ಲಿಸುತ್ತಾರೆ. ಕೆಲವು ದೇವಾಲಯ ಗಳಲ್ಲಿ ಮೂರು ಹೊತ್ತು ವಾದ್ಯ ನುಡಿಸಲು ದತ್ತಿ ನೀಡಿದ್ದಾರೆ. ರಂಗಪೂಜೆ ಗಾಗಿ ಸಂಗೀತ, ನೃತ್ಯ, ಗೀತ ಕಲಾವಿದರನ್ನು ನೇಮಿಸಿ ಅವರುಗಳ ಜೀವನಕ್ಕೆ ದಾನ-ದತ್ತಿಗಳನ್ನು ನೀಡುತ್ತಿದ್ದರು. ಒಟ್ಟಿನಲ್ಲಿ ದೇವಾಲಯಗಳ ಪೂಜಾ ಸ್ವರೂಪ ದಲ್ಲಿ ಸಂಗೀತ, ನೃತ್ಯ ಗೀತಾದಿ ಕಲೆಗಳು ಉಳಿದವು, ಬೆಳದವು, ಬೆಳಗಿದವು.

ಶಾಸನಗಳಲ್ಲಿ ಹಲ್ಮಿಡಿ, ರವಣ, ರಣಾನಕ, ಸುರಾನಕ, ಇತ್ಯಾದಿ ಅನೇಕ ವಾದ್ಯಗಳ ಹೆಸರು ಬಂದಿದೆ. ಆದರೆ ಅವುಗಳಲ್ಲಿ ಕೆಲವು ವಾದ್ಯಗಳ ಆಕಾರ, ಸ್ವರೂಪ, ಬಳಸುವ ಸಂದರ್ಭ ಇತ್ಯಾದಿ ವಿಷಯ ಈವರೆಗೂ ತಿಳಿದಿಲ್ಲ. ಶಾಸನ ಗಳಲ್ಲಿ ಸಂಗೀತಗಾರರ ಪೂರ್ಣ ಪರಿಚಯ ಇರುವದಿಲ್ಲ. ಅವರ ತಂದೆ, ತಾಯಿ, ಗುರು, ಆಶ್ರಯದಾತರ ವಿವರಗಳಿರುವುದಿಲ್ಲ ಆದರೂ ಕರ್ನಾಟಕದಲ್ಲಿ ಸಂಗೀತ-ಕಲೆ ಉಳಿಯಲು, ಬೆಳೆಯಲು ಈ ಶಾಸನೋಕ್ತ ಸಂಗಿತಗಾರರೂ ಕಾರಣ ಎಂಬುದು ಅಕ್ಷರಶಃ ಸತ್ಯ. ಶಾಸನಗಳಲ್ಲಿ ಅನೇಕ ಕಡೆ ಸಂಗೀತದ ಪ್ರತ್ಯಕ್ಷ, ಪರೋಕ್ಷ ವರ್ಣನೆ ಬಂದಿದೆ. ಇವೆಲ್ಲ ನಮ್ಮವರ ಸಂಗೀತ ಪ್ರೇಮಕ್ಕೆ ಸಾಕ್ಷಿ.

ಕರ್ನಾಟಕದ ಶಾಸನೋಕ್ತ ಕೆಲವು ಸಂಗೀತಗಾರರು

೧) **ರವಿದತ್ತ** :– **ಕ್ರಿ. ಶ. ೬೦೦. ರ** ಕುಮಾರಲಿಂಗ ದಾನಶಾಸನ[10]ದಲ್ಲಿ ಪುನ್ನಾಟ ಅರಸು ರವಿದತ್ತನನ್ನು ಮೃದಂಗ ನುಡಿಸುವುದರಲ್ಲಿ ವಿಕ್ರಮನೆಂದೂ ಸಾಮಂತ, ಭಟರಿಗೆ ಪ್ರವರ್ಧಮಾನನೆಂದು ಹೇಳಿದೆ.

೨) **ನೀತಿಮಾರ್ಗ**:– **ಕ್ರಿ.ಶ. ೯೦೪.ರ** ಕೆರೆಹಳ್ಳಿ ದಾನಶಾಸನ[11]ದಲ್ಲಿ ಗಂಗ ಅರಸು ನೀತಿಮಾರ್ಗನನ್ನು "ಗೇಯ, ವಾದ್ಯ, ನೃತ್ಯ ವಿಶ್ವೇಷ ವಿದ್ಯಾ ಭರತ, ಮಹಾವೈಯಾಕರಣ" ಎಂದಿದೆ.

೩) **ಮಾರಸಿಂಹ**:– **ಕ್ರಿ.ಶ. ೯೮೬ . ರ** ಕಾರವಾರ ಜಿಲ್ಲೆ ಸೋಮನಹಳ್ಳಿ ವೀರ ಗಲ್ಲಿನಲ್ಲಿ[21] ಹಾನುಗಲ್ ಕದಂಬ ಚಟ್ಟಯ್ಯದೇವನ ಸಂಧಿ ವಿಗ್ರಹಿ ಮಾರಸಿಂಹ ನನ್ನು "ಸಹಜ ಕವಿ, ವಾದ್ಯ-ವಿದ್ಯಾಧರ" ಇತ್ಯಾದಿಯಾಗಿ ಹೇಳಿದೆ.

---

10) "ಸೋರ್ಸ್-ಆಫ್-ಕರ್ನಾಟಕ ಹಿಸ್ಟರಿ"-ಭಾಗ-I (ಮೈ. ವಿ.ವಿ. ಮೈಸೂರು-1940) ಪು-31
11) "ಎಪಿಗ್ರಾಫಿಯಾ-ಕರ್ನಾಟಕ" ಸಂಪುಟ-4 (ಮೈ. ವಿ. ವಿ. ಮೈಸೂರು-1975) ಚಾ. ನ. 354 ಕೆರೆಹಳ್ಳಿ
12) "ಕಾರವಾರ ಜಿಲ್ಲೆಯ ಶಾಸನಗಳು" (ಕ. ವಿ. ವಿ. ಧಾರವಾಡ-1975) ಪು-43

೪) **ಜಿನವಲ್ಲಭ** ಕ್ರಿ.ಶ. ೯೯೦. ರ ಆಂಧ್ರ ರಾಜ್ಯದ ಬೊಮ್ಮಲಗುಡ್ಡದಲ್ಲಿರುವ ಶಾಸನ[13]ದಲ್ಲಿ ಪಂಪಕವಿಯು ತಮ್ಮ ಜಿನವಲ್ಲಭನನ್ನು "ಹಾಡುಗಾರಿಕೆ, ವಾದ್ಯವಾದನ, ಕಾವ್ಯವಾಚನ, ಉತ್ತಮವಾಗ್ಮಿತ್ವಗಳಲ್ಲಿ ಅದ್ವಿತೀಯ" ಎಂದು ಹೊಗಳಲಾಗಿದೆ.

೫) **ನಾಗದೇಸಿಗ**:– ಕ್ರಿ.ಶ ೧೦೧೨ ರ ಕೋಟೆ ಉಮಚಗಿ ಶಾಸನ[14] ದಲ್ಲಿ ಅಗ್ರಹಾರ ಉಮಚಗಿಯ ನಾಗದೇಸಿಗನನ್ನು "ವಾದ್ಯವಾದನ, ಜ್ಯೋತಿಷ್ಯ, ಗಣಿತ, ಛಂದಸ್ಸುಗಳನ್ನು ಚೆನ್ನಾಗಿ ಬಲ್ಲವ" ಎಂದಿದೆ.

೬) **ಶಾಂತರಸ** ಕ್ರಿ.ಶ. ೧೦೬೦ ರ ನಗರದ ಶಾಸನ[15] ದಲ್ಲಿ ಶಾಂತರಸನನ್ನು ಅರ್ಥಶಾಸ್ತ್ರ, ಹಯಶಾಸ್ತ್ರ, ಗಜಶಾಸ್ತ್ರ, ನಾನಾವಾದ್ಯಗಳಲ್ಲಿ ಪ್ರವೀಣ" ಎಂದಿದೆ.

೭) **ರವಿಗ ಚಮೂಪತಿ**:– ಕ್ರಿ.ಶ. ೧೦೫೭ ರ ಏವೂರ ಶಾಸನ[16]ದಲ್ಲಿ ರವಿಗ ಚಮೂಪತಿಯನ್ನು "ಅನೇಕಲಿಪಿಗಳನ್ನು ಬಲ್ಲವ, ಕವಿತ್ವ ಪಾಂಡಿತ್ಯಗಳಲ್ಲಿ ಪ್ರಸಿದ್ಧ ಈತನು ನುಡಿಸುವ ವಾದ್ಯದ ಧ್ವನಿ ಕೇಳುವ ಕಿವಿಗೆ ಇಂಪು ಕೊಡುತ್ತಿತ್ತು" ಎಂದಿದೆ.

೮) **ಎರಗ**:– ಕ್ರಿ ಶ ೧೦೮೭.ರ ಸವದತ್ತಿ ಶಾಸನ[17]ವು ಸೌಂದತ್ತಿ ರಟ್ಟವಂಶದ ಎರಗ ಭೂಪತಿಯನ್ನು ವಾದ್ಯವಿದ್ಯಾಧರ" ಎಂದಿದೆ.

೯) **ಕೇತಲಾದೇವಿ** :– ಕ್ರಿ.ಶ. ೧೧೯೦. ರ ಶಾಸನ[18]ದಲ್ಲಿ ತ್ರಿಭುವನಮಲ್ಲನ ಪಟ್ಟದರಸಿ ಸಿರಿಯ ಕೇತಲಾದೇವಿಯನ್ನು "ಸಂಗೀತ ವಿದ್ಯಾಧರಿ" ಎಂದಿದೆ.

---

13) "ಶಾಸನ-ಸಂಗ್ರಹ"- ಶೇಷಶಾಸ್ತ್ರಿ (ಕ. ಸಾ. ಪ. ಬೆಂಗಳೂರು–II ಮು 1982 ಪು-43

14) "ಕರ್ನಾಟಕ-ಭಾರತಿ" ಸಂಪು. 4 ಸಂಚಿ. 2 (ಕ. ವಿ. ವಿ. ಧಾರವಾಡ-1971) ಪು-57

15) "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ" (ಮೈ. ವಿ.ವಿ. ಮೈಸೂರು-1966 ಪು-240.

16) "ಶಾಸನ-ಸಾಹಿತ್ಯ ಸಂಚಯ" (ಕ. ಸಂ. ಸಂ. ಧಾರವಾಡ-1961) ಶಾಸನ ಸಂಖ್ಯೆ-32

17) "ಕರ್ನಾಟಕ-ಇನ್‌ಸ್ಕ್ರಿಪ್ಷನ್"- ಸಂಪುಟ-5 (ಕ. ಸಂ. ಸಂ. ಧಾರವಾಡ-1969 ಶಾ. ಸಂ–52.

18) "ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ"- (ಮೈ. ವಿ. ವಿ. ಮೈಸೂರು-1966 ಪು-240

೧೦) **ವಿಷ್ಣುವರ್ಧನ** :– ಕ್ರಿ. ಶ. ೧೧೧೭ ರ ತಲಕಾಡಿನ ಶಾಸನ[19]ದಲ್ಲಿ ಹೊಯ್ಸಳ ವಿಷ್ಣುವರ್ಧನನ್ನು ನೃತ್ಯ, ಗೀತ, ವಾದ್ಯಪ್ರವೀಣ" ಎಂದು ಹೇಳಿದೆ.

೧೧) **ಶಾಂತಲೆ** :– ಕ್ರಿ. ಶ. ೧೧೨೩ ರ ಶ್ರವಣಬೆಳಗೊಳದ ಶಾಸನ[20]ದಲ್ಲಿ ಹೊಯ್ಸಳ ವಿಷ್ಣುವರ್ಧನನ ರಾಣಿ ಶಾಂತಲೆಯನ್ನು "ನೃತ್ಯ, ಗೀತ, ವಾದ್ಯ ಸೂತ್ರಧಾರೆ" ಎಂದಿವೆ.

೧೨ **ಬಚಿಯ ನಾಯ್ಕ** :– ಕ್ರಿ. ಶ. ೧೧೬೯-ರ ಅಗ್ರಹಾರ ಬಾಚಹಳ್ಳಿ ವೀರ ಗಲ್ಲು[21]ನಲ್ಲಿ ಸಾಮಂತ ಬಜಿಯ ನಾಯಕನನ್ನು "ತತ, ವಿತತ, ಘನ, ಸುಷಿರ ವಾದ್ಯ ಪ್ರವೀಣ" ಎಂದಿದೆ.

೧೩) **ತೇಜಚಮೂಪತಿ** :– ಕ್ರಿ. ಶ. ೧೧೫೨-ರ ತಾಮ್ರಶಾಸನ[22]ದಲ್ಲಿ ತೇಜ ಚಮೂಪತಿಯನ್ನು "ವಿಲಾಸಿ, ವಿವೇಕಿ, ವಿಭವಿ, ವಿನೋದಿ, ನೃತ್ಯ, ಗೀತ, ವಾದ್ಯ ಕಲಾಪ್ರವೀಣಂ" ಎಂದಿದೆ.

೧೪) **ಜಿನವರ್ಮ** :– ಕ್ರಿ. ಶ. ೧೨೦೦-ರ ಶ್ರವಣಬೆಳಗೊಳದ ಶಾಸನ[23]ದಲ್ಲಿ ಜಿನವರ್ಮನನ್ನು "ಕಂಚಿವಾದ್ಯ ಪ್ರವೀಣಂ ಎಂದೂ, ಈತನು ನುಡಿಸುವ ವಾದ್ಯದ ಧ್ವನಿಯು ಕೆಟ್ಟವರಿಗೆ ಭಯವನ್ನು, ಒಳ್ಳೆಯವರಿಗೆ ಅನುರಾಗವನ್ನೂ, ಹಂಸ, ನವಿಲಿಗೆ ಘನನಾದವನ್ನು ನೀಡುತಿತ್ತು" ಎಂದಿದೆ.

೧೫) **ಚಂದ್ರಕೀರ್ತಿ ಮುನಿ** :– ೧೩೫೦-ರ ಹುಲ್ಲಹಳ್ಳಿಯ ಶಾಸನ[24]ದಲ್ಲಿ ಚಂದ್ರಕೀರ್ತಿ ಮುನಿಯನ್ನು "ಸಂಗೀತ ವಿದ್ಯಾಪತಿ" ಎಂದು ಹೇಳಿದೆ.

---

19) "ಎಪಿಗ್ರಾಫಿಯಾ-ಕರ್ನಾಟಕ"- ಸಂಪುಟ-5 (ಮೈ. ವಿ. ವಿ. ಮೈಸೂರು- 1976 ಟೀ. ನ. 151 ತಲಕಾಡು
20] "ಎಪಿಗ್ರಾಫಿಯಾ-ಕರ್ನಾಟಕ"- ಸಂಪುಟ-2 [ಮೈ. ವಿ. ವಿ. ಮೈಸೂರು-1973] ಶ್ರವಣಬೆಳ್ಗೊಳ-162
21] "ಎಪಿಗ್ರಾಫಿಯಾ-ಕರ್ನಾಟಕ"- ಸಂಪುಟ-6 [ಮೈ. ವಿ ವಿ. ಮೈಸೂರು-1977] ಕೃ. ರಾ. ಪೆ. 77. ಬಾಚಹಳ್ಳಿ
22] "ಕರ್ನಾಟಕ ಇನ್‌ಸ್ಕ್ರಿಪ್ಷನ್"-ಸಂಪುಟ-2 (ಕ. ಸಂ. ಸಂ. ಧಾರವಾಡ-1953) ನಂ-29
23] "ಎಪಿಗ್ರಾಫಿಯಾ-ಕರ್ನಾಟಕ"- ಸಂಪುಟ-2 [ಮೈ. ವಿ. ವಿ. ಮೈಸೂರು-1973] ಶ್ರವಣಬೆಳ್ಗೊಳ-432
24] "ಎಪಿಗ್ರಾಫಿಯಾ-ಕರ್ನಾಟಕ"- ಸಂಪುಟ-3 [ಮೈ. ವಿ. ವಿ. ಮೈಸೂರು-1974] ನಂ. ಗೂ.-137. ಹುಲ್ಲಹಳ್ಳಿ

೧೬) **ಹರಿಹರ** :– ಕ್ರಿ. ಶ. ೧೪೦೭–ರ ಸಿಂಗನಲ್ಲೂರ ಶಾಸನ[25]ದಲ್ಲಿ ವಿಜಯನಗರದಅರಸು ಹರಿಹರರಾಯರನ್ನು "ಸಂಗೀತ ವಿದ್ಯಾಸಾಗರ, ಸಾಹಿತ್ಯ ವಿದ್ಯಾಕಲಾ ವಿಶಾಲವತಾರ" ಎಂದಿದೆ.

೧೭) **ನಾಗನಾಯಕ** :– ಕ್ರಿ. ಶ. ೧೪೯೩–ರ ಸರಗೂರು ತಾಮ್ರಪಟ[26]ದಲ್ಲಿ ಸಾಳ್ವನರಸಿಂಹರಾಯನ ಅಧಿಕಾರಿ ನಾಗನಾಯಕನನ್ನು "ಸಂಗೀತ ವಿದ್ಯಾ ಸರ್ವಸ್ವ, ಸಾಹಿತ್ಯ ರಸಜೀವಿತ" ಎಂದಿದೆ.

೧೮) **ಕೃಷ್ಣಸೂರಿ** :– ಕ್ರಿ. ಶ. ೧೫೬೮–ರ ಮೇಲುಕೋಟೆ ಶಾಸನ[27]ದಲ್ಲಿ ಜಿಯಪ್ಪಾರ್ಯನ ಪುತ್ರ ಕೃಷ್ಣಸೂರಿಯನ್ನು "ಬುಧಜನ ಮನರಂಜನ, ಗಂಧರ್ವ (ಸಂಗೀತ) ವೇದವಿದ್ಯಾ ಪರಿಣಿತ. ವೈಣಿಕಶ್ರೇಣಿ ಚೂಡಾರತ್ನ" ಎಂದಿವೆ.

೧೯) **ವೆಂಕಟ ಸುಬ್ಬಯ್ಯ** :– ಕ್ರಿ. ಶ. ೧೮೮೭–ರ ಶಂಕಹಳ್ಳಿಗ್ರಾಮದ ಶಾಸನ[28]ದಲ್ಲಿ "ವೀಣೆ ವಿದ್ವಾಂಸ ವೆಂಕಟ ಸುಬ್ಬಯ್ಯನಿಗೆ ಮೈಸೂರು ಶ್ರೀಕೃಷ್ಣರಾಜ ಒಡೆಯರು ಶಂಕಹಳ್ಳಿಗ್ರಾಮವನ್ನು ದತ್ತಿಕೊಟ್ಟ" ವಿವರವಿವೆ.

೨೦) **ಮದ್ದಳೆ-ಲಿಂಗಯ್ಯ** : ಕ್ರಿ. ಶ. ೧೯೦೦–ರ ಮೂಗೂರಿನ ಕುದುರೆ ವಿಗ್ರಹದಲ್ಲಿರುವ ಶಾಸನ[29]ದಲ್ಲಿ "ಮದ್ದಳೆ ಲಿಂಗಯ್ಯನ ಮಗಳು ಕೆಂಪಾಸಾನಿಯ ಸೇವೆ" ಎಂದಿದೆ ಇಲ್ಲಿ ಲಿಂಗಯ್ಯ ಮದ್ದಳೆ ಕಲಾವಿದನಿರಬೇಕು.

ಹೀಗೆ ಶಾಸನಗಳಲ್ಲಿ ಇನ್ನು ಹೆಚ್ಚು ಅಧ್ಯಯನವನ್ನು ನಡೆಸಿದರೆ ನೂರಾರು ಸಂಗೀತಗಾರರು ಸಿಗುತ್ತಾರೆ. ಈ ಎಲ್ಲ ಸಂಗೀತಗಾರರನ್ನು ಸಂಶೋಧಿಸಿ ಸಂಗ್ರಹಿಸಿ ಚರಿತ್ರ ಗ್ರಂಥರೂಪದಲ್ಲಿ ನೀಡಲಿ ಎಂಬುದು ನಮ್ಮ ನಮ್ರ ವಿನಂತಿ.

25] "ಎಪಿಗ್ರಾಫಿಯಾ-ಕರ್ನಾಟಕ - ಸಂಪುಟ-4 [ಮೈ. ವಿ. ವಿ. ಮೈಸೂರು- 1975, ಕೊಗಾ. 56. ಸಿಂಗನಲ್ಲೂರು

26] "ಎಪಿಗ್ರಾಫಿಯಾ-ಕರ್ನಾಟಕ - ಸಂಪುಟ-3 [ಮೈ. ವಿ. ವಿ. ಮೈಸೂರು-1974] ಹೆ. ಕೊ. 89-ಸರಗೂರು,

27] "ಎಪಿಗ್ರಾಫಿಯಾ-ಕರ್ನಾಟಕ - ಸಂಪುಟ-6 [ಮೈ. ವಿ. ವಿ. ಮೈಸೂರು-1977] ಪಾಂ. ಪು. 214. ಮೇಲುಕೋಟೆ

28] "ಎಪಿಗ್ರಾಫಿಯಾ-ಕರ್ನಾಟಕ"- ಸಂಪುಟ-3 [ಮೈ. ವಿ. ವಿ. ಮೈಸೂರು-1974] ಹೆ. ಕೊ. 27. ಶಂಕಹಳ್ಳಿ

29] "ಎಪಿಗ್ರಾಫಿಯಾ-ಕರ್ನಾಟಕ"- ಸಂಪುಟ-5 [ಮೈ. ವಿ. ವಿ. ಮೈಸೂರು-1976] ಟೀ. ನ. 275. ಮೂಗೂರು

ಮಗು ಮತ್ತು ಭಾಷಾಕಲಿಕೆ
Child and Language Learning

● ಎಚ್. ಎಂ. ಮಹೇಶ್ವರಯ್ಯ

ವ್ಯಕ್ತಿಯ ಜ್ಞಾನ ಸಂಪಾದನೆಗೆ ಭಾಷೆ ಮಹತ್ವಪೂರ್ಣ ಕಾರ್ಯ ಮಾಡುತ್ತದೆ. ಇತ್ತೀಚಿನ ಸಂಶೋಧನೆಗಳು, ಮಗುವಿನ ಬೌದ್ಧಿಕ ವಿಕಾಸಕ್ಕೆ, ಭಾಷೆ ಹೇಗೆ ಮೂಲಭೂತ ಅವಶ್ಯಕತೆಗಳಲ್ಲೊಂದಾಗಿದೆ ಎಂಬುವನ್ನು ಗುರತಿಸಿವೆ. ಮನುಷ್ಯನ ಚಿಂತನೆ, ಕಲ್ಪನೆ, ಭಾವನೆ ಮತ್ತು ಜ್ಞಾನಗಳಿಗೆ ಭಾಷೆಯೇ ಮಾಧ್ಯಮವಾಗಿದೆ. ಮಗುವಿಗೆ ಭಾಷೆಯನ್ನು ಕಲಿಯುವ ಸಾಮರ್ಥ್ಯ ಹುಟ್ಟಿನಿಂದಲೇ ಬಂದರೂ ಅದನ್ನು ಕರಗತ ಮಾಡಿಕೊಳ್ಳಲು, ಅಭಿವೃದ್ಧಿಪಡಿಸಿಕೊಳ್ಳಲು ಪರಿಸರ ಬಹಳ ಮುಖ್ಯವಾಗಿದೆ. ಮಾನವನಿಗೆ ಹುಟ್ಟಿನಿಂದಲೇ ಮಾತನಾಡುವ ಸಾಮರ್ಥ್ಯ ಬೀಜರೂಪವಾಗಿ ಬಂದಿರುವಂತೆ ಮಂಗಗಳಿಗೆ ಮಾತನಾಡುವ ಸಾಮರ್ಥ್ಯ ಹುಟ್ಟಿನಿಂದಲೇ ಬಂದಿರುವದಿಲ್ಲ. ಆದ್ದರಿಂದಲೇ ಅತ್ಯಂತ ಬುದ್ಧಿವಂತ ಮಂಗನಿಗೆ ಮಾತನಾಡಲು ಬರುವದಿಲ್ಲ. ಆದರೆ ಅತ್ಯಂತ ದಡ್ಡ ಮನುಷ್ಯ ಕೂಡ ಮಾತನಾಡುತ್ತಾನೆ ಎಂದು ನೋಅಮ್ ಚಾಮ್‌ಸ್ಕಿ ಅವರು ಹೇಳುತ್ತಾರೆ.

ಮಗು ಭಾಷೆಯನ್ನು ಏಕೆ ಕಲಿಯುತ್ತದೆ? ಎಂಬ ಪ್ರಶ್ನೆಗೆ 'ಜೀವನದ ಅವಶ್ಯಕತೆಯನ್ನು ಪೂರೈಸಿಕೊಳ್ಳಲು ಭಾಷೆ ಅನಿವಾರ್ಯ, ಆದ್ದರಿಂದಲೇ ಮಗು ಭಾಷೆಯನ್ನು ಕಲಿಯುತ್ತದೆ' ಎಂಬ ಸಿದ್ಧ ಉತ್ತರವನ್ನು ಕೊಡಬಹುದು. ಮಗುವಿನಲ್ಲಿ ಭಾಷೆಯ ವಿಕಾಸವು ಅದರ ಪ್ರಯತ್ನದ ಫಲಸ್ವರೂಪದಿಂದ ರೂಪಗೊಳ್ಳುತ್ತದೆ. ಭಾಷೆಯ ವಿಕಾಸ ವ್ಯಕ್ತಿಯ ಜೀವನ ಪರ್ಯಂತ ನಡೆದಿರುತ್ತದೆ. ಭಾಷಾಕಲಿಕೆಯು ಬೇರೆ ಬೇರೆ ಮಕ್ಕಳಲ್ಲಿ ಬೇರೆ ಬೇರೆ ತರನಾಗಿದೆಯಾದರೂ ಭಾಷಾ ಕಲಿಕೆಯ ಸ್ತರಗಳು ಸಾಮಾನ್ಯವಾಗಿ ಎಲ್ಲಾ ಮಕ್ಕಳಲ್ಲಿ ಒಂದೇ ಆಗಿರುತ್ತವೆ. ಮಗುವಿನ ಭಾಷಾವಿಕಾಸ ಕ್ರಮವನ್ನು ಇತ್ತೀಚಿಗೆ ಅನೇಕ ಜನ ವಿದ್ವಾಂಸರು ಅಧ್ಯಯನ ಮಾಡಿದ್ದಾರೆ. ಅಧ್ಯಯನದ ದೃಷ್ಟಿಯಿಂದ ಮಗುವಿನ ಭಾಷಾವಿಕಾಸಕ್ರಮವನ್ನು ಕೆಳಗಿನಂತೆ ವಿವಿಧ ಹಂತಗಳಾಗಿ ವಿಭಾಗಿಸಬಹುದು.

ಪ್ರಾರಂಭಿಕ ಸ್ವರೋಚ್ಚಾರಣ ಹಂತ (Early Vocalization Stage):

ಹುಟ್ಟಿದ ತಕ್ಷಣ ಮಗು ಅಳುವುದು ಸಹಜಕ್ರಿಯೆ. ಆದರೆ ಅಳು ಪ್ರಾರಂಭಿಕ ಸ್ವರೋಚ್ಚಾರಣೆಯಲ್ಲ ಎಂದು ಅನೇಕ ಜನ ಸಂಶೋಧಕರು ಅಭಿ

ಪ್ರಾಯ ವ್ಯಕ್ತಪಡಿಸಿದ್ದಾರೆ. ಏಕೆಂದರೆ ಅಳು ಮಗುವಿನ ಮೂಲ ಪ್ರವೃತ್ತಿಯಲ್ಲಿ ಒಂದು ಅಂಶ ಮಾತ್ರ. ಪ್ರಾರಂಭಿಕ ಹಂತದಲ್ಲಿ ಮಗುವಿನ ಅಳು, ಕಲಿಯಬಲ್ಲ ಯಾವುದೇ ಧ್ವನಿಗಳ ಪ್ರತಿನಿಧಿಯಾಗಿರುವುದಿಲ್ಲ. ಮಗು ಬೆಳೆಯುತ್ತಾ ಹೋದಂತೆ ಅಳು ಕೂಡಾ ಮಗುವಿನ ಭಾವಾಭಿವ್ಯಕ್ತಿಯ ಒಂದು ಸಾಧನವಾಗುತ್ತದೆ. ಮೊದಲು ಅನಿಯಂತ್ರಿತವಾಗಿದ್ದ ಅಳು ಕ್ರಮೇಣ ನಿಯಂತ್ರಿತವಾಗುತ್ತಾ ಹೋಗುತ್ತದೆ. ಆದ್ದರಿಂದ ಕೆಲವು ವಿದ್ವಾಂಸರು ನಿಯಂತ್ರಿತವಾದ ಅಳು ಮಗುವಿನ ಭಾಷಾ ವಿಕಾಸದ ಪ್ರಾರಂಭಿಕ ಹಂತ ಎಂದು ಅಭಿಪ್ರಾಯ ಪಡುತ್ತಾರೆ. ಅಳುವುದರ ಮೂಲಕ ಮಗು ಕ್ರಮೇಣವಾಗಿ ತನ್ನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವುದನ್ನು ಕಲಿಯುತ್ತದೆ. ಆದ್ದರಿಂದ ಮಗುವಿನ ಅಳುವ ವಿಧಾನಗಳಲ್ಲಿಯೇ ಸಾಕಷ್ಟು ವ್ಯತ್ಯಾಸಗಳಾಗುತ್ತವೆ. ಮಗುವಿಗೆ ಹಸಿವೆಯಾದಾಗ, ತೊಂದರೆಯಾದಾಗ, ಭಯಂಕರ ವಸ್ತುಗಳನ್ನು ನೋಡಿದಾಗ, ಹೆದರಿದಾಗ,ಏನಾದರೂ ಕಚ್ಚಿದಾಗ ಅಳುವ ರೀತಿಗಳಲ್ಲಿ ಆಗುವ ವ್ಯತ್ಯಾಸ ಸ್ಪಷ್ಟವಾಗಿ ಗೊತ್ತಾಗುತ್ತದೆ. ಅಳುವಿನ ಜೊತೆಗೇ ಮಗು ಆಂಗಿಕ ಸಂಜ್ಞೆಗಳನ್ನು ಮಾಡಲು ಪ್ರಾರಂಭಿಸುತ್ತದೆ. ಅಳು ಮೊದಲು ಸಾಧನವಾದದ್ದು ನಂತರ ಮನೋಭಾವದ ಅಭಿವ್ಯಕ್ತಿಯಾಗಿ ಬದಲಾಗುತ್ತದೆ. ಕೆಲವು ವಿದ್ವಾಂಸರು ಮಗುವಿನ ಪ್ರಾರಂಭಿಕ ಅಳು ಕೂಡ ಸ್ವರ ಮತ್ತು ವ್ಯಂಜನಗಳ ಉಚ್ಚಾರಗಳ ಪ್ರಯತ್ನ ಎಂದು ಅಭಿಪ್ರಾಯಪಡುತ್ತಾರಾದರೂ ಪ್ರಾರಂಭಿಕ ಅಳುವಿನಲ್ಲಿ ಯಾವುದೇ ಭಾಷಿಕ ಸ್ವರ ಮತ್ತು ವ್ಯಂಜನಗಳ ಸ್ಪಷ್ಟ ಧ್ವನಿಗಳಿರುವುದಿಲ್ಲ. ಮಗು ಕ್ರಮವಾಗಿ ಆ, ಎ, ಇ, ಒ, ಉ ಸ್ವರಗಳನ್ನು ತನ್ನ ಅಳುವಿನಲ್ಲಿ ಒಂದಾದ ನಂತರ ಒಂದರಂತೆ ಸೇರಿಸಿಕೊಳ್ಳುತ್ತ ಹೋಗುತ್ತದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ.

ಕಿಲಕಿಲನೆ ನಗುವ ಹಂತ (Cooing stage):

ಮಗುವಿಗೆ, ಮೂರುನಾಲ್ಕು ತಿಂಗಳುಗಳಾದ ಬಳಿಕ ಕೇಕೆಹಾಕಿ ನಗುತ್ತಾ. ಅರ್ಥವಿಲ್ಲದ ಧ್ವನಿಗಳನ್ನು ಉಚ್ಚರಿಸುತ್ತದೆ. ಸಂತೃಪ್ತಿಯಿಂದ ಹಾಲನ್ನು ಕುಡಿದು ಮಲಗಿದಾಗ ಕೈಕಾಲುಗಳನ್ನು ಚಿಮ್ಮುತ್ತಾ ಅರ್ಥವಿಲ್ಲದ ಅನೇಕ ಧ್ವನಿಗಳನ್ನು ಉಚ್ಚರಿಸುತ್ತದೆ. ಧ್ವನಿವಿಕಾಸದ ದೃಷ್ಟಿಯಿಂದ ಈ ಸ್ಥಿತಿ ಬಹಳ ಮಹತ್ವಪೂರ್ಣವಾಗಿದೆಯೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಏಕೆಂದರೆ ಇಂತಹ ಕೇಕೆಯ ನಗುವಿನಲ್ಲಿ ಮಗು ವಾಕ್ಯದ ಭಾಗಗಳನ್ನು ಉಚ್ಚಾರಮಾಡುತ್ತಿರುತ್ತದೆ. ದೊಡ್ಡವರ ಧ್ವನಿಯನ್ನು ಕೇಳಿಕೊಂಡು ಅನೇಕ ವಿಭಿನ್ನ ರೀತಿಯ ಪ್ರತಿಕ್ರಿಯೆಯನ್ನು ತೋರಿಸುತ್ತದೆ. ತಾಯಿಯ ಧ್ವನಿ ಕಿವಿಗೆ ಬಿದ್ದೊಡನೆ ಖುಷಿಗೊಂಡು ಕೇಕೆ ಹಾಕಿ ನಗುತ್ತದೆ. ಯಾವುದಾದರೂ ಅಪರಿಚಿತ ಧ್ವನಿ ಕಿವಿಗೆ ಬಿದ್ದರೆ ಹೆದರಿ ಅಳಲು ಪ್ರಾರಂಭಿಸುತ್ತದೆ.

ತೊದಲು ನುಡಿಯ ಹಂತ (Babbling stage) :

ಅಳು–ನಗುವಿನ ಹಂತದ ತರುವಾಯ ವಿವಿಧ ಧ್ವನಿಗಳಿಂದ ಕೂಡಿದ ಶಬ್ದಗಳನ್ನು ಮಗು ದಿಢೀರನೆ ಉಚ್ಚರಿಸತೊಡಗುತ್ತದೆ. ಇದನ್ನೆ 'ಹತೋಟಿ ರಹಿತ ಉಚ್ಚಾರ' (Random Vocalization) ಎಂದು ಕರೆಯುತ್ತಾರೆ. ಮಗುವಿನ ಬಾಯಿಯಿಂದ ತನಗೆ ತಾನೇ ಕೆಲವು ಧ್ವನಿಗಳು ಉಚ್ಚರಣೆಗೊಳ್ಳುತ್ತವೆ. ಇದನ್ನೇ 'ಧ್ವನಿಗಳೊಡನೆ ಆಟ'ವೆಂದು ಕರೆಯುತ್ತಾರೆ. ಇದರಿಂದ ಮಗುವಿನ ಧ್ವನ್ಯಂಗಗಳು ಬಲಗೊಂಡು ಅದರ ಸಹಾಯದಿಂದ ಮಗು ಮಾತನಾಡುವ ಅಭ್ಯಾಸವನ್ನು ರೂಢಿಸಿಕೊಳ್ಳುತ್ತದೆ. ತೊದಲುವಿಕೆ ಒಂದು ಸಹಜ ಪ್ರಕ್ರಿಯೆ. ಎಲ್ಲ ಮಕ್ಕಳಲ್ಲಿಯೂ ಇದು ಸಹಜವಾಗಿರುತ್ತದೆ. ಆರು ತಿಂಗಳಿನಿಂದ ಹತ್ತು ತಿಂಗಳುಗಳಲ್ಲಿ ಮುಂದಿನ ಅನುಕರಣಾತ್ಮಕ ಸ್ಥಿತಿಯನ್ನು ಮಗು ಸಂಪಾದಿಸಲು ಇದು ಸಹಕಾರಿಯಾಗುತ್ತದೆ. ತೊದಲುವಿಕೆ ಅಥವಾ ಬಡಬಡಿಸುವಿಕೆಯ ಉಚ್ಚಾರಣೆಯಿಂದ ಕ್ರಮವಾಗಿ ಧ್ವನಿಗಳ ಬಳಕೆಯು ವೃದ್ಧಿಯಾಗುತ್ತದೆ. ಮಗು ದೊಡ್ಡವರ ಮಾತಿನಲ್ಲಿ ಬಳಸುವ ಸ್ವರ ಮತ್ತು ವ್ಯಂಜನಗಳನ್ನು ತನ್ನ ಬಡಬಡಿಸುವಿಕೆಯಲ್ಲಿ ಉಚ್ಚರಿಸುತ್ತದೆ. ಈ ಹಂತದಲ್ಲಿ ಮಗು ಬಳಸುವ ಎಲ್ಲ ಧ್ವನಿಗಳೂ ಮುಂದೆ ಭಾಷೆಯನ್ನಾಡುವಾಗ ಬಳಕೆಯಾಗುವುದಿಲ್ಲ. ಅನೇಕ ಧ್ವನಿಗಳು ನಶಿಸಿ ಹೋಗುತ್ತವೆ. ಕೆಲವು ಭಾಷಾಧ್ವನಿಗಳೂ ಸಹ ಮಗುವಿನ ಉಚ್ಚಾರಣೆಯಿಂದ ಒಂದು ಹಂತದಲ್ಲಿ ನಶಿಸಿ ಹೋಗಬಹುದು. ಮಗು ಮುಂದೆ ಅಂತಹ ಧ್ವನಿಗಳನ್ನು ಪ್ರಯತ್ನದಿಂದ ಕಲಿಯಬೇಕಾಗುತ್ತದೆ.

ಅನುಕರಣೆಯ ಹಂತ (Imitation stage) :

ತೊದಲುವಿಕೆಯ ನಂತರದ ಹಂತವೇ ಅನುಕರಣೆ. ಭಾಷಾಕಲಿಕೆಯಲ್ಲಿ ಅನುಕರಣೆಗೆ ಮಹತ್ವದ ಸ್ಥಾನವಿದೆ. ಅನುಕರಣೆ ಇಲ್ಲದೆ ಭಾಷಾಕಲಿಕೆ ಅಸಾಧ್ಯ. ಮಗು ಮೊದಲು ಧ್ವನಿಯನ್ನು ಉಚ್ಚರಿಸುತ್ತದೆ. ನಂತರ ಆ ಧ್ವನಿಯಿಂದ ಉತ್ತೇಜನಗೊಂಡು ಪುನಃ ಆ ಧ್ವನಿಯನ್ನೇ ಉತ್ಪತ್ತಿ ಮಾಡುತ್ತದೆ. 'ಪ' ಧ್ವನಿಯನ್ನು ಮೊದಲು ಉತ್ಪತ್ತಿ ಮಾಡಿತೆಂದರೆ ಪುನಃ ಉತ್ತೇಜಗೊಂಡು 'ಪ' ಧ್ವನಿಯನ್ನು ಉತ್ಪತ್ತಿ ಮಾಡುತ್ತದೆ. ಇದರಿಂದ 'ಪಪ' 'ಬಬ' 'ಮಮ' 'ಕಕ' ಎನ್ನುವ ಧ್ವನಿಗಳು ಪುನರಾವರ್ತನೆಗೊಳ್ಳುತ್ತವೆ. ಕೇಳುಗರಿಗೆ ಈ ಧ್ವನಿಗಳು ಶಬ್ದಗಳೇನೋ ಎನ್ನುವ ಭ್ರಮೆ ಉಂಟಾಗುತ್ತದೆ. ಹೀಗೆ ಇಂತಹ ಧ್ವನಿಗುಚ್ಛಗಳು ಪುನರಾವರ್ತನೆಗೊಂಡಾಗ ಅವುಗಳು ಶಬ್ದಗಳಷ್ಟೇ ಆಗಿ ಕೇಳದೆ ಪುಟ್ಟ ಪುಟ್ಟ ವಾಕ್ಯಗಳಂತೆ ಕೇಳುಗನಲ್ಲಿ ಭ್ರಮೆಯನ್ನುಂಟು ಮಾಡುತ್ತವೆ. ಮಗುವಿಗೆ 'ಪಪ' 'ಬಬ' 'ಮಮ' ದಂತಹ ಧ್ವನಿಗಳಿಂದ ತನ್ನ ತಂದೆ–ತಾಯಿಗಳಿಗೆ ಖುಷಿಯಾಗುತ್ತದೆ ಹಾಗೂ ತನಗೆ ಪ್ರೀತಿ ತೋರಿಸುತ್ತದೆ ಎಂದು ಭಾವಿಸಿ

ಪುನಃ ಪುನಃ ಇಂತಹ ಧ್ವನಿಗಳನ್ನು ಉತ್ಪತ್ತಿಮಾಡುತ್ತದೆ. ಮಗುವಿಗೆ ತನ್ನ ತಂದೆ-ತಾಯಿಗಳಿಂದ ಪ್ರೇರಣೆ(Reinforcement) ದೊರೆಯಲು ಪ್ರಾರಂಭಿಸಿದ ಮೇಲೆ, ಅನೇಕ ಶಬ್ದಗಳ ಉಚ್ಚಾರವನ್ನು ಮಾಡಲು ಪ್ರಾರಂಭಿಸುತ್ತದೆ. ಇದರಿಂದ ಕಲಿಕೆಗೆ ತೀವ್ರತೆಯುಂಟಾಗುತ್ತದೆ. ಈ ರೀತಿ ಉಚ್ಚರಿಸಲು ಪ್ರಾರಂಭಿಸಿದ ಅನೇಕ ಶಬ್ದಗಳು ಮುಂದೆ ಭಾಷೆಯಲ್ಲಿ ಸಹಜವಾಗಿ ಬಳಕೆಯಾಗುತ್ತವೆ. ತನ್ನ ಧ್ವನಿಗಳ ಅನುಕರಣೆಯಿಂದ ತೃಪ್ತಿಪಟ್ಟುಕೊಳ್ಳುತ್ತಿದ್ದ ಮಗು ನಿಧಾನವಾಗಿ ಬೇರೆಯವರ ಧ್ವನಿಗಳನ್ನು ಅನುಕರಿಸಲು ಪ್ರಾರಂಭಿಸುತ್ತದೆ. ಈ ರೀತಿಯ ಅನುಕರಿಸುವಿಕೆಯಿಂದ ಪ್ರಾರಂಭವಾದ ಮಗುವಿನ ಭಾಷಾ ಕಲಿಕೆ ಬೇರೆ ಬೇರೆ ಧ್ವನಿಗಳನ್ನು ಗುರುತಿಸುವ ಹಾಗೂ ಅದನ್ನು ಅರ್ಥ ಮಾಡಿಕೊಂಡು ಉಚ್ಚರಿಸುವ ಪ್ರಯತ್ನದಿಂದ ಮುಂದುವರಿಯುತ್ತದೆ.

ಒಂದು ಶಬ್ದ ವಾಕ್ಯದ ಹಂತ (Holophrastic stage) :

ಮಗು ಅರ್ಥಪೂರ್ಣವಾದ ಮೊದಲ ಶಬ್ದವನ್ನಾಡಲು ಹನ್ನೆರಡು, ಹದಿಮೂರು ತಿಂಗಳುಗಳೇ ಬೇಕಾಗುತ್ತದೆ. ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನತೆ ಇರುವ ಸಾಧ್ಯತೆ ಇರುವುದರಿಂದ ಭಾಷಾಕಲಿಕೆಯಲ್ಲಿಯೂ ಮಗುವಿನಿಂದ ಮಗುವಿಗೆ ಭಿನ್ನತೆ ಇರುತ್ತದೆ. ಕೆಲವು ಮಕ್ಕಳು ಹದಿನೆಂಟು ತಿಂಗಳಾದರೂ ಒಂದೂ ಶಬ್ದವನ್ನು ಕಲಿಯುವುದಿಲ್ಲ. ಸಾಮಾನ್ಯವಾಗಿ ಬಹುತೇಕ ಮಕ್ಕಳಿಗೆ ವರ್ಷ ತುಂಬುವ ವೇಳೆಗೆ ಸಕ್ರಿಯ, ಸಾರ್ಥಕ, ಇಚ್ಛಾನುಸಾರ ಪದಪ್ರಯೋಗಗಳನ್ನು ಮಾಡುವ ಸಾಮರ್ಥ್ಯ ದೊರೆಯುತ್ತದೆ. ಹನ್ನೆರಡರಿಂದ ಹದಿನೆಂಟು ತಿಂಗಳುಗಳ ಮಧ್ಯದ ಅವಧಿಯಲ್ಲಿ ಶಬ್ದಗಳನ್ನು ಒಂದು ಘಟಕದಂತೆ ಮಗು ಕಲಿಯುತ್ತದೆ. ದೊಡ್ಡವರ ದೃಷ್ಟಿಯಲ್ಲಿ ಮಗು ಕಲಿತಂತಹ ಇಂತಹ ಶಬ್ದಗಳ ಪ್ರಯೋಗಗಳು ಶುದ್ಧವಾಗಿರದಿದ್ದರೂ ಮಗುವಿನ ದೃಷ್ಟಿಯಲ್ಲಿ ಅಂತಹ ಪ್ರಯೋಗಗಳಿಗೆ ಬಹಳ ಬೆಲೆ ಇರುತ್ತದೆ. ದೊಡ್ಡವರು ಮಾತನಾಡಿದ ವಾಕ್ಯದಲ್ಲಿಯ ಎಲ್ಲ ಶಬ್ದಗಳನ್ನು ಮಗು ಕಲಿಯದಿದ್ದರೂ, ಅದರಲ್ಲಿಯ ಒಂದು ಘಟಕವನ್ನು ಆಯ್ಕೆಮಾಡಿಕೊಂಡು ಅದನ್ನು ಪ್ರಯೋಗಿಸಲು ಪ್ರಯತ್ನಿಸುತ್ತದೆ. ಆ ಒಂದು ಶಬ್ದ ಘಟಕವೇ ಮಗುವಿನ ದೃಷ್ಟಿಯಲ್ಲಿ ವಾಕ್ಯದ ಸಮಾನ. ಆದ್ದರಿಂದ ಮಗುವಿನ ಇಂತಹ ಭಾಷಾಕಲಿಕೆಯ ಹಂತವನ್ನು 'ಒಂದು ಶಬ್ದದ/ವಾಕ್ಯದ ಹಂತ' ಎಂದು ಕರೆಯುತ್ತಾರೆ. ಈ ರೀತಿ ಬಳಸಿದ ಒಂದೇ ಶಬ್ದದ ಮೂಲಕ ಮಗು ತನ್ನ ಪೂರ್ಣ ಅಭಿವ್ಯಕ್ತಿಯನ್ನು ಮಾಡಲು ಪ್ರಯತ್ನಿಸುತ್ತದೆ. ಮಗುವಿನ ಭಾಷೆಯ ಪ್ರಯೋಗದ ಪ್ರಥಮ ಶಬ್ದ ಹೆಚ್ಚಾಗಿ ಸಂಜ್ಞಾರೂಪದಲ್ಲಿಯೇ ಇರುತ್ತದೆ. ಈ ಶಬ್ದವನ್ನೇ ಮಗು ಮುಂದೆ ಕೆಲವು ವಸ್ತುಗಳೊಡನೆ, ಅಥವಾ ಬೇರೆ ಬೇರೆ ಸಂದರ್ಭಗಳಲ್ಲಿ ಪ್ರಯೋಗಿಸಲು ಪ್ರಾರಂಭಿಸುತ್ತದೆ.

ಮುಂದೆ ಆ ಶಬ್ದವನ್ನು ವ್ಯಕ್ತಿ ಅಥವಾ ವಸ್ತುವಿಶೇಷದ ಜೊತೆಗೆ ಜೋಡಿಸುವುದನ್ನು ಕಲಿಯುತ್ತದೆ. ಒಂದೇ ಶಬ್ದ ಪ್ರಯೋಗದ ಸ್ಥರದಲ್ಲಿ ಮಗುವಿನ ಭಾಷೆಯ ವಿಕಾಸ ಮುಖ್ಯವಾಗಿ ಎರಡು ನಿಯಮಗಳಿಂದ ನಿಯಂತ್ರಿತವಾಗಿರುತ್ತದೆ. (೧) ಸಂಕ್ಷಿಪ್ತತೆ (೨) ಪುನರುಕ್ತಿ. ಮಗು ಯಾವಾಗಲೂ ಸಣ್ಣ ಮತ್ತು ಸಂಕ್ಷಿಪ್ತವಾದ ಪದ ಪ್ರಯೋಗವನ್ನು ಮೊದಲು ಕಲಿಯುತ್ತದೆ: ನಂತರ ದೊಡ್ಡ ದೊಡ್ಡ ಪದಪ್ರಯೋಗಗಳ ಕಡೆ ಗಮನ ಕೊಡುತ್ತದೆ. ಪುನಃ ಪುನಃ ಕೇಳುವ ಸಣ್ಣ ಶಬ್ದಗಳು ಅತಿ ಬೇಗ ನೆನಪಿನಲ್ಲಿ ಉಳಿದು ಬಿಡುತ್ತವೆ ಕಲಿಕೆಯ ಹಂತದಲ್ಲಿ ಪುನರುಕ್ತಿ ಮಗುವಿಗೆ ಅತ್ಯಂತ ಅವಶ್ಯಕ. ಮೊದಲು ಹೆಚ್ಚಾಗಿ ಮಗು ನಾಮಪದಗಳನ್ನೇ ಬಳಸುತ್ತದೆ. ನಂತರ ಬಾ, ಕೊಡು ಮುಂತಾದ ಕ್ರಿಯಾಪದಗಳನ್ನೂ ಬಳಸಲು ಪ್ರಾರಂಭಿಸುತ್ತದೆ.

ಮಗು ಉಚ್ಚರಿಸುವ 'ಅಮ್ಮ' ಎನ್ನುವ ಒಂದೇ ಶಬ್ದ ಅದರ ದೃಷ್ಟಿಯಲ್ಲಿ ಒಂದು ವಾಕ್ಯದ ಕೆಲಸವನ್ನು ಮಾಡುತ್ತದೆ. **ಇವಳು ನನ್ನ ಅಮ್ಮ, ಅಮ್ಮ ಎಲ್ಲಿ?, ಅಮ್ಮ ಹಾಲನ್ನು ಕೊಡು, ಅಮ್ಮ ನನ್ನನ್ನು ಎತ್ತಿಕೋ** ಹೀಗೆ ಹಲವಾರು ಅರ್ಥಗಳು ಒಂದೇ ಶಬ್ದಕ್ಕೆ ಇರುತ್ತವೆ. ಒಂದೇ ಶಬ್ದದಿಂದ ತಾಯಿಯ ಗಮನವನ್ನು ತನ್ನೆಡೆ ಸೆಳೆಯಲು ಮಗು ಪ್ರಯತ್ನಿಸುತ್ತದೆ. ಮುಂದೆ ಬರುಬರುತ್ತ ಒಂದು ಶಬ್ದಕ್ಕಿಂತ ಹೆಚ್ಚು ಶಬ್ದಗಳನ್ನು ಬಳಸಲು ಪ್ರಾರಂಭಿಸುತ್ತದೆ.

ಸರಳ ವಾಕ್ಯಗಳ ಹಂತ (Simple sentences stag):

ಒಂದುವರೆ ವರ್ಷದಿಂದ ಎರಡು ವರ್ಷದ ವರೆಗೆ ಮಗುವಿನ ಶಬ್ದ ಭಂಡಾರದಲ್ಲಿ ತೀವ್ರ ಬೆಳವಣಿಗೆಯಾಗುತ್ತದೆ. ಎರಡು ವರ್ಷದ ಮಗು ಸರಳ ವಾಕ್ಯಗಳ ನಿರ್ಮಾಣ ಮಾಡಲು ಸಮರ್ಥವಾಗುತ್ತದೆ. ಮಗು ಭಾಷೆಯನ್ನು ಸೂಕ್ಷ್ಮವಾಗಿ ಗಮನಿಸಿ ಪ್ರಯೋಗದ ದೃಷ್ಟಿಯಿಂದ ಸಮಾನಾಂಶಗಳಾವುವು, ಭಿನ್ನಾಂಶಗಳಾವುವು ಎಂಬುದನ್ನು ಗುರುತಿಸುತ್ತದೆ. ನಿಧಾನವಾಗಿ ಭಾಷೆಯ ನಿಯಮಗಳನ್ನು ಕಲಿಯುತ್ತಾ ಹೋಗುತ್ತದೆ. ಇದೇ ಮಗುವಿನ ನಿಜವಾದ ವ್ಯಾಕರಣ ಜ್ಞಾನದ ಸಂಪಾದನೆ ಭಾಷೆಯ ಪ್ರಯೋಗದಲ್ಲಿ ಅನೇಕ ತಪ್ಪುಗಳನ್ನು ಮಾಡುತ್ತಾ, ಹಿರಿಯರಿಂದ ಆ ತಪ್ಪುಗಳನ್ನು ತಿದ್ದಿಕೊಳ್ಳುತ್ತಾ ಭಾಷಾ ಕೌಶಲ್ಯವನ್ನು ಕಲಿಯುತ್ತದೆ. ವಾಕ್ಯರಚನೆಗಳನ್ನು ಗಮನಿಸುತ್ತಾ ವಾಕ್ಯದ ಸಂದೇಶಗಳನ್ನು ಅರ್ಥಮಾಡಿಕೊಳ್ಳುತ್ತದೆ ಮತ್ತು ಬಳಸುತ್ತದೆ. ಒಂದರ್ಥದಲ್ಲಿ ಟೆಲಿಗ್ರಾಫಿಕ್ ಭಾಷೆಯ ರೀತಿಯಲ್ಲಿಯೇ ಮಗು ಸಂದೇಶಗಳನ್ನು ಹುಟ್ಟಿಸುತ್ತದೆ ಮತ್ತು ಅರ್ಥಮಾಡಿಕೊಳ್ಳುತ್ತದೆ.

ಮಗು ತನ್ನ ಮನಸ್ಸನ್ನು ಭಾಷಾಪ್ರಯೋಗದ ಕಡೆ ಸಂಪೂರ್ಣ ಕೇಂದ್ರೀಕರಿಸಿರುವುದರಿಂದ ತನ್ನಿಂದ ಉಂಟಾಗುವ ತಪ್ಪುಗಳನ್ನು ಬೇಗ ತಿದ್ದಿಕೊಂಡು ಬಿಡುತ್ತದೆ. ಸರಳವಾಕ್ಯಗಳಿಂದ ನಿಧಾನವಾಗಿ ಉದ್ದನೆಯ ವಾಕ್ಯಗಳ ಪ್ರಯೋಗವನ್ನು ಪ್ರಾರಂಭಿಸುತ್ತದೆ. ಸಣ್ಣ ಸಣ್ಣ ವಾಕ್ಯಗಳನ್ನು ಜೋಡಿಸಿ ಬಳಸುವುದನ್ನು ಮಗು ಕಲಿಯುತ್ತದೆ, ಈ ವಾಕ್ಯಗಳು ಹೆಚ್ಚಾಗಿ ಅವಧಾರಣಾತ್ಮಕ ವಾಕ್ಯಗಳಾಗಿರುತ್ತವೆ.

ಕ್ಲಿಷ್ಟ ವಾಕ್ಯಗಳ ಹಂತ (Complex sentences stage):

ನಾಲ್ಕು ಐದು ವರ್ಷದ ಮಗು ಸರಳವಾಕ್ಯಗಳ ಜೊತೆಗೆ ಕ್ಲಿಷ್ಟವಾಕ್ಯಗಳನ್ನು ಪ್ರಯೋಗ ಮಾಡುತ್ತದೆ. ಅನೇಕ ಸಂದರ್ಭದಲ್ಲಿ ಮಿಶ್ರವಾಕ್ಯಗಳ ಬಳಕೆಯನ್ನು ಮಾಡುತ್ತದೆ. ಯಾವುದೇ ಘಟನೆಯನ್ನು ವಿವರಿಸುವಾಗ ಇಂತಹ ಮಿಶ್ರವಾಕ್ಯಗಳನ್ನು ಬಳಸುವದು ಗೊತ್ತಾಗುತ್ತದೆ. ಮೊದಲು ಬಿಡಿಬಿಡಿ ವಾಕ್ಯಗಳಿಂದ ಮಾತನಾಡಲು ಪ್ರಾರಂಭಿಸಿ ನಂತರ ಆ ವಾಕ್ಯಗಳ ಸಂಯೋಜನೆಯನ್ನು ಮಾಡಲು ಕಲಿಯುತ್ತದೆ. ಉದಾ : ಪೋಲಿಸ್ ಇದ್ದ, ಬಹಳ ಜನರಿದ್ದರು, ಚೀರಾಡುತ್ತಿದ್ದರು. ಎಂದು ಒಂದು ಘಟನೆಯನ್ನು ವಿವರಿಸುತ್ತಿದ್ದ ಮಗು ಆ ವಾಕ್ಯಗಳನ್ನು ಸಂಯೋಜಿಸಿ 'ಪೋಲಿಸ್ ಠಾಣೆಯ ಹತ್ತಿರ ಬಹಳ ಜನ ಸೇರಿ ಚೀರಾಡುತಿದ್ದರು' ಎಂದು ಹೇಳುವುದನ್ನು ಕಲಿಯುತ್ತದೆ. ಮಗು ಶಾಲೆಗೆ ಹೋಗಲು ಪ್ರಾರಂಭಿಸಿದ ಮೇಲೆ ಅದರ ಭಾಷಾಕಲಿಕೆ ಹಾಗೂ ಶೈಲಿಯಲ್ಲಿ ಪರಿವರ್ತನೆಯಾಗುತ್ತದೆ. ಶಬ್ದ ಭಾಂಡಾರ ವೃದ್ಧಿಯಾಗುತ್ತಾ ಹೋಗುತ್ತದೆ. ಆರು ವರ್ಷದ ಮಗು ಭಾಷೆಯ ವ್ಯಾಕರಣ ಹಾಗೂ ವಾಕ್ಯಾರಚನೆಯಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುತ್ತದೆ. ಒಂಬತ್ತು ವರ್ಷಗಳ ನಂತರ ವಾಕ್ಯಗಳ ದೀರ್ಘತೆಯ ವೃದ್ಧಿಯಾಗುತ್ತಾ ಹೋಗಿ ನಂತರ ಮುಂದೆ ಅದು ನಿಂತು ಬಿಡುತ್ತದೆ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಶಬ್ದಕೋಶದ ಪ್ರಗತಿ ನಿರ್ದಿಷ್ಟ ವಯಸ್ಸಿನಲ್ಲಿ ನಿಂತು ಬಿಡದೇ ಜೀವನಪರ್ಯಂತ ನಡದೇ ಇರುತ್ತದೆ.

ಸಂಕಲ್ಪನಾತ್ಮಕ ವಿಕಾಸ (Conceptual Development):

ಮಗುವಿನಲ್ಲಿ ಒಂದು ವಸ್ತುವಿನಿಂದ ಮತ್ತೊಂದು ವಸ್ತುವನ್ನು ಬೇರ್ಪಡಿಸಿ ನೋಡುವ ಗುಣ ನಿಧಾನವಾಗಿ ಬೆಳವಣಿಗೆಯಾಗುತ್ತದೆ. ಮೊದಲು ಮೂರ್ತ ವಸ್ತುಗಳನ್ನು ಗುರುತಿಸುವ ಮಗು ಕ್ರಮೇಣ ಅಮೂರ್ತ ವಸ್ತುಗಳನ್ನು ಕಲ್ಪಿಸಿಕೊಳ್ಳುವಲ್ಲಿ ಸಮರ್ಥವಾಗುತ್ತದೆ. ಭಾಷೆಯಲ್ಲಿ ಬಳಕೆಯಾಗುವ ಅನೇಕ ಅಮೂರ್ತಾತ್ಮಕ ವಸ್ತು ವಿಶೇಷಗಳ ಬಿಂಬ ಮಗುವಿನ ಮಸ್ತಿಷ್ಕದಲ್ಲಿ ಮೂಡಲು ಪ್ರಾರಂಭಿಸುತ್ತದೆ. ಮೊದಲು **ಗೆಳೆಯ** ಎನ್ನುವ ಪದ ಅರ್ಥ

ವಾಗುತ್ತದೆ. ಏಕೆಂದರೆ **ಗೆಳೆಯ** ಎಂಬ ಧ್ವನಿ ಸಂಕೇತಕ್ಕೆ ಸಂವಾದಿಯಾಗಿ ಮಗುವಿನ ಎದುರಿಗೆ ಒಂದು ಚಿತ್ರ ಸ್ಪಷ್ಟವಾಗಿ ಮೂಡುತ್ತದೆ. ನಂತರ **ಗೆಳೆತನ** ಎಂಬ ಅಮೂರ್ತ ವಿಚಾರ ಮಗುವಿನ ಮನಸ್ಸಿನಲ್ಲಿ ಮೂಡಲು ಪ್ರಾರಂಭಿಸುತ್ತದೆ. **ಗೆಳೆತನ** ಎಂಬ ಪದದ ವಸ್ತು ಎದುರಿಗಿಲ್ಲದಿದ್ದರೂ ನಿಧಾನ ವಾಗಿ ಮಗುವಿನ ಮನಸ್ಸಿನಲ್ಲಿ ಅದರ ಅರ್ಥ ಮೂಡುತ್ತದೆ. ಇದನ್ನೇ ಸಂಕಲ್ಪ ನಾತ್ಮಕ ವಿಕಾಸ ಎಂದು ಕರೆಯುತ್ತಾರೆ. ಮಗುವಿನ ಭಾಷಾವರ್ತನೆಯ ಬಗ್ಗೆ ಮನೋಭಾಷಾವಿಜ್ಞಾನಿಗಳು ಇತ್ತೀಚೆಗೆ ಗಮನಹರಿಸಿದ್ದಾರೆ. ಮಗು, ಭಾಷಾ ಕಲಿಕೆಯ ಹಂತದಲ್ಲಿ ತನಗೆ ತಾನೆ ಸ್ವಗತಸಂಭಾಷಣೆಗೆ ತೊಡಗುವುದನ್ನು ಸ್ವಕೇಂದ್ರೀಕೃತ ಭಾಷಾ (Egocentric speech) ಕಲಿಕೆ ಎಂದು ವಿವರಿಸಿ ದ್ದಾರೆ. ಈ ರೀತಿ ಬಳಸುವ ಭಾಷೆಯಿಂದ ಮಗುವಿನ ಭಾಷಾಕಲಿಕೆಯಲ್ಲಿ ತೀವ್ರ ಪ್ರಗತಿಯಾಗುತ್ತದೆ. ಈ ರೀತಿಯ ಸ್ವಕೇಂದ್ರಿಕೃತ ಭಾಷಾಕಲಿಕೆ ಮಗುವಿಗಷ್ಟೇ ಸೀಮಿತವಾಗಿರದೆ ದೊಡ್ಡವರಲ್ಲಿಯೂ ಅಂತರಂಗದ ಭಾಷೆ (Inner speech)ಯಾಗಿ ಸದಾ ಭಾಷಾಬೆಳವಣಿಗೆಗೆ ಪೋಷಕವಾಗಿರುತ್ತದೆ ಎಂಬುದನ್ನು ನಾವು ನೋಡಬಹುದು. ಭಾಷಾಕಲಿಕೆ ಎಂಬುದು ಮನುಷ್ಯನಲ್ಲಿ ನಡೆಯುವ ಒಂದು ನಿರಂತರ ಪ್ರಕ್ರಿಯೆ. ಮಗುವಿನ ಭಾಷಾಕಲಿಕೆಯ ವಿವಿಧ ಹಂತಗಳು ವ್ಯಕ್ತಿಯ ಭಾಷಾಕಲಿಕೆಯ ಚಿತ್ರವನ್ನು ನೀಡುವುದರ ಜೊತೆಗೆ ಹೊಸ ಜಗತ್ತನ್ನೇ ನಮ್ಮ ಮುಂದೆ ತೆರೆದಿಡುತ್ತವೆ.

ಸಹಾಯಕ ಗ್ರಂಥಗಳು, ಲೇಖನಗಳು

Bloom, Lois 1970) *Language Development, Form and Function in Emerging Grammars*

Girija Devi A (1986) Child Phonology-A prosodic View – *Proceedings of the Thirteenth All India Conference of Dravidian Linguists* Tamil University Thanjavur

ಮಹೇಶ್ವರಯ್ಯ ಹೆಚ್. ಎಂ. (1984) ಮಗು ಮತ್ತು ಭಾಷೆ **ಸುಧಾ** ವಾರಪತ್ರಿಕೆ, ಬೆಂಗಳೂರು.

ಸಂಸ್ಕಾರಗಳು: ಜ್ಞಾನದೀಕ್ಷೆ ಮತ್ತು ಇಷ್ಟಲಿಂಗ ಧಾರಣೆ

(ತೌಲನಿಕ ಅಧ್ಯಯನ)

● ವಿಲ್ಯಂ ಮಾಡ್ತ

ಸ್ವಭಾವತಃ ಪರಾವಲಂಬಿ (*Ens ab alio*) ಯಾಗಿರುವ ಮಾನವನ ಸ್ಥಿಲ ಅಂತಃಸ್ತರ (Depth–dimension), ಸ್ವಯಂಭೂ ಲಿಂಗ (*Ens a Se*)/ ಪರಮಾತ್ಮ. ಪರಮಾತ್ಮನ ಬಹಿರ್ಮುಖೀ ಅಭಿವ್ಯಕ್ತಿಯಾಗಿರುವ ಸೃಷ್ಟಿಯಲ್ಲಿ ಆತನ ಬಹಿಃಸ್ತರವಾಗಿ (Surface–dimension) ಮಾನವನ ಸ್ಥಾನಮಾನ. ಅಸ್ತಿತ್ವ (Being) ದ ಈ ಎರಡು ಸ್ತರಗಳ ಸಾಮರಸ್ಯ (Integration) ಮಾನವನ ಪ್ರಜ್ಞಾಪಾತಳಿ (Consciousness) ಯಲ್ಲಿ ನಡೆದಾಗ ಅದು ಆತನ ಜೀವನದ ಸಾರ್ಥಕತೆ (*Raison d'etre*) ಯಾಗಿ/ ಮುಕ್ತಿ (Liberation/Salvation) ಯಾಗಿ ಪರಿಣಮಿಸುತ್ತದೆ.

ಈ ಲಿಂಗಾಂಗ ಸಾಮರಸ್ಯದ ಅನುಭಾವ (Depth experience) ಪಡೆದುಕೊಳ್ಳಲು ಪ್ರತಿಯೊಂದು ಸಾಮಾಜಿಕ ಧರ್ಮ (Religion) ಕೆಲವೊಂದು ಸಂಕೇತ (Symbol) ಗಳನ್ನು ಕಲ್ಪಿಸಿಕೊಟ್ಟು ಅವುಗಳನ್ನು ವಿಶಿಷ್ಟ ವಿಧಿಕ್ರಿಯೆ (Rite/Ritual)ಗಳ ಮೂಲಕ ತಮ್ಮ ಆಧ್ಯಾತ್ಮಿಕ ವಿಕಾಸದ ವಿವಿಧ ಹಂತಗಳಲ್ಲಿ ಧಾರ್ಮಿಕವಾಗಿ ಆಚರಿಸಲು ಅವಕಾಶ ಕಲ್ಪಿಸಿಕೊಡುತ್ತದೆ. **ಈ ವಿಶಿಷ್ಟ ವಿಧಿಯಾತ್ಮಕ ಧಾರ್ಮಿಕ ಸಂಕೇತಗಳನ್ನು ಸಂಸ್ಕಾರ** (Sacrament) **ಗಳೆಂದು ಪಾರಿಭಾಷಿಕವಾಗಿ ಕರೆಯುತ್ತಾರೆ.** ಈ ಕಾರಣದಿಂದಾಗಿ ವಿಧಿಕ್ರಿಯೆಗಳೆಲ್ಲವನ್ನೂ ಸಂಸ್ಕಾರಗಳೆಂದು ಕರೆಯುವುದು ಪಾರಿಭಾಷಿಕ ದೃಷ್ಟಿಯಿಂದ ತಪ್ಪಾಗುತ್ತದೆ.

ಧಾರ್ಮಿಕ ಸಂಸ್ಕಾರಗಳು (Sacraments of Faith) ಆಯಾಯ ಧರ್ಮದ ಪರಂಪರೆಯಲ್ಲಿ ವಿಶಿಷ್ಟವಾದ ಇತಿಹಾಸ ಹಾಗೂ ಅರ್ಥವನ್ನು ಪಡೆದುಕೊಳ್ಳುತ್ತವೆಯಾದರೂ ಅವುಗಳಿಗೆಲ್ಲ ತಳಪ್ರಾಯವಾದ ಒಂದು ಸಾಮಾನ್ಯ ಸ್ತರ ಇದ್ದೇ ಇರುತ್ತದೆ. ಧರ್ಮಗಳ ತೌಲನಿಕ ಅಧ್ಯಯನ(Comparative Religious Studies)ದಲ್ಲಿ ಈ ಸಾಮಾನ್ಯ ಸ್ತರ (Universal dimension) ದ ಅರಿವು ಅತ್ಯಗತ್ಯ. ತಾವು ಒಪ್ಪಿಕೊಂಡ ಸಂಸ್ಕಾರಗಳ

ಸಂಖ್ಯೆ ವಿಭಿನ್ನ ಧರ್ಮಗಳಲ್ಲಿ ವಿಭಿನ್ನವಾಗಿರುತ್ತದೆ. ಉದಾಹರಣಾರ್ಥವಾಗಿ ಕಥೋಲಿಕ ಕ್ರೈಸ್ತ ಧರ್ಮ ಸಭೆ: (೧) ಜ್ಞಾನದೀಕ್ಷೆ(Baptism), (೨) ದೃಢೀಕರಣ (Confirmation), (೩) ಸಾಮರಸ್ಯ (Reconciliation), (೪) ರೋಗಿ ಅಭ್ಯಂಜನ (Anointing of the sick), (೫) ವಿವಾಹ (Marriage), (೬) ಗುರುದೀಕ್ಷೆ (Holy Orders) ಮತ್ತು (೭) ಕ್ರಿಸ್ತ ಭೋಜನಾ ವಿಧಿ (Eucharist) ಎಂಬ ಸಪ್ತ ಸಂಸ್ಕಾರಗಳನ್ನು ಒಪ್ಪಿಕೊಂಡಿದೆ. ಇವುಗಳಲ್ಲಿ ಜ್ಞಾನದೀಕ್ಷೆ ಹಾಗೂ ಕ್ರಿಸ್ತಭೋಜನಾ ವಿಧಿ ಪ್ರಮುಖವಾದವುಗಳು; ಉಳಿದವುಗಳು ಇವುಗಳ ವಿಸ್ತೃತ ಸ್ವರೂಪ (Extension) ಗಳೆಂದರೆ ತಪ್ಪಾಗಲಾರದು. ಕಾರಣ, ಸರ್ವ ಕ್ರೈಸ್ತ ಸಭೆಗಳಲ್ಲಿ ಈ ಎರಡು ಸಂಸ್ಕಾರಗಳಿಗೆ ಮಾನ್ಯತೆ ಇದೆ. ಇದೇ ರೀತಿಯಲ್ಲಿ ವೀರಶೈವರಲ್ಲಿ ಲಿಂಗಧಾರಣ, ಲಿಂಗದೀಕ್ಷೆ, ವಿವಾಹ ಮತ್ತು ಅಂತ್ಯೇಷ್ಟಿಗಳಿಗೆ ಉಚಿತವಾದ ಸಂಸ್ಕಾರದ ಸ್ಥಾನವಿದೆ. ಇವುಗಳಲ್ಲಿ ಲಿಂಗಧಾರಣ ಅತ್ಯಂತ ಪ್ರಮುಖವೆಂದರೆ ತಪ್ಪಾಗಲಾರದು.

ಪ್ರಸ್ತುತ ಅಧ್ಯಯನ, ಕ್ರೈಸ್ತ ಮತ್ತು ವೀರಶೈವಗಳ ಜ್ಞಾನದೀಕ್ಷೆ ಹಾಗೂ ಇಷ್ಟಲಿಂಗಧಾರಣ ಸಂಸ್ಕಾರಗಳಿಗೆ ಮಾತ್ರ ಸೀಮಿತವಾಗಿದೆ. ಈ ಎರಡು ಸಂಸ್ಕಾರಗಳ ಬಗೆಗೆ ಯಾವ ಆಕ್ಷೇಪಣೆಯೂ ಇರಲಿಕ್ಕಿಲ್ಲವೆಂಬ ಭಾವನೆಯೇ ಇದಕ್ಕೆ ಮೂಲ ಕಾರಣ. ಅಷ್ಟೇ ಅಲ್ಲದೆ, ಈ ಸಂಸ್ಕಾರ ಆಯಾಯ ಧರ್ಮದಲ್ಲಿ ಅತ್ಯಂತ ಪ್ರಾಥಮಿಕ ಹಾಗೂ ಅನಿವಾರ್ಯ.

೧.೦ ಜ್ಞಾನದೀಕ್ಷಾ ಸಂಸ್ಕಾರ

೧.೧ ಪ್ರಾಸ್ತಾವಿಕ :

ಕ್ರೈಸ್ತ ಧರ್ಮಸಭೆ (People of God) ಯಲ್ಲಿ ತನ್ನ ಸದಸ್ಯರಿಗೆ ನೀಡಲಾಗುವ ಪ್ರಪ್ರಥಮ ಸಂಸ್ಕಾರವೆಂದರೆ ಜ್ಞಾನದೀಕ್ಷೆ (*Baptisma* (Lat.)/ *Baptein*/*Baptizein* (Gk). ಇದರ ಶಬ್ದಾರ್ಥ: 'ಮುಳುಗು/ಮುಳುಗಿಸು (ತೊಳೆ)'. ಯೇಸುಕ್ರಿಸ್ತ ತಾನು ಪಡೆದುಕೊಂಡ ಅನುಭಾವದ ಫಲವಾಗಿ ಆರಂಭಿಸಿದ ಧಾರ್ಮಿಕ ಆಂದೋಲನದಲ್ಲಿ ಅರ್ಥಾತ್ ಮಾನವನ ಸಮಗ್ರ ವಿಮೋಚನಾ ಕಾರ್ಯ (Liberative praxis) ದಲ್ಲಿ ಸಂಪೂರ್ಣವಾಗಿ ಕ್ರಿಯಾಶೀಲನಾಗಲು ಆತ ನೀಡುವ ಆಮಂತ್ರಣ (Invitation) ಹಾಗೂ ದೀಕ್ಷೆ (Initiation)ಯೇ ಜ್ಞಾನದೀಕ್ಷಾ ಸಂಸ್ಕಾರವೆಂಬುದು ಕ್ರೈಸ್ತ ನಿಲುವು. ಯೇಸುಕ್ರಿಸ್ತ, ಆಂತರಿಕ ಪರಿವರ್ತನೆ (*Metanoia*) ಹಾಗೂ ಸಾಮರಸ್ಯ (Integration through Reconciliation) ಗಳನ್ನು ಕುರಿತು ಪದೇ ಪದೇ ಹೇಳುತ್ತಿದ್ದರೂ (ಯೋಹಾ 3.5+) ತಾನು ಸ್ವತಃ ಅವು

ಗಳ ಸಂಕೇತವೆನಿಸಿಕೊಂಡ ಜ್ಞಾನದೀಕ್ಷೆಯನ್ನು ದೀಕ್ಷಾವಿಧಿ (Initiation rite)ಯನ್ನಾಗಿ ಯಾರಿಗೂ ಕೊಟ್ಟ ಸ್ಪಷ್ಟ ಉಲ್ಲೇಖವಿಲ್ಲ. ಸುವಾರ್ತೆ (Gospel) ಗಳಲ್ಲಿಯೂ ಈ ದೀಕ್ಷೆಯನ್ನು ಕುರಿತ ಉಲ್ಲೇಖಗಳು ಕೆಲವೇ ಕೆಲವು. ಅಷ್ಟೇ ಅಲ್ಲದೆ ಸಂಸ್ಕಾರ (Sacrament) ಎಂಬ ಪದ ಪಾರಿಭಾಷಿಕ ವಾಗಿ ಹೊಸ ಒಡಂಬಡಿಕೆ (NT) ಯಲ್ಲಿ ಬಳಕೆಯಾಗಿಲ್ಲ (Boyd, 327).

ವಸ್ತುಸ್ಥಿತಿ ಹೀಗಿದ್ದರೂ ಯೇಸುವಿನ ಶಿಷ್ಯಂದಿರಿಂದ ಹಿಡಿದು, (ಯೋಹಾ 4.1–3+, ಅಕ್ರ 2·38+) ಇಂದಿನ ವರೆಗೂ ಜ್ಞಾನದೀಕ್ಷೆ ಸಂಸ್ಕಾರವಾಗಿ ಕ್ರೈಸ್ತ ಧರ್ಮಸಭೆಯಲ್ಲಿ ಸಮಗ್ರವಾಗಿ ಬೇರೂರಿ ನಿಂತಿದೆ. ಮಾನವನ ದೈವೀ ಕರಣಕ್ಕೆ ಈ ಸಂಸ್ಕಾರ ಅತ್ಯಗತ್ಯ (ಯೋಹಾ 3.5; ಯೇಸು ತನ್ನ ಶಿಷ್ಯಂದಿರ ಮೂಲಕ ಜ್ಞಾನದೀಕ್ಷೆ ಕೊಡಿಸುತ್ತಿದ್ದನು (3.22, ೪.೨) ಮಾತ್ರವಲ್ಲದೆ ಹೀಗೆ, ಮಾಡಲು ಅಪ್ಪಣೆಯನ್ನಿತ್ತನು (ಮತ್ತಾ 28·19) ಎಂಬ ಕ್ರೈಸ್ತ ನಂಬಿಕೆ ಗಳಲ್ಲದೆ (Boyd 327-8, 333) ಯೆಹೂದಿ (ವಿಮೋ ೪೦.೧೨; ಯಾಜ 8·6 13.6; 14.4–9, 16 4, 24; ಎಸ್ರ 36·24–28; QS, 6·15f, 3.4–9; ಮತ್ತಾ 3·6; ಅಕ್ರ 1·5) ಹಾಗೂ ಅನ್ಯ (Pagan) ಧರ್ಮಗಳ ದೀಕ್ಷಾಸ್ನಾನ ವಿಧಿ ಕ್ರಿಯೆಗಳು ಪ್ರಸ್ತುತ ಕ್ರೈಸ್ತ ಸಂಸ್ಕಾರಕ್ಕೆ ಪ್ರೇರಕವಾಗಿರ ಬಹುದು ಎಂಬುದು ನನ್ನ ವೈಯಕ್ತಿಕ ಅನಿಸಿಕೆ.

೧.೨ **ಜ್ಞಾನದೀಕ್ಷಾ ಸಂಸ್ಕಾರದ ರಚನಾ ನಿರೂಪಣೆ** (Syntactics) :

ವಯಸ್ಕರಿಗೆ ಜ್ಞಾನದೀಕ್ಷೆ ಕೊಡುವ ಮೊದಲು ಪೂರ್ವಭಾವಿ ಸಿದ್ಧತೆಯಾಗಿ ದೀರ್ಘಕಾಲದ ಗುರೂಪದೇಶ (Catechetical preparation) ಇರು ತ್ತದೆಯಲ್ಲದೆ (ಇಬ್ರಿ ೬.೨) ಅವರು ವಿಶೇಷವಾಗಿ ಜಪತಪಗಳಿಂದ ಸಿದ್ಧರಾಗಿ ತಮ್ಮ ಸದಿಚ್ಛೆಯನ್ನು/ವಾಗ್ದಾನವನ್ನು ಧರ್ಮ ಗುರುವಿಗೆ ತಿಳಿಸಬೇಕಾಗುತ್ತದೆ. ಕ್ರೈಸ್ತ ಸಂಪ್ರದಾಯದಲ್ಲಿ ಪುರಾತನ ಕಾಲದಿಂದಲೂ ಕ್ರೈಸ್ತ ದಂಪತಿಗಳಿಗೆ ಹುಟ್ಟಿದ ಎಳೆಯ ಮಕ್ಕಳಿಗೆ ಜ್ಞಾನದೀಕ್ಷೆ ನೀಡುವ ಪರಂಪರೆಯೂ ಇದೆ (Rahner 69; Boyd 337).

ಪ್ರಸ್ತುತದಲ್ಲಿ ಕಥೋಲಿಕ ಕ್ರೈಸ್ತ ಸಂಪ್ರದಾಯದಲ್ಲಿಯ ಜ್ಞಾನದೀಕ್ಷಾ ಸಂಸ್ಕಾರದ ರಚನಾಂಗಗಳನ್ನು ಕ್ರಮವಾಗಿ ನಿರೂಪಿಸಲಾಗಿದೆ :

೧. **ಸೂಕ್ತ ಬೈಬಲ್ ವಾಚನ:** ಬೈಬಲಿನಿಂದ ಅದರಲ್ಲಿಯೂ ಹೊಸ ಒಡಂಬ ಡಿಕೆ (NT) ಯಿಂದ ಸಂದರ್ಭೋಚಿತವಾದ ಭಾಗವನ್ನು ಭಕ್ತಿಯಿಂದ ಓದು ತ್ತಾರೆ. (ಉದಾ: ಮಾರ್ಕ 1·9–11, 10·13–16; ಯೋಹಾ 3·5;

ಮತ್ತಾ 28.13–16 ಇತ್ಯಾದಿ). ಬಳಿಕ ಈ ವಾಚನವನ್ನು ಆಧರಿಸಿ ಧರ್ಮಗುರು ಪ್ರವಚನ ನೀಡುತ್ತಾನೆ.

೨. ಪ್ರಾರ್ಥನೆ: ಜ್ಞಾನದೀಕ್ಷೆ ಪಡೆಯುವ ಮಗುವಿನ ಹೆತ್ತವರು ಮಗುವಿನ ಆಧ್ಯಾತ್ಮಿಕ ಬೆಳವಣಿಗೆಯಲ್ಲಿ ವಿಶೇಷ ಜವಾಬ್ದಾರಿ ಹೊಂದಿರಬೇಕು. ಇದಕ್ಕಾಗಿ ದೈವೀಕೃಪೆ (Grace) ಅತ್ಯಗತ್ಯ. ಈ ಕೃಪೆಗೋಸ್ಕರ ಸಂತಭಕ್ತರ (Saints) ಮೂಲಕ ದೇವರಿಗೆ ಸಾಮೂಹಿಕ ಪ್ರಾರ್ಥನೆಯನ್ನು ಸಲ್ಲಿಸುತ್ತಾರೆ.

೩. ದುಷ್ಟಶಕ್ತಿಗಳ ಉಚ್ಚಾಟನಾ ಮಂತ್ರ (*Prayer of Exorcism*): ಅವಿದ್ಯೆ (Original sin) ಮತ್ತಿತರ ದುಷ್ಟ ಪ್ರಭಾವಗಳಿಂದ ಮಗುವನ್ನು ಪಾರು ಮಾಡಬೇಕೆಂದು ದೇವರಲ್ಲಿ ಮೊರೆಯಿಡುತ್ತಾರೆ.

೪. ಉಪದೇಶಿ ತೈಲ (*Oil of Catechumens*) **ದಿಂದ ಅಭ್ಯಂಜನ:** ಕ್ರೈಸ್ತ ಅಭ್ಯರ್ಥಿಗಳಿಗಾಗಿ ಮಂತ್ರಿಸಿದ ತೈಲದಿಂದ ಮಗುವಿನ ಅಭ್ಯಂಜನವಾಗುತ್ತದೆ.

೫. ಜ್ಞಾನದೀಕ್ಷಾ ಸ್ನಾನ:

(ಅ) ಜ್ಞಾನದೀಕ್ಷಾ ಸ್ನಾನಕ್ಕೆ ತೀರ್ಥವನ್ನು (ಶುದ್ಧ ಜಲವನ್ನು ಮಂತ್ರಿಸಿ) ಸಿದ್ಧಗೊಳಿಸುವುದು;

(ಆ) ಸೈತಾನ (Satan) ನ ಉಚ್ಚಾಟನೆ;

(ಇ) ಕ್ರೈಸ್ತ ವಿಶ್ವಾಸದ ಬಹಿರಂಗ ಸಾಮೂಹಿಕ ಘೋಷಣೆ

(ಉ) ಹೆತ್ತವರ ಮತ್ತು ಧರ್ಮೀಯ ಪಿತೃಗಳ (God parents)[1] ಒಪ್ಪಿಗೆಯನ್ನು ಪಡೆದುಕೊಂಡು ಮಗುವಿನ ಹೆಸರನ್ನು ಉಚ್ಚರಿಸಿ ಅದರ ಹಣೆಯ ಮೇಲೆ ತ್ರಯೇಕ ದೇವ (Triune God) ನ ಪಿತ, ಸುತ, ಪವಿತ್ರಾತ್ಮನ ಹೆಸರಿನಲ್ಲಿ ಮೂರು ಸಲ ತೀರ್ಥಧಾರೆಯನ್ನು ಎರೆಯುವುದು (Affusion) ಅಥವಾ ನೀರಿನಲ್ಲಿ ಮುಳುಗಿಸಿ ತೆಗೆಯುವುದು (Immersion) ಅಥವಾ ನೀರನ್ನು ಚಿಮುಕಿಸುವುದು (Aspersion).

೬. ಪವಿತ್ರಾಭ್ಯಂಜನ: ವಿಶೇಷವಾಗಿ ಮಂತ್ರಿಸಿದ ತೈಲದಿಂದ ಕ್ರೈಸ್ತ ಮಗುವನ್ನು ಅಭ್ಯಂಜಿಸುವುದು.

---

೧. ಮಗುವನ್ನು ಕ್ರಿಸ್ತಶರಣ/ಶರಣೆಯನ್ನಾಗಿ ಬೆಳೆಯಿಸುವ ಜವಾಬ್ದಾರಿ ಪ್ರಪ್ರಥಮವಾಗಿ ಹೆತ್ತವರದ್ದು. ಯಾವುದೇ ಕಾರಣದಿಂದಾಗಿ ಇದರಲ್ಲಿ ಅವರು ವಿಫಲರಾದಾಗ ಕ್ರೈಸ್ತ ಧರ್ಮಸಭೆಯ ವತಿಯಿಂದ ಆ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಧರ್ಮೀಯ ಪಿತೃಗಳ ವ್ಯವಸ್ಥೆ ಇರುತ್ತದೆ.

೭. ಶುಭ್ರ ವಸ್ತ್ರ ಧಾರಣೆ: ಶುಭ್ರವಾದ ಬಿಳಿಯ ಬಟ್ಟೆಯನ್ನು ಕ್ರೈಸ್ತ ಮಗುವಿಗೆ ಉಡಿಸುವುದು.

೮. **ಮೇಣದ ಬತ್ತಿಯನ್ನು ಉರಿಸುವುದು: ಮೇಣದ** ಬತ್ತಿ (Candle) ಯೊಂದನ್ನು ಉರಿಸಿ ಕ್ರೈಸ್ತ ಮಗುವಿನ ಕೈಯಲ್ಲಿ ಗುರು ಕೊಡುತ್ತಾನೆ. ಆ ಬತ್ತಿಯನ್ನು ಹೆತ್ತವರೂ ಧರ್ಮೀಯ ಪಿತೃಗಳೂ ಹಿಡಿದುಕೊಳ್ಳುತ್ತಾರೆ.

೯. **ಕಿವಿ ಬಾಯಿಗಳಲ್ಲಿ ಮಂತ್ರೋಚ್ಚಾರಣೆ:** ಗುರು, ಕ್ರೈಸ್ತ ಮಗುವಿನ ಕಿವಿಯಲ್ಲಿಯೂ ಬಾಯಿಯಲ್ಲಿಯೂ, ತನ್ನ ಬಾಯಿಯನ್ನು ಸಮೀಪಿಸಿ, ಮಂತ್ರೋಚ್ಚಾರಣೆ ಮಾಡುತ್ತಾನೆ.

೧೦. **ಜ್ಞಾನದೀಕ್ಷಾ ಹಾಡು:** ಜ್ಞಾನದೀಕ್ಷೆಯ ಅರ್ಥವನ್ನು ಸ್ಫುಟಗೊಳಿಸುವ ಹಾಡನ್ನು ನೆರೆದವರೆಲ್ಲರೂ ಸಂತೋಷದಿಂದ ಲಯಬದ್ಧವಾಗಿ ಹಾಡುತ್ತಾರೆ.

೧೧. **"ಪರಲೋಕದಲ್ಲಿರುವ ನಮ್ಮ ತಂದೆಯೇ" ಮಂತ್ರವನ್ನು ಜಪಿಸುವುದು:** ನೆರೆದವರೆಲ್ಲರೂ ದೀಕ್ಷೆ ಪಡೆದ ಮಗುವಿನೊಂದಿಗೆ ತಾವೆಲ್ಲರೂ ಒಂದೇ ತಂದೆಯ–ದೇವರ–ಮಕ್ಕಳೆಂದು ಈ ಜಪದ ಮೂಲಕ ಸಾರುತ್ತಾರೆ.

೧೨. **ಆಶೀರ್ವಾದ:** ನೆರೆದವರೆಲ್ಲರನ್ನೂ ಗುರು ತ್ರಯೇಕದೇವನ ಹೆಸರಿನಲ್ಲಿ ಆಶೀರ್ವದಿಸುತ್ತಾನೆ. ಇಲ್ಲಿಗೆ ಜ್ಞಾನಸ್ನಾನಸಂಸ್ಕಾರದ ವಿಧಿಕ್ರಿಯೆ ಮುಗಿಯುತ್ತದೆ.

ಸಾಮಾನ್ಯವಾಗಿ ಜ್ಞಾನದೀಕ್ಷೆಯನ್ನು ಕ್ರೈಸ್ತ ದೇವಾಲಯದೊಳಗೆ ಸಾಮೂಹಿಕ ಉಪಾಸನೆ (Liturgy)ಯ ಸಂದರ್ಭದಲ್ಲಿ, ಕ್ರೈಸ್ತ ವಿಶ್ವಾಸಿಗಳ ಸಮ್ಮುಖದಲ್ಲಿ, ಧರ್ಮಗುರು ನೆರವೇರಿಸುತ್ತಾನೆ. ಆದರೆ ಕೆಲವೊಂದು ಅನಿವಾರ್ಯ ಪ್ರಸಂಗಗಳಲ್ಲಿ ಕ್ರಿಸ್ತನಲ್ಲಿ ನಂಬಿಕೆಯುಳ್ಳ ಯಾವುದೇ ವ್ಯಕ್ತಿ ಶುದ್ಧ ಜಲವನ್ನು ಬಳಸಿ ನೇರವಾಗಿ ೫(ಉ) ಹಂತಕ್ಕೆ ವಿಧಿಕ್ರಿಯೆಯನ್ನು ಸೀಮಿತಗೊಳಿಸಿ ಪ್ರಸ್ತುತ ಸಂಸ್ಕಾರವನ್ನು ಕೊಡಬಹುದು. ಈ ಕಾರಣದಿಂದಾಗಿ ಈ ಸಂಸ್ಕಾರದ ವಿಧಿಕ್ರಿಯೆ ನೆರವೇರಿಸಲು ಗುರುವರ್ಗ (Clerics) ದವರು ಅತ್ಯವಶ್ಯಕವಲ್ಲ.

ಜ್ಞಾನದೀಕ್ಷೆ ಪಡೆದ ಮಗುವಿನ ಹೆಸರು, ಜನನ ದಿನಾಂಕ, ದೀಕ್ಷೆಯ ದಿನಾಂಕ; ಹೆತ್ತವರ ಹಾಗೂ ಧರ್ಮೀಯ ಪಿತೃಗಳ ಹೆಸರು ಇತ್ಯಾದಿ ಮಾಹಿತಿಗಳನ್ನು ವಿಚಾರಣೆಯ ಗುರುಗಳು (Parish Priest) ದಾಖಲೆ ಮಾಡಿಕೊಳ್ಳುತ್ತಾರೆ. ಆ ವಿಚಾರಣೆಗೆ ಸೇರಿದ ಪ್ರತಿಯೊಬ್ಬ ಕ್ರೈಸ್ತನ ಮಾಹಿತಿಯ ದಾಖಲೆ (Documentation) ಅಲ್ಲಿರುತ್ತದೆ.

ಕೆಲವೊಂದು ಸಂಪ್ರದಾಯದಲ್ಲಿ ಜ್ಞಾನದೀಕ್ಷೆ ಪಡೆದ ಮಗುವನ್ನು ಅದರ ತಾಯಿ ಪೂಜಾ ಪೀಠ (Altar)ದ ಅಥವಾ ದೇವಮಾತೆಯ ಪೀಠದ ಬಳಿ ಇಟ್ಟು

ದೇವಮಾತೆಗೆ ಅದನ್ನು ಸಮರ್ಪಿಸಿ ಅದನ್ನು ಕ್ರಿಸ್ತನಂತೆ ಬೆಳೆಯಿಸಿಕೊಳ್ಳಬೇಕೆಂದು ಪ್ರಾರ್ಥಿಸುತ್ತಾಳೆ. ಆ ಬಳಿಕ ಸಾಂಕೇತಿಕವಾಗಿ ಆ ಮಗುವನ್ನು ಅಲ್ಲಿಯೇ ಬಿಟ್ಟು ಹೊರಟುಹೋಗುತ್ತಾಳೆ. (ಧರ್ಮಿಯ ತಾಯಿ ಅಥವಾ ಬೇರೊಬ್ಬರು ಮಗುವನ್ನು ಎತ್ತಿಕೊಂಡು ಮಗುವಿನ ಮನೆಗೆ ತೆರಳುತ್ತಾರೆ.)

೧.೩ ಜ್ಞಾನದೀಕ್ಷಾಸಂಸ್ಕಾರದ ಅರ್ಥನಿರೂಪಣೆ(*Semantics*) :

ಸಂಕೇತ ವಿಜ್ಞಾನ (Semiotics) ದ ಪರಿಭಾಷೆಯಲ್ಲಿ ಹೇಳುವುದಾದರೆ ಜ್ಞಾನದೀಕ್ಷೆ ಅನೇಕ ಅರ್ಥಗಳನ್ನು (Significates/*Significata*) ಅಭಿವ್ಯಕ್ತಗೊಳಿಸುವ ಧಾರ್ಮಿಕ ಸಂಕೇತ (Significant/*Signifie*).

ದೀಕ್ಷಾಭ್ಯರ್ಥಿ(Catechumen)ತನ್ನ ಸ್ವಾಭಾವಿಕವಾದ ಸ್ವಕೇಂದ್ರೀಯ ಪ್ರಜ್ಞೆಗೆ (Ego–centric consciousness) ಸತ್ತು (Dying : ಮತ್ತಾ 10·39; ಮಾರ್ಕ 8·35; ಲೂಕ 9·24; ಯೋಹಾ 12·23–25; ರೋ.6.3–5; ಎಫೆ 2·4–6; 4 ತಿಮೊ 2·11), ಕ್ರಿಸ್ತ–ಕೇಂದ್ರೀಯ ಪ್ರಜ್ಞೆ (Christo–centric consciousness) ಯಲ್ಲಿ ಎಳಬೇಕು. Rising) ರೋ 6·11-14; ಎಫೆ 3·16–19; ಕೊಲೊ 3·1; ಫಿಲಿ 3·10–12) 'ಸತ್ತೇಳುವ' ಅನುಭಾವದಿಂದಾಗಿ ಭವಿ (Natural man), ಭಕ್ತ (Spiritual man) ನಾಗುತ್ತಾನೆಯಾದುದರಿಂದ ಈ ಸಂಸ್ಕಾರದಿಂದ ಆತ ಎರಡನೆಯ ಜನ್ಮ ಪಡೆಯುತ್ತಾನೆ, ದ್ವಿಜನಾಗುತ್ತಾನೆ (ಯೋಹಾ 3.5).

ಭಕ್ತನ ಪ್ರಸ್ತುತ ರೂಪಾಂತರ(Radical change/*Metanoia*) ಕ್ರಿಸ್ತನ ದಿವ್ಯಶಕ್ತಿ (Holy Spirit) ಯ ಮೂಲಕ ನಡೆಯುತ್ತದೆಯಾದರೂ ಸ್ವತಂತ್ರನಾಗಿರುವ ವ್ಯಕ್ತಿ ತನ್ನ ವಿಶ್ವಾಸ[೨] (Faith : ಅಕ್ಟ ೮.೩೭; Rahner 69) ದ ಮೂಲಕ ತನ್ನನ್ನೇ ತಾನು ತೆರೆದಿಟ್ಟುಕೊಳ್ಳಬೇಕಾಗುತ್ತದೆ (Open to Grace); ದಿವ್ಯಶಕ್ತಿಯನ್ನು ಆಹ್ವಾನಿಸಬೇಕಾಗುತ್ತದೆ. ಕಾರಣ ಜ್ಞಾನದೀಕ್ಷೆ–ಅಂತೆಯೇ ಯಾವುದೇ ಇತರ ಸಂಸ್ಕಾರ–ಭಾನಾಮತಿ (Magical /*Ex opere operato*/Automatic) ಕ್ರಿಯೆಯಲ್ಲ (Smyth, 254, 25[illegible]; Rahner 70, 73; Leon-Dufour) 43). ಜ್ಞಾನದೀಕ್ಷೆಯು ಸಂಸ್ಕಾರ, ಮಾನವನ ಆಧ್ಯಾತ್ಮಿಕ ವಿಕಾಸದಲ್ಲಿ ಆಗಬೇಕಾದ, ಮೇಲೆ ಪ್ರಸ್ತಾಪಿಸಲಾದ ಮೂಲಭೂತ ಪರಿವರ್ತನೆಯ[೩] ಸಂಕೇತ ಹಾಗೂ ಅದಕ್ಕಾಗಿ ನೀಡುವ ಕರೆ.

---

೨. 'ವಿಶ್ವಾಸ'ವೆಂದರೆ ಅಹಂಕೇಂದ್ರೀಯರಹಿತ ಅರ್ಥಾತ ಕ್ರಿಸ್ತಕೇಂದ್ರೀಯವಾದ ಮನೋಧರ್ಮ ಹಾಗೂ ಜೀವನ ಶೈಲಿ (ರೋ 3.27; ಎಫೆ 2.9).

೩. ಪರಿವರ್ತನೆ [*Metanoiein*—Gk] ಎಂಬ ಪದ ಮತ್ತಾಯನಲ್ಲಿ 7 ಸಲ, ಮಾರ್ಕನಲ್ಲಿ 3 ಸಲ ಲೂಕನಲ್ಲಿ 14 ಸಲ, ಅಪೋಸ್ತಲರ ಕೃತ್ಯದಲ್ಲಿ 11 ಸಲ, ಪೌಲನಲ್ಲಿ 5 ಸಲ ಬಂದರೆ ಯೋಹಾನನಲ್ಲಿ ಅದು ಕಂಡುಬರುವುದೇ ಇಲ್ಲ.

ಪರಿವರ್ತನೆಗೊಂಡ ಕ್ರಿಸ್ತಶರಣರು ಮತ್ತು ಕ್ರಿಸ್ತ ಇವರು ಭಿನ್ನ(Different) ರಾದರೂ ದ್ವೈತ(Separate) ರಲ್ಲ. ಕ್ರೈಸ್ತರು ಶರೀರವಾದರೆ/ಬಹಿಃಸ್ತರವಾದರೆ, ಕ್ರಿಸ್ತನೇ ಜೀವ/ಅಂತಃಸ್ತರ (ರೋ 12·4; 1 ಕೊರಿ 12·13, 27; 2 ಕೊರಿ 13·5; ಗಲಾ 1·16, 20; 3·27; ಎಫೆ 5·30). ಈ ಲಂಬಿಕ (Vertical) ಸಾಮರಸ್ಯವನ್ನು ಕ್ರಿಸ್ತಾದ್ವೈತ (Christ-integration) ವೆಂದು ಪಾರಿಭಾಷಿಕವಾಗಿ ಕರೆಯಬಯಸುತ್ತೇನೆ. ಈ ಕ್ರಿಸ್ತಾದ್ವೈತದಿಂದಾಗಿ ಕ್ರಿಸ್ತಶರಣರಲ್ಲಿಯೂ ಸಾಮರಸ್ಯವುಂಟಾಗುತ್ತದೆ. ಈ ಅಡ್ಡ (Horizontal) ಸಾಮರಸ್ಯವನ್ನು ಕ್ರೈಸ್ತ ಸಮಾಜ (Christian Brotherhood/*Koinonia*) ಅಥವಾ ಕ್ರಿಸ್ತನ ಧರ್ಮಕಾಯ (Christ's Mystical Body) ಎಂದು ಕರೆಯುತ್ತಾರೆ. ರೋಮಿಯರ (Romans) ಜಾನಪದ (Folklore) ವನ್ನು ಗಮನಿಸಿ ಹೇಳುವುದಾದರೆ ಜ್ಞಾನದೀಕ್ಷೆಯ ಸಂಸ್ಕಾರದಲ್ಲಿ ಬಳಸುವ ನೀರು/ನೀರಿನ ಕೊಳ 'ಸತಿ'ಗೆ (Female principle) ಸಂಕೇತವಾದರೆ, ಆ ನೀರನ್ನು ಮಂತ್ರಿಸುವ ಸಂದರ್ಭದಲ್ಲಿ ಅದರಲ್ಲಿ ಹೊಗಿಸುವ ಬೆಳಗಿದ ಮಯಣದ ಬತ್ತಿ, ಪತಿಗೆ (Male principle) ಸಂಕೇತ. ಲಗ್ನದಲ್ಲಿ ಸತಿಪತಿಯರು ಸಮರಸಗೊಳ್ಳುವಂತೆ ಪ್ರಸ್ತುತ ಜ್ಞಾನದೀಕ್ಷೆಯ ಸಂಸ್ಕಾರದ ಮೂಲಕ ಜೀವಾತ್ಮ ಪರಮಾತ್ಮರುಗಳು ಅದ್ವೈತ/ಸಮರಸಗೊಳ್ಳುತ್ತಾರೆಂಬುದೇ (ಲಿಂಗಾಂಗ ಸಾಮರಸ್ಯ) ಇಲ್ಲಿಯ ಸಂಕೇತಾರ್ಥ/ಲಕ್ಷ್ಯಾರ್ಥ.

ಪವಿತ್ರ ತೈಲದ ಅಭ್ಯಂಜನದಿಂದ ಕ್ರಿಸ್ತ ಭಕ್ತನ ಅವಿಭಾಜ್ಯಾಂಗವಾದ ಶರೀರ, ಪ್ರಸಾದ ಕಾಯ; ಆತನ ಕೈಗೆ ಕೊಟ್ಟಂತಹ ಬೆಳಗಿದ ದೀಪ, ತಾನು ಕ್ರಿಸ್ತನಂತೆ ಜಗತ್ತನ್ನು ಬೆಳಗಿಸುವ ಜ್ಯೋತಿ ಎಂಬ ಅರ್ಥಗಳನ್ನು (Semioses) ಸ್ಫುಟಿಸುತ್ತವೆ. ಒಟ್ಟಿನಲ್ಲಿ, ಕ್ರಿಸ್ತಶರಣನ ಪ್ರಜ್ಞೆಯಲ್ಲಿ ತಾನೆಂಬುದು ಅಳಿದು ಸರ್ವಸ್ವವೂ ಕ್ರಿಸ್ತಮಯಗೊಳ್ಳುತ್ತವೆ, ಕ್ರಿಸ್ತಮಯಗೊಳ್ಳಬೇಕೆಂಬ ನಿಜಾರ್ಥವನ್ನು ಈ ಸಂಸ್ಕಾರ ಪ್ರಕಟಗೊಳಿಸುತ್ತದೆ.

೧.೪ ಜ್ಞಾನದೀಕ್ಷಾ ಸಂಸ್ಕಾರದ ಫಲನಿರೂಪಣೆ (*Pragmatics*) :[4]

೧. ಜ್ಞಾನದೀಕ್ಷಾ ಸಂಸ್ಕಾರವನ್ನು ಅರ್ಥೈಸಿಕೊಂಡು ಅದನ್ನು ತನ್ನ ಜೀವನ-ಶೈಲಿ (Life-style/Praxis)ಯನ್ನಾಗಿ ಮಾಡಿಕೊಂಡ ವ್ಯಕ್ತಿ ತನ್ನ ದ್ವೈತಭಾವ (Dual-consciousness)ವನ್ನು ಕಳೆದುಕೊಂಡು ಕ್ರಿಸ್ತನಲ್ಲಿ ಅದ್ವೈತ/ಸಮರಸಗೊಳ್ಳುತ್ತಾನೆ (1 ಕೊರಿ 6·17+, 12·13+,

---

೪. ನೋಡಿ: Walker 89—92.

ಎಫೆ 4.4+,ST III q. 62, 5 ad 1; Flannery 355: Integrated life).

೨. ಸ್ವಭಾವತಃ ಅಹಂಕೇಂದ್ರೀಯ ಆಗಿರುವ ವ್ಯಕ್ತಿ ಪರಕೇಂದ್ರೀಯ ಹಾಗೂ ಸಮಾಜ ಮುಖೀ ವ್ಯಕ್ತಿ (Man for others)ಯಾಗಿ ಬಾಳುತ್ತಾನೆ ರೋ 6.11; ಎಫೆ 3.16—18).

೩. ಆಧ್ಯಾತ್ಮಿಕ ಹಾಗೂ ಸಾಮಾಜಿಕ ಸಾಮರಸ್ಯತೆಯಿಂದಾಗಿ ಇಹದಲ್ಲಿ ಸ್ಥಿತಪ್ರಜ್ಞನಾಗಿ (Indifferent/Unperturbed) ಬಾಳಲು ಆತನಿಗೆ ಸಾಧ್ಯವಾಗುತ್ತದೆ (ಕೀ 23).

೪. ಇಂಥ ವ್ಯಕ್ತಿಗೆ ಸಮರ್ಪಣಾ ಭಾವದಿಂದ ತನ್ನ ಕಾಯಕವನ್ನು ಮಾಡಲು, ಜವಾಬ್ದಾರಿಗಳನ್ನು ನಡೆಯಿಸಲು ಸಾಧ್ಯವಾಗುತ್ತದೆ. (ಕ್ರಿಸ್ತ ಶರಣ ಹಾಗೂ ಶರಣೆಯರ ಜೀವನವನ್ನು ಗಮನಿಸಿ).

೫. ಈ ವ್ಯಕ್ತಿಗಳಿಂದಾಗಿ ಹೊಸ ಸಮಾಜ ನಿರ್ಮಾಣಗೊಳ್ಳುತ್ತದೆ (Flannery 479,8 0). ಲೌಕಿಕ ಕುಟುಂಬಗಳು 'ವಸುದೇವ' ಅರ್ಥಾತ್ ದೈವಿಕ ಕುಟುಂಬ (People of God) ವಾಗಿ ರೂಪಾಂತರಗೊಳ್ಳುತ್ತವೆ (1 ಯೋಹಾ 3.1): ಇವಪರಭೇದ ಅಳಿಯುತ್ತದೆ. ವ್ಯಕ್ತಿಗಳು ಸ್ಥಳಕ್ಕೆ ಸಾಕ್ಷಿಯಾಗಿ ಜೀವಿಸುತ್ತಾರೆ (ಯೋಹಾ 18.37; 1 ತಿಮೊ 6.13).

೨.೦ ಇಷ್ಟಲಿಂಗಧಾರಣ ಸಂಸ್ಕಾರ

೨.೧ ಪ್ರಾಸ್ತಾವಿಕ :

ಲಿಂಗಾಯತವೆಂದರೆ ಅಂಗದ ಮೇಲೆ ಲಿಂಗ ಧರಿಸಿಕೊಂಡ ಸ್ವಜನಹಿತ, ಸ್ವಜನಪಾತ ವಿಶಿಷ್ಟ ಒಳಗುಂಪು (Ingroup) ಅಥವಾ ಸಂಸ್ಥೆ (Institution) ಎಂದರ್ಥವಲ್ಲ. ಅದು ನಾಡುನುಡಿಗಳಿಗೆ ಸೀಮಿತವಾಗಿ ಬದ್ಧವಾಗಿ ಇರಬೇಕಾಗಿಯೂ ಇಲ್ಲ. ಅದೊಂದು ಶಿವಸಾಕ್ಷಾತ್ಕಾರ (God-realization) ದತ್ತ ಸಾಧಕನು ಅನುಸರಿಸಬಹುದಾದ ಮುಕ್ತ (Open) ಸಾಧನಾ ಮಾರ್ಗ (Nandimath, 181). ಸಾಂಪ್ರದಾಯಿಕ ವಿಧಿಕರ್ಮ, ಮಂತ್ರ ತಂತ್ರ, ಜಪತಪಗಳಿಂದ ಹಾಗೂ ಗುಡಿಪೂಜೆ (Temple worship) ಗಳಿಂದ ಕೃತಕಗೊಂಡು ಹೊರೆಯಾದ ಹಾಗೂ ಮಡುಗಟ್ಟಿದ ಶೈವಧರ್ಮವನ್ನು ಆಮೂಲಾಗ್ರವಾಗಿ ರೂಪಾಂತರಿಸಿದ ಹನ್ನೆರಡನೆಯ ಶತಮಾನದ ಶಿವಶರಣರಿಂದಾಗಿ ಕರ್ನಾಟಕದಲ್ಲಿ ಒಂದು ವಿಶಿಷ್ಟ ಸಮಾಜೋ-ಧಾರ್ಮಿಕ (Socio-religious) ಆಂದೋಲನ, ವ್ಯಷ್ಟಿಯಿಂದ ಸಮಷ್ಟಿಯತ್ತ ಸಾಗಿತ್ತು. ಈ ಕ್ರಾಂತಿಯೇ ಲಿಂಗಾಯತ ಧರ್ಮವೆಂದು ಪ್ರಸಿದ್ಧಿಯನ್ನು ಪಡೆಯಿತು.

ಲಿಂಗಾಯತ ಧರ್ಮ ರೂಪುಗೊಳ್ಳುವಲ್ಲಿ ಭಕ್ತಿಭಾಂಡಾರಿ ಬಸವಣ್ಣನ ಮುಂದಾಳುತನ ಹಾಗೂ ರಾಜಕೀಯ ಮತ್ತು ಆರ್ಥಿಕ ಪ್ರಭಾವ, ಅಲ್ಲಮನ ಅನುಭಾವದ ಚೇತನ ಹಾಗೂ ಚೆನ್ನಬಸವನ ಜ್ಞಾನದ ಬೆಳಕು, ಇವುಗಳ ಪ್ರಭಾವ ಮುದ್ರೆಗಳನ್ನು ಅಲ್ಲಗಳೆಯುವಂತಿಲ್ಲ. ಲಿಂಗಾಯತ ಧರ್ಮದ ಹುಟ್ಟಿನಿಂದಾಗಿ ಹಳೆಯ ಹಲವಾರು ವಿಚಾರಗಳು (*Doxa*): "ಸರ್ವೇ ಜನಾಃ ಸುಖಿನೋ ಭವಂತು"; "ಸರ್ವಂ ಖಲ್ವಿದಂ ಬ್ರಹ್ಮ"; ನಿಷ್ಕಾಮ ಕರ್ಮ ಇತ್ಯಾದಿ ಸಿದ್ಧಾಂತಗಳು, ಆಚಾರ (**Praxis**) ಗಳಾದುವು. ಹಲವಾರು ಆಚಾರಗಳು (:ಅನೇಕ ದೇವೋಪಾಸನೆ, ಗುಡಿಪೂಜೆ, ವರ್ಣಾಶ್ರಮದ ಜಾತಿ ಪದ್ಧತಿ ಇತ್ಯಾದಿ) ಹೊಸ ವಿಚಾರದ ಒರೆಗಲ್ಲಿಗೆ ನಿಲ್ಲದೆ ಅಡಿಮೇಲಾಗಿ ಬಿದ್ದು ಹೋದುವು. ಈ ಹೊಸ ಆಚಾರವಿಚಾರಗಳ ಸಂಯೋಗದಿಂದಾಗಿ ಕರ್ನಾಟಕದಲ್ಲಿ ಹೊಸ ಸಮಾಜವೊಂದು ತಲೆಯೆತ್ತಿತು. ಇದೇ ಲಿಂಗಾಯತ ಸಮಾಜ. ಈ ಹೊಸ ಸಮಾಜ (New society) ದ ಸದಸ್ಯನಾಗಬೇಕಾದರೆ ವ್ಯಕ್ತಿಯ ಹುಟ್ಟು ಕಾರಣವಲ್ಲ. ಸ್ವಾಭಾವಿಕವಾಗಿ ಲೋಕಾಯತ (Wordly) ನಾಗಿರುವ ವ್ಯಕ್ತಿ, ಲಿಂಗಾಯತ (Godly) ನಾಗಿ ವಿಕಾಸಗೊಳ್ಳಬೇಕು. ಭವಿಯ ಕಾಯ (Body) ಲಿಂಗಧಾರಣ (Living in and for God) ದಿಂದಾಗಿ ಅಂಗ (Temple of the Spirit) ವಾಗಬೇಕು.

ಲಿಂಗಾಯತರಾಗಬೇಕಾದರೆ ಲಿಂಗ ಆಯತವಾದರೆ ಸಾಲದು, ಸ್ವಾಯತ್ತವಾಗಿರಬೇಕು. ಇದರಿಂದಾಗಿ, ಅವರು ಶಿವನ ವೀರರು/ವೀರಶೈವರು (Knights of God). ಇಲ್ಲಿ ಮತ್ತು ಈಗ (*Hic et nunc*) ಶಿವಸಾಮ್ರಾಜ್ಯ (God's Kingdom) ಸ್ಥಾಪನೆಯಾಗಬೇಕೆಂಬುದೇ ಅವರ ಜೀವನದ ಸಾಮಾಜಿಕ ಗುರಿ. ಶರಣ ಸಮಾಜವೇ(Society of Saints) ಶಿವ ಸಾಮ್ರಾಜ್ಯ. ಶಿವೇಚ್ಛೆಯ ಮೇರೆಗೆ ಸಮಾಜಮುಖಿಯಾಗಿ (Pro-existent) ಸರ್ವಸಮಾನವಾಗಿ, ಲಿಂಗ, ಜಾತಿ, ಒಳಜಾತಿ ಭೇದವಿಲ್ಲದೆ ದಾಸೋಹಂ (Diakonia) ಭಾವದಿಂದ, ಕಾಯಕ (Theo-centric action) ವೇ ಪೂಜೆ (Worship) ಎಂಬ ಮನೋಭಾವ (*Weltanschauung*) ದಿಂದ, ಕಾರ್ಯತತ್ಪರರಾಗಿ ತುಂಬುಜೀವನವನ್ನು ಬಾಳುವಂತಹ ಪೂರ್ಣ ವ್ಯಕ್ತಿಗಳೇ ಶಿವಶರಣರು. ಇವರಿಗೆ ತಮ್ಮ ಅಸ್ತಿತ್ವದ ಸ್ಥಲ (Ground) ವೇ ದೇವರು; ಕಾಯವೇ ಆತನ ದೇಗುಲ (Temple); ಕಾಯಕವೇ ಪೂಜೆ.

ಶಿವ ಮತ್ತು ಶರಣರಲ್ಲಿ ಎರಡಿಲ್ಲ (ಅ–ದ್ವೈತ). ಅವರು ಒಂದೇ ಇರವಿನ ಎರಡು ಸ್ತರ(Dimension) ಗಳು. ಶಿವನೇ ಅಂತರಂಗ (Depth); ಶರಣ ಆತನ ಬಹಿರಂಗ (Surface/Externalized objectification). ಈ ಎರಡು ಸ್ತರಗಳ ಸಾಮರಸ್ಯ (Integration) ವೇ ಲಿಂಗಾಯತರ ಮುಕ್ತಿ (Salvation/Liberation). ಈ ಮುಕ್ತಿಯನ್ನು ಈಗಲೇ ಇಲ್ಲಿಯೇ ಪಡೆಯುವ ಆತುರ ಅವರದು.

ಮುಕ್ತಿ ಸಾಧನೆಯಲ್ಲಿ ಅರ್ಥಾತ್ ಆಧ್ಯಾತ್ಮಿಕ ವಿಕಾಸದಲ್ಲಿ ಕಾಣದ 'ಪರವಸ್ತು' ವನ್ನು ಅನುಭಾವಿಸಲು ಕೆಲವೊಂದು ಕಾಣುವ 'ವಸ್ತು'ಗಳನ್ನು ಧಾರ್ಮಿಕ ಸಂಕೇತ/ಸಂಸ್ಕಾರ(Sacrament)ಗಳನ್ನಾಗಿ ಲಿಂಗಾಯತ ಧರ್ಮ ತನ್ನ ಭಕ್ತರಿಗೆ ಕಲ್ಪಿಸಿಕೊಟ್ಟಿದೆ (ಉದಾ:ಇಷ್ಟಲಿಂಗ ಧಾರಣ, ಇಷ್ಟಲಿಂಗ ದೀಕ್ಷೆ, ವಿವಾಹ, ಅಂತ್ಯೇಷ್ಟಿ). ಇವುಗಳಲ್ಲಿ ಇಷ್ಟಲಿಂಗಧಾರಣ ಮೂಲಭೂತವಾದುದು. ಲಿಂಗಾಂಗ ಸಾಮರಸ್ಯದ ಗುರಿ ಸಾಧಿಸುವಲ್ಲಿ ಇಷ್ಟಲಿಂಗದ ಸ್ಥಾನಮಾನದ ಬಗೆಗೆ ಅನೇಕ ವಾದವಿವಾದಗಳು ನಡೆದಿವೆ.[5] ನಮಗಿಲ್ಲಿ ಈ ಚರ್ಚೆ ಅಪ್ರಸ್ತುತ.

---

5. ಮೈಕಲ್ (Michaei, 1979) ಇವರ ಅಧ್ಯಯನದ ಪ್ರಕಾರ—ಅಲ್ಲಮ ಪ್ರಭು, ಇಷ್ಟಲಿಂಗದ ತಾತ್ಕಾಲಿಕ ಮೌಲ್ಯ (Provisional values) ವನ್ನು ಒಪ್ಪಿಕೊಂಡು (SS 3., 12: I,229; 8.66; III, 89 f; 10.48; III 256 f: 19.46; V 184 f; 19·66; 199 ff...), ಲಿಂಗಾಂಗ ಸಾಮರಸ್ಯದ ಜೊತೆ ಅದರ ಕಾರ್ಯಕಾರಣ ಸಂಬಂಧ (*Efficentia a se*) ಅಲ್ಲಗಳೆಯುತ್ತಾನೆ (SS., 1·58; I, 105; JI, 125 ff; 5·40; II, 162,353 ff; 8·43: III. 66 f: 10.14 III, 219 f).

ಚೆನ್ನಬಸವ, ಇಷ್ಟಲಿಂಗ ಅನಿವಾರ್ಯವೆಂದು ವಾದಿಸುತ್ತಾನೆ. (SS., 4.3. II, 20 f, 66 ff, III 88f, IV 186 ff, V 51 ___).

ಬಸವಣ್ಣ, ನಡುವಿನ ಹಾದಿ (Middle Path) ಯನ್ನು ಒಪ್ಪಿಕೊಂಡು ಸಂಸ್ಕಾರದ ಭಾನಾಮತಿ (*Ex opere operato*) ಕ್ರಿಯೆಯನ್ನು ಅಲ್ಲಗಳೆದು (SS, 4.2, 4·6 4.26, 5.36, 5.43. II, 29, 35; 57, 158, 164....) ಅನುಭಾವಕ್ಕೆ ಪ್ರಾಧಾನ್ಯತೆ ಕೊಟ್ಟು (4.06.9,39 20.3, II 57f, III 1 71 ff IV 308 ..) ಇಷ್ಟಲಿಂಗ (ಸಂಸ್ಕಾರ), ಲಿಂಗಾಂಗ ಸಾಮರಸ್ಯ ಸಾಧಿಸುವಲ್ಲಿ ಬಹು ಉಪಯುಕ್ತ ಸಾಧನವೆಂದು ಒಪ್ಪಿಕೊಂಡು ಧರ್ಮಾಚರಣೆಗೆ ಯೋಗ್ಯವೆಂದು ಸಾರುತ್ತಾನೆ(SS., 5·6, 7·36, 8.04 81.2, 18·7, 19,54, II, 122f, 554 t, ill 104-107, 371 ff, V 87 f, 22 f....)

೨.೨ ಇಷ್ಟಲಿಂಗಧಾರಣ ಸಂಸ್ಕಾರದ ರಚನಾ ನಿರೂಪಣೆ

ಸಾಮಾನ್ಯವಾಗಿ, ಇಷ್ಟಲಿಂಗಧಾರಣ ಸಂಸ್ಕಾರವನ್ನು, ಕೂಸು ತಾಯಿಯ ಗರ್ಭದಲ್ಲಿದ್ದಾಗ (*in utero*) ಆರಂಭಿಸಿ, ಅದರ ಜನನದ ಬಳಿಕ (post natal) ಅದನ್ನು ಪೂರ್ತಿಗೊಳಿಸುವ ರೂಢಿ ಲಿಂಗಾಯತರಲ್ಲಿದೆ. ಪ್ರಸ್ತುತ ದಲ್ಲಿ ಈ ಸಂಸ್ಕಾರದ ರಚನೆಯನ್ನು ಸ್ವಲ್ಪದರಲ್ಲಿ ನಿರೂಪಿಸಲಾಗಿದೆ.[6]

ಅ) ಗರ್ಭಕ್ಕೆ ಇಷ್ಟಲಿಂಗಧಾರಣ

೧. **ನಿರ್ಧಾರ :** ಮದುವೆಯಾದ ಹೆಣ್ಣು ಗರ್ಭ ಧರಿಸಿದ ಎಂಟನೆಯ ತಿಂಗಳಿನಲ್ಲಿ ಆ ಗರ್ಭಕ್ಕೆ ಇಷ್ಟಲಿಂಗ ಧಾರಣ ಮಾಡಲು ನಿರ್ಧಾರ ಮಾಡಿ ಕೊಳ್ಳುತ್ತಾರೆ.

೨. **ವಿನಂತಿ :** ನಿಶ್ಚಯಿಸಿದ ಶುಭದಿನದಂದು ಮನೆ ಸಾರಿಸಿ ಅಯ್ಯನ ವರನ್ನು (Priest) ಕರೆಯಿಸಿ, ಪಾದಪೂಜೆ ಮಾಡಿದ ಬಳಿಕ ಗರ್ಭವತಿ, ಗರ್ಭಲಿಂಗಧಾರಣ ಸಂಸ್ಕಾರ ನೀಡಬೇಕೆಂದು ವಿನಂತಿಸುತ್ತಾಳೆ.

೩. **ಅಭಿಷೇಕ :** ದಕ್ಷಿಣೆಯೊಂದಿಗೆ ಅಕ್ಕಿ ತುಂಬಿದ ಪಾತ್ರೆಯಲ್ಲಿಟ್ಟ ಪಂಚ ಸೂತ್ರಾತ್ಮಕವಾದ (Penta dimensional) ಶಿವಲಿಂಗವನ್ನು ಅಯ್ಯನವರು ಕೈಯಲ್ಲಿ ತೆಗೆದುಕೊಂಡು ಪಂಚಾಮೃತದಿಂದ ಅಭಿಷೇಕ ಮಾಡುತ್ತಾರೆ.

೪. **ಲಿಂಗಪೂಜೆ :** ಮಂತ್ರಗಳನ್ನುಚ್ಚರಿಸಿ ಲಿಂಗವನ್ನು ಪೂಜಿಸುತ್ತಾರೆ.

೫. **ಇಷ್ಟಲಿಂಗಧಾರಣ :** ಪೂಜಿತ ಇಷ್ಟಲಿಂಗವನ್ನು ಕೆಂಪು ಬಟ್ಟೆಯಲ್ಲಿ ಕಟ್ಟಿ ಗರ್ಭವತಿಯ ಬಲತೋಳಿಗೆ ಕಟ್ಟುತ್ತಾರೆ.

೬. **ಆದೇಶ:** ತನ್ನ ಇಷ್ಟಲಿಂಗದ ಜೊತೆಗೆ ಗರ್ಭದ ಇಷ್ಟಲಿಂಗವನ್ನೂ ಪೂಜಿಸಲು ಗರ್ಭವತಿಗೆ ಅಯ್ಯನವರು ಆದೇಶ ನೀಡುತ್ತಾರೆ.

ಆ) ಕೂಸಿಗೆ ಇಷ್ಟಲಿಂಗಧಾರಣ

೭. **ಪಾದಪೂಜೆ :** ಹೆರಿಗೆ ಸೂತಕ ನಿವಾರಣೆಗಾಗಿ (?!) ಅಯ್ಯನವರು ಬಂದಾಗ (ಗುಬ್ಬಣ್ಣವರ, 42) ಅವರ ಪಾದಪೂಜೆಯಾಗುತ್ತದೆ.

೮. **ಮಂತ್ರೋಪದೇಶ :** ಗರ್ಭವತಿಯ ಬಲತೋಳಿಗೆ ಕಟ್ಟಿದ ಲಿಂಗ ವನ್ನು ಅಯ್ಯನವರು ಕೂಸಿನ ಎದೆಗೆ ಮುಟ್ಟಿಸಿ ಅದರ ಕಿವಿಯಲ್ಲಿ ಪಂಚಾಕ್ಷರಿ ಮಂತ್ರ — ನಮಃಶಿವಾಯವನ್ನು ಹೇಳುತ್ತಾರೆ.

೯. **ಸತ್ಕಾರ :** ಅಯ್ಯನವರಿಗೆ ಪ್ರಸಾದ ದಕ್ಷಿಣೆಗಳನ್ನಿತ್ತು ಸತ್ಕರಿ ಸುತ್ತಾರೆ.

---

೬. ವಿವರಗಳಿಗೆ ನೋಡಿ : ಗುಬ್ಬಣ್ಣನವರ, ೪೨—೪೪

೧೦. **ಬೀಳ್ಕೊಡುವಿಕೆ** : ಮನೆಯವರೆಲ್ಲರೂ ನಮಸ್ಕರಿಸಿ ಅಯ್ಯನವರನ್ನು ಬೀಳ್ಕೊಡುತ್ತಾರೆ.

ಇಷ್ಟಲಿಂಗಧಾರಣ ಸಂಸ್ಕಾರವನ್ನು ಗರ್ಭಕ್ಕೆ / ಕೂಸಿಗೆ ಕೊಡುವುದರಿಂದ ಕೂಸಿಗೆ ೧೩–೧೪ ವರ್ಷ ಪ್ರಾಯವಾದಾಗ ಇಷ್ಟಲಿಂಗ ದೀಕ್ಷೆ ಸಂಸ್ಕಾರ ನೀಡುತ್ತಾರೆ. ಇದೊಂದು ರೀತಿಯಲ್ಲಿ ಮೊದಲ ಸಂಸ್ಕಾರದ ದೃಢೀಕರಣ (Confirmation). ಇದು ವಯಸ್ಕ ಅಭ್ಯರ್ಥಿಗಳಿಗೆ ಸೀಮಿತ. ಇಷ್ಟಲಿಂಗ ದೀಕ್ಷಾ ಸಂಸ್ಕಾರ, ಅಯ್ಯಾಚಾರ ಸಂಸ್ಕಾರಗಿಂತ ಭಿನ್ನ. ಇಷ್ಟಲಿಂಗ ದೀಕ್ಷೆಯಿಂದ ಲೋಕಾಯತನು ಲಿಂಗಾಯತನಾಗಿ ದೃಢೀಕರಣಗೊಂಡರೆ ಅಯ್ಯಾಚಾರ ಸಂಸ್ಕಾರದಿಂದ ಆತ ಗುರುದೀಕ್ಷೆ (Ordination) ಪಡೆದು ಪೌರೋಹಿತ್ಯ ಅಧಿಕಾರಗಳನ್ನು ಪಡೆದುಕೊಳ್ಳುತ್ತಾನೆ.

ಅಯ್ಯನವರ ಗಂಡುಮಕ್ಕಳಿಗೆ ಮಾತ್ರ ಸೀಮಿತವಾಗಿರುವ ಅಯ್ಯಾಚಾರ ಸಂಸ್ಕಾರದ ಬಗೆಗೆ ಇಲ್ಲಿ ಹೆಚ್ಚಿನ ಪ್ರಸ್ತಾಪವಿಲ್ಲ.[7]

೨.೩ ಇಷ್ಟಲಿಂಗಧಾರಣ ಸಂಸ್ಕಾರದ ಅರ್ಥನಿರೂಪಣೆ

ಲೋಕಾಯತನು ಲಿಂಗಾಯತನಾಗಬೇಕಾದರೆ ಆತನಲ್ಲಿ ಲಿಂಗಧಾರಣವಾಗಬೇಕು (ನೋಡಿ ೨. ೧). ಈ ಲಿಂಗಧಾರಣಕ್ಕೆ ಇಷ್ಟಲಿಂಗಧಾರಣ ಒಂದು ಸಂಕೇತ/ ಸಂಸ್ಕಾರ (ಜಚನಿ ೩೩೦, ೫೯೬). ಇಷ್ಟಲಿಂಗ ಧಾರಣವೆಂದರೆ ಒಂದು ನಾಜೂಕುಗೊಳಿಸಿದ, ಹೊಳಪುಳ್ಳ, ನಯ ಹಾಗೂ ಸಣ್ಣ ಶಿಲೆಯ ಧಾರಣವಲ್ಲ. ನಿರಹಂಕಾರ (Egoless) ಚಿತ್ತವೃತ್ತಿಯಿಂದ ಭಾವ (Mental being), ಪ್ರಾಣ (Vital being) ಗಳೆರಡೂ ಲಿಂಗಮಯ (Divinized)ವಾಗಿ ಬಹಿಃಸ್ತರದಲ್ಲಿ – ಕಾಯದಲ್ಲಿ – ಅಭಿವ್ಯಕ್ತಗೊಂಡಾಗ ಕಾಯ (Physical body), ಅಂಗ (Temple of the Spirit) ವಾಗುತ್ತದೆ. ಈ ಪ್ರಕ್ರಿಯೆಯ ಸಂಕೇತ/ಪ್ರತೀಕವೇ ಇಷ್ಟಲಿಂಗ ಧಾರಣ.

ಸಾಧಕನಿಗೆ ಇಷ್ಟಲಿಂಗವೇ ಪರಮ ಗುರಿಯಲ್ಲ. ಸಕಲ ಚರಾಚರ ಸೃಷ್ಟಿಯ ಸ್ಥಲ (Ground)ವಾದ ಘನಲಿಂಗ (Absolute God)

---

೭. ಪ್ರಾಸ್ತಿಕೆ (Priestcraft) ಯನ್ನು ನೀತಿಯುಂ ಹಾಗೂ ತನ್ಮೂಲಕ ತಾವು ಉತ್ಕೃಷ್ಟರೆಂದು ಸ್ಥಾಪಿಸಲು ಅಯ್ಯನವರು (Priest) ಈ ಸೀಮಿತ ಸಂಸ್ಕಾರವನ್ನು ತಂದರು .. ಎಂಬ ಅಭಿಪ್ರಾಯಕ್ಕೆ ನೋಡಿ: ಗುಬ್ಬಣ್ಣನವರ, ೬೬. ಕ್ರೈಸ್ತ ಧರ್ಮದಲ್ಲಿ ಮಾತ್ರ ಗುರುದೀಕ್ಷೆ ಜಾತಿವರ್ಗಗಳಿಗೆ ಒಳಪಟ್ಟಿಲ್ಲ. ಕೆಲವು ಧರ್ಮಸಭೆಗಳಲ್ಲಿ (Churches) ಸ್ತ್ರೀಯರಿಗೂ ಗುರುದೀಕ್ಷೆ ಇದೆಯಾದರೂ ಹಲವಾರು ಧರ್ಮಸಭೆಗಳಲ್ಲಿ ಅದು ಪುರುಷರಿಗೆ ಮಾತ್ರ ಸೀಮಿತವಾಗಿರುವುದು ಅಲ್ಲಿಯ ವಿಪರ್ಯಾಸ.

ದೊಡನೆ ಸಮರಸಗೊಳ್ಳುವುದೇ ಸಾಧಕನ ಜೀವನದ ಪಾರಮಾರ್ಥಿಕ ಗುರಿ Madtha, 1983:277). ಕರಸ್ಥಲದ ಕಾಣುವ ಈ ಸ್ಥೂಲ ಲಿಂಗ, ಸಕಲಕ್ಕೆ ಸ್ಥಲಪ್ರಾಯವಾಗಿರುವ ಕಾಣದ ಘನಲಿಂಗಕ್ಕೆ ಒಂದು ಸಂಕೇತ. ಲಿಂಗದಲ್ಲಿ (In God) ಹಾಗೂ ಲಿಂಗಕ್ಕಾಗಿ (For God) ಇರುವುದೇ ಲಿಂಗಧಾರಣ. ಇದು ಇಷ್ಟಲಿಂಗಧಾರಣ ಸಂಸ್ಕಾರದ ಆಶಯ (Motif) ಹಾಗೂ ಸೂಚ್ಯಾರ್ಥ (*Signifie*). ಇದೇ ಕಾರಣದಿಂದ ಇಷ್ಟಲಿಂಗ, ಲಿಂಗ ಧಾರಣದ ಒಂದು ಮಾದರಿ (Type) ಹಾಗೂ ಪ್ರತೀಕ (Significant). ಈ ದರ್ಶನವಿಲ್ಲದ ಇಷ್ಟಲಿಂಗಧಾರಣ, ಕೇವಲ ಶಿಲಾಧಾರಣ ಮಾತ್ರ.

ಲಿಂಗಾಂಗ ಸಾಮರಸ್ಯವೆಂಬ ಅನುಭಾವದ ನೈಜತೆಗೆ (Authenticity) ಲಿಂಗಾಚಾರ (Orthopraxis) ವೇ ಸಾಕ್ಷಿ/ಒರೆಗಲ್ಲು. ಲಿಂಗಾಚಾರವೆಂಬುದು ಆಜೀವಪರ್ಯಂತದ ಸಾಧನೆ. ಲಿಂಗಾಚಾರವೇ ನಿಜೋಪಾಸನೆ. ಈ ಉಪಾಸನೆ (Worship) ಯಲ್ಲಿ ಇಷ್ಟಲಿಂಗವೊಂದು ಅನುಷ್ಠಾನ ಸಾಧನ (Aid). ಲಿಂಗ (God) ನಮ್ಮ ಅಂತಃಸ್ತರ (Depth) ವಾಗಿರುವುದರಿಂದ, ಅದು ನಮ್ಮಲ್ಲಿ ವ್ಯಕ್ತಗೊಳ್ಳಬೇಕು; ನಮ್ಮ ಅಂತಃಸ್ತರ ನಮ್ಮಲ್ಲಿಯೇ ಬಹಿಃಸ್ತರ ಗೊಳ್ಳಬೇಕು. ಆಚಾರಕ್ಕಿಳಿಯದ ಲಿಂಗವಿಚಾರದಿಂದಾಗಿ ಆತ್ಮವಿಕಾಸ ನಡೆಯದು; ಸಾಮರಸ್ಯ ಸಾಧಿಸದು (ಜಚನಿ ೪೨೫).

ಲಿಂಗಾಚಾರಕ್ಕೆ ಗುರುಕಾರುಣ್ಯ (Grace of God) ಅತ್ಯಗತ್ಯ. ಈ ಗುರುಕಾರುಣ್ಯದ ಸಂಕೇತವೇ ಇಷ್ಟಲಿಂಗ (ಜಚನಿ ೪೧೦, ೪೨೯, ೫೪೯–೯೩). ಅದು ನಮ್ಮಲ್ಲಿಯ ಅರಿವನ್ನು/'ಗುರು' ವನ್ನು ಜಾಗೃತಗೊಳಿಸಿ ಕ್ರಿಯಾಶೀಲ ವನ್ನಾಗಿ ಮಾಡುತ್ತದೆ; ಅದರ ಅನುಭಾವ ನಮಗುಂಟಾಗುವಂತೆ ಮಾಡುತ್ತದೆ; ಆದುದರಿಂದ ಅದು ಗುರುಚೇತನದ ಪ್ರತೀಕ (ಜಚನಿ ೫೯೦). ಈ ರೀತಿ ಅರಿತು ಕೊಂಡು ಮಾಡಿದ ಇಷ್ಟಲಿಂಗಧಾರಣ ಸಾರ್ಥಕಗೊಳ್ಳುತ್ತದೆ.

ಲಿಂಗಾಂಗ ಸಾಮರಸ್ಯಕ್ಕೆ ಸಾಕ್ಷಿರೂಪವಾಗಿರುವ ಲಿಂಗಾಚಾರ, ಲೌಕಿಕ ಶಿಕ್ಷಣದಿಂದಾಗಲಿ, ಕರ್ಮಕಾಂಡಕ್ಕೆ ಅಂಟಿಕೊಂಡಿರುವ ಶುಷ್ಕ ಧರ್ಮದಿಂದಾಗಲಿ ಪ್ರಾಪ್ತವಾಗುವುದಿಲ್ಲ. ಅದು ಪ್ರಾಪ್ತವಾಗುವುದು ಅನುಭಾವದ ಮೂಲಕ. ಸರ್ವಾರ್ಪಣದ ಭಾವಪೂಜೆ (Madtha, 1983 : 277 n. 34) ಯ ಮೂಲಕ 'ಗುರು ಕಾರುಣ್ಯ' ದೊರೆತಾಗ ಅನುಭಾವ ಉಂಟಾಗುತ್ತದೆ. ಈ ಅನುಭಾವ ಕ್ರಿಯಾರೂಪದಲ್ಲಿ ಕಾಯಕ್ಕೆ ಇಳಿದಾಗ ಅದು ಅಂಗವಾಗುತ್ತದೆಂಬ ಪಾರಮಾರ್ಥಿಕ ಸತ್ಯವನ್ನು ಸೂಚಿಸುವ ಸಂಕೇತವೇ ಇಷ್ಟಲಿಂಗ. ಆದುದರಿಂದ ಇಷ್ಟಲಿಂಗಧಾರಣ, ಪರಧಾರಣದ ಪ್ರತೀಕ (ಜಚನಿ ೫೯೬).

೨.೪ ಇಷ್ಟಲಿಂಗಧಾರಣ ಸಂಸ್ಕಾರದ ಫಲನಿರೂಪಣೆ

೧. ಇಷ್ಟಲಿಂಗಧಾರಣ ಸಂಸ್ಕಾರದ ಲಕ್ಷ್ಯಾರ್ಥ ತಿಳಿದುಕೊಂಡಂತೆ ಸಾಧಕನು ಲಿಂಗಧಾರಣ (Abiding in the Lord) ವನ್ನು ತನ್ನ ಜೀವನದ ಗುರಿಯನ್ನಾಗಿ ಇಟ್ಟುಕೊಳ್ಳುತ್ತಾನೆ.

೨. 'ಲಿಂಗಧಾರಣ' ಪ್ರಕ್ರಿಯೆಯಿಂದಾಗಿ ಕಾಯವು ಅಂಗವಾಗಿ (ಜಚನಿ ೧೩೯, ೮೨೦ ಇ), 'ಕೈಲಾಸ' ವಾಗಿ ಮಾರ್ಪಟ್ಟು ಅದರ ಕ್ರಿಯೆಗಳೆಲ್ಲವೂ ಕಾಯಕಗಳಾಗಿ ನಿತ್ಯ ಹಾಗೂ ಪರಿಪೂರ್ಣ ಲಿಂಗೋಪಾಸನೆಯಾಗಿ ರೂಪಾಂತರ ಹೊಂದುತ್ತವೆ.

೩. ತನ್ನ ಅಸ್ತಿತ್ವದ ವಿವಿಧ ಮುಖಗಳಲ್ಲಿ— ಭಾವ, ಪ್ರಾಣ, ಅಂಗಗಳಲ್ಲಿ — ಲಿಂಗವೇ ಪ್ರದರ್ಶನಗೊಳ್ಳುತ್ತದೆ.

೪. ಭಾವದಲ್ಲಿ ತಾನಿದಿರಿಲ್ಲದೆ, ಅನುಭಾವ ಆಚಾರಕ್ಕಿಳಿದು ವ್ಯಕ್ತಿ ಶಿವಯೋಗಿ (Contemplative in action) ಯಾಗುತ್ತಾನೆ.

೫. ಲಿಂಗಾಂಗ ಸಾಮರಸ್ಯ ಪಡೆದ ಶರಣಸಮಾಜದಿಂದಾಗಿ ಇಹವೇ ಪರವಾಗುತ್ತದೆ. ಲೌಕಿಕತೆ, ದೈವತ್ವದಲ್ಲಿ ತನ್ನ ಪೂರ್ಣತ್ವವನ್ನು ಕಂಡು ಪೂರ್ಣ ಬದುಕು ಪರಿಣಮಿಸುತ್ತದೆ.

೩. ಸಮಾರೋಪ

ಕ್ರೈಸ್ತರ ಜ್ಞಾನದೀಕ್ಷಾ ಸಂಸ್ಕಾರಕ್ಕೂ ವೀರಶೈವರ ಇಷ್ಟಲಿಂಗಧಾರಣ ಸಂಸ್ಕಾರಕ್ಕೂ ಬಹಳ ಹತ್ತಿರದ ಸಂಬಂಧವಿದೆ. ಸಾಮಾನ್ಯ ಗುಣಲಕ್ಷಣಗಳ ಜೊತೆಯಲ್ಲಿ ಕೆಲವೊಂದು ವೈಲಕ್ಷಣಗಳೂ ಇವೆ :

೧ ಧಾರ್ಮಿಕ ಸಮಾಜದ ಸದಸ್ಯತ್ವ (Ecclesial member ship) ಕ್ಕೆ ಈ ಪ್ರಾಥಮಿಕ ಸಂಸ್ಕಾರ ಅತ್ಯಗತ್ಯ.

೨. ಆಧ್ಯಾತ್ಮಿಕ ವಿಕಾಸಕ್ಕೆ ಅತಿ ಎಳೆಯ ವಯಸ್ಸಿನಲ್ಲಿಯೇ ಪರಿಸರ ಕಲ್ಪಿಸಿಕೊಡಲಾಗುತ್ತದೆ.

೩. ಧಾರ್ಮಿಕ ಸಾಧನಾ ಮಾರ್ಗವನ್ನು ಸ್ವಯಂಪ್ರೇರಣೆಯಿಂದ, ಜವಾಬ್ದಾರಿಯುತವಾಗಿ ಆರಿಸಿಕೊಳ್ಳುವ ಮೊದಲೇ ವ್ಯಕ್ತಿಯನ್ನು ವಿಶಿಷ್ಟ ಧಾರ್ಮಿಕ ಕಟ್ಟುಪಾಡುಗಳಿಗೆ ಒಳಪಡಿಸುತ್ತಾರೆ (Conditioned).

೪. ಅರಿವು ಮೂಡುವ ಮೊದಲೇ ಈ ಸಂಸ್ಕಾರ ಕೊಡುವುದರಿಂದ ಭಾನಾಮತಿ (Magic)ಯ ಕಲ್ಪನೆ ಇಲ್ಲಿ ಇದೆಯೋ ಎಂಬ ಶಂಕೆ ಹುಟ್ಟುತ್ತದೆ.

೫. ಈ ಪ್ರಾಥಮಿಕ ಸಂಸ್ಕಾರ ಪಡೆದ ಕೂಸು ವಯಸ್ಸಿಗೆ ಬಂದಾಗ ಆ ಸಂಸ್ಕಾರದ ದೃಢೀಕರಣ (Confirmation) ನಡೆಯುತ್ತದೆಯೋ ವಿನಹ ಧರ್ಮವನ್ನು — ಲಿಂಗಾಂಗ ಸಾಮರಸ್ಯವನ್ನು ಪಡೆಯುವ ವಿಧಾನವನ್ನು —

ಸ್ವತಂತ್ರವಾಗಿ ಅರಿಸಿಕೊಳ್ಳುವ ನಾಗರಿಕ ಹಕ್ಕು ನೇರವಾಗಿ ಉಭಯ ಧರ್ಮಗಳು ಕೊಡುವುದಿಲ್ಲ; ಇದರಿಂದಾಗಿ ತನ್ನ ಧರ್ಮವೊಂದೇ ಮುಕ್ತಿ ಸಾಧನೆಗೆ ಋಜುಮಾರ್ಗ (*Nulla salus extra ecclesiam*) ಎಂದು ಪರೋಕ್ಷವಾಗಿಯಾದರೂ ಅವು ಸಾರುತ್ತವೆ.

೬. ಪ್ರಸ್ತುತ ಸಂಸ್ಕಾರ ಆಜೀವಪರ್ಯಂತ ಸಾಲುತ್ತದೆ. ಅದನ್ನು ಪದೇ ಪದೇ ನೀಡಬೇಕಾಗಿಲ್ಲ.

೭. ಪ್ರಸ್ತುತ ಸಂಸ್ಕಾರದಿಂದ ಭವಿ ಭಕ್ತನಾಗುತ್ತಾನೆಂದು ನಂಬಲಾಗುತ್ತದೆ. (ಭಕ್ತನಾಗಲು ಆತನಿಗೆ ಆದೇಶಿಸಲಾಗುತ್ತದೆ ಎಂದರೆ ಹೆಚ್ಚು ಸೂಕ್ತವೇನೋ !)

೩.೨ ವಿಶಿಷ್ಟ ಗುಣಲಕ್ಷಣಗಳು :

ಲಿಂಗಾಯತರಲ್ಲಿ ಈ ಸಂಸ್ಕಾರವನ್ನು ಸಾಮಾನ್ಯವಾಗಿ ಕೂಸು ಗರ್ಭದಲ್ಲಿರುವಾಗಲೇ — ಏಳು/ಎಂಟನೆಯ ತಿಂಗಳಿನಲ್ಲಿಯೋ — ಕೊಟ್ಟರೆ, ಕ್ರೈಸ್ತರು ಸಾಮಾನ್ಯದಾಗಿ ಕೂಸು ಹುಟ್ಟಿದ ಸುಮಾರು ೪೦ ದಿನಗಳಲ್ಲಿ ಕೊಡುತ್ತಾರೆ. ಸಾಮಾನ್ಯವಾಗಿ, ಗುರುವೇ ಈ ಸಂಸ್ಕಾರವನ್ನು ಕೊಡುತ್ತಾರಾದರೂ ವಿಶೇಷ ಸಂದರ್ಭಗಳಲ್ಲಿ (ಮರಣಾವಸ್ಥೆಯಲ್ಲಿ, ಗುರು ಸಿಗದೇ ಹೋದ ಪಕ್ಷದಲ್ಲಿ ....) ಕ್ರೈಸ್ತ ದೀಕ್ಷೆಯನ್ನು ಯೇಸುವಿನಲ್ಲಿ ನಂಬಿಕೆಯನ್ನಿಟ್ಟ ಯಾವುದೇ ವ್ಯಕ್ತಿ ಕೊಡಬಹುದು.

ಲಿಂಗಾಯತ ಗುರುಗಳು ಗೃಹಸ್ಥರ ಮನೆಗೆ ಹೋಗಿ ಈ ಸಂಸ್ಕಾರ ಸೇವೆಯನ್ನು ಕೊಟ್ಟರೆ, ಕ್ರೈಸ್ತ ಧರ್ಮದಲ್ಲಿ ಈ ಸೇವೆಗಾಗಿ (*Diakonia*) ಗೃಹಸ್ಥರು ಸಾಮಾನ್ಯವಾಗಿ ಗುರುವನ್ನು ಹುಡುಕಿ ಹೋಗಬೇಕು. ಲಿಂಗವಂತರಲ್ಲಿ ಕೂಸಿನ ನಾಮಕರಣ ಹದಿಮೂರನೆಯ ದಿನದಂದು ಆದರೆ (ನೋಡಿ: ಗುಬ್ಬಣ್ಣವರ) ಕ್ರೈಸ್ತರಲ್ಲಿ ಜ್ಞಾನದೀಕ್ಷೆಯ ಸಂಸ್ಕಾರದೊಂದಿಗೆ ಆಗುತ್ತದೆ.

ಒಟ್ಟಿನಲ್ಲಿ ಅಹಂಭಾವವನ್ನು ತೊರೆದು ಶಿವಕೇಂದ್ರೀಯ (cosmotheandric) ಜೀವನವನ್ನು ಸಮಾಜಮುಖಿಯಾಗಿ (Proexistentially) ನಡೆಸುವುದೇ ಮಾನವ ಜೀವನದ ಪಾರಮಾರ್ಥಿಕ ಅರ್ಥವೆಂಬುದನ್ನು ಈ ಪ್ರಥಮ ಸಂಸ್ಕಾರಗಳು ಸೂಚಿಸುತ್ತವೆಂಬುದು ತೌಲನಿಕ ಧಾರ್ಮಿಕ ಅಧ್ಯಯನದಲ್ಲಿ ಪ್ರಮುಖವಾದ ವಿಷಯ.

೪. ಸೂಚಿಗಳು

೪.೧ ಸಾಮಾನ್ಯ ಸಂಜ್ಞೆ/ಸಂಕೇತಗಳ ಸೂಚಿ

+	: ಈ ಸ್ಥಾನದಲ್ಲಿ ಸೂಚಿಸಿದ ಇತರ ಆಕರಗಳನ್ನೂ ಗಮನಿಸಿ.
/	: ಅಥವಾ
> x	: x ರೂಪದಿಂದ ಹುಟ್ಟಿದೆ.
a	: article
ad	: addition
Gk.	: Greek (ಗ್ರೀಕ್ ಭಾಷೆ)
Lat.	: Latin (ಲತೀನ್ ಭಾಷೆ)
NT	: New Testament (ಹೊಸ ಒಡಂಬಡಿಕೆ — ಬೈಬಲಿನ ಪ್ರಧಾನ ಭಾಗ)
q	: question
QS	: Qumran Scrolls (ಖುಮ್ರಾನ್ ಸುರುಳಿಗಳು)
SS	: *Shu:nya Sampa:dane 1965-72*
ST	: St. Thomas

೪.೨ ಬೈಬಲ್ ಗ್ರಂಥಗಳ ಸೂಚಿ

ಅಕ್ರ	: ಅಪೊಸ್ತಲರ ಕೃತ್ಯಗಳು	: Acts
ಇಬ್ರಿ	: ಇಬ್ರಿಯರಿಗೆ	: Hebrews
ಎಫೆ	: ಎಫೆಸದವರಿಗೆ	: Ephesians
ಎಸ್ರ	: ಎಸ್ರನು	: Ezra
ಕೀ	: ಕೀರ್ತನೆ	: Psalm
೧ ಕೊರಿ	೧ ಕೊರಿಂಥದವರಿಗೆ	: 1 Corinthians
೨ ಕೊರಿ	: ೨ ಕೊರಿಂಥದವರಿಗೆ	: 2 Corinthians
ಕೊಲೊ	: ಕೊಲೊಸ್ಸೆಯುವರಿಗೆ	: Colossians
ಗಲಾ	: ಗಲಾತ್ಯದವರಿಗೆ	: Galatians

೧ ತಿಮೊ	;	೧ ತಿಮೊಥೆಯನಿಗೆ	:	1 Timothy
ಫಿ	:	ಫಿಲಿಪ್ಪಿಯವರಿಗೆ	:	Philippians
ಮತ್ತಾ	:	ಮತ್ತಾಯ	:	Matthew
ಯಾಜ	:	ಯಾಜಕ ಕಾಂಡ	;	Leviticus
ಯೋಹಾ	:	ಯೋಹಾನ	:	John
ರೋ	:	ರೋಮಾಪುರದವರಿಗೆ	:	Romans
ವಿಮೋ	:	ವಿಮೋಚನಾ ಕಾಂಡ	:	Exodus

೪.೩ ಆಕರ ಸೂಚಿ

೪.೩.೧ ಕ್ರೈಸ್ತ ಸಾಹಿತ್ಯ

1. ಮಾಡ್ತ, ವಿಲ್ಯಂ. "ಕ್ರೈಸ್ತೋಪಾಸನೆ ಮತ್ತು ಸಂಸ್ಕಾರಗಳು (ಜಾನಪದ ವೈಜ್ಞಾನಿಕ ಭಾಷ್ಯ)", ಕರ್ನಾಟಕ ಭಾರತಿ (15. 1–2 : 121–136), ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ, 1982.

2. Boyd, Robin H. S. K*rista:dvaita : A Theology for India*, Madras : The Christian Literature Society, 1977.

3. Flannery (O. P.), Austin (Gen, Ed.). *Vatican Council* II, Collegeville / Minnesota : The Liturgical Press 1975.

4. Greeley, Andrew M. *The Great Mysteries : An Essential Catechism* (*A Crossrrad Book*), N. Y. : The Seabury Press.

5. Jones, Alexander (Ed.) *The* (*Jerusalem Bible*). London : Darton, Longman & Todd, 1966.

6 Leon–Dufour, Xavier (Ed.). *Dictionary of Bilblical Theology*, Bangalore : Theological Publications in India, 1973.

7. Lindsell, Harold (Ed.). *Lindsell Study Bible ; The Living Bible* ***Paraphrased***, Wheatan

Illinois: Tyndale House Publishers, Inc., 1980.

8. Long, (C. Ss. R.), T. K. *The Mass and the Sacraments according to their New Rites*, Bombay: St. Paul Publications, 1983.

9. McKenzie (S. J.), John L. *Dictionary of the Bible*, Bangalore: Asian Trabing Corporation, 1984.

10. Rahner, Karl (Ed.). *Encyclopedia of Theology: A Concise Sacramentum Mundi*, London: Burns & Oates, 1975.

11. Smyth, Kevin (Tr.). *A New Catechism*, London: Search Press, 1980.

12. Walter (O. F. M.), John Baptist. *New Theology for* Plain Christians, London: Darton, Longman & Todd, 1970.

೪.೩.೨ ವೀರಶೈವ ಸಾಹಿತ್ಯ

13. ಗುಬ್ಬಣ್ಣವರ, ಶಿವಾನಂದ. ಲಿಂಗಾಯತ ಸಂಸ್ಕಾರಗಳು. ಧಾರವಾಡ : ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, 1984.

14. ಜ.ಚ.ನಿ. (ಡಾ. ಶ್ರೀ). ಸಂಪಾದನೆಯ ಸೊಂಪು (ಎಸಳೆರಡು), ಬಾಗಲಕೋಟೆ : ಶಿವಾನುಭವ ಸಂಘ, 1978.

15. ಮಾಡ್ತ, ವಿಲ್ಯಂ. "ಕಾಯಕ ಮತ್ತು ಸತ್ಕರ್ಮ", ಎಂ. ಎಂ. ಕಲಬುರ್ಗಿ (ಸಂ.) ಶಿವಶರಣರ ಕಾಯಕ ಸಿದ್ಧಾಂತ, ಧಾರವಾಡ : ಶ್ರೀ ಬಸವೇಶ್ವರ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, 1985.

16. Kumaraswamiji (Shree). "Virasaivism", Haridas Bhattacharya (Ed.), *The Cultural Heritage of India, Vol. IV, The Religions*, Calcutta :

The Ramakrishna Mission, Institute of Culture 1969 (Reprint).

17. Lingananda (Swami). *Emblem of God*, S. M. Angadi (Tr.), Dharwad : Janganmata Akkamahadevi Ashrama, 1973.

18. Madtha, William. "Vi:rashaivism and Christianity : A Dialogue on Doctrines", *Journal of Dharma*, Bangalore : Dharma Research Asso ciation, Centre for the Study of world Religions, (July–Sept., 1983).

19. Mahadevi (Jagadguru Mate). *A Guide to Lingayatism*, Dharwad : Jaganmate Akkamahadevi Ashrama, 1973.

20. Michael, Randall Blake. *ASTa:varaNa in the Shu:nyasampa:dane* (A Thesis presented to the Committee on the Study of Religion in partial fulfillment of the requirements for the degrce of Doctor of Philosophy in the subject of Comparative Religion). Cambridge, Massachusetts : Harvard University, 1979 (unpublished).

21. Nandimath, S. C. *A Handbook of Vi:rashaivism*, Dharwad : L. E. Association, 1942.

ಗ್ರಂಥಾವಲೋಕನ

ಕರ್ನಾಟಕ ಇಂದು ಮತ್ತು ನಾಳೆ:

ಲೇಖಕರು: ಡಾ. ಶಿವರಾಮ ಕಾರಂತ, ಪ್ರಕಾಶಕರು: ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ (೧೯೮೭) ಡೈಮಿ ⅛ ಸೈಜ, ಪುಟ ೮+೩೫ ಬೆಲೆ: ರೂ. ೬=೦೦

ಈ ಪುಟ್ಟ ಕೃತಿ, ಕಲಬುರ್ಗಿ ನಗರದ ಬೆಳವಣಿಗೆಗೆ ಕಾರಣ ಪುರುಷರಲ್ಲೊಬ್ಬರಾದ ದಿವಂಗತ ಮಹಾದೇವಪ್ಪ, ರಾಂಪುರೆ ಅವರ ನೆನಪಿನ ದತ್ತಿ ಉಪನ್ಯಾಸಗಳ ಸಂಗ್ರಹ. ಗುಲಬರ್ಗಾ ವಿಶ್ವವಿದ್ಯಾಲಯವು ಈ ಕೃತಿಯನ್ನು ಪ್ರಕಟಿಸಿ ಅವರಿಗೆ ಯೋಗ್ಯ ಸನ್ಮಾನ ಸಲ್ಲಿಸಿದೆ. ಎರಡು, ವಿಚಾರ–ಪ್ರಚೋದಕ ಉಪನ್ಯಾಸ ನೀಡಿದವರು ಡಾ. ಶಿವರಾಮ ಕಾರಂತರು: ಅದಕ್ಕೆ ಅನುವು ಮಾಡಿಕೊಟ್ಟವರು ಕನ್ನಡದ ಪ್ರಸಿದ್ಧ ಬರಹಗಾರರೂ ಗುಲಬರ್ಗಾ ವಿಶ್ವವಿದ್ಯಾಲಯದ ಹಿಂದಿನ ಕುಲಪತಿಗಳೂ ಆದ ಡಾ. ಹಾ. ಮಾ. ನಾಯಕ ಅವರು: ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಈ ಕೃತಿಯನ್ನು ಪ್ರಕಟಿಸಿದೆ. ಡೆಮಿ ⅛ ಆಕಾರದಲ್ಲಿ ಈ ಕೃತಿ ೩೫ ಪುಟಗಳನ್ನೊಳಗೊಂಡಿವೆ. ಲೇಖಕರು ತಮ್ಮ ನುಡಿಯಲ್ಲಿ (ಆರಂಭದಲ್ಲಿ) ಹೀಗೆ ಹೇಳಿದ್ದಾರೆ (ಪುಟ ೫):

'ಮೊದಲಿನ ಉಪನ್ಯಾಸದಲ್ಲಿ ನೈಸರ್ಗಿಕವಾಗಿ ನಾವು ಯಾವ ಸಂಪತ್ತನ್ನು ಪಡೆದು ಬಂದಿದ್ದೇವೆ; ಎಂಥ ಜನರು ಈ ಕರ್ನಾಟಕದಲ್ಲಿ ನೆಲೆಸಿದ್ದಾರೆ: ಕೆಲವು ಸಾವಿರ ವರುಷಗಳಿಂದ ನಡೆದುಬಂದ ನಮ್ಮ ಬದುಕಿನ ಸ್ವರೂಪ ಎಂಥದು ಎಂಬುದನ್ನು ತಿಳಿಸಿದ್ದೇನೆ. ಎರಡನೆಯ ಉಪನ್ಯಾಸದಲ್ಲಿ ಈ ಕನ್ನಡನಾಡಿನ ಜನಗಳ ಬದುಕು ಸುಗಮವಾಗಬೇಕಾದರೆ, ಸುಖಕರವಾಗಬೇಕಾದರೆ, ಏನೇನು ಆಗಬೇಕು ಎಂಬುದನ್ನು ಕುರಿತು ಹೇಳಿದ್ದೇನೆ.'

ಈ ಎರಡು ಉಪನ್ಯಾಸಗಳಲ್ಲಿ ಇಲ್ಲಿಯ ಮಳೆ–ಬೆಳೆ, ನೈಸರ್ಗಿಕ ಸ್ವರೂಪ, ಅನ್ನದ ಪ್ರಶ್ನೆ, ವಿವಿಧ ಭಾಷೆ, ವಿವಿಧ ಮತಗಳ ಸಮ್ಮಿಶ್ರಣದ ಪರಿಣಾಮ, ಚಿತ್ರಕಲೆ, ವಾಸ್ತುಶಿಲ್ಪ, ಸಾಹಿತ್ಯ, ಸಂಗೀತ–ಇವುಗಳ ಜಾತೀಯತೆ, ಬಗೆಗೆಯೂ ವಿಚಾರಿಸಲಾಗಿದೆ. "ಎಲ್ಲಿಯತನಕ ನಮ್ಮ ಜನರು ವ್ಯಕ್ತಿಗತ ಹಕ್ಕೊಂದನ್ನೇ ಬಯಸುತ್ತಾರೆಯೋ, ತಮ್ಮ ಹೊಣೆಗಾರಿಕೆಯನ್ನು ಮರೆತು

ವರ್ತಿಸುತ್ತಾರೆಯೋ, ಅಲ್ಲಿಯ ತನಕ ನಾವು ಅಭಿವೃದ್ಧಿಯನ್ನು ಹೊಂದಲಾರೆವು; ಕುಸಿಯುತ್ತಿರುವ ನಮ್ಮ ನೈತಿಕ ಬಗೆಗಳನ್ನು ಕುರಿತು ಒಂದಿಷ್ಟು ಹೆಚ್ಚಿಗೆ ಒತ್ತಿಹೇಳಿದ್ದೇನೆ; ನಮ್ಮ ತರುಣಜನಾಂಗ, ಈಗಾಗಲೇ ದೇಶವನ್ನು ಅವನತಿಗೆಳೆದ ಹಿರಿಯರ ದಾರಿಯನ್ನು ತುಳಿಯಲೇ ಬಾರದು" (ಲೇಖಕರ ನುಡಿ ಪುಟ ೫-೬) ಎಂಬ ಮಾತುಗಳ ಹಿನ್ನೆಲೆ ಈ ಎರಡು ಭಾಷಣಗಳನ್ನು ಅರಿತುಕೊಳ್ಳಲು ಸಾಧನವಾಗಿವೆ.

ಇಲ್ಲಿನ ಜನತೆ, ಇದು ಒಂದು ರಾಷ್ಟ್ರ (ಭಾರತಕ್ಕೆ ಅನ್ವಯಿಸಿ) ಎಂಬ ಭಾವನೆಯಿಂದ ದುಡಿದವರಲ್ಲ; ರಾಷ್ಟ್ರ, ರಾಷ್ಟ್ರೀಯತೆ, ರಾಷ್ಟ್ರೀಯರು ಇವೆಲ್ಲ ಯುರೋಪದಿಂದ ಬಂದ ಇತ್ತೀಚಿನ ಭಾವನೆಗಳು; ತಾನು (ಪ್ರಜೆ) ಪ್ರಭು ಎಂಬ ವಿಚಾರವೂ ಹೊರಗಿನಿಂದಲೇ ಈಚೆಗೆ ಬಂದುದು. ಆಳುವುದರಲ್ಲಿ, ಕ್ಷಾತ್ರಮೆರೆಸುವುದರಲ್ಲಿ, ಸಂಚುಹೂಡುವುದರಲ್ಲಿ, ಸಮರದ ತಂತ್ರಗಳಲ್ಲಿ ಯಾರು ನಿಷ್ಣಾತರೋ ಅವರು ತಮ್ಮ ಸೇವೆಯನ್ನು ಯಾರು ಹೆಚ್ಚಿಗೆ ಬೆಲೆ ತೆರಬಲ್ಲರೋ ಅವರಿಗೆ ತಮ್ಮನ್ನು ಮಾರಿಕೊಂಡು ನಿಷ್ಠೆ ತೋರಿಸಿದರು. 'ರಾಜನಿಷ್ಠೆ' ಎಂಬ ಪದಕ್ಕೆ ಆ ನಿಷ್ಠೆಯನ್ನು ಕೊಳ್ಳಬಲ್ಲ ರಾಜನ ವರ್ಚಸ್ಸು ಮತ್ತು ಸಾಂಪತ್ತಿಕ ಅನುಕೂಲಗಳ ಜತೆಯಲ್ಲಿ, ತನ್ನ ಅಧಿಕಾರವನ್ನು ಬೆಳೆಯಿಸುವ ಹಂಬಲ ಕಾರಣವಾಗಿತ್ತೇ ಹೊರತು ಹೆಚ್ಚಿನದೇನೂ ಇರಲಿಲ್ಲ; ಪ್ರಜೆಗಳ ನೆಮ್ಮದಿ ಮುಖ್ಯವೆನಿಸಿರಲಿಲ್ಲ; ನಿಷ್ಠೆ ದೇಶಕ್ಕಿರಲಿಲ್ಲ; ದೇಶಕ್ಕೆ ನಿಷ್ಠೆ ಸಾರ್ವಜನಿಕ ಗುಣವಾಗಿ ಬೆಳೆದು ಬಂದಿದ್ದರೆ ಸಿಡುಗಾಲದಲ್ಲಿ ಈ ದೇಶಕ್ಕೆ ದಂಡಯಾತ್ರೆಯನ್ನು ನಡೆಯಿಸಿದವರು. ಈ ದೇಶವನ್ನು ಗೆದ್ದು ಆಳುವುದು ಸಾಧ್ಯವಾಗುತ್ತಿರಲಿಲ್ಲ. ಶಕ್ತಿ, ಅರಿವು, ಕೌಶಲ್ಯ ಇರುವವರಿಗೆ ಯಾವುದೇ ಸಮಾಜದಲ್ಲಿ ಮೇಲಿನ ಸ್ಥಾನವಿರುತ್ತದೆ. ಜನರಲ್ಲಿ ಸ್ಥಾನಮಾನಗಳ ವ್ಯತ್ಯಾಸವೇ ಇಲ್ಲದಂತಹ ಸಮಾಜವೇ ಇಲ್ಲ: ನಮ್ಮಲ್ಲಿ ಅದರ ವಿಪರೀತವಷ್ಟೇ ಕಾಣಿಸುತ್ತದೆ. ನಮ್ಮ ದೇಶದ ಜಾತೀಯ ಸಮಸ್ಯೆ, ಕೇವಲ ಸಾಮಾಜಿಕ ಸಮಸ್ಯೆಯಾಗಿ ಉಳಿಯದೆಯೇ, ಧಾರ್ಮಿಕ ನಂಬಿಗೆಗಳನ್ನು ಹೊತ್ತ ಸಮಸ್ಯೆಯಾಗಿದೆ. ಭಾರತದಲ್ಲಿರುವಂತೆ, ಕರ್ನಾಟಕದಲ್ಲಿ ಪ್ರತಿಯೊಂದು ಮನೆಯಲ್ಲೂ ಕುಲಬೆರಕೆಯ ಮಿಶ್ರಸಂತತಿಯ ಚಹರೆಗಳು ಕಾಣಲು ಸಿಗುತ್ತವೆ. ನಮ್ಮ ಕರ್ನಾಟಕದ ಜನರು ಈಚೀಚೆಗೆ ಕನ್ನಡನುಡಿಯನ್ನೇ ಆಡುತ್ತ ಬಂದಿರುವರಾದರೂ ಅವರು ನೆಲಸಿದ ನೆಲ, ನಡೆಯಿಸಿದ ಜೀವನ, ಹೊತ್ತುಬಂದ ನಂಬಿಕೆ ಪೂಜಿಸಿದ ದೇವರು– ದಿಂಡರು, ಸಾವಿರತೆರನಲ್ಲಿ ರೂಪಗೊಂಡವು. ಒಂದೇ ಭಾಷೆಯನ್ನಾಡುವ ಜನರಾದರೂ ಅವರೇ ಪರಸ್ಪರ ಬೆರೆಯುವ ಎಂದರೆ ಊಟದಲ್ಲಿ, ಮದುವೆಗಳಲ್ಲಿ ಕೂಡಲಾರದ ಜನಗಳಾದರು. ವೀರಶೈವರಂಥ ಸಮಾಜದ ದೊಡ್ಡಬಣಗಳಲ್ಲೂ ಜಾತಿಯ ಗುಂಪುಗಳಿವೆ: ದೊಡ್ಡದೊಡ್ಡವರ ಹೆಸರುಗಳನ್ನು

ಹಲವು ಬಾರಿ ಬಾಯಲ್ಲಿ ಉಚ್ಚರಿಸಿದರೂ, ಹೆಣ್ಣು ತರುವಾಗ, ಹೆಣ್ಣು ಕೊಡುವಾಗ, ಓಟು ಬೇಡುವಾಗ, ಮಾತಿನ ಔದಾರ್ಯ ನಮ್ಮ ನಡವಳಿಕೆಯಲ್ಲಿ ಕಾಣಿಸುವುದಿಲ್ಲ. ಅಲ್ಲಿ ಕಾಣುವುದು ಜಾತೀಯತೆಯ ದೃಷ್ಟಿ ಮಾತ್ರ. ಕರ್ನಾಟಕದ ಜನಗಳ ಭಾವನೆಗೆ ದೀರ್ಘಕಾಲ ಆಹಾರವನ್ನೊದಗಿಸಿದ ಉದಾಹರಣೆಗಳಲ್ಲಿ ಮತಸಂಪ್ರದಾಯಗಳ ಪ್ರಭಾವ ಪರಮ ಅಧಿಕವಾಗಿದ್ದುದನ್ನು ಕಾಣುತ್ತೇವೆ. ಕನ್ನಡನಾಡಿನ ಹಲವಾರು ಕ್ಷೇತ್ರಗಳು ಇಂದು ಕನ್ನಡನಾಡಿನೊಳಗಿಲ್ಲ. ಅಜಂತಾ ಅಂತಹ ಒಂದು ತಾಣ. ಅಜಂತಕ್ಕೆ ಸಮೀಪದಲ್ಲಿಯೇ 'ಕನ್ನಡ' ಎಂಬ ಒಂದು ಹಳ್ಳಿಯೇ ಇದೆ! ಅಜಂತಾ, ಎಲ್ಲೋರಾಗಳಲ್ಲಿ ಜೈನ, ಬೌದ್ಧ, ಬ್ರಾಹ್ಮಣ ಮೂರೂ ಧರ್ಮಗಳ ಮಾಯಾಲೋಕ ಸೃಷ್ಟಿಗೊಂಡಿದೆ. ಜಗತ್ಪ್ರಸಿದ್ಧ ಗುಹಾಂತರ್ಗತ, ಅಖಂಡಶಿಲೆಯಲ್ಲಿ ಕೆತ್ತಿ ತೆಗೆದ ಭವ್ಯದೇವಾಲಯಗಳಿವೆ. ಐಹೊಳೆ, ಪಟ್ಟದಕಲ್ಲು, ಬಾದಾಮಿಯಲ್ಲಿ ಶಿವ, ವಿಷ್ಣು ಭಕ್ತರ ಭಕ್ತಿಭಾವಗಳನ್ನು ಬೆಳೆಸುವ ದೇವಾಲಯಗಳಿವೆ. ಇವೆಲ್ಲ ಒಂದುಕಾಲದ ಯಾತ್ರಾಸ್ಥಳಗಳು. ಇವೇ ನಮ್ಮ ಜನರ ಮನಸ್ಸನ್ನು ಒಂದುಗೂಡಿಸಿದ್ದವೇ ವಿನಾ ಅರಮನೆಗಳಲ್ಲ. ಸಾಹಿತ್ಯದಲ್ಲಿ ಸಾಮುದಾಯಿಕ ಪ್ರಭಾವದ ದೃಷ್ಟಿಯಿಂದ ಸರ್ವಜ್ಞ, ಅಕ್ಕಮಹಾದೇವಿ, ಬಸವಣ್ಣ ಮೊದಲಾದವರು ಬಿತ್ತಿದ ನುಡಿಮುತ್ತುಗಳು, ಜನತೆಯ ಮನಸ್ಸನ್ನು ಎಚ್ಚರಿಸಿದಂತೆ, ವಿದ್ವತ್ಪ್ರತಿಷ್ಠೆಯನ್ನೋ, ಕಲಾಪ್ರತಿಷ್ಠೆಯನ್ನೋ ಪಂಡಿತರಲ್ಲಿ ಮೂಡಿಸಿದ ರನ್ನ ಪಂಪರು ಮಾಡಿದ್ದಾರೆಂದು ಎನಿಸುವುದಿಲ್ಲ. ಹೀಗೆಯೇ ನಮ್ಮ ಜಾತ್ರೆ, ಹಬ್ಬ, ದೊಡ್ಡಾಟ, ಸಣ್ಣಾಟಗಳು ಜನಮನವನ್ನು ಸ್ಪಂದಿಸಿವೆ: ನಮ್ಮ ವಾಸ್ತು, ಶಿಲ್ಪ, ಭವ್ಯ ನಿಸರ್ಗ, ಅವರ ವೈವಿಧ್ಯ–ನಮ್ಮ ಜನರ ಪಾಲಿಗೆ ಮರೆಯಲಾರದ ನೆನಪು ಉಳಿಸಬಲ್ಲವು.

ಕರ್ನಾಟಕದ ಪ್ರಾಚೀನತೆ ಕ್ರಿ. ಶ. ಒಂದೆರಡು ಶತಮಾನಗಳ ಪೂರ್ವಕ್ಕು. ವೈಜಯಂತಿ, ಬನವಾಸಿ, ಬಾದಾಮಿಗಳ ಸಂಪರ್ಕ ರೋಮನ್ನರಿಗೋ ಗ್ರೀಕರಿಗೋ ಇದ್ದಂತೆ ಕಾಣುತ್ತದೆ. ಇಲ್ಲಿ ಸಮೃದ್ಧವಾಗಿದ್ದ ಅರಣ್ಯ ಇಂದು ಕಣ್ಮರೆಯಾಗಿದೆ. ಯುದ್ಧ, ಜನಸಂಖ್ಯೆ, ಕ್ಷಾಮಾದಿಗಳಿಂದ ಕರ್ನಾಟಕದ ನೆಲದ ಅವನತಿಯಾಗಿದೆ. ನಾವು ನಿಸರ್ಗದ ಆರಾಧಕರಾಗಲಿಲ್ಲ. ನದಿ, ಗುಡ್ಡ, ಬೆಟ್ಟಗಳಿಗೆ ಮಹತ್ವ ಬಂದುದು ಧಾರ್ಮಿಕಭಾವನೆಯಿಂದ ಜನಸಮುದಾಯದ ಸ್ಮೃತಿ ಪಟಲದ ಮೇಲೆ ಉಳಿಯಬಲ್ಲ. ರಾಜರು ಕೆಲವರೇ. ಶಂಕರ-ಮಧ್ವ–ರಾಮಾನುಜ-ಬಸವೇಶ್ವರರಂತಹ ಕೆಲವರು ಮಾತ್ರ ಉಳಿದಿದ್ದಾರೆ–ಜನರನಾಲಿಗೆಯ ಮೇಲೆ ಈ ಶತಮಾನದಲ್ಲಿಬ್ಬ ವಿಶ್ವೇಶ್ವರಯ್ಯನವರು, ನಾಲ್ವಡಿ ಕೃಷ್ಣರಾಜ ಒಡೆಯರು ಉಳಿದಿದ್ದಾರೆ. ಬಹುಕಾಲದಿಂದ ಜನರಿಗೆ ಗೊತ್ತಿರುವ ಇನ್ನೊಂದು ಕಲಾಮಾಧ್ಯಮವೆಂದರೆ–ಕರ್ನಾಟಕ ಸಂಗೀತ. ಇದಿಷ್ಟು ಡಾ. ಶಿವರಾಮ ಕಾರಂತರು

‘ಕರ್ನಾಟಕ ಇಂದು’ ಎನ್ನುವ ಭಾಷಣದಲ್ಲಿ ಆಡಿದ ಮಾತುಗಳ ಸಾರಾಂಶ. ಇನ್ನು ‘ಕರ್ನಾಟಕ ನಾಳೆ’ ಎಂಬ ಭಾಷಣದತ್ತ ತಿರುಗುವಾ:

ಕರ್ನಾಟಕವು, ರಾಜಕೀಯವಾಗಿ ತುಂಡು ತುಂಡಾಗಿ ಹರಿದು ಹೋದುದರಿಂದ, ಈ ತುಂಡುಗಳಲ್ಲಿ ಬದುಕುತ್ತಿದ್ದ ಜನರಲ್ಲಿ, ಸಮಗ್ರ ಕರ್ನಾಟಕದ ಬಗೆಗೆ ಭಾವನೆ, ಚಿಂತನೆ ಕಾಣಿಸಿರಲಿಲ್ಲ. ಆದರೂ ಕನ್ನಡ ತಾಯಿಯ ಮಕ್ಕಳು ತಾವು ಎಂಬುದು ಮಾತ್ರ ಅವರ ಸ್ಮರಣೆಯಲ್ಲಿತ್ತು. ಇಲ್ಲಿಯ ಬೌದ್ಧ ಧರ್ಮ ಕಣ್ಮರೆಯಾಯಿತು, ಜೈನಧರ್ಮದ ಪ್ರಭಾವ ಕ್ಷೀಣಿಸಿತು; ಇಸ್ಲಾಂ ಈ ನಾಡಿನ ವಿಭಜನೆಗೆ, ಧಾರ್ಮಿಕ ವಿರಸಕ್ಕೆ ಕಾರಣವಾಯಿತು. ಬ್ರಿಟಿಶರು ಬಂದ ಮೇಲಂತೂ, ಪರಸ್ಪರರಲ್ಲಿ, ಸಾಕಷ್ಟು ವೈಮನಸ್ಸಾದವು. ನೆಲ ನೀರು ಬದುಕಿಗೆ ಎಷ್ಟು ಅವಶ್ಯವೋ ಅಷ್ಟೇ, ನಿಸರ್ಗಸಂಪತ್ತು, ಕಾಡು, ಮೇಡು, ಬೆಟ್ಟ, ಬಯಲು, ನದಿ, ಕೊಳ, ಅವಶ್ಯವೆಂದು ತಿಳಿದು, ಇಲ್ಲಿನ ಜನತೆ ವರ್ತಿಸಲಿಲ್ಲ: ಪ್ರಕೃತಿ ಸೌಂದರ್ಯವನ್ನು ಹಾಳು ಮಾಡಿದರು. ಇಲ್ಲಿಯ ಹುಲ್ಲೆ, ಹುಲಿ, ಕಡವೆ, ಚಿರತೆ ಕಣ್ಮರೆಯಾದವು ! ಇದರ ಜೊತೆಗೆ ನೀರಾವರಿಯಂಥ ಅಭಿವೃದ್ಧಿ ಕಾರ್ಯಗಳೂ ಅರಣ್ಯನಾಶದಿಂದ ನಡೆದಿವೆ ! ಜೇಟಿ, ಸಾಗರಗಳ ಮೀನು ಹಿಡಿಯುವಿಕೆಯಿಂದ ಅನೇಕ ಜಾತಿಯ ಪ್ರಾಣಿಗಳು, ಮೀನುಗಳ ಜಾತಿಯೇ ಕಣ್ಮರೆಯಾಗುತ್ತಲಿವೆ! ಕೃಷಿಗಾಗಿ ಭಯಾನಕ ಅರಣ್ಯವನ್ನು ಕಡಿದವರು, ಒಂದು ಗಿಡವನ್ನೂ ನೆಟ್ಟು ಬೆಳೆಸಿದವರಲ್ಲ. ‘ ಜನರಿಗೆ ಅನ್ನಕೊಟ್ಟು ಉದ್ಧರಿಸುತ್ತೇವೆ’ ಎನ್ನುವ ರಾಜಕೀಯ ಮುಖಂಡರು, ನಮ್ಮಲ್ಲಿ ಅಂತಹ ಆಮಿಷವನ್ನು ಹುಟ್ಟಿಸಿ, ‘ನಮ್ಮ ಮತವನ್ನು ಕದ್ದು’, ತಾವು ಸ್ವತಂತ್ರ ಜೀವನ ನಡೆಸುತ್ತಾರೆ! ಎರಡನೆಯ ಮಹಾಯುದ್ಧದಲ್ಲಿ ಜರ್ಮನ್ನರ ನಗರಗಳು, ಕಾರಖಾನೆಗಳು, ಯೋಧರು ಕಣ್ಮರೆಯಾದರು ಆದರೂ, ಅಲ್ಲುಳಿದ ಬಾಲಕರು, ವೃದ್ಧರು ಹತ್ತು ವರುಷಗಳಲ್ಲಿ, ತಮ್ಮ ರಾಜ್ಯವನ್ನು ಮೊದಲಿನ ಸ್ಥಿತಿಗೆ ತಂದರು ! ಅದರಂತೆಯೇ ಜಪಾನದೇಶ. ಅಲ್ಲಿನ ಜನ ತಮ್ಮನ್ನು ಸಾಕುವ ಹೊಣೆಯನ್ನು ಸರಕಾರದ ಮೇಲೆ ಹಾಕಿ ಕುಳಿತುಕೊಳ್ಳಲಿಲ್ಲ. ನಮ್ಮ ಜನ, ನಮ್ಮ ಸರಕಾರೀ ನೌಕರರಂತೆ ಅವರು ಮೈಗಳ್ಳರಲ್ಲ; ದೇಶವನ್ನು ಕಟ್ಟಿ, ಸಮರ್ಥವನ್ನಾಗಿಸುವ ಕೆಲಸದಲ್ಲಿ ಸದಾ ತೊಡಗಿರುತ್ತಾರೆ. ಹೀಗಾದರೆ ನಾವು ಮೇಲೆ ಬರುವುದು ಸಾಧ್ಯವಿಲ್ಲ ‘ನಮ್ಮ ಹಿರಿಯರು ಕಿರಿಯರಿಗೆ ಮಾರ್ಗದರ್ಶನ ಮಾಡಲಾರರು’. ಭೂಮಿಯೊಳಗಿನ ಸಂಪತ್ತನ್ನೆಲ್ಲ ಹೊರತೆಗೆದು ಮಾರುತ್ತಾರೆ. ಎಲ್ಲವನ್ನು ಹೊರತೆಗೆದುದಾದರೆ ನಮ್ಮ ಮೊಮ್ಮಕ್ಕಳಿಗೆ ಏನು ಉಳಿದೀತು ಎಂಬ ಪ್ರಜ್ಞೆ ಬೇಡವೇ ? ನೆಲ, ಜಲ, ಹವೆ ಎಲ್ಲವೂ ಕಲುಷಿತಗೊಂಡಿದೆ. ಕೇವಲ ಕೆಲವೇ ವ್ಯಕ್ತಿಗಳನ್ನು ನೆನೆಯುವುದಕ್ಕಿಂತ, ದೇಶವನ್ನು ದೊಡ್ಡದು ಮಾಡಿದ ಜನರ ಬಗೆಗೆ ಚರಿತ್ರೆ ತಿಳಿಸಬೇಕು.

ಜನತೆ ದೊಡ್ಡವರಾಗದೆ ದೇಶ ದೊಡ್ಡದಾಗದು. ಇನ್ನು ಆರ್ಥಿಕರಂಗದಲ್ಲಿ ಹೇಳು ವುದಾದರೆ, ನಮ್ಮ ರಾಷ್ಟ್ರೀಯ ಉದ್ಯಮಗಳು ನಷ್ಟದಲ್ಲಿಯೇ ನಡೆಯುತ್ತವೆ. ವ್ಯಕ್ತಿಯ ಆದಾಯ ಹೆಚ್ಚಿದ್ದರೂ ಆ ಆದಾಯಕ್ಕೆ ಮಾಲು ಕೊಳ್ಳುವ ಶಕ್ತಿ ಕಡಿಮೆಯಾಗಿದೆ. ಆವಶ್ಯಕ ವಸ್ತುಗಳ ಬೆಲೆಗೆ ಹೊಂದಾಣಿಕೆ ಕಾಣುವುದಿಲ್ಲ. ನಾವು ದುಡಿಯುವ ವೃತ್ತಿಯಲ್ಲಿ ನಮಗೆ ತೃಪ್ತಿ ಇರಬೇಕು: ನಮ್ಮ ಜನರಿಗೆ ಔದ್ಯಮಿಕ ಅವಕಾಶ ಹಾಗೂ ಶಿಕ್ಷಣ ಕೊಡಬೇಕಾಗಿದೆ. ನಮ್ಮ ಪದವೀಧರರಿಗೆ ಹೊಟ್ಟೆಹೊರೆಯುವುದೇ ಕಷ್ಟವಾಗಿದೆ: ಇಂತಹ ಶಿಕ್ಷಣ ಪದ್ಧತಿ ನಮ್ಮಲ್ಲಿದೆ. ಕರ್ನಾಟಕದ ವಿಶ್ವವಿದ್ಯಾಲಯಗಳಲ್ಲಿ, ಮುಂದುವರಿದ ರಾಷ್ಟ್ರಗಳಲ್ಲಿ ನಡೆಯು ವಂತೆ, ಸಂಶೋಧನೆ ನಡೆಯುತ್ತಿಲ್ಲ. ನೋಬೆಲ್ ಬಹುಮಾನ ಪಡೆದ ಕನ್ನಡಿ ಗರೆಷ್ಟು ? ಕ್ರೀಡೆಗಳಲ್ಲೂ ಸಾಹಸಪ್ರವೃತ್ತಿ ಕಡಿಮೆಯೇ. "ಬೌದ್ಧಿಕ ಶಿಕ್ಷಣಕ್ಕೆ ಎಲ್ಲರೂ ಹಕ್ಕುದಾರರು" ಎಂಬ ಜನಪ್ರಿಯವಂಚನೆಯ ದಾರಿಯನ್ನು ನಾವು ಮರೆತು ಬಿಡಬೇಕು. ಅಗ್ರದಲ್ಲಿ ಸ್ಥಾನಮಾನ ಪಡೆಯುವ, ಮತ್ತು ಶಿಕ್ಷಣಾ ಲಯಗಳ ಪ್ರವೇಶಕ್ಕೆ ಅರ್ಹತೆಯನ್ನು ಕೊಡುವ ಪ್ರವೃತ್ತಿಯನ್ನು ಬೆಳೆಸಿಕೊಂಡಿ ದ್ದೇವೆ. ಯಾವುದೇ ಸಂಸ್ಥೆಯು, ಯೋಗ್ಯತೆ, ಬುದ್ಧಿಮತ್ತೆ, ಕಾರ್ಯಸಾಧನೆ ಗಳಿಗೆ ಬೆಲೆಕೊಡದೆಂಬೋ ವ್ಯಕ್ತಿಗಳಿಗೆ ಮನ್ನಣೆ, ಸಂಬಳಕೊಡುವುದು ಸರಿಯಲ್ಲ. ಈ ನೀಚಪ್ರವೃತ್ತಿಯಿಂದ ದೇಶಕ್ಕೆ ದೇಶವೇ ದಂಡ ತೆರುವಂತಾಗುತ್ತದೆ. ಅಮೇರಿಕೆ ಯಂತಹ ದೇಶದಲ್ಲಿ ಯಾವುದೇ ದೇಶದ ಬುದ್ಧಿವಂತನಿಗೂ ಬೆಲೆ ತೆರುತ್ತಾರೆ. ನಮ್ಮ ದೇಶದಲ್ಲಿ ಮಾತ್ರ ಯೋಗ್ಯತೆ ಅಯೋಗ್ಯತೆಗೆ ಸಮಾನವಾಗಿದೆ. ಬುದ್ಧಿಸಂಪತ್ತು ಎಲ್ಲಿದ್ದರೂ ಮಾನ್ಯ. ನಿಸ್ಸಾರ ನೆಲದಲ್ಲಿ ಪ್ರಬುದ್ಧಸಸಿಯು ಉತ್ಪನ್ನವಾಗಲಾರದು. ನಮ್ಮ ಜನ ಸಾಹಸಿಗರಾಗಬೇಕು. ಇಂದಿನ ಜನಸಮೂ ಹವೇ ವ್ಯಾಧಿಗ್ರಸ್ತವಾಗಿದೆ. ಲಂಚ, ವಂಚನೆ, ಕಳ್ಳಸಂತೆ ಇವೆಲ್ಲ ಬ್ರಹ್ಮಸ್ವರೂಪ ದಲ್ಲಿವೆ. ಇದು ಆರೋಗ್ಯವಂತ ಸಮಾಜದ ಲಕ್ಷಣವಲ್ಲ. ನಮ್ಮ ಜನ ಸಂಗೀತ ವನ್ನು ವಿಲಾಸಕ್ಕಾಗಿ ಬಳಸಿಕೊಂಡದ್ದು ಕಡಿಮೆ. ಇಂದು ಸಾಹಿತ್ಯ-ಸಂಗೀತ-ನೃತ್ಯ ಪ್ರಿಯರ ಗುಂಪುಗಳೇ ಬೇರೆಬೇರೆಯಾಗಿವೆ. ಸತ್ಯ, ಒಮ್ಮತವನ್ನು ಬಿಂಬಿಸುವ ಸಾಧನವಾಗಿಲ್ಲ. ಇಂದಿನ ನಾಟಕಗಳೂ ಸಾಮೂಹಿಕ ಸಂತೋಷವನ್ನೀಯದಿ ರುತ್ತಿಲ್ಲ. ತಂತ್ರ ಕೌಶಲ್ಯದ ದೃಷ್ಟಿಯಿಂದ, ನಮ್ಮ ರಂಗಭೂಮಿ ಪರದೇಶಗಳ ಕಡೆಗೆ ದೃಷ್ಟಿ ಹೊರಳಿಸಿದೆ. ಸಾಮೂಹಿಕ ಜಾಗ್ರತಿಯಾಗಬೇಕಾದರೆ ಅಂಥ ವಸ್ತುವೇ ಬೇಕು.

ಈ ಎರಡು ಉಪನ್ಯಾಸಗಳು, ಉಪನ್ಯಾಸಗಳಾದುದರಿಂದ ಕಾಲದ ಮಿತಿಗೆ ಒಳಗಾದವು. ಹೀಗಾಗಿ ಪುಸ್ತಕದ ಗಾತ್ರ ಕಿರಿದಾಗಿದೆ. ಒಂದೊಂದು ಉಪ ನ್ಯಾಸವೂ ವಸ್ತುವಿಗೆ ಅನುಗುಣವಾದ ಆಲೋಚನೆಗಳನ್ನು ಒಳಗೊಂಡಿದೆ.

ಮೊದಲಿನದರಲ್ಲಿ ಹಿಂದಿನವರು ಸಾಧಿಸಿದ ಪ್ರಗತಿಯ ಚಿತ್ರ ಭೌಗೋಲಿಕ ಪರಿಸರ, ನಿಸರ್ಗದ ಚಿತ್ರಗಳನ್ನು ಕಾಣುತ್ತೇವೆ. ಎರಡನೆಯ ಉಪನ್ಯಾಸ–ಸ್ವಾತಂತ್ರ್ಯದ ಈಚಿಗಿನ ಕರ್ನಾಟದಕ ಸ್ಥಿತಿಗತಿಗಳನ್ನು ಬಿಂಬಿಸುತ್ತದೆ. ಮೊದಲನೆಯ ಲೇಖನದಲ್ಲಿ ನಮ್ಮ ಮನಸ್ಸಿಗೆ ತೃಪ್ತಿಯನ್ನುಂಟುಮಾಡುವ ಕೆಲವು ಅಂಶಗಳಾದರೂ ಇವೆ. ಎರಡನೆಯ ಉಪನ್ಯಾಸದಲ್ಲಿ ಕನ್ನಡಿಗರ ಕೊರತೆಗಳ ಚಿತ್ರಣವೇ ಕಾಣುತ್ತದೆ. ಇಂದಿನ ಪ್ರಜಾರಾಜ್ಯದ ಹಿನ್ನೆಲೆಯಲ್ಲಿ, ನಮ್ಮ ಜನ, ನಮ್ಮ ವಿಶ್ವ ವಿದ್ಯಾಲಯಗಳು, ನಮ್ಮ ಸರಕಾರಗಳು, ಸಾಮೂಹಿಕವಾಗಿ ಯಾವ ರೀತಿ ಸ್ಪಂದಿಸಿದ್ದಾರೆಂಬುದನ್ನು ಹೇಳಿದ್ದಾರೆ ಡಾ. ಶಿವರಾಮ್ ಕಾರಂತರು. ಆನುಷಂಗಿಕವಾಗಿ ಜಪಾನ, ಜರ್ಮನ್ ದೇಶಗಳ ಜನರ ಸಾಮೂಹಿಕ ಪ್ರಜ್ಞೆ, ದುಡಿಮೆ, ಶ್ರದ್ಧೆ, ರಾಷ್ಟ್ರೀಯ ಭಾವನೆಗಳನ್ನು ಎತ್ತಿತೋರಿಸಿದ್ದಾರೆ ನಮ್ಮವರ ಆಲಸ್ಯ, ದಾರಿದ್ರ್ಯ, ಲಂಚ, ವಂಚನೆ, ಭ್ರಷ್ಟಾಚಾರಗಳ ವಿಷಯಗಳನ್ನು ಎತ್ತಿ ಹೇಳಿದ್ದಾರೆ ಇಲ್ಲಿಯ ಅವರ ಎನಿಸಿಕೆಗಳು ತಾತ್ವಿಕವಾದವುಗಳೇ ವಿನಾ ವೈಯಕ್ತಿಕವಾದವುಗಳಲ್ಲ. ಕರ್ನಾಟಕದ ಜನರ ಸ್ವಭಾವದ ಈ ಮಾತುಗಳು ಭಾರತದ ಯಾವುದೇ ಪ್ರದೇಶದ ಜನರಿಗೂ ಅನ್ವಯಿಸಬಲ್ಲವಾಗಿವೆಯೆಂಬುದು ಕಾರಂತರ ಅಭಿಮತ. ನಮ್ಮ ಸಂಶೋಧನೆ ಎಂತಹವು, ನಮ್ಮ ಯೋಜನೆ ಎಂತಹವು–ಇವುಗಳಿಂದಾಗಿ ನಮ್ಮ ಜನತೆಗೆ ಆದ ಲಾಭಹಾನಿಗಳನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಡಾ ಶಿವರಾಮ್ ಕಾರಂತರು ನಿರ್ಭಿಡೆಯ ವ್ಯಕ್ತಿಯಾಗಿರುವುದರಿಂದ ಎಲ್ಲವನ್ನು ಸ್ಪಷ್ಟವಾಗಿ ಹೇಳುವ ಎದೆಗಾರಿಕೆ ಅವರದು. ಅವರು ವಿಚಾರಶೀಲರೂ, ಸೃಜನಶೀಲರೂ, ರಾಷ್ಟ್ರೀಯವಾದಿಗಳೂ ಆಗಿರುವುದರಿಂದ ಅವರ ಈ ಅಭಿಪ್ರಾಯಗಳಿಗೆ ಬಹು ಬೆಲೆ ಇದೆ. ಇವು ನಿಜವಾಗಿ ವಿಚಾರಪೂರ್ಣ ಉಪನ್ಯಾಸಗಳು. ನಮ್ಮ ಸಾಹಿತ್ಯ, ನಾಟಕ, ಚಿತ್ರಕಲೆ–ಮೊದಲಾದ ಕ್ಷೇತ್ರಗಳಲ್ಲಿ ಏನೇನು ನಡೆದಿದೆಯೆನ್ನುವುದರ ಮೇಲೆ ವಿಶೇಷ ಬೆಳಕು ಬೀರಬಲ್ಲ ಮಾತುಗಳು ಇಲ್ಲಿವೆ. ನಮ್ಮ ಯುವಜನಾಂಗ–ನಾಳಿನಭಾರತವನ್ನು ರೂಪಿಸುವುದರಲ್ಲಿ ಮಹತ್ವದ ಪಾತ್ರವಹಿಸಬಲ್ಲವರಿಗೆ ಬಹು ಉಪಯುಕ್ತ ಮಾತುಗಳು ಇಲ್ಲವೆ. ಕೃತಿ ಚಿಕ್ಕದಾದರೂ ಬಹು ಮಹತ್ವಪೂರ್ಣ, ಅನುಭವಶಾಲಿಯ ಕೃತಿಯಾಗಿದೆ.

ಬಿ. ಸಿ. ಜವಳಿ

ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗದ ಉಪನ್ಯಾಸ ಗ್ರಂಥ ಮಾಲೆಯಲ್ಲಿ ಪ್ರಕಟಗೊಂಡ– ೧) ಪ್ರಕೃತಿಯೇ ಗುರು ೨) ಬೀದರ ಜಿಲ್ಲೆಯಲ್ಲಿ ಕೃಷಿ ೩) ಸೂಕ್ಷ್ಮ ಜೀವಿಗಳು ಹಾಗೂ ನಾವು–ಎಂಬ ಮೂರು ಚಿಕ್ಕ ಗ್ರಂಥಗಳು ಇಂಗ್ಲೀಷ ಸಾಹಿತ್ಯ, ಕೃಷಿ ವಿಜ್ಞಾನ ಮತ್ತು ವಿಜ್ಞಾನ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳು.

೧) ಪ್ರಕೃತಿಯೇ ಗುರು.

ಲೇ: ಬಿ. ಕೆ. ಕುಲಕರ್ಣಿ. ಪ್ರ. ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ (೧೯೮೬) ಪುಟ-೪೫. ಬೆಲೆ ರೂ. ೦=೫೦

ಇಂಗ್ಲೀಷ ಸಾಹಿತ್ಯದ ಕವಿಗಳನ್ನು ಕನ್ನಡದಲ್ಲಿ ಜನ ಸಾಮಾನ್ಯರಿಗಾಗಿ ಪರಿಚಯಿಸಿದ ಗ್ರಂಥಗಳಲ್ಲಿ "ಪ್ರಕೃತಿಯೇ ಗುರು"–ಒಂದು. ಇಂಗ್ಲೀಷ ಸಾಹಿತ್ಯದ ರೋಮ್ಯಾಂಟಿಕ್ ಯುಗದಲ್ಲಿ "ಪ್ರಕೃತಿ ಕವಿ" ಎಂದು ಪ್ರಸಿದ್ಧಿ ಪಡೆದ ವರ್ಡ್ಸ್‌ವರ್ಥ ಕವಿಯ ಜೀವನ ಹಾಗೂ ಸಾಧನೆಗಳನ್ನು ಲೇಖಕರು ಸರಳವಾಗಿ ನಿರೂಪಿಸಿದ ಗ್ರಂಥ. ಇಲ್ಲಿ ಲೇಖಕರು ಪ್ರಕೃತಿಯೆಂದರೆ ದೇವರು, ಶಕ್ತಿ, ವಿಶ್ವ ನಿಯಮವೆಂದು ವಿವರಣೆ ನೀಡಿ, ಅಂಥ ಶಕ್ತಿಯ ಆರಾಧಕನಾದ ವರ್ಡ್ಸ್‌ವರ್ಥನ ಜೀವನಾನುಭವದ ವಿವಿಧ ಮುಖಗಳನ್ನು (ಇಂಗ್ಲೀಷಿನೊಂದಿಗೆ) ಕನ್ನಡ ಅನುವಾದದ ಮೂಲಕ ಸರಳವಾಗಿ, ಅರ್ಥವತ್ತಾಗಿ ತಿಳಿಯಪಡಿಸಲು ಪ್ರಯತ್ನಿಸಿದುದು ಗಮನಾರ್ಹವಾಗಿದೆ.

ಸುಂದರ ಬದುಕನ್ನು ನಿರ್ಮಿಸಿಕೊಳ್ಳುವಲ್ಲಿ ಪ್ರಕೃತಿ ಕಲಿಸಿದ ಪಾಠ, ವರ್ಡ್ಸ್‌ವರ್ಥನ ದೈನಂದಿನ ದೈಹಿಕ ಚಟುವಟಿಕೆಗಳಿಗೆ ಪ್ರಕೃತಿ ನೀಡಿದ ಪ್ರಚೋದನೆ, ಸತ್ಯದ ಸೌಂದರ್ಯದೆಡೆಗೆ ಸಜೀವವಾಗಿ ನಿಂತು ಮುನ್ನಡೆಸಿದ ಬಗೆಯನ್ನು ಆಯಾ ಘಟ್ಟಗಳಲ್ಲಿ ರಚನೆಗೊಂಡ ಕವನಗಳ ಹಿನ್ನೆಲೆಯಲ್ಲಿ ಅವನ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು, ಪ್ರಭಾವವನ್ನು ಪರಿಚಯಿಸಿದ ಈ ಚಿಕ್ಕ ಗ್ರಂಥ-ವರ್ಡ್ಸ್‌ವರ್ಥನನ್ನು ತಿಳಿಯ ಬಯಸುವವರಿಗೆ ಸಹಾಯಕವಾಗುವುದರಲ್ಲಿ ಸಂದೇಹವಿಲ್ಲ.

೨) ಬೀದರ ಜಿಲ್ಲೆಯಲ್ಲಿ ಕೃಷಿ :

ಲೇ : ವಿಜಯಕುಮಾರ ಗಿಡ್ನವರ, ಪ್ರ. ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ (೧೯೮೭.) ಪುಟ ೮೩. ಬೆಲೆ—೦-೫೦.

ಧಾರವಾಡದ ಕೃಷಿವಿಶ್ವವಿದ್ಯಾಲಯದಲ್ಲಿ ಕಾರ್ಯ ಕೈಗೊಳ್ಳುತ್ತಲಿರುವ ಗಿಡ್ನವರ ಅವರು, ಬೀದರ ಜಿಲ್ಲೆಯಲ್ಲಿ ಸೇವೆ ಸಲ್ಲಿಸುವಾಗ ಕ್ಷೇತ್ರ ಕಾರ್ಯದೊಂದಿಗೆ ರಚಿಸಿದ ಚಿಕ್ಕ ಹೊತ್ತಿಗೆ "ಬೀದರ ಜಿಲ್ಲೆಯಲ್ಲಿ ಕೃಷಿ" ಎಂಬುದು. ಭಾರತವು ಕೃಷಿ ಪ್ರಧಾನ ದೇಶ. ಕೃಷಿಯು ಸರ್ವರನ್ನೂ ರಕ್ಷಿಸುವ ಕಾಯಕ.

ಭಾರತದ ಒಂದು ರಾಜ್ಯವಾದ ಕರ್ನಾಟಕದಲ್ಲಿಯ ಬೀದರ ಜಿಲ್ಲೆಯ ಕೃಷಿ
ಕಾರ್ಯಕಕ್ಕೆ ಸಂಬಂಧಿಸಿದಂತೆ ಅದರ ಭೌಗೋಲಿಕ ಕ್ಷೇತ್ರ, ಆ ಕ್ಷೇತ್ರದಲ್ಲಿ
ಬೆಳೆಯುವ ದ್ವಿದಳ, ವಾಣಿಜ್ಯ ಮೊದಲಾದ ಬೆಳೆಗಳ ಪರಿಚಯವನ್ನು ಮಾಡು
ವಲ್ಲಿ, ಕಪ್ಪು ಭೂಮಿ, ಕೆಂಪು ಜೆಂಬಿಟ್ಟಿಗೆ ಭೂಮಿಗಳ ಗುಣಧರ್ಮ ಗುರುತಿಸಿ ಕಾಲ
ಮಾನಕ್ಕನುಗುಣವಾಗಿ ಬೆಳೆದ ಬೆಳೆಗಳ ಇಳುವರಿಯಲ್ಲಿಯ ಏರಿಳಿತಗಳನ್ನು
ಅಂಕಿ ಸಂಖ್ಯೆಗಳೊಂದಿಗೆ ಪಟ್ಟಿಗಳಲ್ಲಿ, ಚಿತ್ರಗಳಲ್ಲಿ ನೀಡುವಲ್ಲಿ ಪರಿಹಾರ ಸೂಚಿ
ಸುವಲ್ಲಿ ಅವರಿಗಿರುವ ಕ್ಷೇತ್ರಕಾರ್ಯದ ಅನುಭವವು ಈ ಗ್ರಂಥದಲ್ಲಿ ಎದ್ದು
ಕಾಣುತ್ತದೆ.

ಭೂಮಿಯನ್ನು ಬಿತ್ತನೆಗೆ ತಯಾರಿಸುವದರಿಂದ ಆರಂಭಗೊಂಡು ಪೈರನ್ನು
ಕಟಾವು ಮಾಡಿ ಮನೆಗೆ ತರುವವರೆಗಿನ ಸಾಧಕ ಭಾಧಕಗಳನ್ನು ಸೂಚಿಸಿ,
ವೈಜ್ಞಾನಿಕ ಕ್ರಮಗಳತ್ತ ಕೃಷಿಕರ ಗಮನ ಸೆಳೆದುದು, ಗ್ರಂಥ ಮೂಲಕ
ದಾಖಲಿಗೊಳಿಸಿದುದು–ಕೃಷಿವಿಜ್ಞಾನ ಕ್ಷೇತ್ರದ ಲಾಭ ಜನಸಾಮಾನ್ಯ ರೈತರಿಗೆ
ತಲುಪಲಿ ಎಂಬ ಕಳಕಳಿಯದಾಗಿದೆ. ಸರಳ ಭಾಷೆ, ಸರಳ ನಿರೂಪಣೆಯಿಂದ
ಕೂಡಿದ ಈ ಗ್ರಂಥ ಕೃಷಿಕರಿಗೆ ಮಾರ್ಗದರ್ಶಿ ಎನ್ನಬಹುದು.

೩) ಸೂಕ್ಷ್ಮ ಜೀವಿಗಳು ಹಾಗೂ ನಾವು:

ಲೇ: ವಾಯ್. ಎಫ್. ನೀಲಗುಂದ, ಪ್ರ. ಗುಲಬರ್ಗಾ ವಿಶ್ವವಿದ್ಯಾಲಯ,
ಗುಲಬರ್ಗಾ (೧೯೮೬.) ಪುಟ–೫೦. ಬೆಲೆ ರೂ. ೦=೫೦.

ಗುಲಬರ್ಗಾ ವಿಶ್ವವಿದ್ಯಾಲಯದ ಸೂಕ್ಷ್ಮ ಜೀವಶಾಸ್ತ್ರ, ಅಧ್ಯಯನ
ವಿಭಾಗದ ಮುಖ್ಯಸ್ಥರಾದ ಡಾ. ನೀಲಗುಂದ ಅವರಿಂದ ಪ್ರಸಾರಾಂಗ ಉಪ
ನ್ಯಾಸ ಗ್ರಂಥ ಮಾಲೆಯ ೫ನೆಯ ಪುಷ್ಪವಾಗಿ ಅರಳಿ ನಿಂತ ೫೦ ಪುಟಗಳ ಕಿರು
ಹೊತ್ತಿಗೆ "ಸೂಕ್ಷ್ಮ ಜೀವಿಗಳು ಹಾಗೂ ನಾವು." "ವೈಜ್ಞಾನಿಕ ಯುಗದಲ್ಲಿರುವ
ಇಂದಿನ ಸಾಮಾನ್ಯ ಜನತೆ ವಿಜ್ಞಾನದ ವಿಷಯಗಳನ್ನು ಅರಿತುಕೊಳ್ಳಲಿ
ಯೆಂಬ ಧ್ಯೆಯೋದ್ದೇಶದಿಂದ ಲೇಖಕರು ನಿಸರ್ಗದಲ್ಲಿ ವ್ಯಾಪಕಗೊಂಡ
ಸೂಕ್ಷ್ಮ ಜೀವಿಗಳು ಅವುಗಳ ವಾಸಸ್ಥಾನ–ಜೀವನ–ಅವುಗಳಿಗೂ ನಮಗೂ
ಸಂಬಂಧ–ಲಾಭ–ನಷ್ಟಗಳನ್ನು ಸಚಿತ್ರ ವಿವರಣೆಯೊಂದಿಗೆ ನಿರೂಪಿಸಿರುವು ಈ
ಗ್ರಂಥದ ವೈಶಿಷ್ಟ್ಯ.

ಜೀವರಾಶಿಗಳಲ್ಲಿ ಸಸ್ಯ–ಪ್ರಾಣಿ ಸೂಕ್ಷ್ಮ ಜೀವಿಗಳೆಂದು ವಿಭಜಿಸಿ, ಸಸ್ಯ.
ಪ್ರಾಣಿ ಜೀವರಾಶಿಗಳಿಗಿಂತ ಸೂಕ್ಷ್ಮವಾಗಿರುವ ಅಪಾಯಕಾರಿ ಹಾಗೂ ಉಪ
ಕಾರಿ ಸೂಕ್ಷ್ಮಜೀವಿಗಳನ್ನು ಪರಿಚಯಿಸುತ್ತ, ಪಾಚಿಗಳು, ಏಕಾಣುಜೀವಿಗಳು, ಶಿಲೀಂಧ್ರ
ಗಳು, ವಿಷಾಣು ಜೀವಿಗಳು. ಕ್ಷಯ, ಫ್ಲೂ, ಟೈಫಾಯ್ಡ್, ಕಾಲರಾ ಮೊದಲಾದ

ರೋಗಗಳ ಬೆಳವಣಿಗೆಗೆ ಕಾರಣವಾಗುವವೆಂದು ಸೂಚಿಸುತ್ತಾರೆ. ಇಂಥ ರೋಗವರ್ಧಕ ಜೀವಾಣುಗಳಿಂದ ರಕ್ಷಿತರಾಗಿರಬೇಕೆಂದು ಸಲಹೆ ನೀಡುತ್ತಾರೆ. ಉಪಕಾರಕ ಸೂಕ್ಷ್ಮಜೀವಿಗಳು ಬೇಸಾಯ, ಹೈನುಗಾರಿಕೆ, ಆಹಾರ ಉತ್ಪಾದನೆ, ನೀರಿನ ಶುದ್ಧೀಕರಣ, ಔಷಧ, ಕೇಕ್, ಬ್ರೆಡ್ ತಯಾರಿಕೆ ಮೊದಲಾದ ರಂಗಗಳಲ್ಲಿ; ಮಾನವನ ಹಸಿವು ಹಿಂಗಿಸುವಲ್ಲಿ, ಅನಿಲಗಳ ಉತ್ಪಾದನೆಯಲ್ಲಿ, ಕೀಟ ನಿಯಂತ್ರಣದಲ್ಲಿ-ಸೂಕ್ಷ್ಮಜೀವಿಗಳ ಪಾತ್ರವನ್ನು ಕುರಿತು ಪರಿಚಯಿಸಿದ ಈ ಗ್ರಂಥ-ಸೂಕ್ಷ್ಮ ಜೀವಿಗಳ ಬಗೆಗೆ ಅರಿತುಕೊಳ್ಳುವ ಆಸಕ್ತರಿಗೆ ಉಪಯುಕ್ತ ಗ್ರಂಥವಾಗಿದೆ.

ಸಾಹಿತ್ಯ-ಕೃಷಿವಿಜ್ಞಾನ-ವಿಜ್ಞಾನ ವಿಷಯಗಳನ್ನು ಜನಸಾಮಾನ್ಯರಿಗೆ ತಿಳಿಯಪಡಿಸಲು ರಚನೆಗೊಂಡ ಈ ಕೃತಿಗಳು ಜನಸಾಮಾನ್ಯರ ಜ್ಞಾನ ಬೆಳವಣಿಗೆಗೆ ಹಚ್ಚಿದ ಜ್ಞಾನದೀವಿಗೆಗಳೆನ್ನುವದರಲ್ಲಿ ಸಂದೇಹವಿಲ್ಲ.

—ಎಸ್. ವ್ಹಿ. ಅಯ್ಯನಗೌಡರ

ವಚನಕಾರರು ಮತ್ತು ವಚನಾಂಕಿತಗಳು

ಲೇಖಕರು :–ಡಾ. ಎಸ್. ಆರ್. ಗುಂಜಾಳ

ಪ್ರಕಾಶಕರು: ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಪುಟಗಳು=೮+೮೨ ಬೆಲೆ-೫೦ ಪೈಸೆ.

ಇತ್ತೀಚೆ ಪ್ರಾರಂಭವಾದ ಗುಲಬರ್ಗಾ ವಿಶ್ವವಿದ್ಯಾಲಯುವು ಅಲ್ಪಾವಧಿಯಲ್ಲಿಯೇ ಪ್ರಸಾರಾಂಗ ಉಪನ್ಯಾಸ ಗ್ರಂಥಮಾಲೆಯನ್ನು ನೇರ್ಪಡಿಸಿಕೊಂಡಿರುವದು ಅತ್ಯಂತ ಮಹತ್ವದ ಹೆಜ್ಜೆಯಾಗಿದೆ. ತೆರೆದ ವಿಶ್ವವಿದ್ಯಾಲಯುಗಳೂ ರೂಪುಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಜ್ಞಾನ ಪ್ರಸಾರ ಸಾಮಾನ್ಯರ ಮನೆಯ ಬಾಗಿಲನ್ನೂ ಮುಟ್ಟಬೇಕಾಗಿದೆ. ಈ ದಿಸೆಯಲ್ಲಿ ಈ ಘಟಕ ಪ್ರಯೋಜನಕಾರಿಯಾದ, ಪರಿಣಾಮಕಾರಿಯಾದ ಕಾರ್ಯ ಮಾಡುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ. ವಿವಿಧ ವಿಷಯುಗಳ ಮೇಲೆ ತಜ್ಞರಿಂದ ಉಪನ್ಯಾಸ ಮಾಡಿಸಿ, ಅವುಗಳ–ಸವಿಫಲವನ್ನು ಗ್ರಂಥಗಳ ಮೂಲಕ ಎಲ್ಲರೂ ಪಡೆಯುವಂತಾಗಬೇಕೆಂಬುದೇ ಇದರ ಪ್ರಮುಖ ಗುರಿ. ಈ ನಿಟ್ಟಿನಲ್ಲಿ ದಟ್ಟವಾದ ದಿಟ್ಟ ಹೆಜ್ಜೆಯನ್ನಿಟ್ಟು ಗುಲಬರ್ಗಾ ವಿಶ್ವವಿದ್ಯಾಲಯುವು ಮುನ್ನಡೆದಿದೆ. ೧೫ ಗ್ರಂಥಗಳನ್ನು ಪ್ರಕಟಿಸಿದೆ. ಪ್ರಸ್ತುತ ಕೃತಿ ೧೨ನೆಯದು. ಈ ಕೃತಿಯ ಲೇಖಕರು ಈಗಾಗಲೇ ಹಲವಾರು ಗ್ರಂಥಗಳನ್ನು ಬರೆದ ಗ್ರಂಥಶಾಸ್ತ್ರಜ್ಞರು. ದಿನಾಂಕ: ೫-೧೨-೧೯೮೩ ರಂದು ಬೀದರ ಜಿಲ್ಲೆಯ ಬೇಮಲಖೇಡ್ ಗ್ರಾಮದಲ್ಲಿ ಜರುಗಿದ ಪ್ರಚಾರೋಪನ್ಯಾಸ ಶಿಬಿರದಲ್ಲಿ "ವಚನಕಾರರು ಮತ್ತು ವಚನಾಂಕಿತಗಳು" ಎಂಬ ವಿಷಯ ಕುರಿತು ಶ್ರೀಯುತರು ಮಾಡಿದ ಉಪನ್ಯಾಸದ ವಿಸ್ತೃತ ರೂಪವೇ ಈ ಕಿರುಕೃತಿಯಾಗಿ. ನೈದಾಳಿದೆ. ಇದೊಂದು ವಿಶಿಷ್ಟವಾದ ಮಹತ್ವದ ವಿಷಯ. ೧೨ನೆಯ ಶತಮಾನದಲ್ಲಿ ಬಾಳಿ ಬೆಳಗಿದ ಶರಣರು ರೂಪಿಸಿದ ವಚನಸಾಹಿತ್ಯ, ವಿಶ್ವಸಾಹಿತ್ಯದಲ್ಲಿ ಅಪೂರ್ವವಾದುದು, ಅಪರೂಪವಾದುದು, ವಿಶಿಷ್ಟವಾದುದು. ಈ ಸಾಹಿತ್ಯ ಸೃಷ್ಟಿ ಮಾಡಿದ ವಚನಕಾರರು ತಮ್ಮ ತಮ್ಮ ಅನುಭವ ಅನುಭಾವಗಳನ್ನು ಈ ಮೂಲಕ ಅಭಿವ್ಯಕ್ತಿ ಮಾಡಿ ಸಫಲ ಜೀವನದ ಸರಳ ಸೂತ್ರಗಳನ್ನು ನಿರೂಪಿಸಿ ಜಗತ್ತಿಗೇ ಮಾರ್ಗದರ್ಶನ ಮಾಡಿದ್ದಾರೆ. ಈ ಅಪಾರ ಸಾಹಿತ್ಯದ ಸಂಪಾದನೆ, ವಿಮರ್ಶೆ, ವಿಶ್ಲೇಷಣೆ, ಇದೀಗ ವ್ಯಾಪಕ ರೀತಿಯಿಂದ ನಡೆದಿರುವುದು

ಕನ್ನಡಿಗರ ಸಮಯ ಪ್ರಜ್ಞೆತೆಗೆ ಸಾಕ್ಷಿಯಾಗಿದೆ. ಈ ದಿಸೆಯಲ್ಲಿ ಡಾ. ಎಸ್. ಆರ್. ಗುಂಜಾಳ ಅವರು ಗ್ರಂಥ ವಿಜ್ಞಾನಶಾಸ್ತ್ರ ತಳಹದಿಯ ಮೇಲೆ ವಚನಕಾರರು ಮತ್ತು ವಚನಾಂಕಿತಗಳು ಎಂಬ ವಿಷಯ ಕುರಿತು ಈ ಕೃತಿಯಲ್ಲಿ ಪ್ರತಿಪಾದಿಸುವ ಪ್ರಯತ್ನ ಮಾಡಿದ್ದಾರೆ. 'ಪ್ರಸ್ತುತ ಪುಸ್ತಿಕೆಯಲ್ಲಿ ಕ್ರಿ. ಶ. ೧೯೦೦ ರ ವರೆಗೆ, ಆಗಿ ಹೋದ ಶರಣರ ಹೆಸರುಗಳನ್ನು ಹಾಗೂ ಅವರು ತಮ್ಮ ವಚನಾಂತ್ಯದಲ್ಲಿ ಉಪಯೋಗಿಸಿದ ಅಂಕಿತಗಳನ್ನು ನಿಶ್ಚಿತವಾಗಿ ಲೆಖ್ಖ ಮಾಡಿ ಕೊಡುವ ನನ್ನ ಪ್ರಥಮ ಪ್ರಯತ್ನವಿದು. ಇದರಲ್ಲಿ ವಚನಗಳು ಲಭ್ಯವಿರದೆ ಕೇವಲ ಹೆಸರು ಗೊತ್ತಿರುವ ವಚನಕಾರರ ಪಟ್ಟಿಯನ್ನೂ; ವಚನಕಾರರ ಹೆಸರುಗಳು ಗೊತ್ತಿರದ ಅಂಕಿತಗಳ ಪಟ್ಟಿಯನ್ನೂ ಸಹ ಕೊಟ್ಟಿದ್ದೇನೆ'. ಎಂಬುದಾಗಿ ತಮ್ಮ ನುಡಿಯ ಒಡಲಲ್ಲಿ ಬಿತ್ತರಿಸಿ ಹೀಗೆ ವಿವರಣೆ ಕೊಟ್ಟಿದ್ದಾರೆ.

ವಚನಾಂಕಿತಗಳು ಗೊತ್ತಿರುವ ವಚನಕಾರರು :—	೨೦೭
ಅಂಕಿತಗಳು ಗೊತ್ತಿಲ್ಲದ ವಚನಕಾರರು :—	೨೩
ಅಂಕಿತಗಳು ಗೊತ್ತಿದ್ದು ಹೆಸರು ಗೊತ್ತಿಲ್ಲದ ವಚನಕಾರರು:—	೩೯
ಒಟ್ಟು ವಚನಕಾರರ ಸಂಖ್ಯೆ—	೨೬೯

ಇದನ್ನು ಪರಿಶೀಲಿಸಿದರೆ ಇದು ಎಂದೋ ಮಾಡಿಟ್ಟ ಪಟ್ಟಿ ಎಂದು ಹೇಳದೇ ವಿಧಿಯಿಲ್ಲ. ಕಳೆದ ೧೦ ವರ್ಷಗಳ ಅವಧಿಯಲ್ಲಿ ವಚನ ಸಾಹಿತ್ಯ ಪ್ರಕಾಶನ ಜೋರಾದಷ್ಟಾಗಿದೆ. ಅನೇಕ ಅಜ್ಞಾತ ವಚನಕಾರರು ಬೆಳಕಿಗೆ ಬಂದಿದ್ದಾರೆ. ಅವರ ವಚನ ಸಂಕಲನಗಳೂ ಹೊರಬಂದಿವೆ. ಇವೆಲ್ಲವುಗಳನ್ನೂ ಮುಂದಿಟ್ಟುಕೊಂಡು ಮತ್ತೊಮ್ಮೆ ಲೆಕ್ಕ ಹಾಕಿದ್ದರೆ, ಈ ಕೃತಿಯ ಮೌಲ್ಯ ಇನ್ನೂ ಹೆಚ್ಚುತ್ತಿತ್ತೆಂದು ಹೇಳಬಹುದು. ಬಸವಾದಿ ಪ್ರಮಥ ಪುಂಗವರ ಸಮಕಾಲೀನ ವಚನಕಾರರ ಸಂಖ್ಯೆಯೇ ೩೩೫ ಕ್ಕೇರಿದೆ. ಆದರೆ ಗುಂಜಾಳರ ಪಟ್ಟಿಯನ್ನು ನೋಡಿದರೆ ಓದುಗರಿಗೆ ಕ್ರಿ. ಶ. ೧೯೦೦ ರ ವರೆಗೂ ಬೆಳೆದು ಬಂದ ವಚನಕಾರರು ಇಷ್ಟೇ ಎಂಬ ಭಾವನೆ ಬರಬಹುದಾಗಿದೆ. 'ಪ್ರಾರಂಭದಲ್ಲಿ ವಚನ ಸಾಹಿತ್ಯದ ಉಗಮ' ಎಂಬ ಶೀರ್ಷಿಕೆಯ ಅಡಿಯಲ್ಲಿ ವಿಷಯ ವಿಶ್ಲೇಷಣೆ ಮಾಡುತ್ತ "ಇದು ಗದ್ಯ ಸಾಹಿತ್ಯವೆಂದು ಕೆಲವರು ವಾದಿಸಿದರೆ, ಇನ್ನೂ ಕೆಲವರು ಪದ್ಯದ ಒಂದು ಪ್ರಕಾರವೆಂದು ಪ್ರತಿಪಾದಿಸಿರುವರು. ಇವೆರಡೂ ಅಭಿಪ್ರಾಯಗಳನ್ನು ಒಪ್ಪದವರು ಗದ್ಯ-ಪದ್ಯಗಳ ಮಿಶ್ರಣವೆಂದು ಹೇಳಿರುವರು ಹಾಗಾದರೆ ಇದು ಚಂಪೂ ಶೈಲಿಯೇ ? ಎಂದು ಕೇಳಿದರೆ, ಹೇಳಲು ಅವರಲ್ಲಿ ಸಮರ್ಪಕ ಉತ್ತರವಿಲ್ಲ." ಎಂದಿರುವದು ಒಂದು ಗಮನಾರ್ಹ ಅಂಶವೇನೋ ನಿಜ, ಆದರೆ ವಚನ ಸಾಹಿತ್ಯ ಗದ್ಯದ ಗುಣವನ್ನು ಪಡೆದುಕೊಂಡಂತೆ, ಪದ್ಯದ ಲಕ್ಷಣಗಳೂ ಸಹಜ

ವಾಗಿ ಹೊರಹೊಮ್ಮಿವೆ. ಇದೊಂದು ವಿಶಿಷ್ಟ ಸ್ವತಂತ್ರ ಪ್ರಕಾರ. ಹೀಗಾಗಿ ಚಂಪೂಶೈಲಿಯೆಂದು ಕೇಳುವ ಸಮಸ್ಯೆಯೇ ಉದ್ಭವಿಸುವುದಿಲ್ಲ.

ತಮ್ಮ ವಿಷಯವನ್ನು ಈ ಕೆಳಗಿನ ೬ ಅಂಶಗಳ ಆಧಾರದ ಮೇಲೆ ಕ್ರೋಢೀಕರಿಸಿದ್ದಾರೆ.

೧) ವಚನಕಾರರು ವಚನಾಂಕಿತಗಳು, ೨) ಅವರವರ ಲಿಂಗಗಳೇ ವಚನಾಂಕಿತಗಳು. ೩) ಯಥಾಂಕಿತಗಳು ೪) 'ಪ್ರಿಯ' ಹಚ್ಚಿಕೊಂಡ ವಚನಾಂಕಿತಗಳು, ೫) ಅಂಕಿತಗಳು ಗೊತ್ತಿಲ್ಲದ ವಚನಕಾರರು. ೬) ವಚನಕಾರರ ಹೆಸರು ಗೊತ್ತಿಲ್ಲದ ಅಂಕಿತಗಳು.

ಈ ಸೂಚಿಗಳನ್ನು ಒಮ್ಮೆ ವಚನಕಾರರ ಹೆಸರುಗಳ ಆಕಾರಾದಿಯಾಗಿ ಕೊಟ್ಟರೆ, ಮತ್ತೊಮ್ಮೆ ಅವರ ಅಂಕಿತಗಳ ಆಕಾರಾದಿ ಪಟ್ಟಿ ಕೊಡಲಾಗಿದೆ. ಇದರಿಂದ ಓದುಗರಿಗೆ ವಿಷಯುಗಳ ಪುನರುಕ್ತಿಯಾದಂತೆ ಭಾಸವಾಗುತ್ತದೆ. ಪ್ರಿಯ ಹಚ್ಚಿಕೊಂಡ ವಚನಾಂಕಿತಗಳ ಬಗೆಗೆ ತಮ್ಮದೇ ಅಭಿಪ್ರಾಯಗಳನ್ನು ಒದಗಿಸಿದ್ದಾರೆ. ಹಾಗೆಯೇ ಚೆನ್ನಬಸವಣ್ಣನ ಹೆಸರು ಹಾಗೂ ಅಂಕಿತಗಳು ಕೆಲವರಿಗೆ ಪ್ರಿಯವಾಗಿ ಕಂಡಿವೆಯೆಂದು ತಿಳಿಸಿ ಕೇವಲ ೫ ಜನ ವಚನಕಾರರ ಹೆಸರನ್ನು ಉಲ್ಲೇಖಿಸಿದ್ದಾರೆ. ಈ ಸಂಖ್ಯೆ ನನಗೆ ತಿಳಿದ ಮಟ್ಟಿಗೆ ೧೨ ಕ್ಕೂ ಮಿಕ್ಕುತ್ತವೆ. "ಅವರವರು ಲಿಂಗಗಳೇ ವಚನಾಂಕಿತಗಳು" ಎಂಬ ಶೀರ್ಷಿಕೆಯ ಬದಲಾಗಿ "ಅವರವರ ಇಷ್ಟ ಲಿಂಗಗಳೇ ವಚನಾಂಕಿತಗಳು" ಎಂದು ಬಳಸಬಹುದಾಗಿತ್ತು. ಏನೇ ಲೋಪದೋಷಗಳು ಅಡರಿ ಬಂದಿದ್ದರೂ ಇದೊಂದು ಹೊಸ ಬಗೆಯ ವಿಚಾರ ಪ್ರಣಾಲಿಯನ್ನು ಓದುಗರ ಮುಂದಿಡುವ ಸಾಹಸ ಮಾಡಿದುದು ಮೆಚ್ಚಬೇಕಾದುದೆ. ಡಾ. ಗುಂಜಾಳ ಅವರು ಈ ಬಗೆಯ ಗ್ರಂಥಗಳನ್ನು ಬರೆದು ಕನ್ನಡಿಗರ ಜ್ಞಾನದ ಕ್ಷಿತಿಜಕ್ಕೆ ವಿನೂತನ ಆಯಾಮವನ್ನು ಕೊಡುತ್ತಿರಲೆಂದು ಹಾರೈಸುತ್ತೇನೆ.

— ಎಸ್. ಎಸ್. ಭೂಸರಡ್ಡಿ

ಗುಲಬರ್ಗಾ ವಿಭಾಗದ ಲೇಖಕರು :

ಡಾ. ಎಸ್.ಆರ್. ಗುಂಜಾಳ
ಶ್ರೀ ಗವೀಶ ಹಿರೇಮಠ
ಬೆಲೆ: ೨೦ ರೂ. ಪು. ೧೮+೧೬೨=೧೮೦
ಪ್ರ : ಪ್ರಸಾರಾಂಗ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ಈ ಹಿಂದೆ ಮೈಸೂರು ವಿಶ್ವವಿದ್ಯಾಲಯದವರು ಕರ್ನಾಟಕದ 'ಆಧುನಿಕ ಬರಹಗಾರರು' ಎಂಬ ಪುಸ್ತಕವನ್ನು ಹೊರತಂದಿದ್ದರು. ಅದೇ ಮಾದರಿಯಲ್ಲಿ ಒಂದು ವಿಭಾಗದ ಲೇಖಕರನ್ನು ಪರಿಚಯಿಸುವ ದೃಷ್ಟಿಯಿಂದ ಹೊರ ಬಂದಿರುವ ಕೃತಿ 'ಗುಲಬರ್ಗಾ ವಿಭಾಗದ ಲೇಖಕರು'. ಆದರೆ ಈ ಪುಸ್ತಕವೂ ಕೂಡ ಹಲವು ಅರೆಕೊರೆಗಳಿಂದ ಕೂಡಿದೆ ಎಂಬುದಕ್ಕೆ, ಗಂಗಾವತಿಯ ಕಲಾಸಾಹಿತ್ಯ ವೇದಿಕೆಯವರು ಹೊರತರಲು ನಿರ್ಧರಿಸಿರುವ ರಾಯಚೂರು ಜಿಲ್ಲೆಯ ಲೇಖಕರ ಪರಿಚಯ ಗ್ರಂಥವೇ ಸಾಕ್ಷಿ. ಗಂಗಾವತಿಯ ಕಲಾವೇದಿಕೆಯವರು ಕೊಟ್ಟಿರುವ[೧] ಕಾರಣ ಹೀಗಿದೆ. 'ಈ ಗ್ರಂಥದಲ್ಲಿ (ಗುಲಬರ್ಗಾ ವಿಭಾಗದ ಲೇಖಕರು) ರಾಯಚೂರು ಜಿಲ್ಲೆಯಲ್ಲಿ ಜನಿಸಿದವರು ಬೇರೆಬೇರೆ ಜಿಲ್ಲೆಗಳಲ್ಲಿ ವಾಸವಾಗಿ, ರಾಯಚೂರು ಜಿಲ್ಲೆಯ ಪಟ್ಟಿಯಲ್ಲಿ ಸೇರಿಲ್ಲ. ಬೇರೆ ಜಿಲ್ಲೆಗಳಲ್ಲಿ ಜನಿಸಿದವರು ರಾಯಚೂರು ಜಿಲ್ಲೆಯಲ್ಲಿ ವಾಸವಾಗಿ, ರಾಯಚೂರು ಜಿಲ್ಲೆಯ ಪಟ್ಟಿಯಲ್ಲಿ ಸೇರಿದ್ದಾರೆ. ಅಲ್ಲದೆ ಬೇರೆ ವಿಭಾಗದ ಲೇಖಕರೂ ರಾಯಚೂರು ಜಿಲ್ಲೆಯ ಪಟ್ಟಿಯಲ್ಲಿ ಸೇರಿದ್ದಾರೆ. ಹಾಗು ಇನ್ನು ಕೆಲವು ಲೇಖಕರು ಈ ಗ್ರಂಥದಲ್ಲಿ ಸೇರ್ಪಡೆಯಾಗಿಲ್ಲ.... ಈ ತಾರತಮ್ಯವನ್ನು ಹೋಗಲಾಡಿಸಲು ನಾವು ರಾಯಚೂರು ಜಿಲ್ಲೆಯಲ್ಲಿ ಜನಿಸಿದವರನ್ನು ಮಾತ್ರ ರಾಯಚೂರು ಜಿಲ್ಲಾ ಲೇಖಕರು ಎಂದು ಸೇರಿಸಿಕೊಳ್ಳುತ್ತೇವೆ. ಅವರು ಎಲ್ಲಿಯೋ ವಾಸವಾಗಿರಲಿ, ಏನೇ ಮಾಡಲಿ ರಾಯಚೂರು

---

೧. 'ಗುಲಬರ್ಗಾ ವಿಭಾಗದ ಲೇಖಕರು' ಕೃತಿಯ ಸಂಪಾದಕರು ಆ ಕೃತಿಯಲ್ಲಿ ಉಲ್ಲೇಖಿಸಿಲ್ಲ.

ಜಿಲ್ಲೆಯಲ್ಲಿ ಜನಿಸಿದ್ದಾರೆಂದರೆ ಸಾಕು.'[೨] ಹೀಗೆ ಇಂಥ ಒಂದು ಕೃತಿಯು ಬೆನ್ನ ಹಿಂದೆಯೇ ಮತ್ತೊಂದು ಅಂಥದೇ ಕೃತಿ ಬರಲು ಮುಖ್ಯ ಕಾರಣ ಪ್ರಸ್ತುತ ಕೃತಿಯ ಸಂಪಾದಕರು 'ಬೇರೆ ಬೇರೆ ಪ್ರದೇಶಗಳಲ್ಲಿ ಜನಿಸಿ. ಗುಲಬರ್ಗಾ ವಿಭಾಗ ದಲ್ಲಿ ಬಂದು ನೆಲೆಯೂರಿ ನಿಂತ ಲೇಖಕರನ್ನು ಅಲ್ಲಿಯವರೆಂದೇ ಗಣಿಸಿದ್ದು. ಹೀಗಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಜನಿಸಿ ಕೆಲವು ಅವಧಿಯ ಮಟ್ಟಿಗೆ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಯಾಗಿ ಬಂದಿದ್ದ ಡಾ.ಹಾ.ಮಾ. ನಾಯಕರೂ ಈ ಗ್ರಂಥದಲ್ಲಿ ಸೇರಿಹೋಗಿದ್ದಾರೆ. ಇದೂ ಅಲ್ಲದೆ ಇಲ್ಲಿ ಕೊಟ್ಟಿರುವ ಗುಲಬರ್ಗಾ ಜಿಲ್ಲೆಯ ೧೧೦ ಜನ ಲೇಖಕರಲ್ಲಿ ಸು. ೩೦ ಜನ ಗುಲಬರ್ಗಾ ವಿಭಾಗದವರೂ ಅಲ್ಲದ, ಅಂದರೆ ವಿಜಾಪುರ, ಬೆಳಗಾವ, ಧಾರವಾಡ ಜಿಲ್ಲೆಗಳಿಗೆ ಸಂಬಂಧಿಸಿದವ ರಾಗಿದ್ದಾರೆ.

ಅಲ್ಲದೆ, ಸಂಪಾದಕರು ಪ್ರಸ್ತಾವನೆಯಲ್ಲಿ 'ನಮ್ಮ ಕೈಪಿಡಿಯಲ್ಲಿ ಕಾಲವಾದ ಲೇಖಕರ ಮಾಹಿತಿಯನ್ನು ಸೇರಿಸಿಲ್ಲ. ಇಂದು ಜೀವಿಸಿಲ್ಲದ ಈ ವಿಭಾಗದ ನೂರಾರು ಲೇಖಕರ ನಿಖರವಾದ ಮಾಹಿತಿಯನ್ನು ದೊರಕಿಸುವುದು ಕಷ್ಟಕರ ವಾದ ಕೆಲಸ' ಎಂದಿರುವ ಮಾತು ಸತ್ಯವೆನ್ನಿಸಿದರೂ, ಅಂಥ ಕಷ್ಟದಲ್ಲಿಯೇ ಹೆಚ್ಚಿನ ಸಾರ್ಥಕತೆಯನ್ನು ಕಾಣಬಹುದಿತ್ತು. ನಿಜವಾಗಿಯೂ ಈ ಕೆಲಸಕ್ಕೆ ಪ್ರಥಮ ಪ್ರಾಶಸ್ತ್ಯ ದೊರೆಯಬೇಕಿತ್ತು. ಸ್ವಲ್ಪ ದಿನ ಬಿಟ್ಟರೆ ಎಷ್ಟೋ ಲೇಖ ಕರ ಕೃತಿಗಳು ಹೆಸರುಗಳು ಮರೆಯಾಗಿ ಹೋಗುವ ಸಂಭವವುಂಟು.

ಇನ್ನು ಲೇಖಕರ ಕೃತಿಗಳನ್ನು ಕೊಡುವಲ್ಲಿಯೂ ಹಲವೆಡೆ ದೋಷ ಎದ್ದು ಕಾಣುತ್ತಿವೆ. ಒಂದು ಕೃತಿಯನ್ನು ಇಬ್ಬರು ಮೂವರು ಸೇರಿ ಸಂಪಾದನೆ ಮಾಡಿರುವಾಗ ಅದನ್ನು 'ಇತರರೊಂದಿಗೆ' ಎಂದಾದರೂ ಸೂಚಿಸದೆ ಒಬ್ಬರ ಹೆಸರಿನಲ್ಲಿಯೇ ಕೊಟ್ಟಿರುವುದು ಅಷ್ಟು ಸಮಂಜಸವೆನ್ನಿಸುವದಿಲ್ಲ. ಪು. ೧೫ ರಲ್ಲಿ ಶ್ರೀ ಗುಂಜಾಳ ಅವರ ಆತ್ಮಚರಿತ್ರೆಯನ್ನೊಳಗೊಂಡ ಅಭಿನಂದನ ಗ್ರಂಥದ ಸಂಪಾದಕರು ಪ್ರೊ. ಎಸ್.ಎಸ್. ಭೂಸನೂರಮಠ. ಆದರೆ ಆ ಕೃತಿ ಶ್ರೀ ಗುಂಜಾಳ ಅವರದೇ ಎನ್ನುವಂತೆ ಪ್ರಕಟವಾಗಿದೆ. ಸಂಪಾದಕರು ಪ್ರಸ್ತಾವನೆಯಲ್ಲಿ 'ಮುಂದಿನ ಪುಟದ ಪಟ್ಟಿಯಲ್ಲಿ ಕವನ ಸಂಗ್ರಹಗಳು ಅಗ್ರಪಂಕ್ತಿಯಲ್ಲಿವೆ. ಇದಕ್ಕೆ ಇಲ್ಲಿಯ ಲೇಖಕರು ಹೆಚ್ಚು ಭಾವನಾಜೀವಿಗಳೆಂದು ಭಾಸವಾಗುತ್ತದೆ. ಕನ್ನಡ ವಾಙ್ಮಯದ ಪ್ರಪ್ರಥಮ ಗ್ರಂಥವಾದ 'ಕವಿರಾಜ ಮಾರ್ಗ' ವು ಗುಲಬರ್ಗಾ ಜಿಲ್ಲೆಯ ಮಳಖೇಡದಲ್ಲಿ ಹುಟ್ಟಿ ಬಂದುದಕ್ಕೆ ಇದೇ ಕಾರಣವಿರಬಹುದೇ'

---

೨. ದಿನಾಂಕ ೧-೭-೧೯೮೭ ರಂದು ನನಗೆ ಬರೆದ ಪತ್ರ.

ಎಂದಿರುವ ಮಾತು ತೀರ ಬಾಲಿಶವೆನ್ನಿಸಿದೆ. ಇಂಥ ಹಲವಾರು ದೋಷಗಳನ್ನು ಸಂಪಾದಕರು ಕಡಿಮೆ ಮಾಡಬಹುದಿತ್ತು.

ಏನೇ ಆಗಲಿ, ಸಾಹಿತ್ಯಿಕವಾಗಿ ಅತಿ ಹಿಂದುಳಿದಿರುವ ಒಂದು ಪ್ರದೇಶ ದಿಂದ, ಆ ವಿಭಾಗದ ಲೇಖಕರನ್ನು ಪರಿಚಯಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಮೂಡಿ ಬಂದಿರುವ ಈ ಕೃತಿ ಸ್ವಾಗತಾರ್ಹವೇ.

– ಬಿ. ವ್ಹಿ. ಶಿರೂರ

ಅಕ್ಷಯ:

ಲೇಖಕರು: ಎಸ್. ಜಿ. ಪಟವರ್ಧನ್, 'ಚಿಂತನ ಪ್ರಕಾಶನ'
ಶ್ರೀ ಡಿ. ಎಂ. ಕಾಲೇಜು, ಉಜಿರೆ, ದಕ್ಷಿಣ ಕನ್ನಡ, ೧೯೮೬. ಪು. **X**+೫೪.
ಬೆಲೆ: ರೂ. ೧೨/-

ಶ್ರೀ ಡಿ. ಎಂ. ಕಾಲೇಜು ಉಜಿರೆಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿರುವ ಎಸ್. ಜಿ. ಪಟವರ್ಧನ್ ಅವರ ಎರಡನೆಯ ಕವನ ಸಂಕಲನ 'ಅಕ್ಷಯ' ಸಂಕಲನದಲ್ಲಿ ಬರುವ ಒಟ್ಟು ಕವನಗಳು ಇಪ್ಪತ್ತೊಂಬತ್ತು. ಸಂಗ್ರಹದಲ್ಲಿ ಪ್ರೇಮ ಕವನಗಳ ಪಾಲು ಹೆಚ್ಚಿನದಾದರೂ ಬರಗಾಲ, ಜೀತ, ಹೊಲಸು ರಾಜಕೀಯ, ಸಾಮಾಜಿಕ ವಿಷಮತೆ, ಸ್ತ್ರೀ ಮುಖದ ವಿಭಿನ್ನ ದೃಷ್ಟಿಕೋನ ಇವೇ ಮೊದಲಾದ ವಿಷಯಗಳೂ ಮೇಳವಿಸಿವೆ.

ಮೊದಲ ಕವನವೇ 'ಅಕ್ಷಯ'. ಕ್ಷಯವಾಗಿ ಹೋಗುತ್ತಿರುವ ಭೂದೇವಿಯ ಸೌಂದರ್ಯವನ್ನು ಪ್ರಯತ್ನ ಪೂರ್ವಕವಾಗಿ ಉಳಿಸಿ ಬೆಳೆಸಿಕೊಳ್ಳುವ ವಾತ್ಸಲ್ಯದ ಛಲ ಇಲ್ಲಿದೆ. ಸಾವಿರಾರು ಬಯಕೆಗಳನ್ನು ಹೊತ್ತ ಜೀವ ಜಂತುಗಳು ಬರದ ಬೇಗೆಗೆ ಸಿಲುಕಿ ಒಣ ಕನಸುಗಳಲ್ಲಿ ಸಾಯುತ್ತಿರುವಾಗ ನೀನು ಕೃಪಾದೃಷ್ಟಿಯನ್ನು ಹರಿಸಿದರೆ ಕ್ಷಯವಾಗುತ್ತಿರುವ ಪೃಥ್ವಿಗೆ ಅಕ್ಷಯದ ಶ್ರೀರಕ್ಷೆ ಒದಗಿಸಿದಂತಾಗುವದು. ಅದಕ್ಕೋಸ್ಕರ ಬುವಿಯ ಸಿಂಗರವನ್ನು ವೃದ್ಧಿಗೊಳಿಸು ಎನ್ನುವುದಾಗಿ ಕವಿ ಮಳೆರಾಯನಲ್ಲಿ ಪ್ರಾರ್ಥಿಸಿದ್ದಾರೆ.

ನೆನಪು, ಹಕ್ಕಿಜೋಡಿ, ಅಂತರಂಗ ಈ ಕವನಗಳಲ್ಲಿ ಅಗಲುವಿಕೆಯ ಯಾತನೆ ಪ್ರಕಟವಾಗಿರುವುದರ ಜೊತೆಗೆ ಮೌನದ ಮುದ್ರೆಯನ್ನೊಡೆದು, ಸಂಪ್ರದಾಯದ ಗೋಡೆಯನ್ನು ಕೆಡವಿ ಹೊರಬರುವಂತೆ ಪ್ರೇಮಿಗಳಿಗೆ ಪ್ರೋತ್ಸಾಹದ ಪ್ರೇರಣೆಯಿದೆ. ಅದೇ ರೀತಿ ಪ್ರೀತಿ ಪ್ರೇಮಗಳ ವಿಭಿನ್ನ ದೃಷ್ಟಿಯನ್ನು ಗುರುತಿಸಿ ತೋರುವ ಕವನಗಳೂ ಇವೆ. ಜೊತೆಗಾತಿಯಾಗಿ ಸಂಸಾರದ ನೊಗಕ್ಕೆ ಹೆಗಲು ಕೊಟ್ಟ ಹೆಣ್ಣಿನ ಕುರಿತಾಗಿ ರಚಿಸಿರುವ ಕವನ 'ನನ್ನವಳು' "ಹಣೆಯ ತಿಲಕದ ಕೆಂಪು ಬಣ್ಣದೊಳು ಸೂಚಿಪಳು ಪ್ರೇಮ ಪರಿಪೂರ್ಣತೆಯ ವೃತ್ತವನು ಒರೆದು" ಎನ್ನುವಲ್ಲಿ ಪೂರ್ಣತೆಯ ಪ್ರೇಮದ ಉಪಮೆಯಿದೆ. 'ನನ್ನವಳು'

ಕವನದಲ್ಲಿ ಪರಿಪೂರ್ಣ ಪ್ರೇಮವನ್ನು ಗುರುತಿಸುವ ಕವಿ 'ಪ್ರೇಮ', 'ಪ್ರೀತಿ' ಕವನಗಳಲ್ಲಿ ಈ ಪದಗಳ ಅರ್ಥಕ್ಕೆ ಮದ್ಯ, ನವಕಲು ನಾಣ್ಯಗಳ ಕಪ್ಪು ಲೇಪನ ಮಾಡಿದ್ದಾರೇನೋ ಅನ್ನಿಸುತ್ತದೆ. ವೈಯಕ್ತಿಕವಾಗಿ ಕಂಡುಕೊಳ್ಳುವ ಪ್ರೇಮದ ಸಿಹಿ ಸಾಮೂಹಿಕವಾಗಿ ಹಂಚಿಕೊಳ್ಳುವಾಗ ಅರ್ಥ ಬಿಟ್ಟಿದ್ದು. ಸ್ವಲ್ಪ ಅಸಮಂಜಸವೇನೋ 'ಸಿರಿ' ಕನಸಿನಾಳದಲ್ಲಿಣುಕಿ ಅಣಕಿಸುವ ಬಂಪರ್ ಆಗುವದು ವಾಸ್ತವ ಸತ್ಯ. ಚಿಟ್ಟೆ, ನಾಂದಿ, ವಿವಾಹ ವಿಚ್ಛೇದ ಕವನಗಳು ಪ್ರಸ್ತುತ ಸಂಗ್ರಹದಲ್ಲಿ ಗಮನ ಸೆಳೆಯುವ ವಿಷಯಗಳು. ಸ್ತ್ರೀಯ ಹಲವು ಮುಖಗಳನ್ನು ಗುರುತಿಸುತ್ತ ಹೊರಟ ಕವಿ 'ತಾಯಿ' ಕವನದಲ್ಲಿ ಗಂಡಿನ ಕ್ರೂರದಾಸ್ಯದ ಪೊರೆಯಲ್ಲಿ ಸಿಲುಕಿ ನರಳುತ್ತಿರುವ ಹೆಣ್ಣಿಗೆ ಕತ್ತಲೆಯಿಂದ ಬೆಳಕಿನೆಡೆಗೆ ಬರುವಂತೆ ಕರೆಕೊಟ್ಟಿದ್ದಾರೆ. ಗಂಡಿನ ಹೃದಯ ಶೂನ್ಯತೆಯಲ್ಲಿ ಬೆಂದು ಹೋದರೂ ಕೂಡ ಬೆಂದ ಹೃದಯದಲ್ಲೇ ಹಸಿರು ಚಿಗುರಿಸಿಕೊಳ್ಳುತ್ತ ಎದೆಹಾಲು ನೀಡುವ ತಾಯಿ ವಾತ್ಸಲ್ಯದ ಹಿರಿಮೆಯನ್ನು ಕವಿ ಇಲ್ಲಿ ಕಂಡರಿಸಿದ್ದಾರೆ. ಸ್ತ್ರೀ ಮುಖದ ವ್ಯಾಘ್ರತನವನ್ನು ಗುರುತಿಸುವ ಕವನ 'ಸ್ತ್ರೈಣ'.

"ನಾಟ್ಯ ಮಯೂರಿಯಂತೆ ನರ್ತಿಸುತ್ತ ಇದ್ದ ಆ ಅಂಗನೆ ನಿನ್ನೆ ಬೀರೊಬ್ಬನನ್ನು ವರಿಸಿದಳಂತೆ!". ಹೀಗೆ ಹೆಣ್ಣಿನ ಆ ಮುಖ ಈ ಮುಖಗಳ ವ್ಯಂಗ್ಯ ಚಿತ್ರಣ ಈ ಸಂಗ್ರಹದ ಕವನಗಳಲ್ಲಿದೆ. 'ಶೇಷ ಪ್ರಶ್ನೆ' ರಾಜಕೀಯದ ಟೀಕೆಯನ್ನೊಳಗೊಂಡಿರುವ ಕವನ. ಕೊನೆಗೂ ಕವನ ಶೇಷ ಪ್ರಶ್ನೆಯಾಗಿಯೇ ಉಳಿಯುತ್ತದೆ.

"ಬಡ ಮನದಲ್ಲಿ ಸಿರಿವಂತ ಯೋಜನೆಗಳ ಲಗ್ಗೆ" ಗಮನ ಸೆಳೆಯುವ ಸಾಲಿನಿಂದ ವಾಸ್ತವಿಕ ಜೀವನದ ಚಿತ್ರಣವನ್ನು ಕಣ್ಣೆದುರು ತೆರೆದಿಡುತ್ತದೆ **'ಆ ಕ್ಷಣ'** ! ಕವನ.

"ಆ ಬಡ ಕೊಡಗಳ ಬಿಡ, ಹರಿಸುತ್ತ ನಳದಡಿಗೆ ಒತ್ತುತ್ತ, ಪಂಪಿನ ಹಿಡಿ ಜಗ್ಗುತ್ತ; ಆದರ ಕೊನೆ ನೀರಿಗಾಗಿ ಹೋರಾಟ, ಅಳಿದುಳಿದ ಶಕ್ತಿಯ ಸಾರ್ಥಕ ಪ್ರಯೋಗ ! ನೀರಿಗಾಗಿ ಹೋರಾಟ ಎನ್ನುವಲ್ಲಿ ಜೀವನ ಹೋರಾಟದ ಸಾರ್ಥಕ ಚಿತ್ರಣವಿದೆ.

ಅಧಿಕಾರಿಗಳ ಕಪಟ ವೃತ್ತಿಯನ್ನು ಬಯಲಿಗೆಳೆದು ಅವರಿಗೆ ಛೀಮಾರಿ ಹಾಕುವ ಸಾಹಸ ತೋರಿದ್ದಾರೆ ತಮ್ಮ 'ಅಧಿಕಾರಿ' ಕವನದಲ್ಲಿ. ಅದೇಕೋ ಕವನದ ಶೀರ್ಷಿಕೆ ವಾಚ್ಯವೆನಿಸುತ್ತದೆ. "ಬಿದ್ದು ಹೋಗಲಿ ನಿನ್ನ ಉಪದೇಶದ ನಾಲಗೆ, ಹೊಡೆಯಲಿ ಗರ ನಿನ್ನಡಿ ಮೇಜು ಕುರ್ಚಿಗೆ" ಎನ್ನುವಲ್ಲಿ ಅಸಹಾಯಕತೆಯಿದ್ದರೂ ರೋಷದ ಕಿಡಿಯಿದೆ. 'ನೊಣ' ಕವನದಲ್ಲಿ "ನಮ್ಮ ಸಂತಾನದ ವೃದ್ಧಿಯಲ್ಲಿ ನಿನಗೆಲ್ಲಿಯ ಠಿಕಾಣ?" ಎಂದು ನೊಣವನ್ನು ಪ್ರಶ್ನಿಸುತ್ತ ನಮ್ಮ ದೇಶದ ಅತಿಯಾದ ಜನಸಂಖ್ಯಾಭಿವೃದ್ಧಿಯನ್ನು ಟೀಕಿಸಿದ್ದಾರೆ. ಜಾತೀಯತೆ

ಯನ್ನು ಹೊಡೆದೋಡಿಸುತ್ತೇವೆ, ಸಮತೆಯ ಧ್ವಜ ಹಾರಿಸುತ್ತೇವೆ ಎಂದು ವೇದಿಕೆಯ ಮೇಲೆ ಭಾಷಣ ಬಿಗಿಯುವ, ಪತ್ರಿಕೆಯಲ್ಲಿ ಹೆಸರು ಗಿಟ್ಟಿಸಿಕೊಳ್ಳುವುದಕ್ಕಾಗಿ ಜಾತೀಯತೆಯ ಹೆಸರಿನಲ್ಲಿ ಹೋರಾಡುವ ಗೋಮುಖ ವ್ಯಾಘ್ರಗಳನ್ನು ಟೀಕಿಸುವ ಸಾಹಸ 'ಕ್ರಾಂತಿ-ಸಂಕ್ರಾಂತಿ' ಕವನದಲ್ಲಿದೆ. "ಸದಾ ಸುದ್ದಿಯಲ್ಲಿ ಅದ್ದಿಸಿಕೊಳ್ಳುವ ಆನೆ ಲದ್ದಿಗಳು" ಎನ್ನುವ ಕಠೋರ ವ್ಯಂಗ್ಯವಿದೆ. ಬದುಕಿನಲ್ಲಿ ಸಾಧಿಸುವ ಛಲವಿಲ್ಲದ ಸೋಮಾರಿಗಳಿಗೆ ಹೋರಾಟಮಯ ಬದುಕಿಗೆ ಕರೆ ಕೊಟ್ಟಿದ್ದಾರೆ. ತಮ್ಮ 'ಬಲೆ' ಕವನದಲ್ಲಿ, "ಮೆದುಳನ್ನು ಶೂನ್ಯಕ್ಕೊಡ್ಡಿ ಸಾಗುತ್ತಾನೆ ತನ್ನ ಕೊನೆಯತ್ತ, ಕಣ್ಣೀರ ಕೊಡವನು ಹೊತ್ತು" ಎನ್ನುವ ಸಾಲು ಕವನದಲ್ಲಿ ಗಮನಾರ್ಹವಾದುದು. 'ಮೋಕ್ಷ' ಕವನ ವಾಸ್ತವ ಜೀವನದಲ್ಲಿ ಹಲವಾರು ಮುಖವಾಡಗಳನ್ನು ಹೊತ್ತು ಬದುಕುತ್ತಿರುವ ಜನರ ಬದುಕಿನ ಅಸ್ತವ್ಯಸ್ತತೆಯನ್ನು ಸಾರುತ್ತದೆ.

"ಗೋವುಗಳ ಬೆನ್ನಲ್ಲಿ ವ್ಯಾಘ್ರಗಳ ಕ್ಯೂ! ನರಿ, ಹದ್ದು, ಹೋತ, ತಿಮಿಂಗಲಗಳು ಮಾಡಲು ಗಿಲ, ಸುರಿಸುತ್ತಿವೆ ಜೊಲ್ಲು!" ಇದು ವಾಸ್ತವಿಕ ಬದುಕಿಗೆ ಹಿಡಿದ ಕನ್ನಡಿ.

ಪರಸ್ಪರ ಒಬ್ಬರಿಗೊಬ್ಬರು ಸಾಮರಸ್ಯದಿಂದ ಬಾಳಲು ಪ್ರಕೃತಿಯ ಸಹಾಯ ಅಮೂಲ್ಯವಾದುದು, ಅಷ್ಟೇ ಅವಶ್ಯ ಕೂಡ ಎನ್ನುವುದನ್ನು 'ಆಲಂಬನ' ಕವನ ಚಿತ್ರಿಸುತ್ತದೆ. "ನನ್ನ ಮನೋ ಮಂದಿರಕೆ ತೇಲುತ್ತ ಚಂದಿರ ಆಗಮಿಸಿದಾಗ ನೀನು ಗರ್ಜಿಸುವ ಹುಲಿಯಲ್ಲ, ನರ್ತಿಸುವ ನವಿಲು, ನಿನ್ನ ವ್ಯಾಧಿಗೆ ಅವನೇ ವೈದ್ಯ, ಮತ್ತೆ ಗಾಳಿ ನಮ್ಮನ್ನು ಬೆಸೆಯುವ ಮಾಧ್ಯಮ" ಎನ್ನುವಲ್ಲಿ ಪ್ರಕೃತಿಯ ಅನುಪಮ ವರ್ಣನೆಯಿದೆ. ಪದವಿಯನ್ನು ಗಿಟ್ಟಿಸಿಕೊಳ್ಳಲು ಹೋದ ತರುಣಿ ಪರಿಸರದ ವೈಪರೀತ್ಯಕ್ಕೆ ಸಿಲುಕಿ ಪದವಿಯನ್ನು ಜಾರಿಸಿಕೊಳ್ಳುವುದು ಅತ್ಯಂತ ದಾರುಣ. "ಪದವಿಗೆ ಮುನ್ನ ಪದ ಜಾರಿ" ಎನ್ನುವ ವ್ಯಂಗ್ಯದೃಷ್ಟಿ ಇಲ್ಲಿದೆ. 'ಬಾಪೂಜಿಗೊಂದು ಪತ್ರ'ದಲ್ಲಿ ರಾಜಕೀಯ, ಬದುಕಿನ ಸರ್ವಮುಖಗಳಲ್ಲೂ ಹೊಲಸು ರಾಡಿಯೆಬ್ಬಿಸುವುದನ್ನು ಅತ್ಯಂತ ಕಟುವಾಗಿ ಟೀಕಿಸಿದ್ದಾರೆ. ಸಂಗ್ರಹದ ಕೊನೆಯ ಕವನಗಳಾದ ಇತಿಹಾಸ, ಬೇಡಿಕೆಗಳಲ್ಲಿ ಜೀತದ ದಾರುಣ ಸ್ಥಿತಿಯನ್ನು, ವಿವರಿಸುತ್ತ ಪ್ರೀತಿ-ವಿಶ್ವಾಸ ತುಂಬಿದ ಸಂಯಮದ ಬದುಕಿಗೆ ಕರೆಯುತ್ತಿದ್ದಾರೆ ಪಟವರ್ಧನ್ ಅವರು. ಸಮನ್ವಯ ಸಮತಾಭಾವದ ಹಿರಿದಾದ ದೃಷ್ಟಿ ಇಲ್ಲಿದೆ.

ಒಟ್ಟಿನಲ್ಲಿ ಇಡೀ ಸಂಕಲನವನ್ನು ಓದಿದಾಗ ಮನುಷ್ಯ ಸ್ವಭಾವದ ಹಲವು ಮುಖಗಳ ಪರಿಚಯವಾಗುತ್ತದೆ. ಸಂಕಲನದಲ್ಲಿರುವ ಹನಿಗವನಗಳು

ಗಮನಾರ್ಹವಾದವುಗಳು. ಅನುಭವಿಸಿದ ನೋವು-ನಲಿವುಗಳನ್ನು ಭಾವುಕತೆಯಲ್ಲಿ ಸೆರೆಹಿಡಿದು ಪ್ರಕಟಗೊಳಿಸುವ ಪ್ರಾಮಾಣಿಕ ಪ್ರಯತ್ನ ಈ ಸಂಗ್ರಹದ ಬಹುತೇಕ ಕವನಗಳಲ್ಲಿದೆ. ಆಡಂಬರವಿಲ್ಲದ ಸರಳ ಅಭಿವ್ಯಕ್ತಿ ಸಂಗ್ರಹಕ್ಕೆ ಮೆರುಗು ನೀಡುತ್ತದೆಯಷ್ಟೇ ಅಲ್ಲವೆ ಪ್ರತಿಯೊಂದು ಕವನಗಳೂ ಓದಿಸಿಕೊಂಡು ಹೋಗುತ್ತವೆ.

ವಾಸ್ತವ ಬದುಕಿನಲ್ಲಿ ಘಟಿಸುವ ಸಂಗತಿಗಳನ್ನು ಸೆರೆಹಿಡಿದು ಲೇಖನಿಯ ಮೂಲಕ ಕವನದ ರೂಪ ಕೊಟ್ಟು ರಚಿಸಿದ ಕವನ ಸಂಕಲನದ ಆಶಯ ಬದುಕಿನಲ್ಲಿ ಮೌಲಿಕವಾದುದನ್ನು ಗುರುತಿಸಿಕೊಳ್ಳುವುದಕ್ಕೆ ಕರೆ ಕೊಟ್ಟಿದೆ. ಶೀರ್ಷಿಕೆಯೇ ಹೇಳುವಂತೆ ಪಟವರ್ಧನರ ಲೇಖನ ಶಕ್ತಿ ಕೂಡ ಅಕ್ಷಯವಾಗುವುದೆನ್ನುವ ಭರವಸೆ ಇಲ್ಲಿದೆ. ಇಂತಹ ಒಳ್ಳೆಯ ಕವನದ ಲೇಖಕರಿಗೆ ಧನ್ಯವಾದಗಳು.

– ನಾಯಕ ರಾಜಮ್ಮಾ ರಾಮಚಂದ್ರ

ಈ ಸಂಚಿಕೆಯ ಲೇಖಕರು

- ಶ್ರೀ ಆರ್. ರಾಚಪ್ಪ,
  ಪ್ರಾಚಾರ್ಯರು, ಶ್ರೀ ಜಗದ್ಗುರು ರೇಣುಕಾಚಾರ್ಯ ವಿಜ್ಞಾನ
  ಮತ್ತು ಕಲಾ ಮಹಾವಿದ್ಯಾಲಯ, ಬೆಂಗಳೂರು
- ಡಾ. ದೇವೇಂದ್ರಕುಮಾರ ಹಕಾರಿ,
  ಪ್ರವಾಚಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಡಾ. ಶಾಲಿನಿ ರಘುನಾಥ,
  ಅಧ್ಯಾಪಿಕೆ, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಶ್ರೀಮತಿ ಮಧು ವೆಂಕಾರೆಡ್ಡಿ,
  ಅಧ್ಯಾಪಿಕೆ, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ,
  ಚೇರಮನ್, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಶ್ರೀ ಆರ್. ವಾಯ್. ಕುಲಕರ್ಣಿ,
  ಅಧ್ಯಾಪಕರು, ಇಂಗ್ಲೀಷ ವಿಭಾಗ, ಸರದಾರ ಪಟೇಲ
  ವಿಶ್ವವಿದ್ಯಾಲಯ, ವಲ್ಲಭ ವಿದ್ಯಾನಗರ–೩೮೮ ೧೨೦ ಗುಜರಾತ
- ಡಾ. ಬುದ್ಧಣ್ಣ ಹಿಂಗಮಿರೆ,
  ಪ್ರವಾಚಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಡಾ. ವೀರಣ್ಣ ರಾಜೂರ,
  ಪ್ರವಾಚಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಶ್ರೀ ಬಿ. ಬಿ. ಬಿಂಡದಾರ,
  ಅಧ್ಯಾಪಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಡಾ. ಬಿ. ಆರ್. ಹಿರೇಮಠ,
  ಪ್ರವಾಚಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಡಾ. ಎಸ್. ಪಿ. ಪಾಟೀಲ,
  ಅಧ್ಯಾಪಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಶ್ರೀ ಕೆ. ಪಿ. ವೀರಣ್ಣ,
  ಅಧ್ಯಾಪಕರು, ಇತಿಹಾಸ ಹಾಗೂ ಪ್ರಾಚ್ಯಶಾಸ್ತ್ರ ವಿಭಾಗ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಡಾ. ಶ್ರೀನಿವಾಸ ವೆಂ. ಪಾಡಿಗಾರು,
  ಅಧ್ಯಾಪಕರು, ಪ್ರಾಚೀನ ಭಾರತದ ಚರಿತ್ರೆ ಮತ್ತು ಶಾಸನ
  ವಿಜ್ಞಾನ ವಿಭಾಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಶ್ರೀ ಡಿ. ಇಸ್ಮಾಯಿಲ್
  ಬೀರೂರ
- ಡಾ. ಎಚ್. ಎಂ. ಮಹೇಶ್ವರಯ್ಯ,
  ಪ್ರವಾಚಕರು, ಕನ್ನಡಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಡಾ. ವಿಲ್ಯಂ ಮಾಡ್ತ,
  ಪ್ರಾಧ್ಯಾಪಕರು, ಭಾಷಾವಿಜ್ಞಾನ, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಡಾ. ಎಸ್. ವ್ಹಿ ಅಯ್ಯನಗೌಡರ,
  ಅಧ್ಯಾಪಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
- ಶ್ರೀ ಎಸ್. ಎಸ್. ಭೂಸರಡ್ಡಿ,
  ಅಧ್ಯಾಪಕರು, ಕನ್ನಡ ಅಧ್ಯಯನಪೀಠ
  ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

● ಡಾ. ಬಿ. ವ್ಹಿ. ಶಿರೂರ,
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

● ಶ್ರೀಮತಿ ರಾಜಮ್ಮಾ ರಾಮಚಂದ್ರ ನಾಯಕ
ಸಂಶೋಧನ ವಿದ್ಯಾರ್ಥಿನಿ, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ: ಯಾವುದೇ ವ್ಯಕ್ತಿ ಅಥವಾ ಸಂಘ–ಸಂಸ್ಥೆಗಳು ರೂ. ೧೦೦=೦೦ (ಒಂದು ನೂರು ರೂ. ಗಳು) ಕಳಿಸಿ, ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವ "ಕರ್ನಾಟಕ ಭಾರತಿ" ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮=೦೦ (ಅಂಚೆ ವೆಚ್ಚ ಸಹಿತ)
ಬಿಡಿ ಪ್ರತಿ : ರೂ. ೨=೫೦ (ಅಂಚೆ ವೆಚ್ಚ ಪ್ರತ್ಯೇಕ)
ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ : ರೂ. ೪=೦೦

ಹಣವನ್ನು, **ಫಾಯನಾನ್ಸ ಆಫೀಸರ್, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩** ಇವರ ಹೆಸರಿನಲ್ಲಿ ಡಿಮಾಂಡ ಡ್ರಾಫ್ಟ್ ಅಥವಾ **ಪೋಸ್ಟಲ್ ಆರ್ಡರ್** ತೆಗೆಯಿಸಿ, **ನಿರ್ದೇಶಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ** ಇವರ ಹೆಸರಿಗೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ :

ನಿರ್ದೇಶಕರು
ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩

ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗುವ
ತ್ರೈಮಾಸಿಕ ಪತ್ರಿಕೆ

ಕರ್ನಾಟಕ ಭಾರತಿ

ಸಾಹಿತ್ಯ, ವಿಜ್ಞಾನ, ಮಾನವಿಕ ವಿಷಯಗಳಲ್ಲಿ ಸೃಜನ,
ವಿಮರ್ಶನ, ಸಂಶೋಧನ ಬರಹಗಳಿಗೆ ಮೀಸಲಾದ ಪತ್ರಿಕೆ

ಪ್ರಾಧ್ಯಾಪಕರಿಗೆ, ವಿದ್ಯಾರ್ಥಿಗಳಿಗೆ, ಸಂಘ-ಸಂಸ್ಥೆಗಳ ವಾಚನಾಲಯಗಳಿಗೆ
ಅತ್ಯವಶ್ಯಕವಾಗಿರುವ ಪತ್ರಿಕೆ

ನೀವೂ ಚಂದಾದಾರರಾಗಿರಿ
ನಿಮ್ಮ ಮಿತ್ರರನ್ನೂ ಚಂದಾದಾರರನ್ನಾಗಿ ಮಾಡಿರಿ